ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	388
ಉತ್ತರಿಸಬೇಕಾದ ದಿನಾಂಕ	:	21.12.2022
ಸದಸ್ಯರ ಹೆಸರು	:	ಡಾ|| ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಗರಡಿಮನೆ/ ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
ಆ)	ಬಂದಿದ್ದಲ್ಲಿ, ಗ್ರಾಮೀಣ ಪ್ರದೇಶದ ಯುವಕರು ಸಾಂಪ್ರದಾಯಿಕ ಕಸರತ್ತು ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕ ದಾರ್ಢ್ಯತೆಗಳಿಸಿಕೊಳ್ಳಲು ಸರ್ಕಾರವು ರೂಪಿಸಿರುವ ಯೋಜನೆಗಳಾಗುವುವು?	ಗ್ರಾಮೀಣ ಪ್ರದೇಶದ ಯುವಕರು ಸಾಂಪ್ರದಾಯಿಕ ಕಸರತ್ತು ಮಾಡುವ ಮೂಲಕ ದೈಹಿಕ ಮತ್ತು ಮಾನಸಿಕ ದಾರ್ಢ್ಯತೆಗಳಿಸಿಕೊಳ್ಳಲು ಘಟಕ ವೆಚ್ಚ ರೂ 10.00ಲಕ್ಷಗಳಲ್ಲಿ ಹೊಸ ಗರಡಿ ಮನೆ ನಿರ್ಮಿಸುವ ಹಾಗೂ ಘಟಕ ವೆಚ್ಚ ರೂ 5.00ಲಕ್ಷಗಳಲ್ಲಿ ಹಳೆಯ ಗರಡಿ ಮನೆಗಳ ನವೀಕರಣ /ದುರಸ್ಥಿ ಪಡಿಸುವ ಯೋಜನೆಗಳನ್ನು ರೂಪಿಸಲಾಗಿದೆ . 2022-23ನೇ ಸಾಲಿನಲ್ಲಿ ಘಟಕ ವೆಚ್ಚ ರೂ 10.00 ಲಕ್ಷಗಳಲ್ಲಿ ಹೊಸ ಗರಡಿ ಮನೆ ನಿರ್ಮಿಸಲು ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ .
ಇ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಿದ ಗರಡಿಮನೆ/ ವ್ಯಾಯಾಮ ಶಾಲೆಗಳು ಯಾವುವು? (ಜಿಲ್ಲಾವಾರು ಮಾಹಿತಿ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆವತಿಯಿಂದ ಕಳೆದ 3 ವರ್ಷಗಳಲ್ಲಿ ಮಂಜೂರು ಮಾಡಲಾಗಿರುವ ಹೊಸ ಗರಡಿಮನೆ ನಿರ್ಮಾಣ ಕಾಮಗಾರಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ವೈಎಸ್‌ಡಿ-ಇಬಿಬಿ/168 /2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು

ಅನುಬಂಧ

2019-20ನೇ ಸಾಲಿನಲ್ಲಿ ಮಂಜೂರು ಮಾಡಲಾದ ಹೊಸ ಗರಡಿ ಮನೆ ನಿರ್ಮಾಣ ಕಾಮಗಾರಿಗಳ ಪಟ್ಟಿ.

ಕ್ರ. ಸಂ	ಜಿಲ್ಲೆ	ಕಾಮಗಾರಿಯ ಹೆಸರು	ಬಿಡುಗಡೆ ಮಾಡಿರುವ ಮೊತ್ತ ರೂ ಲಕ್ಷಗಳಲ್ಲಿ
1.	ಬೆಳಗಾವಿ	ಗೋಕಾಕ್ ತಾಲ್ಲೂಕಿನ ಮೆಳವಂಕಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
2.	ಬೆಳಗಾವಿ	ಬೆಳಗಾವಿ ತಾಲ್ಲೂಕಿನ ದಾಮಣೆ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
3.	ಬೆಳಗಾವಿ	ಹುಕ್ಕೇರಿ ತಾಲ್ಲೂಕಿನ ಬೆಳವಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
4.	ಬೆಳಗಾವಿ	ನಿಪ್ಪಾಣಿ ವಿ.ಸ. ಕ್ಷೇತ್ರದ ವ್ಯಾಪ್ತಿಯ ಜತ್ರಾಟ ಗ್ರಾಮಕ್ಕೆ ಗರಡಿ ಮನೆ ನಿರ್ಮಾಣ	10.00
5.	ಕೋಲಾರ	ಮುಳಬಾಗಿಲು ತಾಲ್ಲೂಕು ಮುಳಬಾಗಿಲು ನಗರದ ಹನುಮಾನ್ ವ್ಯಾಯಾಮ ಶಾಲೆ ನಿರ್ಮಾಣ	10.00
6.	ಗದಗ	ರೋಣ ತಾಲ್ಲೂಕಿನ ಯಾವಗಲ್ಲ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
7.	ಬಳ್ಳಾರಿ	ಕೂಡ್ಲಿಗೆ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಕೂಡ್ಲಗಿ ಪಟ್ಟಣದಲ್ಲಿ ಗರಡಿ ಮನೆ ನಿರ್ಮಾಣ	10.00
8.	ಹಾವೇರಿ	ರಾಣೇಬೆನ್ನೂರು ತಾಲ್ಲೂಕಿನ ಮೇಡ್ಲೇರಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
9.	ಬಾಗಲಕೋಟೆ	ಹುನಗುಂದ ತಾಲ್ಲೂಕಿನ ಬೆಳಗಲ್ಲ್ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
10.	ಚಿಕ್ಕಬಳ್ಳಾಪುರ	ಚಿಂತಾಮಣಿ ತಾಲ್ಲೂಕಿನ ಚನ್ನಕೇಶವಪುರ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
11.	ಮೈಸೂರು	ನಂಜನಗೂಡು ತಾಲ್ಲೂಕು ಹಾಡ್ಯ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ ಬೀದಿಯಲ್ಲಿ ಗರಡಿ ಮನೆ ನಿರ್ಮಾಣ	10.00
12.	ಮೈಸೂರು	ಟಿ. ನರಸೀಪುರದ ಶ್ರೀರಾಮಪುರ ಬೀದಿಯ ಶ್ರೀರಾಮಾಂಜನೇಯ ಗರಡಿ ಮನೆ ನಿರ್ಮಾಣ	10.00
13.	ಶಿವಮೊಗ್ಗ	ಶಿವಮೊಗ್ಗ ನಗರದ ವಾರ್ಡ್ ನಂ. 31ರ ಎನ್.ಟಿ. ರಸ್ತೆ, ನ್ಯೂ ಮಂಡ್ಲಿಯ ಉರ್ದು ಶಾಲೆ ಪಕ್ಕದಲ್ಲಿರುವ ಸರ್ಕಾರಿ ಜಾಗದಲ್ಲಿ ಗರಡಿ ಮನೆ ನಿರ್ಮಾಣ	10.00
14.	ಶಿವಮೊಗ್ಗ	ಶಿಕಾರಿಪುರ ತಾಲ್ಲೂಕು ಹಿತ್ತಲ ಗ್ರಾಮದಗರಡಿ ಮನೆ ನಿರ್ಮಾಣ	10.00
15.	ದಾವಣಗೆರೆ	ಚನ್ನಗಿರಿ ಪಟ್ಟಣದ ಕುರುಬರ ಬೀದಿಯಲ್ಲಿ ಗರಡಿ ಮನೆ ನಿರ್ಮಾಣ	10.00

2020-21ನೇ ಸಾಲಿನಲ್ಲಿ ಯಾವುದೇ ಹೊಸ ಗರಡಿ ಮನೆ ನಿರ್ಮಾಣ ಕಾಮಗಾರಿಗಳಿಗೆ ಮಂಜೂರಾತಿ ನೀಡಿರುವುದಿಲ್ಲ.

2021-22ನೇ ಸಾಲಿನಲ್ಲಿ ಮಂಜೂರು ಮಾಡಲಾದ ಹೊಸ ಗರಡಿ ಮನೆ ನಿರ್ಮಾಣ ಕಾಮಗಾರಿಗಳ ಪಟ್ಟಿ.

ಕ್ರ. ಸಂ	ಜಿಲ್ಲೆ	ಕಾಮಗಾರಿಯ ಹೆಸರು	ಬಿಡುಗಡೆ ಮಾಡಿರುವ ಮೊತ್ತ ರೂ ಲಕ್ಷಗಳಲ್ಲಿ
1.	ಬೆಳಗಾವಿ	ರಾಮದುರ್ಗ ತಾಲ್ಲೂಕಿನ ಮನಿಹಾಳ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
2.	ಬೆಳಗಾವಿ	ಕಾಗವಾಡ ತಾಲ್ಲೂಕಿನ ಶಿವನೂರ್ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
3.	ಬೆಳಗಾವಿ	ಗೋಕಾಕ ತಾಲ್ಲೂಕಿನ ವಡೇರಹಟ್ಟಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
4.	ಬೆಳಗಾವಿ	ಬೆಳಗಾವಿ ತಾಲ್ಲೂಕಿನ ಮಚ್ಛೆ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
5.	ಬೆಳಗಾವಿ	ಕಿತ್ತೂರು ವಿಧಾನಸಭಾ ಕ್ಷೇತ್ರದ ಮಧನಬಾವಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
6.	ಬಾಗಲಕೋಟೆ	ಬೀಳಗಿ ತಾಲ್ಲೂಕಿನ ಚಿಕ್ಕಾಲಗುಂಡಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
7.	ಬಾಗಲಕೋಟೆ	ಬೀಳಗಿ ವಿಧಾನಸಭಾ ಕ್ಷೇತ್ರದ ತುಳಸಿಗೇರಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
8.	ಬಾಗಲಕೋಟೆ	ರಬಕವಿ-ಬನಹಟ್ಟಿ ತಾಲ್ಲೂಕಿನ ತೇರದಾಳದಲ್ಲಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
9.	ಶಿವಮೊಗ್ಗ	ಶಿಕಾರಿಪುರ ತಾಲ್ಲೂಕಿನ ಹಿತ್ತಲ ಗ್ರಾಮದ ಜೈ ಹನುಮಾನ್ ಗರಡಿ ಮನೆ ನಿರ್ಮಾಣ	10.00
10.	ದಕ್ಷಿಣ ಕನ್ನಡ	ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00
11.	ಬೆಂಗಳೂರು	ದೇವನಹಳ್ಳಿ ಟೌನ್ ನಲ್ಲಿ ಗರಡಿ ಮನೆ ನಿರ್ಮಾಣ	10.00
12.	ಮಂಡ್ಯ	ಶ್ರೀರಂಗಪಟ್ಟಣ ತಾಲ್ಲೂಕು ಮೇಳಾಪುರ ಗ್ರಾಮದ ಒಕ್ಕಲಿಗರ ಹತ್ತು ಜನಗಳ ಗರಡಿ ಮನೆ ಪುನರ್ ನಿರ್ಮಾಣ	10.00
13.	ಮಂಡ್ಯ	ಮಂಡ್ಯ ತಾಲ್ಲೂಕಿನ ಕೊತ್ತತ್ತಿ ಹೋಬಳಿ ಕಾಸವಾಡಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	10.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **389**
ಸದಸ್ಯರ ಹೆಸರು : ಡಾ|| ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸುವ ದಿನಾಂಕ : 21.12.2022
ಉತ್ತರಿಸುವ ಸಚಿವರು : ಕೃಷಿ ಸಚಿವರು

	ಪ್ರಶ್ನೆ	ಉತ್ತರ
ಅ)	"ಫಸಲ್ ಭೀಮಾ" ಯೋಜನೆಯಡಿ ಬೆಳೆ ಹಾನಿ ಪರಿಹಾರ ನೀಡಲು ರೈತರೊಂದಿಗೆ ವಿಮಾ ಕಂಪನಿಗಳು ಸಹಕರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	"ಫಸಲ್ ಭೀಮಾ" ಯೋಜನೆಯಡಿ ಬೆಳೆ ಹಾನಿ ಪರಿಹಾರ ನೀಡಲು ರೈತರೊಂದಿಗೆ ವಿಮಾ ಕಂಪನಿಗಳು ಸಹಕರಿಸುತ್ತಿದ್ದು, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದಾಗ ಅತಿ ಹೆಚ್ಚು ಬೆಳೆವಿಮೆ ನೊಂದಣಿಯಾಗಿರುತ್ತದೆ.
ಆ)	ಈ ಯೋಜನೆಯಡಿ ಬೆಳೆ ಹಾನಿ ಪರಿಹಾರ ನೀಡಲು ಅನುಸರಿಸಲಾಗುವ ಮಾನದಂಡಗಳೇನು;	ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು 2016ರ ಮುಂಗಾರು ಹಂಗಾಮಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ಗ್ರಾಮ ಪಂಚಾಯತಿಯಲ್ಲಿ ಬೆಳೆ ವಿಮೆ ನೊಂದಾಯಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. 2018 ಮುಂಗಾರು ಹಂಗಾಮಿನಿಂದ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದಿಸಿದ ವಿನಾಯಿತಿಗಳನ್ನು ಅಳವಡಿಸಿಕೊಂಡು ಬೆಳೆ ವಿಮೆ ಪರಿಹಾರ ಮೊತ್ತ ಲೆಕ್ಕಾಚಾರ ಮಾಡಿ ಅರ್ಹ ಫಲಾನುಭವಿಗಳಿಗೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲಾಗುತ್ತಿದೆ.
ಇ)	ರಾಜ್ಯದಲ್ಲಿ ಈವರೆಗೆ ರೈತರಿಗೆ ಸಮರ್ಪಕವಾಗಿ ಬೆಳೆಹಾನಿ ಪರಿಹಾರ ನೀಡದ ಕಾರಣ ವಿಮಾ ಕಂಪನಿಗಳ ಮೇಲೆ ಕ್ರಮ ಜರುಗಿಸಿದ ಪ್ರಕರಣಗಳೆಷ್ಟು;	ಯಾವುದೇ ಪ್ರಕರಣಗಳಿರುವುದಿಲ್ಲ. ರಾಜ್ಯದಲ್ಲಿ ವಿಮಾ ಸಂಸ್ಥೆಗಳು ಬೆಳೆವಿಮೆ ಪರಿಹಾರ ಮೊತ್ತದ ಲೆಕ್ಕಾಚಾರದಂತೆ ರೈತರ ಆಧಾರ್ ಸಂಖ್ಯೆಗೆ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಬೆಳೆವಿಮೆ ಪರಿಹಾರ ಮೊತ್ತವನ್ನು ಜಮೆ ಮಾಡಲಾಗುತ್ತಿದೆ.

ಈ)	ವಿಮಾ ಕಂಪನಿಗಳು ಸಹಕರಿಸದಿದ್ದಲ್ಲಿ, ರೈತರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ರೈತರಿಗೆ ಅರಿವು ಮೂಡಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?	2019-20ನೇ ಸಾಲಿನಿಂದ ಸಂರಕ್ಷಣೆ ತಂತ್ರಾಂಶದ ಮುಖಾಂತರ ಅರ್ಹ ರೈತ ಫಲಾನುಭವಿಗಳ ಖಾತೆಗೆ ಬೆಳೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥ ಪಡಿಸಲಾಗುತ್ತಿದೆ. ಸದರಿ ಪ್ರಕ್ರಿಯೆಯಲ್ಲಿ ರೈತರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದ ಕಾರಣ Payments bounce back ಆಗುತ್ತಿರುತ್ತದೆ. ಈ ಕುರಿತು ವಿಮಾ ಸಂಸ್ಥೆಯ ಪ್ರತಿನಿಧಿಗಳಿಗೆ, ಎಲ್ಲಾ ಬ್ಯಾಂಕ್ ಶಾಖೆಗಳಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲಾಗಿರುತ್ತದೆ ಹಾಗೂ ಸಂವಹನ ಚಟುವಟಿಕೆಗಳಾದ "Radio jingle", ದೂರದರ್ಶನ ಚಂದನ ವಾಹಿನಿಯಲ್ಲಿ Scrolling message content, ರೈತರ ಮೊಬೈಲ್ ಗಳಿಗೆ Bulk SMS, ಕರಪತ್ರ ಹಾಗೂ ಭಿತ್ತಿಪತ್ರಗಳ ಮೂಲಕ ರೈತರಿಗೆ ಅರಿವು ಮೂಡಿಸಲು ವ್ಯಾಪಕವಾಗಿ ಪ್ರಚಾರ ಕೈಗೊಳ್ಳಲಾಗಿದೆ. ಅಲ್ಲದೇ ಪ್ರತಿ ಬುಧವಾರದಂದು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ವಿಮಾಸಂಸ್ಥೆಯ ಪ್ರತಿನಿಧಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆಯನ್ನು ಆಯೋಜಿಸಿ Payments bounce back ಆಗಿರುವ ಪ್ರಸ್ತಾವನೆಗಳ ಇತ್ಯರ್ಥ ಪಡಿಸುವ ಕುರಿತು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಕೃ ಇ 99 ಕೃಉಇ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**390**
ಮಾನ್ಯ ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್ ಎನ್.(ದೇವನಹಳ್ಳಿ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗದ ಹೆಚ್ಚಿನ ಸಂಖ್ಯೆ ಇದ್ದರೂ ಈ ಜನರ ಅಭಿವೃದ್ಧಿಗಾಗಿ ಅನುದಾನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗದವರಿಗಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗಾಗಿ ಯೋಜನೆ/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆ/ಕಾರ್ಯಕ್ರಮಗಳ ಪ್ರಯೋಜನವು ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹಿಂದುಳಿದ ವರ್ಗಗಳ ಜನಾಂಗದವರಿಗೂ ಸಹ ಅನ್ವಯಿಸುತ್ತದೆ. ಇಲಾಖೆಯ ಆಯುಕ್ತಾಲಯ ಹಾಗೂ ನಿಗಮಗಳ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳ ಮಾಹಿತಿ ಯನ್ನು **ಅನುಬಂಧ-1** ರಲ್ಲಿ ನೀಡಿದೆ.
ಆ)	ಬಂದಿದ್ದಲ್ಲಿ, ಹಿಂದುಳಿದ ವರ್ಗದ ಜನರ ಏಳಿಗೆಗಾಗಿ ಅನುದಾನ ನೀಡದಿರಲು ಇರುವ ತಾಂತ್ರಿಕ ತೊಂದರೆಗಳೇನು; (ಪೂರ್ಣ ವಿವರ ನೀಡುವುದು)	
ಇ)	ಹಾಗಿದ್ದಲ್ಲಿ, ಅನುದಾನ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದು ಕೊಳ್ಳಲಿದೆ; ಯಾವ ಕಾಲಮಿತಿಯಲ್ಲಿ ಅನುದಾನ ಒದಗಿಸಲಾಗುವುದು? (ಪೂರ್ಣ ವಿವರ ನೀಡುವುದು)	ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆ/ ಕಾರ್ಯಕ್ರಮಗಳಿಗೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಪ್ರಸಕ್ತ 2022-23ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯನ್ನು **ಅನುಬಂಧ-2**ರಲ್ಲಿ ನೀಡಿದೆ. ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಲ್ಲಿ ಗುರಿ ನಿಗಧಿ ಪಡಿಸುವ ಮೂಲಕ ಹಾಗೂ ಆಯಾ ಆರ್ಥಿಕ ವರ್ಷಗಳಲ್ಲಿ ಯೋಜನೆ/ಕಾರ್ಯಕ್ರಮಗಳಿಗೆ ಒದಗಿಸಿರುವ ಆಯವ್ಯಯದ ಲಭ್ಯತೆಯ ಆಧಾರದ ಮೇಲೆ ಅನುದಾನ ಬಿಡುಗಡೆ ಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಹಿಂವಕ 755 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ: 390ಕ್ಕೆ ಅನುಬಂಧ-1

<u>ಕಾರ್ಯಕ್ರಮಗಳ ವಿವರ</u>

ಶೈಕ್ಷಣಿಕ ಕಾರ್ಯಕ್ರಮಗಳು	
I	**ವಿದ್ಯಾರ್ಥಿನಿಲಯಗಳ ನಿರ್ವಹಣೆ**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
2	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
3	ಸರ್ಕಾರಿ ಆಶ್ರಮಶಾಲೆಗಳು
4	ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು
5	ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
6	ಖಾಸಗಿ ಅನುದಾನಿತ ಅನಾಥಾಲಯಗಳು
7	ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ
II	**ವಿದ್ಯಾರ್ಥಿವೇತನ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
2	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
3	ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ
4	ಶುಲ್ಕ ಮರು ಪಾವತಿ
5	ಪೂರ್ಣಾವಧಿ ಪಿ.ಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಫೆಲೋಷಿಫ್
6	ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ
7	ದೇವರಾಜ ಅರಸು ಪ್ರತಿಭಾ ಪುರಸ್ಕಾರ
8	ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ
9	ಐ.ಐ.ಟಿ, ಐ.ಐ.ಎಂ, ಐ.ಐ.ಎಸ್ಸಿ ಇತ್ಯಾದಿಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಒಂದು ಬಾರಿ ರೂ.2.00 ಲಕ್ಷ ಪ್ರೋತ್ಸಾಹಧನ
III	**ತರಬೇತಿ ಕಾರ್ಯಕ್ರಮಗಳು**
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ನರ್ಸಿಂಗ್ ತರಬೇತಿ
3	ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ
4	ಕಾನೂನು ಪದವೀಧರರಿಗೆ ಶಿಷ್ಯವೇತನ
5	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ
6	ಸೇನೆಗಳಿಗೆ ಆಯ್ಕೆಯಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ
7	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ
IV	**ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
2	ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ

3	ಆಶ್ರಮ ಶಾಲೆಗಳ ನಿರ್ವಹಣೆ
4	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
5	ಅರಿವು ಮೂಡಿಸುವ ಕಾರ್ಯಕ್ರಮ
6	ಮೂಲಭೂತ ಸೌಕರ್ಯಗಳು
7	ವಸತಿ ಸೌಲಭ್ಯ
8	ನಿವೇಶನ ಹಂಚಿಕೆಗಾಗಿ ಜಮೀನು ಖರೀದಿ
V	ವಿವಿಧ ಸಮುದಾಯಗಳ ಅಭಿವೃದ್ಧಿ
1	ಹಿಂದುಳಿದ ವರ್ಗಗಳ ಸಮುದಾಯಗಳು ನಿರ್ಮಿಸುವ ಸಮುದಾಯ ಭವನಗಳಿಗೆ ಸಹಾಯಾನುಧಾನ
2	ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ನಡೆಸುವ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಒಂದು ಬಾರಿಯ ಅನುದಾನ
3	ದೇವರಾಜ ಅರಸು ಭವನ ನಿರ್ಮಾಣ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಅನುಬಂಧ-01

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರ-52

ವಿಧಾನ ಸಭೆ ಸದಸ್ಯರಾದ ಶ್ರೀ/ಶ್ರೀಮತಿ ನಿಸರ್ಗ ನಾರಾಯಣ ಸ್ವಾಮಿ.ಎಲ್.ಎನ್ (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-390 ಕ್ಕೆ ನಿಗಮದ ಉತ್ತರ.

2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಮತ್ತು ಆರ್ಥಿಕ ಗುರಿಗಳ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ಯೋಜನೆಯ ಹೆಸರು	2022-23ನೇ ಸಾಲಿನಲ್ಲಿ ದೇವನಹಳ್ಳಿ ವಿಧಾನ ಸಭಾಕ್ಷೇತ್ರಕ್ಕೆ ನಿಗಧಿಪಡಿಸಿರುವ ಅನುದಾನ
1	ಸ್ವಯಂ ಉದ್ಯೋಗ ಸಾಲ ಯೋಜನೆ	36.00
2	ಗಂಗಾ ಕಲ್ಯಾಣ ನೀರಾವರಿ ಯೋಜನೆ	49.00
3	ಅರಿವು ಶೈಕ್ಷಣಿಕ ಸಾಲ ಯೋಜನೆ	3.00
ಒಟ್ಟು		**88.00**

ಷರಾ:- ಮೇಲ್ಕಂಡ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ವ್ಯವಸ್ಥಾಪಕ ನಿರ್ದೇಶಕರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ: 390ಕ್ಕೆ ಅನುಬಂಧ-2

ಇಲಾಖೆಯಿಂದ ಅನುಷ್ಠಾನ ಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಿಗೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 2022-23ನೇ ಸಾಲಿನಲ್ಲಿ ನವೆಂಬರ್ 2022ರ ಮಾಹೆಯ ಅಂತ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ	ಮಂಜೂರು ಮಾಡಿರುವ ಅನುದಾನ
	ರಾಜ್ಯವಲಯ	
1	ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳು 2225-03-102-0-12	0.00
2	ದೇವರಾಜ ಅರಸು ಭವನ ನಿರ್ಮಾಣ (ತಾಲ್ಲೂಕು ಕಛೇರಿ) 4225-03-283-0-01	0.00
3	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	0.00
4	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ (ಕೇಂ.ಪು.ಯೋ) 2225-03-277-2-51	0.00
5	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಕೇಂ.ಪು.ಯೋ) 2225-03-277-2-52	0.00
6	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	5.00
7	ಆಹಾರ ಮತ್ತು ವಸತಿ ಸಹಾಯ-ವಿದ್ಯಾಸಿರಿ 2225-03-283-0-03	0.00
8	ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳು 2225-03-277-3-11	5.80
9	ತರಬೇತಿ, ಅರಿವು ಮತ್ತು ಪ್ರೋತ್ಸಾಹ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	41.10
10	ಹಾಸ್ಟೇಲ್ ಗಳ ಕಟ್ಟಡಗಳ ನಿರ್ಮಾಣ 4225-03-277-2-06	100.00
11	ನಬಾರ್ಡ್ ಕಾಮಗಾರಿಗಳು 4225-03-277-2-11	0.00
	ಒಟ್ಟು (ಅ)	151.90
	ಜಿಲ್ಲಾವಲಯ:	
1	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	8.41
2	ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	203.20
3	ಆಶ್ರಮ ಶಾಲೆಗಳು 2225-00-103-0-41	0.00
4	ಅನಾಥಾಲಯಗಳಿಗೆ ಸಹಾಯಧನ 2225-00-103-0-73	0.00
5	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	0.00
6	ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯ್ತಿಗಳು 2225-00-103-0-28	0.00
7	ವಕೀಲರಿಗೆ ಪ್ರೋತ್ಸಾಹಧನ-2225-00-103-0-58	2.80
8	ದೇವರಾಜ ಅರಸು ರವರ ಹುಟ್ಟುಹಬ್ಬದ ದಿನಾಚರಣೆ 2225-00-103-0-56	1.00
9	ಕಟ್ಟಡಗಳ ನಿರ್ವಹಣೆ-2225-00-103-0-40	40.00
10	ಮೆಟ್ರಿಕ್ ಪೂರ್ವ ಮತ್ತು ಮ ನಂ ವಿ ನಿಲಯಗಳ ಸುಧಾರಣೆ 2225-00-103-0-72	0.00
11	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ 2225-00-103-0-66	0.00
12	ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ (ಇಬಿಎಲ್)-2225-00-103-0-79	0.00
	ಒಟ್ಟು (ಆ)	255.41
	ಒಟ್ಟು (ಅ) + (ಆ)	407.31

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಅನುಬಂಧ-2

ವಿಧಾನ ಸಭೆ ಸದಸ್ಯರಾದ ಶ್ರೀ/ಶ್ರೀಮತಿ ನಿಸರ್ಗ ನಾರಾಯಣ ಸ್ವಾಮಿ.ಎಲ್.ಎನ್ (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ- 390 ಕ್ಕೆ ನಿಗಮದ ಉತ್ತರ.

2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಮತ್ತು ಆರ್ಥಿಕ ಗುರಿಗಳ ವಿವರ ಈ ಕೆಳಕಂಡಂತಿದೆ.

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	2022-23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆಯಾದ ಅನುದಾನ
1	ಸ್ವಯಂ ಉದ್ಯೋಗ ಸಾಲ ಯೋಜನೆ	7.20
2	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	6.30
3	ಅರಿವು ಶೈಕ್ಷಣಿಕ ಸಾಲ ಯೋಜನೆ	0.50
ಒಟ್ಟು		**14.00**

ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	2022-23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆಯಾದ ಅನುದಾನ
1	ಸ್ವಯಂ ಉದ್ಯೋಗ ಸಾಲ ಯೋಜನೆ	8.32
2	ಗಂಗಾ ಕಲ್ಯಾಣ ನೀರಾವರಿ ಯೋಜನೆ	7.00
3	ಅರಿವು ಶೈಕ್ಷಣಿಕ ಸಾಲ ಯೋಜನೆ	1.72
	ಒಟ್ಟು	**17.04**

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	2022-23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆಯಾದ ಅನುದಾನ
1	ಸ್ವಯಂ ಉದ್ಯೋಗ ಸಾಲ ಯೋಜನೆ	4.95
2	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	5.85
ಒಟ್ಟು		**10.80**

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ 1 ಮತ್ತು 2

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲಾದ ಯೋಜನೆ ಹಾಗೂ ಅನುದಾನದ ವಿವರಗಳು :

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ

ಕ್ರ.ಸಂ	ಯೋಜನೆಗಳು	ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಸೌಲಭ್ಯ	03	1.50ಲಕ್ಷ
2	ಅರಿವು ಶೈಕ್ಷಣಿಕ ಸಾಲ	ಅರ್ಜಿ ಅಹ್ವಾನಿಸಲಾಗಿದ್ದು, ದಿನಾಂಕ:31.12.2022 ಕೊನೆಯ ದಿನಾಂಕವಾಗಿರುತ್ತದೆ.	

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ

ಕ್ರ.ಸಂ	ಯೋಜನೆಗಳು	ಭೌತಿಕ ಗುತಿ	ಆರ್ಥಿಕ (ರೂ.ಲಕ್ಷಗಳಲ್ಲಿ)
1	ಜೀವಜಲ	04	16.00
2	ಕಾಯಕಕಿರಣ	06	6.00
3	ಸ್ವಸಹಾಯ ಸಂಘಗಳಿಗೆ ಉತ್ತೇಜನ	1	2.25
4	ಬಸವ ಬೆಳಗು	8	8.00
5	ವಿದೇಶ ವಿದ್ಯಾವಿಕಾಸ	1	3.50

ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ

ಸದರಿ ನಿಗಮದಡಿ ಜಿಲ್ಲಾವಾರು ಗುರಿ ನಿಗದಿಪಡಿಸಿದ್ದು, ವಿಧಾನಸಭಾ ಕ್ಷೇತ್ರವಾರು ನಿಗದಿಪಡಿಸಿರುವುದಿಲ್ಲ. ಅದರಂತೆ ಬೆಂಗಳೂರು ಗ್ರಾಮಂತರ ಜಿಲ್ಲೆಗೆ 2022-23 ರಲ್ಲಿ 12 ಭೌತಿಕ ಹಾಗೂ ರೂ.16.00ಲಕ್ಷಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಗಳು	2019-20	2020-21	2021-22
1	ಸ್ವಯಂ ಉದ್ಯೋಗ ಸಾಲ ಸೌಲಭ್ಯ	404.90	500.00	500.00
2	ಗಂಗಾ ಕಲ್ಯಾಣ	438.50	0.00	0.00
3	ಅರಿವು ಶೈಕ್ಷಣಿಕ ಸಾಲ ಯೋಜನೆ	57.80	29.00	81.0
	ಒಟ್ಟು	901.20	529.00	581.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 391
ಉತ್ತರಿಸಬೇಕಾದ ದಿನಾಂಕ	: 21.12.2022
ಸದಸ್ಯರ ಹೆಸರು	: ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)
ಉತ್ತರಿಸುವ ಸಚಿವರು	: ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 2021-22ನೇ ಸಾಲಿನ ಆಯವ್ಯಯದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾ ಮೂಲಸೌಲಭ್ಯ ಸೃಜನೆ ಬಗ್ಗೆ ಘೋಷಣೆ ಮಾಡಿದೆಯೇ; (ಸಂಪೂರ್ಣ ವಿವರ ನೀಡುವುದು)	2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-277 ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು "ದೇವನಹಳ್ಳಿಯಲ್ಲಿ ಫುಟ್ಬಾಲ್, ಹಾಕಿ, ಶೂಟಿಂಗ್, ಈಜು ಮತ್ತು ಟೆನ್ನಿಸ್ ಕ್ರೀಡೆಗಳಿಗೆ ಸಂಬಂಧಿಸಿದಂತೆ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಮೂಲಸೌಕರ್ಯಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಲ್ಪಿಸಲಾಗುವುದು" ಎಂದು ಘೋಷಿಸಿರುತ್ತಾರೆ.
ಆ)	ಹಾಗಿದ್ದಲ್ಲಿ, ಸರ್ಕಾರವು ಮೂಲ ಸೌಲಭ್ಯ ಸೃಜನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು; ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆಯೇ; (ಸಂಪೂರ್ಣ ವಿವರ ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಕ್ರೀಡಾಂಗಣವನ್ನು ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಯೋಜನೆಗೆ ಸಂಬಂಧಿಸಿದಂತೆ ಸಲಹಾ ಸೇವೆಯನ್ನು ಪಡೆಯಲು ವಹಿವಾಟು ಸಲಹೆಗಾರರಾಗಿ (Transaction Advisor) ಆಗಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ ನಿಯಮಿತ) (ಐಡೆಕ್) ಸಂಸ್ಥೆಯನ್ನು ದಿನಾಂಕ: 02-08-2021 ರಂದು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಸದರಿ ಸಂಸ್ಥೆಯವರು ದೇವನಹಳ್ಳಿ ಕ್ರೀಡಾಂಗಣದ ಸ್ಥಳ ಅಧ್ಯಯನ ಮಾಡಿ ಆರ್ಥಿಕ ಕಾರ್ಯಸಾಧ್ಯತಾ ವರದಿ (Financial Feasibility Report) ನೀಡಿರುತ್ತಾರೆ. ಸದರಿ ವರದಿಯಲ್ಲಿ ದೇವನಹಳ್ಳಿ ಕ್ರೀಡಾಂಗಣವನ್ನು ಸಾರ್ವಜನಿಕ – ಖಾಸಗಿ ಸಹಭಾಗಿತ್ವ ಅಡಿಯಲ್ಲಿ ಅಭಿವೃದ್ಧಿಪಡಿಸುವುದು ಕಾರ್ಯ ಸಾಧ್ಯವಿಲ್ಲದಿರುವುದಾಗಿ ತಿಳಿಸಲಾಗಿರುತ್ತದೆ.
ಇ)	ಹಾಗಿದ್ದಲ್ಲಿ, ಯಾವ ಕಾಲ ಮಿತಿಯಲ್ಲಿ ಅನುದಾನ ಮಾಡಲಾಗುವುದು;	ಮುಂಬರುವ ಸಾಲುಗಳಲ್ಲಿ ಅನುದಾನ ಲಭ್ಯತೆ ಅನುಸಾರ ದೇವನಹಳ್ಳಿ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಪರಿಗಣಿಸಲಾಗುವುದು.
ಈ)	ಶೀಘ್ರ ಕಾಮಗಾರಿ ಕೈಗೊಳ್ಳಲು ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಮೇಲ್ಕಂಡ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/169 /2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	392
ಮಾನ್ಯ ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಮಿಕರ ಅನುಕೂಲಕ್ಕಾಗಿ ಇರುವ ಸೌಲಭ್ಯಗಳೇನು; ಈ ಸೌಲಭ್ಯಗಳನ್ನು ಪಡೆಯಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿವೆ: <u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u> ಈ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರಿಗಾಗಿ ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ. ವಿವರವನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ. ಈ ಸೌಲಭ್ಯಗಳನ್ನು ಪಡೆಯಲು 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ವಿವಿಧ ವರ್ಗದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮತ್ತು 18-60 ರ ವಯೋಮಾನದ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿರಬೇಕಾಗಿರುತ್ತದೆ. ವಿವಿಧ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ವಿವರವನ್ನು ಅನುಬಂಧ-02 ರಲ್ಲಿ ಸಲ್ಲಿಸಿದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u> ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರ ಅನುಕೂಲಕ್ಕಾಗಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿದೆ. (1) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ **ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-**

ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಅ) **ಅಪಘಾತ ಪರಿಹಾರ ಸೌಲಭ್ಯ** : ಈ ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

ಸೌಲಭ್ಯ ಪಡೆಯಲು ಮಾನದಂಡ:-

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ಯೋಜನೆಯು ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅನ್ವಯಿಸುತ್ತದೆ.
- ವಯೋಮಿತಿ 20 ರಿಂದ 70 ವರ್ಷಗಳು.
- ಚಾಲಕರು ಖಾಸಗಿ ವಾಣಿಜ್ಯ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಊರ್ಜಿತ ಚಾಲನ ಪತ್ರ ಹೊಂದಿರಬೇಕು.
- ನಿರ್ವಾಹಕರು ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಊರ್ಜಿತ ನಿರ್ವಾಹಕ ಪತ್ರ ಹೊಂದಿರಬೇಕು ಹಾಗೂ ನೋಂದಾಣಿ ಅಧಿಕಾರಿಯಿಂದ ಯೋಜನೆಯಡಿ ನೋಂದಣಿಯಾಗಿರಬೇಕು.
- ಕ್ಲೀನರ್‌ಗಳು ನೋಂದಾಣಿ ಅಧಿಕಾರಿಯಿಂದ ಯೋಜನೆಯಡಿ ನೋಂದಣಿಯಾಗಿರಬೇಕು.

(ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

ಸೌಲಭ್ಯ ಪಡೆಯಲು ಮಾನದಂಡ:-

- ಖಾಸಗಿ ವಾಣಿಜ್ಯ ಸಾರಿಗೆ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಅಪಘಾತದಿಂದ ಶಾಶ್ವತ ದುರ್ಬಲತೆ ಅಥವಾ ಮರಣ ಹೊಂದಿದ ಪ್ರಕರಣಗಳಲ್ಲಿ ಮಂಡಳಿಯಿಂದ ಅಪಘಾತ ಪರಿಹಾರ ಸೌಲಭ್ಯ ಪಡೆದಿರಬೇಕು.

		• ಗರಿಷ್ಠ ಇಬ್ಬರು ಮಕ್ಕಳಿಗೆ ಮಾತ್ರ ಅನ್ವಯ. • 1ನೇ ತರಗತಿಯಿಂದ ಪದವಿ ಪೂರ್ವ / 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. 2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** ಈ ಯೋಜನೆಯಡಿ ಅಸಂಘಟಿತ ವಲಯದ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ಆನ್‌ಲೈನ್ ಮೂಲಕ ಉಚಿತವಾಗಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್/ಗುರುತಿನ ಚೀಟಿ ಮಾತ್ರ ವಿತರಿಸಲಾಗುತ್ತಿದ್ದು, ಪ್ರಸ್ತುತ ಯಾವುದೇ ಆರ್ಥಿಕ ಸೌಲಭ್ಯ ನೀಡುತ್ತಿಲ್ಲ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಈ ಮಂಡಳಿಗೆ 20:40 ರ ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಕೆಳಕಂಡ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. 1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ 2) ಕಾರ್ಮಿಕರಿಗೆ ವೈದ್ಯಕೀಯ ನೆರವು 3) ಕಾರ್ಮಿಕರಿಗೆ ಅಪಘಾತ ಧನ ಸಹಾಯ 4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ 5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ 6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ 7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಯೋಜನೆಗಳ ವಿವರಗಳನ್ನು ಮತ್ತು ಮಾನದಂಡಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.
ಆ)	ಹಾಗಿದ್ದಲ್ಲಿ, ಸರ್ಕಾರ ಕಾರ್ಮಿಕರು ಮತ್ತು ಕಾರ್ಮಿಕರ ಮಕ್ಕಳಿಗೆ ನೀಡುವ ಸೌಲಭ್ಯಗಳನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು; (ವಿವರ ನೀಡುವುದು)	ಸರ್ಕಾರವು ಕಾರ್ಮಿಕರ ಕಲ್ಯಾಣಕ್ಕಾಗಿ ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸುತ್ತಿದೆ. ಸದರಿ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿದ್ದು, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸಲಾಗುತ್ತಿರುವ ಯೋಜನೆಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳ ಕುರಿತ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ:

		<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u> ಮಂಡಳಿಯ ವತಿಯಿಂದ ನೀಡುತ್ತಿರುವ ಸೌಲಭ್ಯಗಳನ್ನು ಫಲಾನುಭವಿಗಳು ಪಡೆಯಲು **ಅನುಬಂಧ-02**ರಲ್ಲಿ ನೀಡಿರುವ ನಿಗಧಿಪಡಿಸಿದ ದಾಖಲೆಗಳೊಂದಿಗೆ ಸಂಬಂಧಪಟ್ಟ ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಮಂಡಳಿಯು ನೋಂದಾಯಿತ ಫಲಾನುಭವಿಗಳ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಸಹಾಯಧನ ಸೌಲಭ್ಯವನ್ನು ನಿಗಧಿಪಡಿಸಿದ ದಾಖಲೆಗಳೊಂದಿಗೆ State Scholarship Portal ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u> ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಅಪಘಾತದಿಂದ ನಿಧನರಾದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಚಾಲಕರ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿ ಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದ್ದು ಅನುಸರಿಸಬೇಕಾದ ಕ್ರಮಗಳು ಈ ಕೆಳಗಿನಂತಿದೆ: • ಶೈಕ್ಷಣಿಕ ಧನ ಸಹಾಯಕ್ಕಾಗಿ ಅಪಘಾತದಿಂದ ಮೃತರಾದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಚಾಲಕರ ಇಬ್ಬರು ಮಕ್ಕಳು ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ವ್ಯಾಸಂಗ ಪ್ರಮಾಣ ಪತ್ರ, ಅಂಕ ಪಟ್ಟಿ, ಬ್ಯಾಂಕ್ ಖಾತೆ ವಿವರ, ವಿಳಾಸ ದೃಢೀಕರಣ ಮತ್ತು ಇತರೆ ಅಗತ್ಯ ದಾಖಲೆಗಳೊಂದಿಗೆ ಮಂಡಳಿಗೆ ನೇರವಾಗಿ ಅಥವಾ ತಾಲ್ಲೂಕು/ಜಿಲ್ಲಾ ಮಟ್ಟದ ಕಾರ್ಮಿಕ ಇಲಾಖಾ ಕಚೇರಿಯಲ್ಲಿ ಸಲ್ಲಿಸಿದ್ದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿ ವಿದ್ಯಾರ್ಥಿ/ಪೋಷಕರ ಬ್ಯಾಂಕ್ ಖಾತೆಗೆ ಸೌಲಭ್ಯದ ಮೊತ್ತವನ್ನು ನೇರವಾಗಿ ಡಿ.ಬಿ.ಟಿ ಮೂಲಕ ಜಮಾ ಮಾಡಲಾಗುವುದು. <u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ</u> ಸಂಘಟಿತ ಕಾರ್ಮಿಕರ/ಅವಲಂಬಿತರ ಮಕ್ಕಳಿಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.

ಇ)	ಕಾರ್ಮಿಕರ ಪಟ್ಟಿಗೆ ಯಾವ ಯಾವ ಉದ್ಯೋಗದವರು ಬರುತ್ತಾರೆ ಹಾಗೂ ಕಾರ್ಮಿಕರ ಪಟ್ಟಿಗೆ ಸೇರಬೇಕಾದರೆ ಸಲ್ಲಿಸಬೇಕಾದ ದಾಖಲೆಗಳಾವುವು? (ಪೂರ್ಣವಾದ ಮಾಹಿತಿ ನೀಡುವುದು)	ಕಾರ್ಮಿಕ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಸಂಘಟಿತ ಹಾಗೂ ಅಸಂಘಟಿತ ವಲಯದ ವಿವಿಧ ವರ್ಗಗಳ ಕಾರ್ಮಿಕರು ಅರ್ಹರಿದ್ದು, ಸದರಿ ಕಾರ್ಮಿಕರು ನೊಂದಣಿಯಾಗಲು ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿರುತ್ತದೆ. ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸಲಾಗುತ್ತಿರುವ ಯೋಜನೆಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳ ಕುರಿತ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ: **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>** ಈ ಕೆಳಗೆ ನಮೂದಿಸಿರುವ ವಿವಿಧ ವರ್ಗದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ಗುರುತಿಸಿ. ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದೆ. 1. ನಿರ್ಮಾಣ 2. ಮಾರ್ಪಾಡು 3. ರಿಪೇರಿ 4. ನಿರ್ವಹಣೆ ಅಥವಾ ಕಟ್ಟಡ ಕೆಡವುವಿಕೆಗೆ ಸಂಬಂಧಿಸಿದ ಕಾಮಗಾರಿ 5. ಕಟ್ಟಡಗಳು 6. ಬೀದಿಗಳು 7. ರಸ್ತೆಗಳು 8. ರೈಲ್ವೆಗಳು 9. ಟ್ರಾಮ್‌ವೇಗಳು 10. ಏರ್‌ಫೀಲ್ಡ್ಸ್ 11. ನೀರಾವರಿ/ಚರಂಡಿ 12. ಏರಿ/ಕಟ್ಟೆಕಟ್ಟುವುದು ಮತ್ತು ನೌಕಾ ಕಾಮಗಾರಿಗಳು 13. ಪ್ರವಾಹ ನಿಯಂತ್ರಣ ಕಾಮಗಾರಿಗಳು (ಮಳೆ ನೀರು, ಚರಂಡಿ ಕಾಮಗಾರಿಗಳು ಸೇರಿ) 14. ವಿದ್ಯುತ್ ಉತ್ಪಾದನೆ 15. ಪ್ರಸರಣ ಮತ್ತು ವಿತರಣೆ 16. ಜಲ ಕಾಮಗಾರಿಗಳು (ನೀರು ವಿತರಣಾ ನಾಲೆಗಳು ಸೇರಿ) 17. ತೈಲ ಮತ್ತು ಅನಿಲ ಸ್ಥಾವರಗಳು 18. ವಿದ್ಯುತ್ ಮಾರ್ಗಗಳು 19. ವೈರ್‌ಲೆಸ್ 20. ರೇಡಿಯೋ 21. ದೂರದರ್ಶನ 22. ದೂರವಾಣಿ 23. ದೂರಸಂಪರ್ಕ ಮತ್ತು ಸಮುದ್ರ ಸಂವಹನಗಳಿಗೆ ಸಂಬಂಧಿಸಿದ ನಿರ್ಮಾಣ/ನವೀಕರಣ ಮತ್ತು ದುರಸ್ತಿ 24. ಅಣೆಕಟ್ಟುಗಳು 25. ನಾಲೆಗಳು 26. ಜಲಾಶಯಗಳು 27. ಜಲ ಮೂಲಗಳು 28. ಸುರಂಗಗಳು 29. ಸೇತುವೆಗಳು 30. ವಯಾಡಕ್ಟ್ಸ್ 31. ಅಕ್ವೆಡಕ್ಟ್ಸ್ 32. ಕೊಳವೆ ಮಾರ್ಗಗಳ ನಿರ್ಮಾಣ 33. ಸ್ಥಾವರಗಳು 34. ಕೂಲಿಂಗ್ ಟವರ್‌ಗಳು ಮತ್ತು ಪ್ರಸರಣ ಸ್ಥಾವರಗಳು. **ಹೆಚ್ಚುವರಿ ನಿರ್ಮಾಣ ಕೆಲಸಗಳು:** 35. ಕಲ್ಲುಗಣಿಗಾರಿಕೆ ಕಾಯ್ದೆ 1952ರ ವ್ಯಾಪ್ತಿಗೆ ಒಳಪಡದ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಕಲ್ಲು ಕೆಲಸ 36. ನಿರ್ಮಾಣದಲ್ಲಿ ಚಪ್ಪಡಿ/ಟೈಲ್ಸ್‌ಗಳನ್ನು ಅಳವಡಿಸುವುದು 37. ಯುಜಿಡಿ ನಿರ್ಮಾಣ ಸೇರಿದಂತೆ ಒಳಚರಂಡಿ ಮತ್ತು

ಪ್ಲಂಬಿಂಗ್ ಕೆಲಸ 38. ವೈರಿಂಗ್, ವಿತರಣೆ ಪ್ಯಾನಲ್ ಫಿಕ್ಸಿಂಗ್ ಇತ್ಯಾದಿಗಳನ್ನು ಒಳಗೊಂಡ ವಿದ್ಯುತ್ ಕೆಲಸ 39. ಕೂಲಿಂಗ್ ಮತ್ತು ಹೀಟಿಂಗ್ ಸಿಸ್ಟಂಗಳ ಸ್ಥಾಪನೆ ಮತ್ತು ಅಳವಡಿಕೆ 40. ಲಿಫ್ಟ್, ಎಸ್ಕಲೇಟರ್ ಇತ್ಯಾದಿಗಳ ಸ್ಥಾಪನೆ 41. ಸೆಕ್ಯೂರಿಟಿ ಗೇಟಗಳ ಸ್ಥಾಪನೆ 42. ಕಬ್ಬಿಣ/ಲೋಹದ ಗ್ರಿಲ್‌ಗಳು, ಕಿಟಕಿ, ಬಾಗಿಲುಗಳ ಸ್ಥಾಪನೆ 43. ನೀರಿನಕೊಯ್ಲು ರಚನೆಗಳ ನಿರ್ಮಾಣ 44. ಫ್ಲೋರಿಂಗ್, ಫಾಲ್ಸ್‌ಸೀಲಿಂಗ್, ವಾಲ್ ಪ್ಯಾನಲಿಂಗ್ ಮುಂತಾದವುಗಳನ್ನು ಒಳಗೊಂಡ ಒಳಾಂಗಣ ವಿನ್ಯಾಸ 45. ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಅಳವಡಿಸುವ ಗ್ಲಾಸ್ ಪ್ಯಾನಲ್‌ಗಳು, ಎಸಿಪಿ ಶೀಟ್‌ಗಳು, ಸ್ಪೈಡರ್ ಗ್ಲೇಜಿಂಗ್‌ಗಳು 46.ಪ್ರೀ-ಫ್ಯಾಬ್ರಿಕೇಟೆಡ್ ಕಾಂಕ್ರೀಟ್ ಮಾಡ್ಯೂಲ್ಸ್, ಕಾಂಕ್ರೀಟ್ ಬ್ರಿಕ್ಸ್, ಬ್ಲಾಕ್ಸ್, ಹಾಲೋಬ್ಲಾಕ್ಸ್, ಟೈಲ್ಸ್ ಮುಂತಾದವುಗಳ ಅಳವಡಿಕೆ 47.ಸಿಗ್ನೇಜ್, ರಸ್ತೆ ಪೀಠೋಪಕರಣಗಳು, ಬಸ್ ಆಶ್ರಯಗಳು/ ಸ್ಟ್ಯಾಂಡ್, ಸಿಗ್ನಲಿಂಗ್ ಸಿಸ್ಟಮ್ಸ್ ಮುಂತಾದವುಗಳ ನಿರ್ಮಾಣ 48.ರೋಟರಿಗಳ ನಿರ್ಮಾಣ ಮತ್ತು ಸ್ಥಾಪನೆ, ಕಾರಂಜಿಗಳು, ಸಾರ್ವಜನಿಕ ಉದ್ಯಾನವನ ಮತ್ತು ತೋಟಗಳಲ್ಲಿ ಈಜುಕೊಳಗಳು ಇತ್ಯಾದಿಗಳ ಅಳವಡಿಕೆ 49. ನಿರ್ಮಾಣ ಉದ್ದೇಶಗಳಿಗಾಗಿ ಭೂಮಿಯ ಕೆಲಸ, ಭೂಮಿಯ ಹರಡುವಿಕೆ, ನೆಲಸಮಗೊಳಿಸುವಿಕೆ ಮತ್ತು ಭೂಮಿಯ ಕತ್ತರಿಸುವಿಕೆ ಇತ್ಯಾದಿ ಕೆಲಸಗಳು 50. ತಾತ್ಕಾಲಿಕ ಆಶ್ರಯ ತಾಣಗಳ ನಿರ್ಮಾಣ ಮತ್ತು ಅಳವಡಿಕೆ 51. ಫಿಲಂಸೆಟ್‌ಗಳ ನಿರ್ಮಾಣ ಮತ್ತು ಅಳವಡಿಕೆ. 52. ಕಲ್ಲು ಕೆಲಸ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಯ ಕಲಂ 12 ರ ಪ್ರಾವಧಾನಗಳನ್ವಯ ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಮತ್ತು 18-60ರ ವಯೋಮಾನದ ಕಾರ್ಮಿಕರು ಅರ್ಹರಿರುತ್ತಾರೆ.

ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:

ಎ) ನಮೂನೆ-5ರಲ್ಲಿ ಅರ್ಜಿ

ಬಿ)ಮಾಲೀಕರ ಪ್ರಮಾಣ ಪತ್ರ: ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders

Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ-V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ-V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ-V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'.

ಸಿ) ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು

ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ಇಎಸ್‌ಐ ಆಸ್ಪತ್ರೆ/ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ.

ನೋಂದಣಿ ಮಾಡುವ ಕಛೇರಿಗಳು:

ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು ಈ ಮೇಲೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಸೇವಾ ಸಿಂಧು ತಂತ್ರಾಂಶದಲ್ಲಿ ಸಂಬಂಧಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ವಲಯದ ಇತರೆ ವರ್ಗ ಅಂದರೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರ ಸೇರಿದಂತೆ ಒಟ್ಟು 43 ಅಸಂಘಟಿತ ಕಾರ್ಮಿಕ ವರ್ಗಗಳನ್ನು ಗುರುತಿಸಿದ್ದು, ಪಟ್ಟಿಯನ್ನು ಅನುಬಂಧ-4 ರಲ್ಲಿ ಒದಗಿಸಿದೆ.

ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೆಳಕಂಡ ಯೋಜನೆಗಳಡಿ ನೋಂದಾಯಿಸಿ ಗುರುತಿನ ಚೀಟಿ ವಿತರಿಸಲಾಗುತ್ತಿದ್ದು, ಸಲ್ಲಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ:

1. **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:** ರಾಜ್ಯ ಸರ್ಕಾರದ ಈ ಯೋಜನೆಯಡಿ ಪ್ರಸ್ತುತ 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಮನೆಗೆಲಸದವರು, ಚಿಂದಿಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತಿದ್ದು, ನೋಂದಣಿಯಾಗಲು ಸಲ್ಲಿಸಬೇಕಾದ ದಾಖಲಾತಿಗಳ ವಿವರ ಈ ಕೆಳಗಿನಂತಿವೆ:

- ಆಧಾರ್ ಕಾರ್ಡ್
- ಬ್ಯಾಂಕ್ ಪಾಸ್‌ಬುಕ್ ಪ್ರತಿ.
- ಭಾವಚಿತ್ರ

2. **ಇ-ಶ್ರಮ್ ಯೋಜನೆಯಡಿ ನೋಂದಣಿ:** ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ (NDUW-National Data base for Unorganised Worker) ಕ್ರೋಢೀಕರಿಸಲು, ಸಾಮಾನ್ಯ ಸೇವಾ ಕೇಂದ್ರಗಳ (CSC) ಸಹಯೋಗದೊಂದಿಗೆ ಸುಮಾರು 379 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಲಾಗುತ್ತಿದ್ದು, ಸ್ಥಳದಲ್ಲಿಯೇ ಗುರುತಿನ ಚೀಟಿ ಪಡೆಯಬಹುದಾಗಿದೆ. ಕಾರ್ಮಿಕರ ವರ್ಗಗಳ ವಿವರವನ್ನು ಅನುಬಂಧ-5 ರಲ್ಲಿ ಒದಗಿಸಿದೆ. ನೋಂದಣಿಗಾಗಿ ಸಲ್ಲಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ;

- ಆಧಾರ್ ಕಾರ್ಡ್
- ಬ್ಯಾಂಕ್ ಪಾಸ್‌ಬುಕ್ ಪ್ರತಿ.
- ಮೊಬೈಲ್ ಸಂಖ್ಯೆ

		ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಈ ಮಂಡಳಿಗೆ 20:40 ರ ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿಸುವ ಕಾರ್ಖಾನೆಗಳು/ಸಂಸ್ಥೆಗಳು /ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಕಾರ್ಮಿಕ ಕಲ್ಯಾಣ ಮಂಡಳಿಯ ವ್ಯಾಪ್ತಿಗೆ ಒಳಪಡುತ್ತಾರೆ.

ಕಾಇ 672 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 392 ಕ್ಕೆ

ಅನುಬಂಧ-01

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ 25 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1500/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆರೂ.50,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ :ರೂ.4,000/- ಹಾಗೂ ಅನುಗ್ರಹ ರಾಶಿ ರೂ.71,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	5,000
2	1 ರಿಂದ 4ನೇ ತರಗತಿ	5,000
3	5 ರಿಂದ 8ನೇ ತರಗತಿ	8,000
4	9 ಹಾಗೂ 10ನೇ ತರಗತಿ	12,000
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	15,000
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	20,000
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪ್ಯಾರಮೆಡಿಕಲ್ ಕೋರ್ಸ್	40,000
8	ಡಿ.ಎಡ್	25,000
	ಬಿ.ಎಡ್	35,000
9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	25,000
10	ಎಲ್‌ಎಲ್‌ಬಿ / ಎಲ್‌ಎಲ್‌ಎಮ್	30,000

11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	35,000 ಗರಿಷ್ಠ 2 ವರ್ಷಅವಧಿಗೆ ಒಳಪಟ್ಟು
	ತಾಂತ್ರಿಕ/ ವೈದ್ಯಕೀಯ ಎನ್‌ಇಇಟಿ ಅಥವಾ ಸಿಇಟಿ	
12	ಬಿಇ / ಬಿ.ಟೆಕ್‌ಅಥವಾ ಸಂಬಂಧಪಟ್ಟ ಯೂಜಿಕೋರ್ಸ್	ಸದರಿ ಕೋರ್ಸ್‌ನ ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು ವಾರ್ಷಿಕ ರೂ.50,000
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್)	ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು ವಾರ್ಷಿಕ ರೂ. 60,000
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್‌ಎಸ್ / ಬಿಡಿಎಸ್ /ಬಿಹೆಚ್‌ಎಮ್‌ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್	ರೂ.60,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
	ಎಮ್‌ಡಿ	ರೂ. 75,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠ ಮೂರು ವರ್ಷಗಳಿಗೆ ಹಾಗೂ ಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷ ರೂ. 25,000 (ಯೂಜಿಸಿಯ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಮತ್ತು ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯು ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋಧನಾ ಶುಲ್ಕ

12. ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300/- ರಿಂದ ರೂ.20,000/-ವರೆಗೆ

13. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿ ರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-

14. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ

15. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.60,000/-

16. ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಮತ್ತು ಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.

17. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

18. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ನೋಂದಾಯಿತ ಫಲಾನುಭವಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ

19. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ. 6,000/- ಗಳ ಸಹಾಯಧನ.

20. ಇಮ್ಯೂನಿಟಿ ಬೂಸ್ಟರ್‌ಕಿಟ್ ವಿತರಣೆ

21. ಪ್ರಿವೆಂಟಿವ್ ಹೆಲ್ತ್‌ಕೇರ್ ಯೋಜನೆ

22. ಮೊಬೈಲ್ ಮೆಡಿಕಲ್‌ಕೇರ್ ಯೂನಿಟ್

23. ಪೈಲಟ್ ಟ್ರೈನಿಂಗ್: ಫಲಾನುಭವಿಯ ಆಯ್ಕೆಯಾದ ಮಕ್ಕಳಿಗೆ

24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ

25. ನ್ಯೂಟ್ರೀಶನ್ ಕಿಟ್ಸ್:

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 392 ಕ್ಕೆ

ಅನುಬಂಧ-02

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವಿಧ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:

ನಿಯಮ 39: ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಣಿಯಾಗಿ ಕನಿಷ್ಠ 3 ವರ್ಷ ಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ 60 ವರ್ಷ ವಯಸ್ಸಾಗಿರಬೇಕು.
- ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಈ ಸೌಲಭ್ಯ ಪಡೆಯುತ್ತಿರಬಾರದು.
- ಜೀವಿತ ಪ್ರಮಾಣ ಪತ್ರ ಸಲ್ಲಿಸುವುದು.
- ಫಲಾನುಭವಿಯ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 40: ದುರ್ಬಲತೆ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಶಾಶ್ವತ ದುರ್ಬಲತೆಯಾಗಿರುವುದಕ್ಕೆ ಕಟ್ಟಡ ಕಾರ್ಮಿಕನ ಭಾವಚಿತ್ರ (ಫೋಟೋ).
- ದುರ್ಬಲತೆ ಗುರುತಿನಚೀಟಿ ಪಡೆದ ನಂತರ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಪಘಾತ ಉಂಟಾಗಿ ಅದರಿಂದ ದುರ್ಬಲತೆಯಾಗಿರಬೇಕು.

- ಫಲಾನುಭವಿಗೆ ದುರ್ಬಲತೆಯಾಗಿರುವುದಕ್ಕೆ ಹಿರಿಯ ನಾಗರಿಕರ ಹಾಗೂ ಅಂಗವಿಕಲ ಸಬಲೀಕರಣ ಇಲಾಖೆ ಇವರಿಂದ ಪಡೆದ ಅಂಗವಿಕಲ ಗುರುತಿನಚೀಟಿಯ ಪ್ರತಿಯನ್ನು ಲಗತ್ತಿಸಬೇಕು.
- ಫಲಾನುಭವಿಯ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 39(ಎ): ಕುಟುಂಬ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-12(ಎ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಅರ್ಜಿದಾರರ ಕೋರಿಕೆ ಪತ್ರ.
- ಮೃತ ಪಿಂಚಣಿದಾರರ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
- ನಾಮನಿರ್ದೇಶಿತರು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಪಿಂಚಣಿದಾರರು ಮಂಡಳಿಯಿಂದ ಪಿಂಚಣಿ ಪಡೆಯುತ್ತಿರುವ ಅವಧಿಯಲ್ಲಿ ಮರಣ ಹೊಂದಿದರೆ ಮಾತ್ರಕುಟುಂಬ ಪಿಂಚಣಿ ಪಡೆಯಲು ಅವಕಾಶವಿರುತ್ತದೆ.
- ನಾಮ ನಿರ್ದೇಶಿತರ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 41: ಶ್ರಮ ಸಾಮರ್ಥ್ಯ ಟೂಲ್‌ಕಿಟ್ ವಿತ್‌ಟ್ರೈನಿಂಗ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-15ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯ ಸದಸ್ಯತ್ವ ಅವಧಿಯಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.
- ಫಲಾನುಭವಿಯು ತರಬೇತಿ ಪಡೆಯಲು 55 ವರ್ಷ ವಯಸ್ಸಿನ ಒಳಗಿರಬೇಕು

ನಿಯಮ 42: ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ (ಕಾರ್ಮಿಕ ಗೃಹ ಭಾಗ್ಯ) ನೀಡುವ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-16 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವಗುರುತಿನಚೀಟಿ ಸಲ್ಲಿಸುವುದು

- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದದೃಢೀಕರಣ ಪತ್ರ.
- ಅರ್ಜಿ ಸಲ್ಲಿಸುವ ಫಲಾನುಭವಿಗೆ ಕನಿಷ್ಠ 45 ವರ್ಷ ವಯಸ್ಸಾಗಿರಬೇಕು
- ಸರ್ಕಾರದಿಂದಯಾವುದಾದರೂಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಸಾಲ ಮಂಜೂರಾಗಿರಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 43: ಹೆರಿಗೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-17ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯುತನ್ನ ಮೊದಲ 2 ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ. (ಕೇವಲ ಎರಡುಜೀವಂತ ಮಕ್ಕಳಿದ್ದಾರೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.)
- ಇದುಎರಡನೇ ಹೆರಿಗೆಎಂದುಅಫಿಡವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ನೋಂದಣಾಧಿಕಾರಿಗಳಿಂದ ಪಡೆದಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 43–ಎ: ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕಾಂಶಗಳನ್ನು ಮಹಿಳಾ ಫಲಾನುಭವಿಯು ಮೊದಲ ಎರಡು ಮಕ್ಕಳಿಗಾಗಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್. (ತಾಯಿ ಮಗು ಸಹಾಯ ಹಸ್ತ)

- ನಮೂನೆ-17–ಎ ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯುತನ್ನ ಮೊದಲ ಎರಡು ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ.
- ಎರಡನೇ ಹೆರಿಗೆಗೆಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಫಿಡವಿಟ್ ಸಲ್ಲಿಸಬೇಕು.

- ಜನನ ಮತ್ತು ಮರಣ ಪ್ರಮಾಣ ಅಧಿಕಾರಿಗಳಿಂದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ44: ಅಂತ್ಯಕ್ರಿಯೆ ಸಂಸ್ಕಾರ ಮತ್ತು ಅನುಗ್ರಹರಾಶಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-18ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
- ಮೃತ ಫಲಾನುಭವಿಯ ವಯಸ್ಸು 60 ವರ್ಷ ಮೀರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಅರ್ಜಿದಾರನನ್ನು ಮೃತ ಫಲಾನುಭವಿಯ ನಾಮನಿರ್ದೇಶಿತನಾಗಿ ನೋಂದಾಯಿಸಲಾಗಿದೆಯೇಎಂದು ಖಚಿತ ಪಡಿಸಿಕೊಳ್ಳಬೇಕು.
- ಫಲಾನುಭವಿಯು ಮೃತನಾದಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 45: ಶೈಕ್ಷಣಿಕ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-19 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾಭವಿಯ ಮಗ / ಮಗಳು ಉತ್ತೀರ್ಣ ಆಗಿರುವ ಕುರಿತು ಅಂಕಪಟ್ಟಿ ಹಾಗೂ ವ್ಯಾಸಂಗ ಮಾಡುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ವ್ಯಾಸಂಗ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಫಲಾನುಭವಿಯ ಪ್ರಸ್ತುತ ಅರ್ಜಿಯು ಈ ಹಿಂದೆ ಶೈಕ್ಷಣಿಕ ಸಹಾಯಧನ ಪಡೆದಇಬ್ಬರು ಮಕ್ಕಳಿಗೆ ಅನ್ವಯಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಶೈಕಣಿಕ ಸಹಾಯಧನ ಅರ್ಜಿಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನದಿಂದ 6 ತಿಂಗಳ ಒಳಗೆ ಸಲ್ಲಿಸಬೇಕು.

ನಿಯಮ 46: ಒಳರೋಗಿ ವೈದ್ಯಕೀಯ ಸಹಾಯಧನಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-20 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಹಾಗೂ ಬಿಡುಗಡೆಯಾದ ದಿನಾಂಕ ವಿವರಗಳನ್ನು ನಮೂದಿಸಬೇಕು.
- ಫಲಾನುಭವಿಯು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ (ಶೆಡ್ಯೂಲ್ 1ಗೆ ಸೇರಿದ) ಖಾಸಗಿ ಆಸ್ಪತ್ರೆಗಳಲ್ಲಿ ಕನಿಷ್ಠ ಎರಡು ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಗೆ ದಾಖಲಾದ ದಿನಾಂಕದಿಂದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 47: ಅಪಘಾತ ಮರಣ, ಶಾಶ್ವತ ಸಂಪೂರ್ಣ / ಭಾಗಶಃದುರ್ಬಲತೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-21ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಅಪಘಾತದ ಸ್ವರೂಪವನ್ನು ನಮೂದಿಸಬೇಕು.
- ದುರ್ಬಲತೆ ಪ್ರಕರಣವಿದ್ದಲ್ಲಿ, ಅಪಘಾತದ ಪರಿಣಾಮವಾಗಿರುವ ಶಾಶ್ವತ-ಸಂಪೂರ್ಣ (ಪ್ರತಿ ಶತಃ 100ರಷ್ಟು) ಅಥವಾ ಶಾಶ್ವತ-ಭಾಗಶಃ (ಪ್ರತಿ ಶತಃ 100ಕ್ಕಿಂತ ಕಡಿಮೆ) ದುರ್ಬಲತೆಯಾದ ಬಗ್ಗೆ ಹಾಗೂ ದುರ್ಬಲತೆಯಶೇಕಡವಾರು ಪ್ರಮಾಣ ನಮೂದಿಸಬೇಕು.
- ಫಲಾನುಭವಿಗೆದುರ್ಬಲತೆಯಾದ ನಂತರತಪಾಸಣೆ ಮಾಡಿದ ಸರ್ಕಾರಿ / ಸರ್ಕಾರದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರಿಂದ ಶೇಕಡವಾರುದುರ್ಬಲತೆಖಚಿತ ಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸುವುದು.
- ನಮೂನೆ 21ಎ ನಲ್ಲಿ ನಿಯೋಜಕರಿಂದ ಪಡೆದ ವರದಿಯನ್ನು ಸಲ್ಲಿಸಬೇಕು.
- ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 48: ಪ್ರಮುಖ ವೈದ್ಯಕೀಯ ವೆಚ್ಚ (ಕಾರ್ಮಿಕಚಿಕಿತ್ಸಾ ವೆಚ್ಚ) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-22 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ನಮೂನೆ-22 (ಎ) ರಲ್ಲಿಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸುವುದು
- ಮಂಡಳಿಯಿಂದ ನೀಡಿರುವಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ/ಆರ್.ಎಸ್.ಬಿ.ವೈ. ಯೋಜನೆಯಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು
- ಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ದಾಖಲೆಗಳನ್ನು ಮತ್ತು ಬಿಲ್ಲುಗಳನ್ನು ಸಲ್ಲಿಸುವುದು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49: ಮದುವೆ ಸಹಾಯಧನ (ಗೃಹಲಕ್ಷ್ಮೀ ಬಾಂಡ್) ಸೌಲಭ್ಯಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ನೋಂದಣಿಯಾಗಿಒಂದು ವರ್ಷ ಪೂರ್ಣಗೊಳಿಸಿದ ನಂತರ ಫಲಾನುಭವಿ/ಮಕ್ಕಳಿಗೆ ಮದುವೆಯಾಗಿರಬೇಕು
- ಮದುವೆಯಾದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49(ಇ): ಬಿ.ಎಂ.ಟಿ.ಸಿ. ಬಸ್ ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 (ಬಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಖಾಯಂ ವಿಳಾಸ ಹೊಂದಿರುವ ಫಲಾನುಭವಿಯಾಗಿರಬೇಕು
- ಆಧಾರ್‌ಕಾರ್ಡ್ ಮತ್ತು ಪಡಿತರಚೀಟಿ ಪ್ರತಿ ಸಲ್ಲಿಸುವುದು.
- ಬಿಎಂಟಿಸಿ ಸಂಸ್ಥೆ ನೀಡುವ ಬಸ್ ಪಾಸ್‌ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 392 ಕ್ಕೆ

<u>ಅನುಬಂಧ-3</u>

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು

ಕಾರ್ಮಿಕ ಕಲ್ಯಾಣ ಯೋಜನೆಗಳ ವಿವರ

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಸಂಸ್ಥೆಗಳು/ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

<u>ಸೂಚನೆ</u> :

1. ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 15 ರೊಳಗೆ ಕಾರ್ಮಿಕರು, ಮಾಲೀಕರು ರೂ. 20 : 40 ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 60/- ಗಳಂತೆ ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.
2. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಪಡೆಯಲು ವಿದ್ಯಾರ್ಥಿಗಳು, ಶೈಕ್ಷಣಿಕ ಸಂಸ್ಥೆಗಳು, ಕಾರ್ಖಾನೆಗಳು/ಸಂಸ್ಥೆಗಳು <u>klwb.karnataka.gov.in</u> ರಲ್ಲಿ ನೋಂದಾಯಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು <u>klwb.karnataka.gov.in</u> ರಲ್ಲಿ ತಮ್ಮ ಸಂಸ್ಥೆಗಳನ್ನು ನೋಂದಾಯಿಸಿ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.

<u>ಈ ಕೆಳಗಿನ ಯೋಜನೆಗೆ ಮಾಸಿಕ ವೇತನ ರೂ. 35,000/- ಗಿಂತ ಮೀರಿರಬಾರದು.</u>

1. ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ: ಪ್ರೌಢಶಾಲೆ, (8 ರಿಂದ 10ನೇ ತರಗತಿವರೆಗೆ) ರೂ.6,000/ ಪಿಯುಸಿ/ಡಿಪ್ಲೋಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.8,000/- ಪದವಿ ಶಿಕ್ಷಣಕ್ಕಾಗಿ ರೂ.10,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.12,000/- ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.20,000/-ಗಳ ಪ್ರೋತ್ಸಾಹ ಧನ ನೀಡಲಾಗುವುದು. (ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾ / ಪ. ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು)

<u>ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60 ವರ್ಷ</u>

2. ಕಾರ್ಮಿಕರಿಗೆ ವೈದ್ಯಕೀಯ ನೆರವು : ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಆರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ ಚಿಕಿತ್ಸೆಗೆ ಕನಿಷ್ಠ ರೂ. 1,000/- ರಿಂದ ಗರಿಷ್ಠ ರೂ.25,000/-ವರೆಗೆ ಮತ್ತು ಆರೋಗ್ಯ ತಪಾಸಣೆಗೆ ರೂ. 500/-ರಿಂದ ರೂ, 1000/-ವರೆಗೆ ಧನ ಸಹಾಯ ನೀಡಲಾಗುವುದು.

3. ಕಾರ್ಮಿಕರಿಗೆ ಅಪಘಾತ ಧನ ಸಹಾಯ : ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಕನಿಷ್ಠ ರೂ. 1,000/- ಗರಿಷ್ಠ ರೂ. 10,000/- ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

4. **ಹೆರಿಗೆ ಭತ್ಯೆ ಸೌಲಭ್ಯ** : ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ ರೂ. **10,000/-** ಧನ ಸಹಾಯ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

5. **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ:** ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತಪಟ್ಟ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, ರೂ. **10,000/-** ಧನ ಸಹಾಯ ನೀಡಲಾಗುವುದು.

6. **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ರೂ. **1,00,000/-** ಧನ ಸಹಾಯ ನೀಡಲಾಗುವುದು.

7. **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ ರೂ. **1,00,000/-** ಧನ ಸಹಾಯ ನೀಡಲಾಗುವುದು.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ (ದೇವನಹಳ್ಳಿ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 392ಕ್ಕೆ

ಅನುಬಂಧ-4

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

1. ದರ್ಜಿಗಳು
2. ದೋಬಿಗಳು
3. ಹಮಾಲಿಗಳು
4. ಹೋಟೆಲ್ ಕಾರ್ಮಿಕರು
5. ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು
6. ಆಟೋಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು
7. ಗೃಹ ಕಾರ್ಮಿಕರು
8. ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
9. ನಾರಿನ ಉದ್ದಿಮೆಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
10. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು
11. ಮೀನುಗಾರರು
12. ಕುಂಬಾರರು
13. ಚಮ್ಮಾರರು
14. ಕ್ಷೌರಿಕರು
15. ಕಸಾಯಿ ಖಾನೆ ಕಾರ್ಮಿಕರು
16. ಕಮ್ಮಾರರು
17. ಚಿನಿವಾರರು/ಅಕ್ಕಸಾಲಿಗರು
18. ಮನೆಗಳಲ್ಲಿ ಬೀಡಿ ಕಟ್ಟುವವರು
19. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು
20. ಶಿಲ್ಪಕಾರರು/ ಹಸ್ತ ಕುಶಲ ಕಾರ್ಮಿಕರು
21. ಚಿತ್ರ ಬಿಡಿಸುವವರು
22. ಬಿದಿರಿನ ವಸ್ತುಗಳನ್ನು ತಯಾರು ಮಾಡುವವರು
23. ಖಾದ್ಯ ತೈಲ/ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು.
24. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
25. ರೇಷ್ಮೆ ಕಾರ್ಮಿಕರು
26. ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವಕಾರ್ಮಿಕರು
27. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
28. ಕಲ್ಲು ಒಡೆಯುವಕಾರ್ಮಿಕರು
29. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು

30. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
31. ಬೀದಿ ಬದಿಯ ಮಾರಟಗಾರರು
32. ಚಾಲಕರು/ನಿರ್ವಾಹಕರು/ಸಹಾಯಕರು/ ಕ್ಲೀನರ್‌ಗಳು/ಗಾಡಿ ಎಳೆಯುವವರು/ರಿಕ್ಷಾ ವಾಲಾಗಳು/ ಟಾಂಗಾವಾಲಾಗಳು.
33. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
34. ಚಿಂದಿ ಆಯುವವರು
35. ಅಡಿಗೆ ಕೆಲಸಗಾರರು/ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು/ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು
36. ಸಫಾಯಿ ಕರ್ಮಚಾರಿಗಳು
37. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು
38. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮೆನ್‌ಗಳು
39. ಪೋರ್ಟರ್
40. ಪ್ರವಾಸಿ ಗೈಡ್‌ಗಳು
41. ಮಂಡಕ್ಕಿ ಭಟ್ಟಿ ಕಾರ್ಮಿಕರು
42. ಛಾಯಾವೃತ್ತಿ ಕಾರ್ಮಿಕರು
43. ಇತರೆ ವರ್ಗ(ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ (ದೇವನಹಳ್ಳಿ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:392ಕ್ಕೆ

ಅನುಬಂಧ-5

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಅಸಂಘಟಿತ ಕಾರ್ಮಿಕರ ವೃತ್ತಿ ಆಧಾರಿತ ಪಟ್ಟಿ (ಇ-ಶ್ರಮ್)			
Sl.No	Sector Name	Job Role / Occupation	ಉದ್ಯೋಗದ ವಿಧ/ ವೃತ್ತಿ
1	Agriculture	Cultivator - General	ಕೃಷಿಕ-ಸಾಮಾನ್ಯ
2	Agriculture	Cultivator - Crop	ಕೃಷಿಕ-ಬೆಳೆ
3	Agriculture	Cultivator - Cotton	ಕೃಷಿಕ-ಹತ್ತಿ
4	Agriculture	Cultivator - Fruit (Horticulturist)	ಕೃಷಿಕ-ಹಣ್ಣು (ತೋಟಗಾರಿಕೆ)
5	Agriculture	Cultivator - Vegetables	ಕೃಷಿಕ-ತರಕಾರಿ
6	Agriculture	Toddy Tapper	ಸೇಂದಿ ಇಳಿಸುವವರು
7	Agriculture	Tea Plantation Worker	ಚಹಾ ತೋಟದ ಕೆಲಸಗಾರರು
8	Agriculture	Coffee Plantation Worker	ಕಾಫೀ ತೋಟದ ಕೆಲಸಗಾರರು
9	Agriculture	Bamboo Grower	ಬಿದಿರು ಬೆಳೆಗಾರರು
10	Glass Makers, Cutters, Grinders and Finishers	Bead Maker (Glass)	ಮಣಿ ತಯಾರಕರು (ಗಾಜು)
11	Glass Makers, Cutters, Grinders and Finishers	Optical Worker	ಕನ್ನಡಕ ತಯಾರಿ ಕಾರ್ಮಿಕರು
12	Glass Makers, Cutters, Grinders and Finishers	Glass Bangles Maker	ಗಾಜಿನ ಬಳೆ ತಯಾರಕರು
13	Electrical Mechanics and Fitters	Iron & Steel - Fitter Electrical Assembly	ಕಬ್ಬಿಣ & ಉಕ್ಕು - ವಿದ್ಯುತ್ ಯಂತ್ರ ಜೋಡಣೆಗಾರರು
14	Metal Finishing, Plating and Coating Machine Operators	Picker	ಆರಿಸುವವರು
15	Chemical Products Plant and Machine Operators	Box Making Machine Operator (Match)	ಪೆಟ್ಟಿಗೆ ತಯಾರಿ ಯಂತ್ರ ನಿರ್ವಹಣೆಗಾರ (ಬೆಂಕಿ ಪೆಟ್ಟಿಗೆ)
16	Chemical Products Plant and Machine Operators	Box Filling Machine Operator (Match)	ಪೆಟ್ಟಿಗೆ ತುಂಬಿಸುವ ಯಂತ್ರ ನಿರ್ವಹಣೆಗಾರರು (ಬೆಂಕಿ ಪೆಟ್ಟಿಗೆ)
17	Chemical Products Plant and Machine Operators	Rubber Worker	ರಬ್ಬರ್ ಕಾರ್ಮಿಕರು
18	Chemical Products Plant and Machine Operators	Agarbati Maker	ಅಗರಬತ್ತಿ ತಯಾರಕರು
19	Chemical Products Plant and Machine Operators	Pencil Maker	ಪೆನ್ಸಿಲ್ ತಯಾರಕರು
20	Plastic Products Machine Operators	Moulder, Hand (Plastic)	ಅಚ್ಚು ಹಿಡಿಕೆ (ಪ್ಲಾಸ್ಟಿಕ್) ತಯಾರಕರು
21	Paper Products Machine Operators	Cardboard Box Maker	ರಟ್ಟಿನ ಪೆಟ್ಟಿಗೆ ತಯಾರಕರು
22	Paper Products Machine Operators	Envelope Maker - Machine	ಲಕೋಟೆ ತಯಾರಕರು- ಯಂತ್ರ
23	Paper Products Machine Operators	Bag Maker - Machine	ಬ್ಯಾಗ್ ತಯಾರಕರು- ಯಂತ್ರ
24	Paper Products Machine Operators	Flower Maker - Paper	ಹೂ ತಯಾರಕರು - ಕಾಗದ
25	Manufacturing Labourers Not	Salt Reclamation Worker	ಉಪ್ಪು ಸುಧಾರಣಾ ಕಾರ್ಮಿಕ

	Elsewhere Classified		
26	Manufacturing Labourers Not Elsewhere Classified	Accessory Fitter	ಪರಿಕರಗಳ ಜೋಡಣೆ
27	House Builders	Builders, Traditional Materials, Other	ಕಟ್ಟಡಗಾರರು, ಸಾಂಪ್ರದಾಯಿಕ ವಸ್ತುಗಳು, ಇತರೆ
28	Bricklayers and Related Workers	Stone Mason	ಕಲ್ಲು ಒಡೆಯುವವರು
29	Bricklayers and Related Workers	Brick Layerer, Construction	ಇಟ್ಟಿಗೆ ತಯಾರಕರು, ನಿರ್ಮಾಣಕಾರರು
30	Stonemasons, Stone Cutters, Splitters and Carvers	Stone Carver/ Stone Cutter/ Stone Dresser/ Stone Polisher	ಕಲ್ಲು ಶಿಲ್ಪಿಗಳು/ ಕಲ್ಲು ಕತ್ತರಿಸುವವರು/ ಕಲ್ಲು ವಿನ್ಯಾಸಕಾರರು/ ಕಲ್ಲು ಪಾಲಿಶ್ ಮಾಡುವವರು
31	Concrete Placers, Concrete Finishers and Related Workers	Concrete Placers, Concrete Finishers and Related Workers, Other	ಕಾಂಕ್ರೀಟ್ ಹಾಕುವವರು/ ಕಾಂಕ್ರೀಟ್ ಪೂರ್ಣಗೊಳಿಸುವವರು ಮತ್ತು ಇತರೆ ಸಂಬಂಧಿತ ಕಾರ್ಮಿಕರು
32	Carpenters and Joiners	Carpenter - General	ಬಡಗಿ- ಸಾಮಾನ್ಯ
33	Carpenters and Joiners	Shuttering Carpenter	ಶಟ್ಟರಿಂಗ್ ಬಡಗಿ
34	Building Frame and Related Traders	White Washer	ಸುಣ್ಣ ಬಳಿಯುವವರು
35	Roofers	Roofers, Other	ಛಾವಣಿಗಳು ಮತ್ತು ಇತರೆ
36	Floor Layers and Tile Setters	Tile Setter	ಟೈಲ್ಸ್ ಹಾಕುವವರು
37	Plasterers	Plasterer	ಪ್ಲಾಸ್ಟರಿಂಗ್ ಮಾಡುವವರು
38	Insulation Workers	Acoustical Insulator	ಶ್ರವಣದ ಅವಾಹಕ ಹಾಕುವರು
39	Glaziers	Picture Framer	ಚಿತ್ರ ಚೌಕಟ್ಟು ರಚನೆಕಾರರು
40	Plumbers and Pipe Fitters	Plumber/ Sanitation Worker	ಕೊಳಾಯಿಗಾರ/ ನೈರ್ಮಲ್ಯ ಕೆಲಸಗಾರರು
41	Air-Conditioning and Refrigeration Mechanics	Mechanic, Refrigeration and Air-Conditioning	ಮೆಕಾನಿಕ್- ಶೀತಗಾರ ಮತ್ತು ವಾಯು ನಿಯಂತ್ರಕಗಳು
42	Painters and Related Workers	Assistant Painter & Decorator	ಪೇಂಟಿಂಗ್ ಸಹಾಯಕ ಮತ್ತು ಅಲಂಕಾರಿಕರು
43	Spray Painters and Varnishers	Painter - General	ಪೈಂಟರ್- ಸಾಮಾನ್ಯ
44	Structural Metal Preparers and Erectors	Fitter - Construction	ಜೋಡಿಸುವವ- ನಿರ್ಮಾಣ ಕಾರ್ಯ
45	Electrical Mechanics and Fitters	Maintenance Assistant Helper	ನಿರ್ವಹಣ ಸಹಾಯಕರು- ಕಟ್ಟಡ
46	Sheet Metal Workers	Sheet Metal Worker, General/ Sheet Metal Worker ? Hand Tools and Manually Operated Machines	ಲೋಹದ ಶೀಟ್ ಕಾರ್ಮಿಕ- ಸಾಮಾನ್ಯ/ಲೋಹದ ಶೀಟ್ ಕಾರ್ಮಿಕ ? ಕೈ ಉಪಕರಣಗಳು ಮತ್ತು ಹಸ್ತ ಚಾಲಿತ ಯಂತ್ರಗಳು.
47	Riggers and Cable Splicers	Rigger - Rigging of Heavy Material	ರಿಗ್ಗರ್- ಭಾರವಾದ ವಸ್ತುಗಳನ್ನು ಎತ್ತುವ ಯಂತ್ರಗಳ ನಿರ್ವಹಣೆಗಾರರು

48	Blacksmiths, Hammersmith and Forging Press Workers	Blacksmith/ Ironsmith	ಕಮ್ಮಾರ/ ಕಬ್ಬಿಣ ಕೆಲಸಗಾರ
49	Tool Makers and Related Workers	Die Maker	ಡೈ ತಯಾರಕ
50	Tool Makers and Related Workers	Locksmith	ಬೀಗ ತಯಾರಕ
51	Metal Working Machine Tool Setters and Operators	CNC Operator - Turning	ಸಿ.ಎನ್.ಸಿ ನಿರ್ವಹಣೆಗಾರ- ಟರ್ನಿಂಗ್
52	Metal Polishers, Wheel Grinders and Tool Sharpeners	Grinder, General	ಗ್ರೈಂಡರ- ಸಾಮಾನ್ಯ
53	Metal Polishers, Wheel Grinders and Tool Sharpeners	Thread Grinder	ಥ್ರೆಡ್ ಗ್ರೈಂಡರ್
54	Metal Polishers, Wheel Grinders and Tool Sharpeners	Polisher	ಪಾಲಿಷರ್
55	Agricultural and Industrial Machinery Mechanics and Repairers	Fitter - General	ಜೋಡಣೆಗಾರ- ಸಾಮಾನ್ಯ
56	Agricultural and Industrial Machinery Mechanics and Repairers	Iron & Steel - Machinist	ಕಬ್ಬಿಣ ಮತ್ತು ಉಕ್ಕು - ಯಂತ್ರಕಾರ
57	Agricultural and Industrial Machinery Mechanics and Repairers	Fitter Levelling - Alignment & Balancing	ಜೋಡಣೆ ಸಮತೋಲನಗೊಳಿಸುವಿಕೆ-ಜೋಡಣೆ ಮತ್ತು ಸಮತೋಲನ
58	Agricultural and Industrial Machinery Mechanics and Repairers	Bearing Maintenance	ಬೇರಿಂಗ್ ನಿರ್ವಹಣೆ
59	Agricultural and Industrial Machinery Mechanics and Repairers	Mechanic - Earth Moving Machinery	ಮೆಕಾನಿಕ್- ಭೂಮಿ ಚಲಿಸಾ ಯಂತ್ರಗಳು
60	Agricultural and Industrial Machinery Mechanics and Repairers	Mechanic, Repairman (Domestic Appliances)	ಮೆಕಾನಿಕ್. ದುರಸ್ತಿಗಾರ (ಗೃಹೋಪಯೋಗಿ ಉಪಕರಣಗಳು)
61	Precision Instrument Makers and Repairers	Watch Repairer	ಕೈ ಗಡಿಯಾರ ರಿಪೇರಿ ಮಾಡುವವರು
62	Precision Instrument Makers and Repairers	Iron & Steel - Fitter Instrumentaion	ಕಬ್ಬಿಣ ಮತ್ತು ಉಕ್ಕು - ವಾದ್ಯ ಜೋಡಣೆಗಾರು
63	Jewellery and Precision Metal Workers	Jewellery Polisher	ಆಭರಣ ಪಾಲಿಷ್ ಮಾಡುವವರು
64	Jewellery and Precision Metal Workers	Component Maker	ಆಭರಣ ಘಟಕ ತಯಾರಕರು
65	Jewellery and Precision Metal Workers	Gold Foil Maker	ಚಿನ್ನದ ತಗಡು ತಯಾರಕರು
66	Jewellery and Precision Metal Workers	Goldsmith	ಅಕ್ಕಸಾಲಿಗ
67	Jewellery and Precision Metal Workers	Polisher and Cleaner	ಪಾಲಿಷ್ ಮತ್ತು ಸ್ವಚ್ಛಗೊಳಿಸುವವರು
68	Jewellery and Precision Metal Workers	Wax Setter (Basic)	ಮೇಣ ಸ್ಥಾಪಕರು (ಮೂಲ)
69	Jewellery and Precision Metal Workers	Gemstone Rough Cutter	ರತ್ನ ಕತ್ತರಿಸುವವರು

70	Jewellery and Precision Metal Workers	Gem Grinder - Hand	ರತ್ನದ ಗ್ರೈಂಡರ್ ಕೈ
71	Jewellery and Precision Metal Workers	Gem Polisher - Hand	ರತ್ನ ಪಾಲಿಷ್ ಮಾಡುವವರು- ಕೈ
72	Jewellery and Precision Metal Workers	Diamond Assorter (E)	ವಜ್ರ ವಿಂಗಡಣೆಗಾರರು (ಇ)
73	Jewellery and Precision Metal Workers	Bottom Polisher	ಆಭರಣ ತಳ ಪಾಲಿಷ್ ಮಾಡುವವರು
74	Potters and Related Workers	Clay Maker (Pottery)	ಮಣ್ಣಿನ ವಸ್ತು ತಯಾರಕರು (ಕುಂಬಾರಿಕೆ)
75	Glass Makers, Cutters, Grinders and Finishers	Blower - Glass	ಊದುವವರು- ಗಾಜು
76	Glass Makers, Cutters, Grinders and Finishers	Mouldman (Glass)	ಅಚ್ಚುಗಾರ (ಗಾಜು)
77	Motor Vehicle Mechanics and Repairers	Mechanic - Automobile	ಮೆಕಾನಿಕ್- ಆಟೋ ಮೊಬೈಲ್
78	Motor Vehicle Mechanics and Repairers	Maintenance Technician - Service Workshop	ತಾಂತ್ರಿಕ ನಿರ್ವಹಣೆಗಾರರು- ಸೇವಾ ಕಾರ್ಯಾಗಾರ
79	Motor Vehicle Mechanics and Repairers	Mechanic or Fitter	ಮೋಟಾರು ಮೆಕಾನಿಕ್ ಅಥವಾ ಜೋಡಣೆಗಾರ
80	Motor Vehicle Mechanics and Repairers	Auto Service Technician (Two and Three Wheeler)	ಆಟೋ ಸೇವಾ ತಾಂತ್ರಿಕರು (2 ಮತ್ತು 3 ಚಕ್ರ ವಾಹನ)
81	Motorcycle Drivers	Auto Rickshaw Driver	ಆಟೋ ರಿಕ್ಷಾ ಚಾಲಕರು
82	Car, Taxi and Van Drivers	Driver - Car	ಕಾರು ಚಾಲಕ
83	Car, Taxi and Van Drivers	Taxi Driver	ಟ್ಯಾಕ್ಸಿ ಚಾಲಕ
84	Car, Taxi and Van Drivers	Ambulance Driver	ಆಂಬುಲೆನ್ಸ್ ಚಾಲಕ
85	Bus and Tram Drivers	Driver - Bus	ಬಸ್ ಚಾಲಕ
86	Bus and Tram Drivers	Driver - Fire Brigade Vehicles	ಅಗ್ನಿಶಾಮಕ ದಳ ವಾಹನ ಚಾಲಕ
87	Heavy Truck and Lorry Drivers	Driver - Truck	ಟ್ರಕ್ ಚಾಲಕ
88	Mobile Farm and Forestry Plant Operators	Tractor Driver	ಟ್ರ್ಯಾಕ್ಟರ್ ಚಾಲಕ
89	Lifting Truck Operators	Lift Truck Operator, Other	ಭಾರ ಎತ್ತುವ ಟ್ರಕ್ ನಿರ್ವಾಹಕರು, ಇತರೆ
90	Vehicle Cleaners	Washer	ವಾಹನ ತೊಳೆಯುವವರು
91	Vehicle Cleaners	Driving Assistant/ Cleaner/ Helper	ಚಾಲನ ಸಹಾಯಕರು/ ಕ್ಲೀನರ್‌ಗಳು/ ಸಹಾಯಕರು
92	Hand and Pedal Vehicle Drivers (Cycle Rickshaw and Cart Puller)	Driver - Cycle Rikshaw	ಸೈಕಲ್ ರಿಕ್ಷಾ ಚಾಲಕರು
93	Drivers of Animal-Drawn Vehicles and Machinery	Horse Carriage Driver	ಕುದುರೆ ಗಾಡಿ ಚಾಲಕರು
94	Drivers of Animal-Drawn Vehicles and Machinery (bullock cart, horse carriage etc.)	Cart Driver	ಗಾಡಿ ಚಾಲಕರು
95	Drivers of Animal-Drawn Vehicles and Machinery (bullock cart, horse carriage etc.)	Supervisor, Animal-Drawn and Manually Operated Transport Equipment	ಮೇಲ್ವಿಚಾರಕ, ಪ್ರಾಣಿಗಳು ಎಳೆಯುವ ಮತ್ತು ದೈಹಿಕವಾಗಿ ಚಾಲು ಮಾಡುವ ಸಾರಿಗೆ ಉಪಕರಣಗಳು

96	Masseur	Physiotherapist/ Assistant	ಭೌತ ಚಿಕಿತ್ಸಕಾರರು/ ಸಹಾಯಕರು
97	Hairdressers, Barber	Hair Dresser (Ladies)	ಕೇಶ ವಿನ್ಯಾಸಕಿ (ಮಹಿಳೆ)
98	Hairdressers, Barber	Barber	ಕ್ಷೌರಿಕ
99	Beauticians and Related Workers	Beautician	ಸೌಂದರ್ಯ ವರ್ಧಕರು
100	Beauticians and Related Workers	Pedicurist and Manicurist	ಪಾದೋಪಚಾರ ಮತ್ತು ಹಸ್ತಾಲಂಕಾರ
101	Beauticians and Related Workers	Make-up Man	ಅಲಂಕಾರ ಮಾಡುವವ
102	Beauticians and Related Workers	Dresser - Stage and Studio	ವಿನ್ಯಾಸಕ – ವೇದಿಕೆ ಮತ್ತು ಸ್ಟುಡಿಯೋ
103	Beauticians and Related Workers	Wigman	ವಿಗ್ ಮ್ಯಾನ್
104	Beauticians and Related Workers	Bath Attendant	ಸ್ನಾನದ ಪರಿಚಾರಕರು
105	Pawnbrokers and Moneylenders	Pawnbrokers and Moneylenders, Other	ಗಿರವಿದಾರ ಮತ್ತು ಲೇವಾದೇವಿದಾರರು, ಇತರೆ
106	Debt Collectors and Related Workers	Debt Collectors and Related Workers, Other	ಸಾಲ ಸಂಗ್ರಹಣೆಗಾರ ಮತ್ತು ಇತರೆ ಸಂಬಂಧಿತ ಕೆಲಸಗಾರರು, ಇತರೆ
107	Draughtpersons	Draughtsman - Mechanical	ನಕ್ಷೆಗಾರ- ಮೆಕಾನಿಕಲ್
108	Metal Production Process Controllers	Mixerman	ಮಿಶ್ರಣಗಾರರು
109	Metal Moulders and Core Makers	Core Maker, Moulding (Hand)	ಕೋರ್ ಮೇಕರ್ ಮತ್ತು ಮೌಲ್ಡಿಂಗ್ (ಕೈ)
110	Welders and Flame Cutters	Welder	ವೆಲ್ಡರ್
111	Welders and Flame Cutters	Iron & Steel Plasma Cutter: Manual	ಕಬ್ಬಿಣ ಮತ್ತು ಉಕ್ಕಿನ ಪ್ಲಾಸ್ಮಾ ಕತ್ತರಿಸುವವರು : ದೈಹಿಕವಾಗಿ
112	Welders and Flame Cutters	Welding Helper	ವೆಲ್ಡಿಂಗ ಸಹಾಯಕರು
113	Gardeners and Nursery Growers	Green House Fitter	ಹಸಿರು ಮನೆ ಜೋಡಣೆಗಾರರು
114	Gardeners and Nursery Growers	Floriculturist	ಹೂ ಬೆಳೆಗಾರರು
115	Livestock and Dairy Producers	Dairy Farmer	ಹೈನುಗಾರ
116	Livestock and Dairy Producers	Herdsman	ಕುರಿಗಾಹಿ
117	Livestock and Dairy Producers	Dairy Worker	ಡೈರಿ ಕೆಲಸಗಾರ
118	Livestock and Dairy Producers	Stableman	ಕುದುರೆ ಕಾಯುವವನು
119	Livestock and Dairy Producers	Mahout	ಮಾವುತ
120	Poultry Producers	Farmer - Poultry Breeding	ರೈತ- ಕೋಳಿ ಸಾಕಾಣಿಕೆ
121	Poultry Producers	Broiler Farm Worker	ಬ್ರಾಯ್ಲರ್ ಫಾರ್ಮ್ ಕಾರ್ಮಿಕ
122	Apiarists (Bee Keepers) and Sericulturists	Bee Farmer	ಜೇನು ಸಾಕಾಣಿಕೆಕಾರರು
123	Apiarists (Bee Keepers) and Sericulturists	Sericulturist	ರೇಷ್ಮೆಕೆಲಸಗಾರರು
124	Forestry and Related Workers	Forest Guard	ಅರಣ್ಯ ಕಾಯುವವರು
125	Forestry and Related Workers	Gatherer - Lac	ಸಂಗ್ರಾಹಕ- ಲ್ಯಾಕ್
126	Forestry and Related Workers	Gatherer - Medicinal Herbs	ಸಂಗ್ರಾಹಕ- ಔಷಧಿ ಗಿಡಮೂಲಿಕೆ

127	Forestry and Related Workers	Gatherer - Firewood	ಸಂಗ್ರಾಹಕ-ಕಟ್ಟಿಗೆ
128	Forestry and Related Workers	Wood Cutter	ಕಟ್ಟಿಗೆ/ಮರ ಕತ್ತರಿಸುವವರು
129	Fishery and Aquaculture Labourers	Fisherman	ಮೀನುಗಾರರು
130	Mobile Farm and Forestry Plant Operators	Tractor Operator	ಟ್ರಾಕ್ಟರ್ ನಿರ್ವಾಹಕರು
131	Mobile Farm and Forestry Plant Operators	Farm Machines Operator	ತೋಟ ಯಂತ್ರ ನಿರ್ವಾಹಕರು
132	Crop Farm Labourers	Ploughman	ಉಳುವವರು
133	Crop Farm Labourers	Labourer - Agricultural	ಕಾರ್ಮಿಕ- ಕೃಷಿ
134	Forestry Labourers	Labourer - Plantation	ಕಾರ್ಮಿಕ- ನೆಡುತೋಪು
135	Tailors, Dressmakers, Furriers and Hatters	Tailor - General	ಟೈಲರ್- ಸಾಮಾನ್ಯ
136	Tailors, Dressmakers, Furriers and Hatters	Hat Maker - General	ಟೋಪಿ ತಯಾರಕ- ಸಾಮಾನ್ಯ
137	Tailors, Dressmakers, Furriers and Hatters	Wig Maker	ವಿಗ್ ತಯಾರಕರು
138	Tailors, Dressmakers, Furriers and Hatters	Tailor - Fur	ಟೈಲರ್- ತುಪ್ಪಳ
139	Tailors, Dressmakers, Furriers and Hatters	Pattern Maker - Fur	ಮಾದರಿ ತಯಾರಕರು- ತುಪ್ಪಳ
140	Tailors, Dressmakers, Furriers and Hatters	Cutter - Fur	ಕತ್ತರಿಸುವವರು- ತುಪ್ಪಳ
141	Garment and Related Pattern Makers and Cutters	Cutter - Hand (Textile Product)	ಕತ್ತರಿಸುವವರು- ಕೈ (ಬಟ್ಟೆ ಉತ್ಪಾದನಗಳು)
142	Garment and Related Pattern Makers and Cutters	Cutter - Garment (Leather)	ಕತ್ತರಿಸುವವರು- ಉಡುಪು (ಚರ್ಮ)
143	Garment and Related Pattern Makers and Cutters	Cutter - Tent	ಕತ್ತರಿಸುವವರು- ಟೆಂಟ್
144	Sewing, Embroiderers and Related Workers	Sewer - Hand	ಹೊಲಿಗೆಗಾರರು- ಕೈ
145	Sewing, Embroiderers and Related Workers	Hand Embroiderer	ಕೈ ಕಸೂತಿಗಾರರು
146	Sewing, Embroiderers and Related Workers	Umbrella Maker	ಕೊಡೆ ತಯಾರಕರು
147	Sewing, Embroiderers and Related Workers	Tailor, Tent (Machine)	ಟೈಲರ್, ಟೆಂಟ್ (ಯಂತ್ರ)
148	Upholsterers and Related Workers	Upholsterer - Furniture	ಸಜ್ಜುಗಾರರು- ಪೀಠೋಪಕರಣ
149	Upholsterers and Related Workers	Upholsterer - Vehicle	ಸಜ್ಜುಗಾರರು- ವಾಹನ
150	Upholsterers and Related Workers	Cushion Maker	ಕುಶನ್ ತಯಾರಕರು
151	Product Graders and Testers (Excluding Food and Beverages)	In Line Checker	ಇನ್ ಲೈನ್ ಚೆಕ್ಕರ್
152	Sewing Machine Operators	Sewing Machine Operator	ಹೊಲಿಗೆ ಯಂತ್ರ ನಿರ್ವಾಹಕರು
153	Transport Conductors	Bus Conductor	ಬಸ್ ನಿರ್ವಾಹಕರು
154	Driving Instructors	Commercial Vehicle Driver Trainer	ವಾಣಿಜ್ಯ ವಾಹನ ಚಾಲಕರ ತರಬೇತುದಾರರು
155	Spray Painters and Varnishers	Painter	ಪೈಂಟರ್- ಆಟೋಮೊಬೈಲ್
156	Electrical Line Installers and Repairers	Lineman - Light and Power	ಲೈನ್‌ಮನ್- ಬೆಳಕು ಮತ್ತು ವಿದ್ಯುತ್

157	Cabinet Makers and Related Workers	Furniture Maker - Wood	ಪೀಠೋಪಕರಣ ತಯಾರಕರು- ಕಟ್ಟಿಗೆ
158	Cabinet Makers and Related Workers	Sports Goods Maker - Wood	ಕ್ರೀಡಾ ಸರಕು ತಯಾರಕರು- ಕಟ್ಟಿಗೆ
159	Cabinet Makers and Related Workers	Wood Polisher	ಕಟ್ಟಿಗೆ ಪಾಲಿಷ್ ಮಾಡುವವರು
160	Cement, Stone and Other Mineral Products Machine Operators	Polishing Machine Operator (Mosaic)	ಪಾಲಿಷ್ ಯಂತ್ರ ನಿರ್ವಹಾಕರು (ಮೊಸಾಯಿಕ್)
161	Cement, Stone and Other Mineral Products Machine Operators	Concrete Mixer Operator	ಕಾಂಕ್ರೀಟ್ ಮಿಶ್ರಣ ಯಂತ್ರ ನಿರ್ವಾಹಕರು
162	Earth Moving and Related Plant Operators	Bulldozer Operator	ಬುಲ್ಡೋಜರ್ ನಿರ್ವಾಹಕರು
163	Earth Moving and Related Plant Operators	Loader Operator	ಲೋಡರ್ ನಿರ್ವಾಹಕರು
164	Earth Moving and Related Plant Operators	Excavator Operator	ಅಗೆಯುವ ಯಂತ್ರ ನಿರ್ವಾಹಕರು
165	Building Construction Workers	Bar Bender & Fixer	ಬಾರ್ ಬೆಂಡರ್ ಮತ್ತು ಫಿಕ್ಸರ್
166	Building Construction Workers	Helper Mason	ಕಟ್ಟಡ ನಿರ್ಮಾಣ ಸಹಾಯಕ
167	Building Construction Workers	Helper Electrician	ವಿದ್ಯುತ್ ಸಹಾಯಕ
168	Domestic Cooks	Cook, Domestic	ಅಡುಗೆ ಮತ್ತು ಗೃಹ ಕಾರ್ಮಿಕ
169	Domestic Cooks	Kitchen Porter	ಅಡುಗೆ ಕೆಲಸಗಾರ
170	Domestic Cooks	Pantry man	ಪ್ಯಾಂಟ್ರಿ ಮ್ಯಾನ್
171	Domestic Cleaners and Helpers	Domestic and Related Helpers, Cleaners and Launderers, Other	ಗೃಹ ಮತ್ತು ಇತರೆ ಸಂಬಂಧಿತ ಸಹಾಯಕರು, ಸ್ವಚ್ಛತಾ ಕಾರ್ಮಿಕರು ಮತ್ತು ಬಟ್ಟೆ ತೊಳೆಯುವವರು, ಇತರೆ
172	Electrical Engineering Technicians	LED Light Repair Technician	ಎಲ್.ಇ.ಡಿ. ಬಲ್ಬ್ ರಿಪೇರಿ ತಂತ್ರಜ್ಞರು
173	Broadcasting and Audiovisual Technicians/ Cine Workers	Broadcasting and Audiovisual Technicians/ Cine Workers/ Script Writer/ Content Developer/ Micro jobber/ Cameraman/Sound/ Film Editor/ Cinematographer/ and Social Media related	ಪ್ರಸಾರ ಮತ್ತು ಆಡಿಯೋ ವಿಶ್ಯುವಲ್ ತಂತ್ರಜ್ಞರು/ ಸಿನಿಮಾ ಕಾರ್ಮಿಕರು/ ಸ್ಕ್ರಿಪ್ಟ್ ಬರೆಯುವವರು/ ಮಾಹಿತಿ ಸಿದ್ಧಪಡಿಸುವವರು/ ಮೈಕ್ರೋ ಜಾಬರ್/ ಕ್ಯಾಮರ ಮೆನ್/ ಶಬ್ದ/ ಸಂಕಲನಕಾರರು/ ಸಿನಿಮಾಟೋಗ್ರಾಫರ್/ ಮತ್ತು ಸಾಮಾಜಿಕ ಮಾಧ್ಯಮ ಸಂಬಂಧಿತ
174	Telecommunication Engineering Technicians	Technician - Telecommunication	ತಂತ್ರಜ್ಞರು- ದೂರಸಂಪರ್ಕ
175	Sales Demonstrators	Customer Care Executive	ಗ್ರಾಹಕ ಸೇವಾ ಸಿಬ್ಬಂದಿ
176	Building and Related Electricians	Electrician - General	ವಿದ್ಯುತ್ ಕಾರ್ಮಿಕ- ಸಾಮಾನ್ಯ
177	Building and Related Electricians	CCTV Installation Technician	ಸಿ.ಸಿ.ಟಿ.ವಿ. ಉಪಕರಣಗಳನ್ನು ಸ್ಥಾಪಿಸುವವರು
178	Building and Related Electricians	Electrician (Mines)	ಎಲೆಕ್ಟ್ರೀಷಿಯನ್ (ಗಣಿ)
179	Electrical Mechanics and Fitters	Mechanical Fitter	ಮೆಕಾನಿಕ್ ಜೋಡಣೆಗಾರ
180	Electronic Mechanics and Servicers (home appliances etc)	Electronic Mechanic	ಎಲೆಕ್ಟ್ರಾನಿಕ್ ಮೆಕಾನಿಕ್

181	Electronic Mechanics and Servicers (home appliances etc)	Field Technician - Other Home Appliances	ಕ್ಷೇತ್ರ ತಂತ್ರಜ್ಞರು- ಇತರೆ ಗೃಹೋಪಯೋಗಿ ಪರಿಕರಗಳು
182	Electronic Mechanics and Servicers (home appliances etc)	TV Repair Technician	ಟಿ.ವಿ ರಿಪೇರಿ ತಂತ್ರಜ್ಞರು
183	Electronic Mechanics and Servicers (home appliances etc)	Solar Panel Installation Technician	ಸೋಲಾರ್ ಪ್ಯಾನಲ್ ಜೋಡಿಸುವ ತಂತ್ರಜ್ಞರು
184	Information and Communications Technology Installers and Servicers (networking and surveillance workers etc)	Installation Mechanic	ಮೆಕಾನಿಕ್ ಅನುಸ್ಥಾಪನಗಾರ
185	Information and Communications Technology Installers and Servicers (networking and surveillance workers etc)	Lineman - Telephone and Telegraph	ಲೈನ್‌ಮನ್- 'ದೂರವಾಣಿ ಮತ್ತು ಟೇಲಿಗ್ರಾಫ್
186	Information and Communications Technology Installers and Servicers (networking and surveillance workers etc)	Set top Box Installer, Technician	ಸೆಟ್ ಟಾಪ್ ಬಾಕ್ಸ ಅನುಸ್ಥಾಪನಗಾರ, ತಂತ್ರಜ್ಞರು
187	Information and Communications Technology Installers and Servicers (networking and surveillance workers etc)	Field Technician - Computing and Peripherals	ಕ್ಷೇತ್ರ ತಂತ್ರಜ್ಞನರು (ಕಂಪ್ಯೂಟರ್ ಮತ್ತು ಸಂಬಂಧಿತ ಉಪಕರಣಾಗಳು)
188	Information and Communications Technology Installers and Servicers (networking and surveillance workers etc)	Installation Technician (Computing and Peripherals)	ತಾಂತ್ರಿಕ ಅನುಸ್ಥಾಪನಗಾರ (ಕಂಪ್ಯೂಟರ್ ಮತ್ತು ಸಂಬಂಧಿತ ಉಪಕರಣಾಗಳು)
189	Information and Communications Technology Installers and Servicers (networking and surveillance workers etc)	Field Technician - Networking and Storage	ಕ್ಷೇತ್ರ ತಂತ್ರಜ್ಞನರು – ನೆಟ್ ವರ್ಕಿಂಗ್ ಮತ್ತು ಸಂಗ್ರಹಣೆ
190	Information and Communications Technology Installers and Servicers (networking and surveillance workers etc)	Smartphones Repair Technician	ಸ್ಮಾರ್ಟ್ ಫೋನ್ ದುರಸ್ತಿ ತಂತ್ರಜ್ಞರು
191	Electrical and Electronic Equipment Assemblers	Assembler, Electrical Accessories	ಜೋಡಕರು, ವಿದ್ಯುತ್ ಪರಿಕರಗಳು
192	Incinerator and Water Treatment Plant Operators	Ice Maker	ಐಸ್ ತಯಾರಕರು
193	Butchers, Fishmongers and Related Food Preparers	Butcher	ಮಾಂಸ ಕತ್ತರಿಸುವವರು
194	Butchers, Fishmongers and Related Food Preparers	Sausage Maker	ಸಾಸೆಜ್ ತಯಾರುಸುವವರು

195	Bakers, Pastry Cooks and Confectionery Makers	Baker (Baking Products)	ಬೇಕರಿ ತಿನಿಸುಗಳ ತಯಾರಕರು
196	Bakers, Pastry Cooks and Confectionery Makers	Candy Maker	ಕ್ಯಾಂಡಿ ತಯಾರಕರು
197	Dairy Products Makers	Ice Cream Maker	ಐಸ್ ಕ್ರೀಮ್ ತಯಾರಕರು
198	Fruits, Vegetables and Related Preservers	Oil Expeller Man	ಎಣ್ಣೆ ಇಳಿಸುವ ಯಂತ್ರ ನಿರ್ವಾಹಕರು
199	Fruits, Vegetables and Related Preservers	Oil Crusher Operator - Animal Driven	ಎಣ್ಣೆ ಇಳಿಸುವ ಯಂತ್ರ- ಪ್ರಾಣಿಗಳಿಂದ ನಡೆಸುವವರು
200	Fruits, Vegetables and Related Preservers	Pickler (Can & Preservation)	ಉಪ್ಪಿನಕಾಯಿ (ಸಂಗ್ರಹಣೆ ಮತ್ತು ಸಂರಕ್ಷಣೆ)
201	Food and Related Products Machine Operators	Miller - Food Grains	ಮಿಲ್ಲರ್- ಆಹಾರ ಧಾನ್ಯಗಳು
202	Food and Related Products Machine Operators	Flour Mill Operator	ಹಿಟ್ಟಿನ ಗಿರಣಿ ನಿರ್ವಾಹಕರು
203	Food and Related Products Machine Operators	Fruit Press Operator (Food Canning and Preserving)	ಹಣ್ಣಿನ ಪದಾರ್ಥಗಳನ್ನು ತಯಾರಿಸುವವರು (ಆಹಾರ ಸಂಗ್ರಹಣೆ ಮತ್ತು ಸಂಸ್ಕರಣೆ)
204	Food and Related Products Machine Operators	Crusher Operator - Sugarcane	ಕ್ರಷರ್ ನಿರ್ವಾಹಕರು- ಕಬ್ಬು
205	Food and Related Products Machine Operators	Tea Vendor	ಚಹಾ ಮಾರುವವರು
206	Food and Related Products Machine Operators	Pasteuriser, Brewery	ಪಾಶ್ಚರೀಸ ಮತ್ತು ಬ್ರೇವರೀಸ
207	Data Entry Clerks	Data Entry Person	ಡಾಟಾ ಎಂಟ್ರಿ ಆಪರೇಟರ
208	Gem and Jewellery Machine Operators (Artisans and Workers)	Gem Grinder, Machine	ರತ್ನ ಗ್ರೈಂಡರ್, ಯಂತ್ರ ನಿರ್ವಾಹಕರು
209	Gem and Jewellery Machine Operators (Artisans and Workers)	Gem Polisher, Machine	ರತ್ನ ಪಾಲಿಷ್ ಮಾಡುವ ಯಂತ್ರ ನಿರ್ವಾಹಕರು
210	Hand Packers	Tagger and Labeller	ಟ್ಯಾಗ್ ಅಳವಡಿಸುವ ಮತ್ತು ಲೇಬಲ್ ಹಾಕುವವರು
211	Glass and Ceramics Plant Operators and workers	Kilnman, Brick and Tile	ಗೂಡುಗಾರ, ಇಟ್ಟಿಗೆ ಮತ್ತು ಹೆಂಚು
212	Signwriter, Decorative Painters, Engravers and Etchers	Engraver - Glass	ಕೆತ್ತನೆಗಾರ- ಗಾಜು
213	Signwriter, Decorative Painters, Engravers and Etchers	Hand Painter (Ceramics)	ಕೈ ವರ್ಣ ಚಿತ್ರಕಾರ (ಸೆರಾಮಿಕ್ಸ್)
214	Handicraft Workers in Wood, Basketry and Related Materials	Furniture Maker - Bamboo	ಪೀಠೋಪಕರಣ ತಯಾರಕ- ಬಿದಿರು
215	Handicraft Workers in Wood, Basketry and Related Materials	Basket Maker	ಬುಟ್ಟಿ ತಯಾರಕರು
216	Handicraft Workers in Wood, Basketry and Related Materials	Mat Weaver - Bamboo	ಚಾಪೆ ಹೆಣೆಯುವವರು- ಬಿದಿರು
217	Handicraft Workers in Wood, Basketry and Related Materials	Mat Weaver - Grass and Leave	ಚಾಪೆ ನೇಯುವವರು- ಹುಲ್ಲು ಮತ್ತು ಎಲೆ

218	Handicraft Workers in Wood, Basketry and Related Materials	Broom Maker	ಪೊರಕೆ ತಯಾರಕರು
219	Handicraft Workers in Wood, Basketry and Related Materials	Chick Maker	ಕಟಕಿ ಪರದೆ ತಯಾರಕರು
220	Handicraft Workers in Wood, Basketry and Related Materials	Khas Thatti Maker	ಖಾಸ್ ತಟ್ಟಿ ತಯಾರಕರು
221	Handicraft Workers in Wood, Basketry and Related Materials	Brush Maker - Hand	ಬ್ರಷ್ ತಯಾರಕರು – ಕೈಯಿಂದ
222	Handicraft Workers in Textiles , Leather and related materials (Carpet Workers etc)	Candle Maker	ಮೇಣದ ಬತ್ತಿ ತಯಾರಕರು
223	Handicraft Workers in Textiles , Leather and related materials (Carpet Workers etc)	Hand Printer - Textile/ Hand Block Printer	ಕೈ ವರ್ಣಚಿತ್ರಕಾರ – ಬಟ್ಟೆ/ ಹ್ಯಾಂಡ್ ಬ್ಲಾಕ್ ಪ್ರಿಂಟರ್
224	Handicraft Workers in Textiles , Leather and related materials (Carpet Workers etc)	Hand Dyer	ಕೈ ಡೈಯರ್
225	Handicraft Workers in Textiles , Leather and related materials (Carpet Workers etc)	Cardtenter - Cotton/ Carding Tenter	ಕಾರ್ಡ್ ಟೆಂಟರ್- ಹತ್ತಿ/ ಕಾರ್ಡ್ ಟೆಂಟ್
226	Handicraft Workers in Textiles , Leather and related materials (Carpet Workers etc)	Hand Spinner (Cotton and Woolen Textile)	ಕೈ ಸ್ಪಿನ್ನರ್ – (ಹತ್ತಿ ಮತ್ತು ಉಣ್ಣೆ ಬಟ್ಟೆ)
227	Handicraft Workers in Textiles , Leather and related materials (Carpet Workers etc)	Weaver - Handloom	ನೇಕಾರರು – ಕೈಮಗ್ಗ
228	Handicraft Workers in Textiles , Leather and related materials (Carpet Workers etc)	Carpet Weaver - Hand Knitting	ಕಾರ್ಪೆಟ್ ನೇಕಾರರು- ಕೈ ಹೆಣಿಗೆ
229	Handicraft Workers in Textiles , Leather and related materials (Carpet Workers etc)	Carpet Repairer	ಕಾರ್ಪೆಟ್ ರಿಪೇರಿ ಮಾಡುವವರು
230	Handicraft Workers in Textiles , Leather and related materials (Carpet Workers etc)	Coir Weaver (Matting)	ತೆಂಗಿನ ನಾರು ಹೆಣೆಯುವವರು (ಮ್ಯಾಟ್)
231	Handicraft Workers in Textiles , Leather and related materials (Carpet Workers etc)	Net Maker - Hand	ಪರದೆ ತಯಾರಿಸುವವರು
232	Handicraft Workers in Textiles , Leather and related materials (Carpet Workers etc)	Knitter - Hand	ಹೆಣೆಯುವವರು- ಕೈ ಮೂಲಕ
233	Handicraft Workers in Textiles , Leather and related materials (Carpet Workers etc)	Braid Maker - Hand	ಜಡೆ ತಯಾರಿಸುವವರು- ಕೈ ಮೂಲಕ
234	Cabinet Makers and Related Workers	Toy Maker	ಗೊಂಬೆ ತಯಾರಿಸುವವರು
235	Cabinet Makers and Related Workers	Picture Frame Maker	ಚಿತ್ರದ ಫ್ರೇಂ ಸಿದ್ಧಪಡಿಸುವವರು

236	Weaving and Knitting Machine Operators (Machine Carpet Weavers etc)	Weaving and Knitting Machine Operators, Other	ನೇಯ್ಗೆ ಮತ್ತು ಹೆಣೆಯುವ ಯಂತ್ರಗಳ ನಿರ್ವಾಹಕರು, ಇತರೆ
237	Paramedical Practitioners	Dresser	ವಿನ್ಯಾಸಕರು
238	Dietician/Diet Assistants	Dieticians and Nutritionists, Other	ಆಹಾರ ತಜ್ಞರು ಮತ್ತು ಪೌಷ್ಟಿಕ ತಜ್ಞರು, ಇತರೆ
239	Phlebotomy Technicians	Phlebotomy Technician	ರಕ್ತನಾಳ ತಜ್ಞರು
240	Pharmaceutical Technicians and Assistants	Pharmacy Assistant	ಔಷಧಾಲಯ ಸಹಾಯಕರು
241	Nursing Associate Professionals	Nurse - Institution	ದಾದಿಯರು – ಸಂಸ್ಥೆ
242	Anganwadi and Aasha Workers etc.	Lady Health Visitor/ASHA Worker/Anganwadi Worker	ಮಹಿಳಾ ಆರೋಗ್ಯ ತಪಾಸಣಕಾರರು/ ಆಶಾ ಕಾರ್ಯಕರ್ತೆಯರು/ ಅಂಗನವಾಡಿ ಕಾರ್ಯಕರ್ತೆಯರು
243	Medical Record Assistant	Medical Records and Health Information Technician	ವೈದ್ಯಕೀಯ ದಾಖಲೆ ಮತ್ತು ಆರೋಗ್ಯ ಮಾಹಿತಿ ತಂತ್ರಜ್ಞರು
244	Front line Workers (For COVID and other Medical Equipment Support, Home Care Support, Emergency Care Support, Advanced Care Support, Basic Care Support)	Community Health Workers, Other	ಸಮುದಾಯ ಆರೋಗ್ಯ ಕಾರ್ಯಕರ್ತೆಯರು, ಇತರೆ
245	Therapy Assistants (Yoga etc.)	Assistant Physiotherapist	ಭೌತ ಚಿಕಿತ್ಸಾ ಸಹಾಯಕರು
246	Therapy Assistants (Yoga etc.)	Medical Assistants, Other	ವೈದ್ಯಕೀಯ ಸಹಾಯಕರು, ಇತರೆ
247	Child Care Workers, Ayah, Governess	Ayah - institutional	ಆಯಾ – ಸಂಸ್ಥೆ
248	Child Care Workers, Ayah, Governess	Child Care Worker	ಮಕ್ಕಳ ಆರೈಕೆ ಮಾಡುವವರು
249	Child Care Workers	Ayah - Domestic	ಆಯಾ – ಗೃಹಾಧಾರಿತ
250	Home-Based Personal Care Workers (home health aids, Nurses, etc.)	Nurse - Domestic/ Home	ದಾದಿ– ಗೃಹಾಧಾರಿತ
251	Personal Care Workers in Health Services Not Elsewhere Classified	Ward Boy	ವಾರ್ಡ್ ಬಾಯ್
252	Miscellaneous (sample collectors, distributers)	Community Service Provider	ಸಮುದಾಯ ಸೇವೆ ಒದಗಿಸುವವರು
253	Pelt Dressers, Tanners and Fellmongers	Dyer - Leather	ಡ್ಯಯರ್– ಚರ್ಮ
254	Shoemakers and Related Workers	Shoemaker	ಚಪ್ಪಲಿ ತಯಾರಕರು
255	Shoemakers and Related Workers	Shoe Repairer - Cobbler	ಚಪ್ಪಲಿ ರಿಪೇರಿ ಮಾಡುವವರು –ಚಮ್ಮಾರ
256	Shoemakers and Related Workers	Horn Comb Maker (Hand)	ಕೊಂಬಿನ ಬಾಚಣಿಗೆ ತಯಾರಿಸುವವರು (ಕೈ ಮೂಲಕ)
257	Shoe Making and Related Machine Operators	Helper/ Worker	ಚರ್ಮೋದ್ಯಮ ಸಹಾಯಕರು/ಕೆಲಸಗಾರರು

258	Building Frame and Related Traders	Well Digger	ಬಾವಿ ತೋಡುವವರು
259	Shotfirers and Blasters	Shot Firer	ಶಾಟ್ ಫೈರರ್
260	Miners and Quarriers	Pick Miners	ಗಣಿ ಕಾರ್ಮಿಕರು
261	Miners and Quarriers	Driller - Hand	ಅಗೆಯುವವರು- ಕೈ ಮೂಲಕ
262	Crusher Operator, Mineral	Mineral and Stone Processing Plant Operators, Other	ಖನಿಜ ಮತ್ತು ಕಲ್ಲು ಕ್ವಾರಿ ಯಂತ್ರ ನಿರ್ವಾಹಕರು, ಇತರೆ
263	Well Drillers and Borers and Related Workers	Mudman	ಮಡ್ ಮ್ಯಾನ್
264	Crane, Hoist and Related Plant Operators	Overhead Crane Operator	ಓವರ್ ಹೆಡ್ ಕ್ರೇನ್ ನಿರ್ವಾಹಕರು
265	Crane, Hoist and Related Plant Operators	Liftman	ಲಿಫ್ಟ್ ನಿರ್ವಾಹಕರು
266	Mining and Quarrying Labourers	Mines, Quarrymen, Related Workers	ಗಣಿ, ಕ್ವಾರಿ, ಇತರೆ ಸಂಬಂಧಿತ ಕಾರ್ಮಿಕರು
267	Graphic and Multimedia Designers	Multimedia Artist and Animator/Animator	ಮಾಧ್ಯಮ ಕಲಾವಿದ ಮತ್ತು ಅನಿಮೇಟರ್
268	Religious Professionals	Priest	ಪಾದ್ರಿಗಳು
269	Religious Professionals	Purohit	ಪುರೋಹಿತರು
270	Incinerator and Water Treatment Plant Operators	Plant Operator (Waste water)	ಪ್ಲಾಂಟ್ ನಿರ್ವಾಹಕರು (ತ್ಯಾಜ್ಯ ನೀರು)
271	Incinerator and Water Treatment Plant Operators	Pumpman	ಪಂಪ್ ಮ್ಯಾನ್
272	Sports Coaches, Instructors and Officials	Athletic Coach	ಅಥ್ಲೆಟಿಕ್ ಕೋಚ್
273	Sports Coaches, Instructors and Officials	Sports Coach	ಕ್ರೀಡಾ ಕೋಚ್
274	Sports Coaches, Instructors and Officials	Riding Instructor	ಸವಾರಿ ಬೋಧಕರು
275	Sports Coaches, Instructors and Officials	Umpire	ಅಂಪೈರ್
276	Sports Coaches, Instructors and Officials	Marker/ Groundsmen & Women	ಕ್ರೀಡೆಗಳಲ್ಲಿ ಗುರುತು ಮಾಡುವವರು/ಗ್ರೌಂಡ್ಸ್ ಮೇನ್ & ಮಹಿಳೆ
277	Fitness and Recreation Instructors, and Programme Leaders	Fitness Trainer/ Fitness Instructor	ಫಿಟ್ನೆಸ್ ತರಬೇತುದಾರರು/ ಬೋಧಕರು
278	Fitness and Recreation Instructors, and Programme Leaders	Lifeguard	ಜೀವ ರಕ್ಷಕರು
279	Other Artistic and Cultural Associates (Tattoo Artist, Floral Designer)	Tattoo Artist	ಹಚ್ಚೆ ಹಾಕುವವರು
280	Other Artistic and Cultural Associate Professionals/ Lok Kalakar	Other Artistic and Cultural Associate Professionals, Lok Kalakar, Other	ಇತರ ಕಲಾತ್ಮಕ ಮತ್ತು ಸಾಂಸ್ಕೃತಿಕ ವೃತ್ತಿಪರರು, ಲೋಕ್ ಕಲಾಕರ್, ಇತರೆ
281	Receptionist (General) & Front Desk Assistants	Showroom Hostess	ಪ್ರದರ್ಶನ ಕೊಠಡಿ ಆತಿಥ್ಯಕಾರಿಣಿ
282	Stock Clerks	Inventory Clerk	ದಾಸ್ತಾನು ಗುಮಾಸ್ತ
283	Stock Clerks	Warehouse Worker	ಗೋದಾಮಿನ ಕಾರ್ಮಿಕರು
284	Mail Carriers and Sorting Clerks	Postman	ಅಂಚೆ ಪೇದೆ

285	Domestic Housekeepers	Caretaker - House Keeper (Domestic)	ಉಸ್ತುವಾರಿ- ಮನೆಗೆಲಸಗಾರರು (ಗೃಹ)
286	Undertakers and Embalmers	Grave Digger	ಸಮಾಧಿ ತೋಡುವವರು
287	Stall and Market Salespersons (Tellecaller, Shop Attendant/Sales Assistant)	Sales Executive - Dealership	ಮಾರಾಟ ಕಾರ್ಯನಿರ್ವಾಹಕ- ಡೀಲರ್‌ಶಿಪ್
288	Stall and Market Salespersons (Tellecaller, Shop Attendant/Sales Assistant)	Tele - caller	ದೂರವಾಣಿ ಸಹಾಯಕರು
289	Street Food Salespersons	Milkman	ಹಾಲು ಮಾರುವವನು
290	Delivery Boy/ Partner/ Delivery Associate for food & grocery/ Door- to-Door Salespersons (Hawkers etc)	News Paper Boy	ದಿನಪತ್ರಿಕೆ ಹಾಕುವವರು
291	Delivery Boy/ Partner/ Delivery Associate for food & grocery/ Door- to-Door Salespersons (Hawkers etc)	Home Deliveryman	ಹೋಂ ಡೆಲಿವರಿಮ್ಯಾನ್
292	Delivery Boy/ Partner/ Delivery Associate for food & grocery/ Door- to-Door Salespersons (Hawkers etc)	Distributor Sales Representative	ವಿತರಕರ ಮಾರಾಟ ಪ್ರತಿನಿಧಿಗಳು
293	Delivery Boy/ Partner/ Delivery Associate for food & grocery/ Door- to-Door Salespersons (Hawkers etc)	Field Sales Executive (FSE)	ಕ್ಷೇತ್ರ ಮಾರಾಟ ನಿರ್ವಾಹಕರು
294	Delivery Boy/ Partner/ Delivery Associate for food & grocery/ Door- to-Door Salespersons (Hawkers etc)	Delivery Boy/ Partner/ Delivery Associate for food & grocery/ Door-to-Door Salespersons (Hawkers etc)	ಡೆಲಿವರಿ ಬಾಯ್/ ಸಹೋದ್ಯೋಗಿ/ ಆಹಾರ್ ಮತ್ತು ಸರಕುಗಳ ವಿತರಕರು/ ಮನೆ ಮನೆ ಮಾರಾಟಗಾರರು
295	Sales Workers Not Elsewhere Classified	Salesman	ಮಾರಾಟಗಾರ
296	Rubber Products Machine Operators	Rubber Stamp Maker	ರಬ್ಬರ್ ಸ್ಟಾಂಪ್ ತಯಾರಿಸುವವರು
297	Ships? Deck Crews and Related Workers	Boat Rower	ದೋಣಿ ನಡೆಸುವವರು
298	Hand Packers	Packer	ಪ್ಯಾಕ್ ಮಾಡುವವರು
299	Freight Handlers	Loader and Unloader	ಲೋಡರ್ ಮತ್ತು ಅನ್ಲೋಡರ್ (ಹಮಾಲಿ)
300	Street and Related Service Workers	Boot Polisher	ಬೂಟ್ ಪಾಲಿಶ್ ಮಾಡುವವರು
301	Street Vendors (Food and Excluding Food)	Hawker	ತಿರುಗುವ ವ್ಯಾಪಾರಿ
302	Street Vendors (Food and Excluding Food)	Street Vendors, Non-Food Products, Other	ಬೀದಿ ಬದಿ ವ್ಯಾಪಾರಿ, ಆಹಾರೇತರ ಸರಕುಗಳು. ಇತರೆ
303	Garbage and Recycling Collectors	Garbage Collector	ಕಸ ಸಂಗ್ರಹಣೆ ಮಾಡುವವರು (ಚಿಂದಿ ಆಯುವವರು)

304	Sweepers and Related Labourers	Sweeper	ಕಸ ಗುಡಿಸುವವರು
305	Messengers, Package Deliverers & Luggage Porters	Bellboy (Hotel & Restaurant)	ಬೆಲ್ ಬಾಯ್ (ಹೋಟೆಲ್ ಮತ್ತು ರೆಸ್ಟೋರೆಂಟ್)
306	Messengers, Package Deliverers & Luggage Porters	Tyre Inflation Attendant	ಟೈರ್ ಇನ್ ಫ್ಲೇಷನ್ ಸಹಾಯಕ
307	Messengers, Package Deliverers & Luggage Porters	Sorter - Mail	ಅಂಚೆ ವಿಂಗಡಿಸುವರು
308	Messengers, Package Deliverers & Luggage Porters	Messengers, Package Deliverers and Luggage Porters, Other	ಸಂದೇಶ ರವಾನಕರು, ಪ್ಯಾಕೇಜ್ ವಿತರಿಸುವವರು ಮತ್ತು ಲಗೇಜ್ ಸಾಗಿಸುವವರು, ಇತರೆ
309	Meter Readers and Vending Machine Collectors	Meter Reader	ಮಾಪಕ ಓದುವವರು
310	Meter Readers and Vending Machine Collectors	Tyre Inflation Attendant	ಟೈರ್ ಇನ್ ಫ್ಲೇಷನ್ ಸಹಾಯಕ
311	Musicians/ Singers/ Composers/ Band Baja Players	Singer	ಗಾಯಕ
312	Musicians/ Singers/ Composers/ Band Baja Players	Musicians/ Singers/ Composers/ Band Baja Players, Others	ಸಂಗೀತಗಾರ/ಗಾಯಕರು/ಸಂಯೋಜಕರು/ ಬ್ಯಾಂಡ್ ಬಾಜ ನುಡಿಸುವವರು, ಇತರೆ
313	Musical Instrument Makers and Tuners	Harmonium Maker	ಹಾರ್ಮೋನಿಯಂ ತಯಾರಕರು
314	Musical Instrument Makers and Tuners	Piano Tuner	ಪಿಯಾನೋ ನುಡಿಸುವವರು
315	Musical Instrument Makers and Tuners	Tabla Maker (Musical Instrument)	ತಬಲ ತಯಾರಕರು (ಸಂಗೀತ ವಾದ್ಯ)
316	Musical Instrument Makers and Tuners	Drum Maker - Musical	ಡ್ರಮ್ ತಯಾರಕರು (ಸಂಗೀತ)
317	Musical Instrument Makers and Tuners	Bag Pipe Maker	ತುತ್ತೂರಿ ತಯಾರಿಸುವವರು (ಸಂಗೀತ)
318	Musical Instrument Makers and Tuners	Brass Musical Instruments Assembler	ಹಿತ್ತಾಳೆ ಸಂಗೀತ ವಾದ್ಯಗಳನ್ನು ಜೋಡಿಸುವವರು
319	Office Supervisors	Office Assistant	ಕಛೇರಿ ಸಹಾಯಕ
320	General Office Clerks	Clerk - General	ಗುಮಾಸ್ತ- ಸಾಮಾನ್ಯ
321	Typists and Word Processing Operators	Computer Operator	ಗಣಕ ಯಂತ್ರ ನಿರ್ವಾಹಕ
322	Data Entry Clerks	Domestic Data Entry Operator	ಡೋಮೆಸ್ಟಿಕ್ ಡಾಟಾ ಎಂಟ್ರೀ ಆಪರೇಟರ್
323	Hotel Receptionists	Receptionist	ಸ್ವಾಗತಕಾರರು
324	Clerical Support Workers Not Elsewhere Classified	Office Boy/ Peon	ಆಫೀಸ್ ಬಾಯ್/ಪಿವನ್
325	Cleaners and Helpers in Offices, Hotels and Other Establishments	Helpers and Cleaners in Offices, Hotels and Other Establishments, Other	ಕಛೇರಿ ಸಹಾಯಕರು ಮತ್ತು ಸ್ವಚ್ಛತಾ ಸಿಬ್ಬಂದಿ, ಹೋಟೆಲ್ ಮತ್ತು ಇತರ ಸಂಸ್ಥೆ, ಇತರೆ
326	Inquiry Clerks (Shop sale assistants etc.)	Complaint Attending Clerk/Customer Service Desk/Customer Service Executive	ದೂರು ನಿರ್ವಾಹಕ/ ಗ್ರಾಹಕ ಸೇವಾ ಕೇಂದ್ರ/ ಗ್ರಾಹಕ ಸೇವಾ ನಿರ್ವಾಹಕ
327	Printers	Type Caster	ಟೈಪ್ ಕ್ಯಾಸ್ಟರ್

328	Printers	Pressman (Flatbed, Letter Press)	ಮುದ್ರಣ ನಿರ್ವಾಹಕ (ಫ್ಲಾಟ್ ಬೆಡ್, ಕಾಗದ ಮುದ್ರಣ)
329	Printers	Machineman - Hand Printing	ಮಷಿನ್ ನಿರ್ವಾಹಕ – ಹಸ್ತ ಮುದ್ರಣ
330	Printers	Machineman - Automatic Printing	ಮಾಷಿನ್ ನಿರ್ವಾಹಕ – ಸ್ವಯಂ ಚಾಲಿತ ಮುದ್ರಣ
331	Printers	Machineman, Offset Printing	ಮಾಷಿನ್ ಮೆನ್- ಆಫ್ ಸೆಟ್ ಮುದ್ರಣ
332	Print Finishing and Binding Workers	Book Binder	ಬುಕ್ ಬೈಂಡ್ ಮಾಡುವವರು
333	Print Finishing and Binding Workers	Book Binding Worker	ಬುಕ್ ಬೈಂಡ್ ಕಾರ್ಮಿಕರ
334	Photographic Products Machine Operators	Photographic Products Machine Operators, Other	ಛಾಯಾ ಚಿತ್ರ ಉತ್ಪಾದನ ಮಷಿನ್ ನಿರ್ವಾಹಕರು, ಇತರೆ
335	Security Guards and Security Supervisors	Armed Security Guard	ಸಶಸ್ತ್ರ ಭದ್ರತಾ ಸಿಬ್ಬಂದಿ
336	Security Guards and Security Supervisors	Watchman	ಕಾವಲುಗಾರ
337	Security Guards and Security Supervisors	Gateman / Unarmed Security Guard	ಗೇಟ್ ಮ್ಯಾನ್ / ನಿರಾಯುಧ ಭದ್ರತಾ ಸಿಬ್ಬಂದಿ
338	Dancers and Choreographers	Dancer	ನರ್ತಕರು
339	Film, Stage and Related Workers	Lighting Artist	ಬೆಳಕಿನ ಕಲಾವಿದರು
340	Actors	Actor and Actress	ನಟ ಮತ್ತು ನಟಿಯರು
341	Creative and Performing Artists Not Elsewhere Classified	Acrobat	ಅಕ್ರೋಬ್ಯಾಟ್
342	Creative and Performing Artists Not Elsewhere Classified	Circus Performers, Other	ಸರ್ಕಸ್ ಪ್ರದರ್ಶಕರು, ಇತರೆ
343	Creative and Performing Artists Not Elsewhere Classified	Buffoon - Clown	ಬಫೂನ್ - ಕ್ಲೌನ್
344	Creative and Performing Artists Not Elsewhere Classified	Magician	ಜಾದೂಗಾರ
345	Creative and Performing Artists Not Elsewhere Classified	Snake charmer	ಹಾವಾಡಿಗ
346	Creative and Performing Artists Not Elsewhere Classified	Puppeteer	ಬೊಂಬೆಯಾಟಗಾರ
347	Legal and Related Associate Workers	Legal and Related Associate Professionals, Other	ಕಾನೂನು ಮತ್ತು ಸಂಬಂಧಿತ ವೃತ್ತಿಪರರು, ಇತರೆ
348	Social Work Associate Workers	Social Work Associate Professionals	ಸಮಾಜ ಸೇವೆ ಸಂಬಂಧಿತ ವೃತ್ತಿಪರರು
349	Athletes and Sports Players	Jockey	ಜಾಕಿ
350	Shop Sales Assistants	Shop Assistant	ಅಂಗಡಿ ಸಹಾಯಕ
351	Laundry Machine Operators	Washing Machine Operator	ಬಟ್ಟೆ ತೊಳೆಯುವ ಯಂತ್ರ ನಿರ್ವಾಹಕರು
352	Laundry Machine Operators	Pressman	ಮುದ್ರಣಗಾರರು
353	Hand Launderers and Pressers	Laundary Workers (Marker - Sorter)	ದೋಬಿ ಕಾರ್ಮಿಕರು (ಗುರುತು ಮಾಡುವವರು ಮತ್ತು ವಿಂಗಡಿಸುವವರು)

354	Hand Launderers and Pressers	Dry Cleaner - Hand	ಡ್ರೈ ಕ್ಲೀನರ್ – ಕೈ
355	Hand Launderers and Pressers	Rug Cleaner	ರಗ್ ಕ್ಲೀನರ್
356	Hand Launderers and Pressers	Presser - Hand	ಪ್ರೆಸ್ಸರ್ – ಕೈ ಮೂಲಕ
357	Printers	Colour Maker (Textile Product)	ಬಣ್ಣ ತಯಾರಕರು (ಜವಳಿ ಉತ್ಪನ್ನಗಳು)
358	Fibre Preparing, Spinning and Winding Machine Operators	Fibre Preparing, Spinning and Winding Machine Operators, Other	ಫೈಬರ್ ತಯಾರಕರು. ಸ್ಪಿನ್ನಿಂಗ್ ಮತ್ತು ವೈಂಡಿಂಗ್ ನಿರ್ವಾಹಕರು. ಇತರೆ
359	Bleaching, Dyeing and Cleaning Machine Operators	Wool Dyer	ಉಣ್ಣೆ ಡ್ಯೆಯರ್
360	Tobacco Preparers and Tobacco Products (Bidi Makers, Snuff Makers and Chewing Tobacco Makers)	Tobacco Grader	ತಂಬಾಕು ವರ್ಗೀಕಾರ
361	Tobacco Preparers and Tobacco Products (Bidi Makers, Snuff Makers and Chewing Tobacco Makers)	Cigar or Cheroot Roller	ಸಿಗಾರ್ ಮತ್ತು ಚೆರೂಟ್ ಸುತ್ತುವವರು
362	Tobacco Preparers and Tobacco Products (Bidi Makers, Snuff Makers and Chewing Tobacco Makers)	Bidi Maker	ಬೀಡಿ ಕಾರ್ಮಿಕರು
363	Tobacco Preparers and Tobacco Products (Bidi Makers, Snuff Makers and Chewing Tobacco Makers)	Bidi Checker	ಬೀಡಿ ಪರೀಕ್ಷಿಸುವವರು
364	Tobacco Preparers and Tobacco Products (Bidi Makers, Snuff Makers and Chewing Tobacco Makers)	Chewing Tobacco Maker	ಜಗಿಯುವ ತಂಬಾಕು ತಯಾರಕರು
365	Bookmakers, Croupiers and Related Gaming Workers	Booking Clerk	ಬುಕಿಂಗ್ ಗುಮಾಸ್ತ
366	Travel Guides	Travel Agent	ಪ್ರವಾಸಿ ಏಜೆಂಟ್
367	Travel Guides	Tourist Guide	ಪ್ರವಾಸಿ ಮಾರ್ಗದರ್ಶಿ
368	Cook Institutional	Cooks (restaurent/Shaba/Hotel/Party)	ಅಡುಗೆ ಮಾಡುವವರು (ರೆಸ್ಟೋರೆಂಟ್/ಸಭಾ/ಹೋಟೆಲ್/ಪಾರ್ಟಿ)
369	Waiters	Waiter (Food & Beverage Service Steward)	ವೇಯಿಟರ್ (ಆಹಾರ ಮತ್ತು ಪಾನೀಯ ಸೇವಾ ಉಸ್ತುವಾರಿ)
370	Bartenders	Waiter (Bartender)	ವೇಯಿಟರ್ (ಪಾನಗೃಹದ ಪರಿಚಾರಕ)
371	Cleaning and Housekeeping Supervisors in Offices, Hotels and Other Establishments	Room Attendant	ಕೊಠಡಿ ಅಟೆಂಡರ್
372	Cleaning and Housekeeping Supervisors in Offices, Hotels and Other	Linen Keeper	ಲಿನನ್ ಕೀಪರ್

	Establishments		
373	Cleaning and Housekeeping Supervisors in Offices, Hotels and Other Establishments	Caretaker - Hotel and Restaurant Keeper	ಉಸ್ತುವಾರಿ - ಹೋಟೆಲ್ ಮತ್ತು ರೆಸ್ಟೋರೆಂಟ್ ಕೀಪರ್
374	Building Caretakers	Caretaker - Building	ಉಸ್ತುವಾರಿ - ಕಟ್ಟಡ
375	Building Caretakers	Caretaker - Burial Places and Cremation Grounds	ಉಸ್ತುವಾರಿ - ಚಿತಾಗಾರ ಮತ್ತು ಶವ ಸಂಸ್ಕಾರ ಸ್ಥಳದ ಕೆಲಸಗಾರರು
376	Kitchen Helpers	Kitchen Helper	ಅಡುಗೆ ಮನೆ ಸಹಾಯಕರು
377	Wood Working Machine Tool Setters and Operators	Wood Working Machine Setters and Setter Operators, Others	ಮರಗೆಲಸ ಯಂತ್ರ ಜೋಡಿಸುವವರು ಮತ್ತು ನಿರ್ವಾಹಕರು, ಇತರೆ
378	Wood Processing Plant Operators	Wood Processing Plant Operators and Related Workers, Other	ಮರ ಸಂಸ್ಕರಣೆ ಪ್ಲಾಂಟ್ ನಿರ್ವಾಹಕರು ಮತ್ತು ಸಂಬಂಧಿತ ಕಾರ್ಮಿಕರು, ಇತರೆ
379	Education	Tutors and Other Teacher Aides (Home tutors, Coaching centre tutors etc)	ಬೋಧಕ ಮತ್ತು ಇತರೆ ಶಿಕ್ಷಣ ಸಹಾಯಕರು (ಗೃಹ ಬೋಧಕರು, ಕೋಚಿಂಗ್ ಸೆಂಟರ್ ಬೋಧಕರು ಇತ್ಯಾದಿ

DFA/994785

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 393
ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ ಸಂ	ಪ್ರಶ್ನೆ	ಉತ್ತರ
ಅ.	ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಂಚಾರಕ್ಕೆ ಬಸ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 219 ಗ್ರಾಮಗಳ ಪೈಕಿ 211 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ 302 ಸಾಮಾನ್ಯ ಮತ್ತು 189 ವೇಗದೂತ ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿ ದಿನ ನಿಯಮಿತವಾಗಿ, ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 36 ಮಾರ್ಗಗಳಲ್ಲಿ 91 ಅನುಸೂಚಿಗಳಿಂದ 569 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಪ್ರಸ್ತುತ ಒದಗಿಸಿರುವ ಸಾರಿಗೆ ಸೌಲಭ್ಯವು ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿರುತ್ತದೆ.
ಆ.	ಬಂದಿದ್ದಲ್ಲಿ, ದೇವನಹಳ್ಳಿ ವಿಧಾನಸಭಾ ಕೇತ್ರದ ಕಾಡಹಳ್ಳಿ ಕ್ರಾಸ್(ದೇವನಹಳ್ಳಿ ರಿಂಗ್ ರಸ್ತೆ) ತೈಲಗೆರೆ ಮೀಸಗಾನಹಳ್ಳಿ ಮಾಯಸಂದ್ರ ಕೊಯಿರ ಮನುಗೊಂಡನಹಳ್ಳಿ ಮಾರ್ಗ ಜಿಲ್ಲಾಧಿಕಾರಿಗಳ ಕಛೇರಿ ಈ ರಸ್ತೆಗಳು ಸಾರ್ವಜನಿಕರಿಗೆ ತುಂಬಾ ಅವಶ್ಯಕವಾಗಿದ್ದು, ಸರ್ಕಾರ ಈ ಮಾರ್ಗದಲ್ಲಿ ಬಸ್	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದೇವನಹಳ್ಳಿಯಿಂದ ಕಾರಹಳ್ಳಿ ಕ್ರಾಸ್‌ಗೆ 30 ಏಕ ಸುತ್ತುವಳಿಗಳು ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ 100 ಏಕ ಸುತ್ತವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿ ದಿನ ನಿಯಮಿತವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಪ್ರಸ್ತುತ ದೇವನಹಳ್ಳಿ ಕಡೆಯಿಂದ ಜಿಲ್ಲಾಧಿಕಾರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	394
ಮಾನ್ಯ ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿಗೆ ಎಸ್.ಸಿ.ಪಿ. ಟಿ.ಎಸ್.ಪಿ ಯೋಜನೆಯಡಿಯಲ್ಲಿ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿರುವ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವ ಬಗ್ಗೆ ಸರ್ಕಾರದ ನಿಲುವೇನು;	ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ವಿವಿಧ ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡುತ್ತಿದ್ದು, ಆಯಾ ಇಲಾಖೆಗಳಿಂದ ಜಿಲ್ಲೆ/ ತಾಲ್ಲೂಕುಗಳಿಗೆ ಅನುದಾನ ಮರು ಹಂಚಿಕೆ ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ, 2022-23ನೇ ಸಾಲಿನಲ್ಲಿ ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 57 ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗಳನ್ನು ರೂ.1170.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಮಂಜೂರಾತಿ ನೀಡುವಂತೆ ಮಾನ್ಯ ಶಾಸಕರು, ಸೊರಬ ವಿಧಾನಸಭಾ ಕ್ಷೇತ್ರರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಭವನಗಳ ನಿರ್ಮಾಣಕ್ಕೆ ಲಭ್ಯವಿರುವ ನಿವೇಶನಗಳ ದಾಖಲಾತಿಗಳು ಜಿಲ್ಲೆಯಿಂದ ಸ್ವೀಕೃತವಾದ ನಂತರ ಪರಿಶೀಲಿಸಲಾಗುವುದು. ಮುಂದುವರೆದು, ಪ್ರಗತಿ ಕಾಲೋನಿ ಯೋಜನೆಯಡಿ ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.1707.29 ಲಕ್ಷಗಳ ಅನುದಾನ ಮಂಜೂರಾತಿ ಕೋರಿ ಮಾನ್ಯ ಶಾಸಕರು, ಸೊರಬ ವಿಧಾನಸಭಾ ಕ್ಷೇತ್ರರವರು ವಿವಿಧ ಪತ್ರಗಳಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾಮಗಾರಿಗಳಿಗೆ ಮಂಜೂರಾತಿ ನೀಡುವ ಕುರಿತು 2020-21ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯವಾಗಿರುವುದರಿಂದ ಕ್ರಮರಹಿತವಾಗಿ ಸದರಿ ಕಡತವನ್ನು ಆರ್ಥಿಕ ಇಲಾಖೆಯು ಹಿಂದಿರುಗಿಸಿರುತ್ತದೆ.

ಆ)	ಪ್ರತಿ ವರ್ಷ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಡಲಾಗುತ್ತಿದ್ದು, ಈ ಅನುದಾನವನ್ನು ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಮಾಜದ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಸೊರಬ ತಾಲ್ಲೂಕಿಗೆ ಹೆಚ್ಚಿನ ಅನುದಾನವನ್ನು ಸರ್ಕಾರ ಮಂಜೂರಾತಿ ಮಾಡಲು ಕ್ರಮ ಕೈಗೊಂಡಿದೆಯೇ;	ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಆಯವ್ಯಯದಲ್ಲಿ ಹಂಚಿಕೆಯಾಗಿರುವ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗಳ ಅನುದಾನವನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಈ ಕುರಿತು ಸುತ್ತೋಲೆ ಹೊರಡಿಸಲಾಗಿದ್ದು, ಅದರಂತೆ ಕ್ರಮವಹಿಸಲು ಎಲ್ಲಾ ಇಲಾಖೆಗಳ ಅನುಷ್ಠಾನ ಅಧಿಕಾರಿಗಳಿಗೆ ತಿಳಿಸಲಾಗಿದೆ.
ಇ)	ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಕಛೇರಿಗೆ ಸ್ವಂತ ಕಟ್ಟಡ, ಅಂಬೇಡ್ಕರ್, ಬಾಬು ಜಗಜೀವನ ರಾಮ್ ಸಮುದಾಯ ಭವನಗಳು, ಪರಿಶಿಷ್ಟ ಜಾತಿಯ ಕಾಲೋನಿಗೆ ಮೂಲಭೂತ ಸೌಕರ್ಯಗಳು ರಸ್ತೆ ಚರಂಡಿಗಳು, ನೂತನ ವಸತಿ ನಿಲಯಗಳು ಹಾಗೂ ವಸತಿ ನಿಲಯಗಳ ದುರಸ್ಥಿಗಳಿಗೆ ಅನುದಾನ ಬಿಡುಗಡೆಗೆ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?	ಸಮಾಜ ಕಲ್ಯಾಣ ಇಲಾಖೆಯ ಸೊರಬ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ರೂ.5.00 ಕೋಟಿಗಳ ಅನುದಾನ ಬಿಡುಗಡೆ ಮಾಡುವಂತೆ ಮಾನ್ಯ ಶಾಸಕರು ಕೋರಿದ್ದು, ಈ ಸಂಬಂಧವಾಗಿ, 2022-23ನೇ ಸಾಲಿನಲ್ಲಿ ಇಲಾಖೆಯ ಕಛೇರಿಗಳ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಒದಗಿಸಿರುವುದಿಲ್ಲ. ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇದುವರೆವಿಗೂ 34 ಡಾ||ಬಿ.ಆರ್.ಅಂಬೇಡ್ಕರ್ /ಡಾ||ಬಾಬು ಜಗಜೀವನರಾಂ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ರೂ.382.00 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.322.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳ ಪ್ರಗತಿಯನ್ನು ಆಧರಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. ಪ್ರಗತಿ ಕಾಲೋನಿ ಯೋಜನೆಯಡಿ ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಳೆದ ಮೂರು ವರ್ಷಗಳಲ್ಲಿ ರೂ.100.00 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.65.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳ ಪ್ರಗತಿಯನ್ನು ಆಧರಿಸಿ ಅನುದಾನ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

		ಸೊರಬ ತಾಲ್ಲೂಕಿನ ಆನವಟ್ಟಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ನಿವೇಶನ ಲಭ್ಯವಿದ್ದು, ಸದರಿ ವಿದ್ಯಾರ್ಥಿ ನಿಲಯಕ್ಕೆ ನೂತನ ಕಟ್ಟಡ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದು, ಆದರೆ, ಆನವಟ್ಟಿಯಲ್ಲಿರುವ ಪರಿಶಿಷ್ಟ ಜಾತಿಯ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವನ್ನು ಪ್ರಸ್ತುತ ಸ್ವಂತ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಮುಂದುವರೆದು, ಸೊರಬ ತಾಲ್ಲೂಕಿನಲ್ಲಿ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ರೂ.1814.50 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತುತ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಪಡೆಯಲಾಗುತ್ತಿದ್ದು, ಮೇಲ್ಕಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರಿಂದ ಪ್ರಸ್ತಾವನೆ ಸ್ವೀಕೃತಗೊಂಡಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತಗೊಂಡ ನಂತರ ಅನುದಾನ ಲಭ್ಯತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲು ನಿಯಮಾನುಸಾರ ಕ್ರಮವಹಿಸಲಾಗುವುದು.

ಸಕಇ 746 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 395
ಸದಸ್ಯರ ಹೆಸರು : ಶ್ರೀ ಕುಮಾರ್ ಬಂಗಾರಪ್ಪ ಎಸ್.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕು ಅತ್ಯಂತ ಜನಸಾಂದ್ರತೆ ಹಾಗೂ ಅತ್ಯಧಿಕ ಹಳ್ಳಿಗಳನ್ನು ಹೊಂದಿರುವ ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಸಾರಿಗೆ ಸುರಕ್ಷತೆಯನ್ನು ಒದಗಿಸುವ ದೃಷ್ಟಿಯಿಂದ ಬಸ್ ಘಟಕವನ್ನು ಮಂಜೂರಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸೊರಬದಲ್ಲಿ ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗಳಿಗೆ 9 ಎಕರೆ ನಿವೇಶನವನ್ನು ಕ.ರಾ.ರ.ಸಾ.ನಿಗಮವು ಹೊಂದಿದ್ದು, ರೂ.75.00 ಲಕ್ಷಗಳ ವೆಚ್ಚದಲ್ಲಿ ಸದರಿ ನಿವೇಶನಕ್ಕೆ ಸುತ್ತುಗೋಡೆ ನಿರ್ಮಿಸುವ ಕಾಮಗಾರಿಗೆ ಟೆಂಡರ್ ಅನುಮೋದನೆ ನೀಡಲಾಗಿದೆ. ಆದರೆ, ಪ್ರಸ್ತುತ ಸೊರಬದಲ್ಲಿ ಬಸ್ ಘಟಕ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.
ಆ.	ಈಗಾಗಲೇ ಸೊರಬ ಪುರಸಭೆ ವ್ಯಾಪ್ತಿಯಲ್ಲಿ ಬಸ್ ಘಟಕ ಸ್ಥಾಪಿಸಲು ಹಾಗೂ ಸಾರಿಗೆ ನೌಕರರಿಗೆ ವಸತಿ ಗೃಹ ನಿರ್ಮಿಸಲು 9 ಎಕರೆ ಭೂಮಿ ಮಂಜೂರಾತಿಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ;	
ಇ.	ಹಾಗಿದ್ದಲ್ಲಿ, ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿಗೆ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಬಸ್ ಘಟಕವನ್ನು ಸ್ಥಾಪಿಸಲು ಯಾವಾಗ ಮಂಜೂರಾತಿ ನೀಡಲಾಗುವುದು?	

ಸಂಖ್ಯೆ: ಟಿಡಿ 258 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	396
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ.ಕುಮಾರ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸುವ ಸಚಿವರು	:	**ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ** ಸಂಯೋಜನೆ ಮತ್ತು ಸಾಂಖ್ಯಿಕ
ಉತ್ತರಿಸುವ ದಿನಾಂಕ	:	21.12.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನ ತಾಲ್ಲೂಕು ಕೇಂದ್ರದಲ್ಲಿರುವ, ಕೊಡಕಣಿ ತೋಟಗಾರಿಕಾ ಕ್ಷೇತ್ರವನ್ನು ಸಂರಕ್ಷಿತವಾಗಿ ಉಳಿಸಿಕೊಂಡು ಅಭಿವೃದ್ಧಿಪಡಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಮುಂದಿನ ಪೀಳಿಗೆಗೆ ಕೊಡಕಣಿ ತೋಟಗಾರಿಕಾ ಕ್ಷೇತ್ರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸರ್ಕಾರ ಸೂಕ್ತ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದೇ?	ಕೊಡಕಣಿ ತೋಟಗಾರಿಕಾ ಕ್ಷೇತ್ರದಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. 1 ಕ್ಷೇತ್ರದಲ್ಲಿ ವಿವಿಧ ಮೂಲಭೂತ ಸೌಕರ್ಯಗಳಾದ ಕೊಳವೆ ಬಾವಿ, ಹಸಿರು ಮನೆ, ನೆರಳು ಪರದೆ ,ದಾಸ್ತಾನು ಕೊಠಡಿ,ನೀರಿನ ಟ್ಯಾಂಕ್, ಕೆರೆ ಇತ್ಯಾದಿಗಳನ್ನು ಕಲ್ಪಿಸಲಾಗಿದೆ. 2 ಸೊರಬ ತಾಲ್ಲೂಕು ತೋಟಗಾರಿಕೆ ಕಛೇರಿ ಸಂಕೀರ್ಣ ಮತ್ತು ಕ್ಷೇತ್ರದ ಕಛೇರಿ ಕಟ್ಟಡಗಳಿದ್ದು, ಹಾಗೂ ಕ್ಷೇತ್ರದ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಿಸಲಾಗಿದೆ. 3 ಕೊಡಕಣಿ ತೋಟಗಾರಿಕಾ ಕ್ಷೇತ್ರದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ,ತೆಂಗು, ನೇರಳೆ, ಗೋಡಂಬಿ, ಹಲಸು ಮತ್ತು ಅಡಿಕೆ ತಾಕುಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. 4 ಈ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ವಿವಿಧ ತೋಟಗಾರಿಕೆ ಬೆಳೆಗಳ ಕಸಿ/ಸಸಿಗಳನ್ನು ಹಾಗೂ ತೆಂಗು, ಹೈಬ್ರಿಡ್ ತೆಂಗು, ಕಾಳುಮೆಣಸು, ಅಡಿಕೆ, ಚಕ್ಕೆ ಇತ್ಯಾದಿ ಸಸಿಗಳನ್ನು ಉತ್ಪಾದಿಸಿ, ಸ್ಥಳೀಯ ರೈತರಿಗೆ ಮತ್ತು ತೋಟಗಾರಿಕೆ ಆಸಕ್ತ ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ವಿತರಿಸಲಾಗುತ್ತಿದೆ.

		5 ಅಭಿವೃದ್ಧಿ ಚಟುವಟಿಕೆಗಳಾದ ಎರೆಗೊಬ್ಬರ ಉತ್ಪಾದನೆ, ಎರೆ ಜಲ ಉತ್ಪಾದನೆ, ಜೇನುಸಾಕಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಚಟುವಟಿಕೆಗಳನ್ನೊಳಗೊಂಡಂತೆ ಒಟ್ಟಾರೆ ಈ ಕ್ಷೇತ್ರದ ವಾರ್ಷಿಕ ನಿರ್ವಹಣೆ ಮತ್ತು ಅಭಿವೃದ್ಧಿಗೆ 2022-23ನೇ ಸಾಲಿನಲ್ಲಿ ಒಟ್ಟು ರೂ. 28.863 ಲಕ್ಷಗಳನ್ನು ನೀಡಲಾಗಿದೆ.

No. HORTI 568 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**397**
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿರುವ ವಸತಿ ನಿಲಯಗಳು ಅಧಿಕವಾಗಿ ಹಳೆಯ ಕಟ್ಟಡಗಳನ್ನು ಹೊಂದಿದ್ದು, ಸದರಿ ಕಟ್ಟಡಗಳ ದುರಸ್ತಿಗೆ ಹಾಗೂ ತಾಳಗುಪ್ಪ ಹೋಬಳಿಯಲ್ಲಿರುವ ವಸತಿ ನಿಲಯಗಳು ಅತ್ಯಂತ ಹಳೆಯ ಕಟ್ಟಡಗಳಾಗಿದ್ದು, ಯಾವುದೇ ಸಂದರ್ಭದಲ್ಲಿ ಅನಾಹುತ ಸಂಭವಿಸುವ ಸಂದರ್ಭಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ಇಲಾಖೆಯ ಒಟ್ಟು 22 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 14 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ, 5 ಬಾಡಿಗೆ ಕಟ್ಟಡಗಳಲ್ಲಿ ಮತ್ತು 3 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 14 ವಿದ್ಯಾರ್ಥಿನಿಲಯಗಳ ಪೈಕಿ 13 ವಿದ್ಯಾರ್ಥಿನಿಲಯಗಳ ಕಟ್ಟಡಗಳಿಗೆ ದುರಸ್ತಿ ಕಾಮಗಾರಿಗಳ ಅವಶ್ಯಕತೆಯಿರುತ್ತದೆ ಹಾಗೂ ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯಲ್ಲಿ 02 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಈ 02 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ 02 ಕಟ್ಟಡಗಳ ದುರಸ್ತಿ ಅವಶ್ಯಕತೆಯಿರುತ್ತದೆ.
ಆ)	ಬಂದಿದ್ದಲ್ಲಿ, ನೂತನ ಕಟ್ಟಡಗಳ ಮಂಜೂರಾತಿ ಹಾಗೂ ಕೆಲವು ವಸತಿನಿಲಯಗಳ ದುರಸ್ತಿಗೆ, ಮೂಲಭೂತ ಸೌಕರ್ಯ, ವಿದ್ಯಾರ್ಥಿಗಳಿಗೆ ಹಾಸಿಗೆ, ಮಂಚ, ಬಿಸಿನೀರಿನ ವ್ಯವಸ್ಥೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುದಾನ ಬಿಡುಗಡೆ ಮಾಡಲಾಗುವುದೇ;	2021-22ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (ವಿಭಜನೆ), ಆನವಟ್ಟಿ ಈ ವಿದ್ಯಾರ್ಥಿನಿಲಯದ ಕಟ್ಟಡವನ್ನು ರೂ.326.32 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮುಖಾಂತರ ಕೈಗೊಳ್ಳಲಾಗಿರುತ್ತದೆ. ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ತಿ, ಸಂಖ್ಯಾಬಲಕ್ಕನುಸಾರ ಮೂಲಭೂತ ಸೌಕರ್ಯಗಳಾದ ಹಾಸಿಗೆ, ಮಂಚ, ಬಿಸಿನೀರಿನ ವ್ಯವಸ್ಥೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.
ಇ)	ಹಿಂದುಳಿದ ವರ್ಗಗಳ ಮಹಾನ್ ನಾಯಕ ಡಿ.ದೇವರಾಜು ಅರಸುರವರ ಜನ್ಮದಿನದಂದು ಸರ್ಕಾರ ಘೋಷಣೆ ಮಾಡಿದಂತೆ, ರೂ.250 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿ, ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಸರ್ಕಾರ ಕ್ರಮಕೈಗೊಳ್ಳುವುದೇ?	ದಿನಾಂಕ:20.08.2022ರಂದು ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ದೇವರಾಜ ಅರಸುರವರ 107ನೇ ಜನ್ಮ ದಿನಾಚರಣೆ ಪ್ರಯುಕ್ತ

		ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಪ್ರಸಕ್ತ ಸಾಲಿನಲ್ಲಿ ರೂ.250.00ಕೋಟಿಗಳ ಅನುದಾನ ಒದಗಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ. ಸದರಿ ರೂ.250.00ಕೋಟಿಗಳ ಮಿತಿಯಲ್ಲಿ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಹಾಗೂ ಸ್ವಂತ ಕಟ್ಟಡಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಹಿಂವಕ 756 ಬಿಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 398
ಉತ್ತರಿಸಬೇಕಾದ ದಿನಾಂಕ	: 21.12.2022
ಸದಸ್ಯರ ಹೆಸರು	: ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸುವ ಸಚಿವರು	: ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ, ಕ್ರೀಡೆಯಲ್ಲಿ ಯುವಕರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಸೊರಬ ತಾಲ್ಲೂಕಿನ, ಬಂಗಾರಪ್ಪ ತಾಲ್ಲೂಕು ಕ್ರೀಡಾಂಗಣದ ಸಮಗ್ರ ಅಭಿವೃದ್ಧಿ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿ ವರ್ಷ ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಸರ್ಕಾರ ಗೊತ್ತುಪಡಿಸಿದ ಅವಧಿಯಲ್ಲಿ ವಲಯವಾರು ಕ್ರೀಡಾಕೂಟವನ್ನು ಮಳೆಗಾಲದಲ್ಲಿ ನಡೆಸುವುದು ಅನಿವಾರ್ಯವಾಗಿದೆ ಈ ಕ್ರೀಡಾಕೂಟವನ್ನು ಸುರಕ್ಷಿತವಾಗಿ ನಡೆಸುವ ದೃಷ್ಟಿಯಿಂದ ಹೋಬಳಿಗೊಂದು ಸುಸಜ್ಜಿತ ಕ್ರೀಡಾಂಗಣ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ;	ರಾಜ್ಯದ 31 ಜಿಲ್ಲಾ ಕೇಂದ್ರಗಳ ಪೈಕಿ 29 ಜಿಲ್ಲಾ ಕ್ರೀಡಾಂಗಣಗಳನ್ನು 243 ತಾಲ್ಲೂಕುಗಳ ಪೈಕಿ 123 ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿರುತ್ತದೆ. ಹೋಬಳಿ ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲು ಅವಶ್ಯವಿರುವ ಸೂಕ್ತ ನಿವೇಶನವನ್ನು ಗುರುತಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವಂತೆ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕೋರಲಾಗಿರುತ್ತದೆ. ಸೂಕ್ತ ನಿವೇಶನ ದೊರೆತು ಇಲಾಖೆಗೆ ಹಸ್ತಾಂತರಗೊಂಡ ನಂತರ ಅನುದಾನ ಲಭ್ಯತೆ ಆಧಾರದ ಮೇಲೆ ಹೋಬಳಿ ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸಲು ಪರಿಗಣಿಸಲಾಗುವುದು.

-- 2

ಇ)	ಯುವ ಸಬಲೀಕರಣ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕ್ರೀಡಾಕೂಟಗಳಿಗೆ ಹೆಚ್ಚಿನ ಆದ್ಯತೆ ಕೊಡುವ ದೃಷ್ಟಿಯಿಂದ ಸರ್ಕಾರವು ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕ್ಕಾದ ಸೊರಬ ತಾಲ್ಲೂಕಿನ ಕ್ರೀಡಾಂಗಣಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ?	ಹೌದು. ಸೊರಬ ತಾಲ್ಲೂಕು ಕ್ರೀಡಾಂಗಣದಲ್ಲಿ ಮಳೆ-ಬಿಸಿಲಿನಿಂದ ರಕ್ಷಣೆ ಪಡೆಯಲು ಪೆವಿಲಿಯನ್ ಕಟ್ಟಡವನ್ನು ನಿರ್ಮಿಸಲಾಗಿದ್ದು, 2021-22ನೇ ಸಾಲಿನಲ್ಲಿ ಸದರಿ ಪೆವಿಲಿಯನ್ ಕಟ್ಟಡದ ಮೇಲ್ಛಾವಣಿಯನ್ನು ರೂ 10.25 ಲಕ್ಷಗಳ ವೆಚ್ಚದಲ್ಲಿ ದುರಸ್ತಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಪೂರ್ಣ ಅನುದಾನವನ್ನು ನಿರ್ಮಿತಿ ಕೇಂದ್ರ, ಶಿವಮೊಗ್ಗ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಕೇಂದ್ರ ಪುರಸ್ಕೃತ ಖೇಲೋ ಇಂಡಿಯಾ ಯೋಜನೆಯಡಿ ಸೊರಬ ತಾಲ್ಲೂಕು ಕ್ರೀಡಾಂಗಣದಲ್ಲಿ ರೂ 1000.00 ಲಕ್ಷಗಳ ವೆಚ್ಚದಲ್ಲಿ ವಿವಿದೋದ್ದೇಶ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಹಾಗೂ ರೂ 970.00 ಲಕ್ಷಗಳ ವೆಚ್ಚದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಅಳವಡಿಸುವ ಪ್ರಸ್ತಾವನೆಯನ್ನು ದಿನಾಂಕ: 19.03.2020 ರಂದು ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು. ಆದರೆ ಸದರಿ ಪ್ರಸ್ತಾವನೆಯು ದಿನಾಂಕ: 13.04.2021 ರಂದು ತಿರಸ್ಕೃತಗೊಂಡಿರುತ್ತದೆ. ದಿನಾಂಕ: 23.11.2021 ರಂದು ಸದರಿ ಪ್ರಸ್ತಾವನೆಯನ್ನು ಮತ್ತೊಮ್ಮೆ ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಅನುಮೋದನೆಗೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಿದೆ.

ವೈಎಸ್‌ಡಿ-ಇಬಿಬಿ/170 /2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	399
ಸದಸ್ಯರ ಹೆಸರು	:	ಶ್ರೀ ಉಮಾನಾಥ .ಎ ಕೋಟ್ಯಾನ್
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಕುರಿತು ಸರ್ಕಾರ ಯೋಜನಾನುಷ್ಠಾನಗಳಲ್ಲಿನ ಪ್ರಗತಿಪರ ಯೋಜನೆಗಳಾವುವು; ವಿವಿಧ ಯೋಜನಾನುಷ್ಠಾನಗಳ ಮೂಲಕ ಅನುಕೂಲ ಪಡೆದಿರುವ ಫಲಾನುಭವಿಗಳೆಷ್ಟು;	ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು 2. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ 3. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ 4. ಸಾಮಾಜಿಕ ಸಬಲೀಕರಣ ಕಾರ್ಯಕ್ರಮಗಳು ಪ್ರಗತಿಪರ ಯೋಜನೆಗಳಡಿ ಸೌಲಭ್ಯ ಪಡೆದ ಪರಿಶಿಷ್ಟ ಪಂಗಡದ ಜನಾಂಗದವರ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ.ಸಂ	ಕಾರ್ಯಕ್ರಮ	ಫಲಾನುಭವಿಗಳ ಸಂಖ್ಯೆ
1	ಪ್ರೋತ್ಸಾಹಧನ ಯೋಜನೆ	4992
2	ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ	2179
3	ಪ್ರಬುದ್ಧ ಯೋಜನೆ	32
4	ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ	18
5	ವಿದ್ಯಾವಂತ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗ ಭತ್ಯೆ	997
6	ಸಾಮಾಜಿಕ ಸಬಲೀಕರಣ ಕಾರ್ಯಕ್ರಮಗಳಾದ ಸರಳ ವಿವಾಹ ಮತ್ತು ಅಂತರ್ ಜಾತಿ ವಿವಾಹ ಕಾರ್ಯಕ್ರಮ	239

ಕ್ರ. ಸಂ	ಪ್ರಶ್ನೆ	ಉತ್ತರ
ಆ)	ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರಗತಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; ಬೇಡಿಕೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳನ್ನು ಎಲ್ಲಾ ಜಿಲ್ಲಾ ಪ್ರದೇಶಗಳಲ್ಲಿ ಒದಗಿಸಿಕೊಡಲಾಗಿದೆಯೇ; ಎಷ್ಟು ವಿದ್ಯಾರ್ಥಿನಿಲಯಗಳು ನಿರ್ಮಾಣದ ಹಂತದಲ್ಲಿವೆ;	ಪರಿಶಿಷ್ಟ ವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡ ಯೋಜನೆಗಳನ್ನು **ಅನುಬಂಧ-1ರಲ್ಲಿ** ನೀಡಿದೆ. ಎಲ್ಲಾ ಜಿಲ್ಲಾ ಪ್ರದೇಶಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ. 8 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ 40 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಸೇರಿ ಒಟ್ಟು 48 ವಿದ್ಯಾರ್ಥಿನಿಲಯಗಳ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.

ಇ)	ಪರಿಶಿಷ್ಟ ವರ್ಗಗದವರಿಗೆ ಜಿಲ್ಲಾ ಸಮುದಾಯ ಭವನಗಳನ್ನು ನಿರ್ಮಿಸುವ ಸಲುವಾಗಿ ಕೈಗೊಂಡ ಕ್ರಮಗಳೇನು; ಎಷ್ಟು ಜಿಲ್ಲಾ ಸಮುದಾಯ ಭವನಗಳನ್ನು ಇದುವರೆಗೆ ನಿರ್ಮಿಸಿಕೊಡಲಾಗಿದೆ? (ವಿವರಗಳನ್ನು ನೀಡುವುದು)	ಪರಿಶಿಷ್ಟ ಪಂಗಡದವರ ಅನುಕೂಲಕ್ಕಾಗಿ ಒಟ್ಟು 23 ಜಿಲ್ಲಾ ಮಟ್ಟದಲ್ಲಿ ವಾಲ್ಮೀಕಿ ಸಮುದಾಯ ಭವನಗಳನ್ನು ನಿರ್ಮಿಸಲು ಮಂಜೂರಾಗಿರುತ್ತದೆ. ವಿವರ **ಅನುಬಂಧ-2ರಲ್ಲಿ** ನೀಡಿದೆ.

ಸಕಇ 501 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-1

ಶ್ರೀ ಉಮಾನಾಥ ಕೋಟ್ಯಾನ್ (ಮೂಡಬಿದ್ರೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-399ಕ್ಕೆ ಉತ್ತರ

ಯೋಜನೆಗಳ ವಿವರಗಳು

1. ವಿದ್ಯಾರ್ಥಿನಿಲಯಗಳು/ವಾಲ್ಮೀಕಿ ಆಶ್ರಮ ಶಾಲೆಗಳ ನಿರ್ವಹಣೆ.
2. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ.
3. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ.
4. ಪ್ರೋತ್ಸಾಹಧನ ಯೋಜನೆ: (ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಎಸ್.ಎಸ್.ಎಲ್.ಸಿ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ)
5. ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಕಾರ್ಯಕ್ರಮ.
6. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಧನಸಹಾಯ.
7. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ.
8. ನಿರುದ್ಯೋಗಿ ಜೀವನ ಭತ್ಯೆ ಕಾರ್ಯಕ್ರಮ.
9. ವಿಶ್ವವಿದ್ಯಾಲಯ ಮಟ್ಟದಲ್ಲಿ 1 ರಿಂದ 5ನೇ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ.
10. ಪ.ಪಂಗಡದವರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ.
11. ಪರಿಶಿಷ್ಟ ವರ್ಗದ ಉದ್ಯಮಿಗಳಿಗೆ 4% ಬಡ್ಡಿ ಸಹಾಯಧನ ಕಾರ್ಯಕ್ರಮ.
12. ಪರಿಶಿಷ್ಟ ವರ್ಗಗಳ ಉದ್ಯಮಿಗಳಿಗೆ ಸಾಲ ಮಂಜೂರಾತಿಗೆ ಸಮಾನಾಂತರ ಖಾತ್ರಿ (Collateral Security) ಒದಗಿಸುವುದು.
13. ಭಾರತ ಸಂವಿಧಾನ ಅನುಚ್ಛೇಧ 275(1) ರಡಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ಕಾರ್ಯಕ್ರಮಗಳು.
14. ವಿಶೇಷ ಕೇಂದ್ರಿಯ ನೆರವಿನಡಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ಕಾರ್ಯಕ್ರಮಗಳು.
15. ಮೂಲನಿವಾಸಿ ಜನಾಂಗದವರಿಗೆ ಪೌಷ್ಠಿಕ ಆಹಾರ ಯೋಜನೆ.
16. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ಯೋಜನೆ.
17. ಸಾಮಾಜಿಕ ಸಬಲೀಕರಣ ಕಾರ್ಯಕ್ರಮದಡಿ ಸರಳ ವಿವಾಹ/ ಅಂತರ್ಜಾತಿ ವಿವಾಹ/ ಒಳ ಪಂಗಡ ವಿವಾಹ/ದೇವದಾಸಿ ವಿವಾಹ/ ವಿಧವಾ ವಿವಾಹವಾದ ಪರಿಶಿಷ್ಟ ಪಂಗಡದವರಿಗೆ ಸಹಾಯಧನ ಕಾರ್ಯಕ್ರಮ.

ಅನುಬಂಧ-2

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಉಮಾನಾಥ ಎ. ಕೋಟ್ಯಾನ್(ಮೂಡುಬಿದರೆ)ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:399ಕ್ಕೆ ಉತ್ತರ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
1	ಮೈಸೂರು	2008-09	ಸರ್ಕಾರದ ಆದೇಶ ಸಂಖ್ಯೆ: ಸಕಇ 154 ಪವಯೋ 2008, ದಿನಾಂಕ: 12.12.2008 & ಪವಕನಿ/ಗಿಉಯೋ/ಸಿಆರ್-1/2007-08, ದಿನಾಂಕ: 23.06.2009, 28.10.2009,13.03.2012,	100.00	100.00	0.00	100.00	ಸರ್ಕಾರದ ಆದೇಶ ಸಂಖ್ಯೆ: ಸಕಇ 52 ಪವಯೋ 2012 ದಿನಾಂಕ: 28.02.2012 & ಪವಕನಿ/ಸಂವಿ/ಸಿಆರ್-25/2011-12 ದಿನಾಂಕ: 13.03.2012	100.00	0.00	200.00
2	ಚಾಮರಾಜನಗರ	2008-09	ಸರ್ಕಾರದ ಆದೇಶ ಸಂಖ್ಯೆ: ಸಕಇ 89 ಪವಯೋ 2008, ದಿನಾಂಕ: 05.09.2008 & ಪವಕನಿ/ಸಂ ವಿ/ಸಿಆರ್-8/2005-06, ದಿನಾಂಕ: 24.09.2008 28.10.2009, 12.06.2008 & 13.03.2012	100.00	100.00	0.00	25.00	ಪವಕನಿ/ಸಂವಿ/ಸಿಆರ್-26/2008.09 ದಿನಾಂಕ: 17.12.2016	25.00	0.00	125.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಇಲ್ಲಿವರೆಗೆ ಮಂಜೂರಾದ ಮೊತ್ತ
3	ಬಳ್ಳಾರಿ	2008-09	ಸರ್ಕಾರದ ಆದೇಶ ಸಂಖ್ಯೆ: ಸಕಇ 89 ಪವಯೋ 2008, ದಿನಾಂಕ:15.09.2018 & ಪವಕನಿ/ಸಂವಿ/ಸಿಆರ್-8/2008-09 ದಿನಾಂಕ: 24.09.2008, 12.06.2009, 28.10.2009	100.00	100.00	0.00	425.00	ಸರ್ಕಾರದ ಆದೇಶ ಸಂಖ್ಯೆ: ಸಕಇ 357 ಎಸ್‌ಟಿಪಿ 2020 ದಿನಾಂಕ: 23.03.2021 & ಸರ್ಕಾರದ ಆದೇಶ ಸಂಖ್ಯೆ: ಸಕಇ 37 ಎಸ್‌ಟಿಪಿ 2022(3) ದಿನಾಂಕ: 25.03.2022ಪವಕನಿ/ಸಂವಿ/ಸಿಆರ್-23/2008-09 ದಿನಾಂಕ: 26.04.2021 & 15.07.2022	125.00	0.00	525.00
4	ಕೊಡಗು	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010, ದಿನಾಂಕ:14.09.2010 & ಪವಕನಿ/ಸಂವಿ/ಸಿಆರ್-57/2010-11 ದಿನಾಂಕ: 22.03.2011, 24.02.2015, 23.11.2015	100.00	100.00	0.00	8.50	ಸರ್ಕಾರದ ಆದೇಶ ಸಂಖ್ಯೆ: ಸಕಇ 255 ಪವಯೋ 2016 ದಿನಾಂಕ: 18.05.2017 & ಪವಕನಿ/ಸಂವಿ/ಸಿಆರ್-57/2010-11 ದಿನಾಂಕ: 01.08.2017	8.50	0.00	108.50

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
5	ಬೆಳಗಾವಿ	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 197 ಪವಯೋ 2009, ದಿನಾಂಕ:03.09.200 & ಪವಕನಿ/ಸಂವಿ/ಸಿಆರ್-33/2010-11 ದಿನಾಂಕ: 22.03.2011, 21.11.2012	100.00	100.00	0.00	0	0	0.00	0.00	100.00
6	ರಾಯಚೂರು	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 327 ಪವಯೋ 2016 ದಿನಾಂಕ:15.02.2017 & ಪವಕನಿ/ಸಂವಿ/ಸಿಆರ್-23/2009-10 ದಿನಾಂಕ: 22.03.2011, 15.09.2017, 14.02.2019	350.00	350.00	0.00	100.00	ಸರ್ಕಾರದ ಆದೇಶ ಸಂಖ್ಯೆ: ಸಕಇ 248 ಎಸ್ ಟಿಪಿ 2019 ದಿನಾಂಕ: 21.03.2020 & ಪವಕನಿ/ಸಂವಿ/ಸಿಆರ್-23/2009-10 ದಿನಾಂಕ: 21.03.2020	100.00	0.00	450.00
7	ತುಮಕೂರು	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿನಾಂಕ:14.09.2010 & ಪವಕನಿ/ ಸಂವಿ/ಸಿಆರ್-55/2010-11, ದಿನಾಂಕ: 22.03.2011 & 17.11.2021	100.00	100.00	0.00	275.00	ಸರ್ಕಾರದ ಆದೇಶ ಸಂಖ್ಯೆ: ಸಕಇ 407 ಪವಯೋ 2015, ದಿ: 28.01.2016 & ಪವಕನಿ/ಸಂ ವಿ/ಸಿಆರ್-55/2010-11, ದಿ: 08.03.2016 & ಸಕಇ 357 ಎಸ್‌ಟಿಪಿ 2020, ದಿ: 23.03.2021 & ಪವಕನಿ/ಸಂ ವಿ/ಸಿಆರ್-55/2010-11 ದಿ: 17.04.2021	275.00	0.00	375.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
8	ಶಿವಮೊಗ್ಗ	2011-12	ಸರ್ಕಾರದ ಆದೇಶ ಸಂಖ್ಯೆ: ಸಕಇ 165 ಪವಯೋ 2011 ದಿನಾಂಕ 12.01.2012 & ಪವಕನಿ/ ಸಂವಿ/ಸಿಆರ್-56/2011-12 ದಿನಾಂಕ: 25.01.2012, 02.02.2018	100.00	100.00	0.00	250.00	ಸರ್ಕಾರದ ಆದೇಶ ಸಂಖ್ಯೆ: ಸಕಇ 232 ಪವಯೋ 2015 ದಿನಾಂಕ: 08.03.2016 & ಪವಕನಿ/ಸಂವಿ/ಸಿಆರ್-56/2010-11 ದಿನಾಂಕ: 02.02.2018, ಪವಕನಿ/ಸಂವಿ/ಸಿಆರ್-84/2018-19 ದಿ:14.02.2019	250.00	0.00	350.00
9	ಬೀದರ್	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 57 ಪವಯೋ 2017 ದಿನಾಂಕ04.09.2017 & ಪವಕನಿ/ ಸಂವಿ/ಸಿಆರ್-182/2016-17ದಿನಾಂಕ: 12.09.2017/ಪವಕನಿ/ ಸಂವಿ/ಸಿಆರ್-112/2015-16. ದಿನಾಂಕ: 14.07.2022	350.00	125.00	225.00	0	0	0.00	0.00	350.00
10	ಯಾದಗಿರಿ	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿನಾಂಕ:14.09.2010 & ಪವಕನಿ/ಸಂವಿ/ಸಿಆರ್-54/2010-11 ದಿನಾಂಕ: 22.03.2011, 27.01.2014	100.00	100.00	0.00	0	0	0.00	0.00	100.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
11	ಯಾದಗಿರಿ	2021-22	ಸರ್ಕಾರದ ಆದೇಶ ಸಂಖ್ಯೆ: ಸಕಇ 37 ಎಸ್.ಟಿ.ಪಿ 2022(1) ದಿನಾಂಕ:25.03.2022	400.00	0.00	0.00	0	0	0.00	0.00	400.00
12	ಗದಗ	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿನಾಂಕ:14.09.2010 & ಪವಕನಿ/ಸಂವಿ/ಸಿಆರ್-53/2010-11 ದಿನಾಂಕ: 22.03.2011, 30.03.2011,	100.00	100.00	0.00	200.00	ಸರ್ಕಾರದ ಆದೇಶ ಸಂಖ್ಯೆ: ಸಕಇ 176 ಪವಯೋ 2014 ದಿನಾಂಕ: 01.10.2014 & ಪವಕನಿ/ಸಂವಿ/ಸಿಆರ್-53/2010-11 ದಿನಾಂಕ: 23.07.2015, 13.11.2015	200.00	0.00	300.00
12	ಹಾವೇರಿ	2011-12	ಸರ್ಕಾರದ ಆದೇಶ ಸಂಖ್ಯೆ: ಸಕಇ 92 ಪವಯೋ 2010 ದಿನಾಂಕ:31.03.2011 & 04.06.2014 ಪವಕನಿ/ಸಂವಿ/ಸಿಆರ್-56/2009-10 ದಿನಾಂಕ: 17.10.2011, 05.02.2015 & 04.10.2016	300.00	300.00	0.00	245.00	ಸರ್ಕಾರದ ಆದೇಶ ಸಂಖ್ಯೆ: ಸಕಇ 290 ಎಸ್ ಟಿ ಪಿ 2021 ದಿನಾಂಕ: 30.09.2021 & ಪವಕನಿ/ಸ ಂ ವಿ/ಸಿಆರ್-261/2009-10 ದಿ: 30.09.2021,	61.25	183.75	545.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	[illegible]ಾರೆ ಮಂಜೂರಾದ ಮೊತ್ತ
13	ಚಿಕ್ಕಮಗಳೂರು	2011-12	ಸರ್ಕಾರದ ಆದೇಶ ಸಂಖ್ಯೆ: ಸಕಇ 165 ಪವಯೋ 2011 ದಿನಾಂಕ: 12.01.2012 & ಪವಕನಿ/ಸಂವಿ/ಸಿಆರ್-100/2011-12 ದಿನಾಂಕ: 25.01.2012, 30.03.2012 & 10.03.2015'	100.00	100.00	0.00	325.00	ಸರ್ಕಾರದ ಆದೇಶ ಸಂಖ್ಯೆ: ಸಕಇ 326 ಪವಯೋ 2016 ದಿನಾಂಕ: 15.02.2017 & ಸಕಇ 55 ಎಸ್‌ಟಿಪಿ 20201 (6) ದಿನಾಂಕ:29.01.2022 ಪವಕನಿ/ವಾ.ಛ/ಸಿಆರ್-194/2015-16, ದಿ: 28.02.2017 18.02.2022.	250.00	75.00	425.00
14	ಬಾಗಲಕೋಟೆ	2012-13	ಸರ್ಕಾರದ ಆದೇಶ ಸಂಖ್ಯೆ: ಸಕಇ 286 ಪವಯೋ 2012 ದಿನಾಂಕ: 22.01.2013 & ಪವಕನಿ/ಸಂವಿ/ಸಿಆರ್-101/2013-14 ದಿನಾಂಕ: 08.02.2013, 27.09.2016 &14.02.2019	300.00	300.00	0.00	110.00	ಸರ್ಕಾರದ ಆದೇಶ ಸಂಖ್ಯೆ: ಸಕಇ 159 ಎಸ್‌ಟಿಪಿ 2019 ದಿನಾಂಕ: 11.03.2020 & ಪವಕನಿ/ಸಂವಿ/ಸಿಆರ್-101/2019-20 ದಿ: 11.03.2020	110.00	0.00	410.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
15	ಕೋಲಾರ	2013-14	ಸರ್ಕಾರದ ಆದೇಶ ಸಂಖ್ಯೆ: ಸಕಇ 13 ಪವಯೋ 2014 ದಿನಾಂಕ: 23.01.2014 & ಪವಕನಿ/ಸಂವಿ/ಸಿಆರ್-572013-14 ದಿನಾಂಕ: 17.02.2014 14.02.2019	200.00	200.00	0.00	150.00	ಸರ್ಕಾರದ ಆದೇಶ ಸಂಖ್ಯೆ: ಸಕಇ 357 ಎಸ್‌ಟಿಪಿ 2020 ದಿನಾಂಕ: 23.03.2021 & ಪವಕನಿ/ಸಂವಿ/ಸಿಆರ್-57/-2013-14 ದಿ: 19.04.2021 14.01.2021	97.50	52.5C	350.00
17	ಚಿತ್ರದುರ್ಗ	2008-09	ಸರ್ಕಾರದ ಆದೇಶ ಸಂಖ್ಯೆ: ಸಕಇ 30 ಪವಯೋ 2014 ದಿನಾಂಕ: 12.02.2014, ಸಕಇ 316 ಪವಯೋ 2017 ದಿ: 16.09.2017 & ಪವಕನಿ/ಸಂವಿ/ಸಿಆರ್-25/2011-12 ದಿನಾಂಕ: 13.03.2012/ಪವಕನಿ/ಸಂವಿ/ಸಿಆರ್-1/2007-08, ದಿ:15.07.2022	944.50	800.00	144.50	0.00	0	0.00	0.00	944.50
18	ದಾವಣಗೆರೆ	2017-18	ಸರ್ಕಾರದ ಆದೇಶ ಸಂಖ್ಯೆ: ಸಕಇ 453 ಪವಯೋ 2017 ದಿನಾಂಕ: 18.01.2018, & ಪವಕಇ/ವಾ.ಭ/ಸಿಆರ್-188/2017-18 ದಿನಾಂಕ: 31.01.2018, 14.02.2019	490.00	490.00	0.00	250.00	ಸರ್ಕಾರದ ಆದೇಶ ಸಂಖ್ಯೆ: ಸಕಇ 404ಎಸ್‌ಟಿಪಿ 2021 ದಿನಾಂಕ: 29.01.2022	0.00	0	740.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	೯ ಸ್ಟಾರೆ ಮಂಜೂರಾದ ಮೊತ್ತ
19	ಕೊಪ್ಪಳ	2009-10	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿನಾಂಕ:14.09.2010 & ಪವಕನಿ/ಸಂವಿ/ಸಿಆರ್-19/2010-11 ದಿನಾಂಕ: 22.03.2011, ಪವಕನಿ/ ಸಂವಿ/.ಸಿಆರ್-47/2012-13 ದಿ: 30.03.2013	100.00	100.00	0.00		0	0.00	0	100.00
		2017-18	ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪವಯೋ 2017 ದಿನಾಂಕ:09.02.2018 & ಪವಕನಿ/ವಾ.ಭ/ಸಿಆರ್-109/2017-18 ದಿನಾಂಕ: 16.02.2018, 01.02.2021	150.00	150.00	0.00	0.00	0	0.00	0	150.00
20	ಧಾರವಾಡ	2018-19	ಸರ್ಕಾರದ. ಆದೇಶ ಸಂಖ್ಯೆ: ಸಕಇ 175 ಎಸ್ ಟಿಪಿ 2020 ದಿನಾಂಕ:20.08.2020 & ಪವಕನಿ/ಸಂವಿ/ಸಿಆರ್-66/2020-21 ದಿನಾಂಕ: 05.01.2021	200.00	100.00	100.00	0.00	0	0.00	0.00	200.00
21	ಚಿಕ್ಕಬಳ್ಳಾಪುರ	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿನಾಂಕ:14.09.2010 & ಪವಕನಿ/ಸಂವಿ/ಸಿಆರ್-56/2010-11 ದಿನಾಂಕ: 22.03.2011.	100.00	50.00	50.00	0.00	0	0.00	0	100.00

ಕ್ರ. ಸಂ	ಜಿಲ್ಲೆ	ಮಂಜೂರಾದ ವರ್ಷ	ಆದೇಶ ಸಂಖ್ಯೆ & ದಿನಾಂಕ	ಮಂಜೂರಾದ ಅನುದಾನ	ಕಛೇರಿಯಿಂದ ಬಿಡುಡೆಯಾದ ಅನುದಾನ	ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ	ಮಂಜೂರಾದ ಹೆಚ್ಚುವರಿ ಅನುದಾನ	ಆದೇಶ ಸಂಖ್ಯೆ & ದಿನಾಂಕ	ಬಿಡುಗಡೆಯಾದ ಅನುದಾನ	ಬಾಕಿ	ಒಟ್ಟಾರೆ ಮಂಜೂರಾದ ಮೊತ್ತ
22	ವಿಜಯಪುರ	2021-22	ಸರ್ಕಾರದ ಆದೇಶ ಸಂಖ್ಯೆ: ಸಕಇ 37 ಎಸ್ ಟಿ ಪಿ 2022(2) ದಿನಾಂಕ:25.03.2022	400.00	0.00	0.00	0.00	0	0.00	0	400.00
23	ಬೆಂಗಳೂರು ನಗರ	2010-11	ಸರ್ಕಾರದ ಆದೇಶ ಸಂಖ್ಯೆ: ಸಕಇ 96 ಮೊದೇಶಾ 2011 ದಿನಾಂಕ:20.10.2011 & ಪವಕನಿ/ಸಂವಿ/ಸಿಆರ್-92/2010-11 ದಿನಾಂಕ: 13.03.2012. 30.03.2012. 30.03.2013 ಮತ್ತು 21.03.2016	694.84	694.84	0.00	245.30	ಸರ್ಕಾರದ ಆದೇಶ ಸಂಖ್ಯೆ: ಸಕಇ 165 ಪವಯೋ 2017 ದಿನಾಂಕ:21.09.2017 ಮತ್ತು ಸಕಇ 232 ಎಸ್‌ಟಿಪಿ 2021, ದಿ: 12.10.2021 & ಪವಕ ಇ /ವಾಭ/ಸಿಆರ್-82/2010-11, ದಿನಾಂಕ: 26.09.2017, 12.10.2021	192.00	53.30	940.14
ಒಟ್ಟು				**5979.34**	**4659.84**	**519.50**	**2708.80**		**1794.25**	**364.55**	**8688.14**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 400

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 21.12.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರಾವಳಿ ಪ್ರದೇಶಗಳಲ್ಲಿ ತೋಟಗಾರಿಕೆ ವಲಯದ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳು ಯಾವುವು; ಎಷ್ಟು ತೋಟಗಾರಿಕಾ ಕೃಷಿಕರಿಗೆ ಯೋಜನಾ ಸೌಲಭ್ಯಗಳನ್ನು ನೀಡಲಾಗಿದೆ;	ಕರಾವಳಿ ಪ್ರದೇಶಗಳಲ್ಲಿ ತೋಟಗಾರಿಕೆ ವಲಯದ ಅಭಿವೃದ್ಧಿಗಾಗಿ ಸರ್ಕಾರ ಈ ಕೆಳಕಂಡ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. 1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2. ರಾಷ್ಟ್ರೀಯ ತೋಟಗಾರಿಕಾ ಮಿಷನ್ 3. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 4. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ತಾಳೆ ಬೆಳೆ 5. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ 6. ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ 7. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ 8. ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ 9. ಜೇನು ಸಾಕಾಣಿಕೆ (ಜಿಲ್ಲಾ ವಲಯ) 10. ತೋಟಗಾರಿಕೆಯಲ್ಲಿ ವಿನೂತನ ತಂತ್ರಜ್ಞಾನ ಹಾಗೂ ಯಾಂತ್ರಿಕರಣ ಪ್ರಸಕ್ತ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ 6964 ತೋಟಗಾರಿಕಾ ಕೃಷಿಕರಿಗೆ ಯೋಜನಾ ಸೌಲಭ್ಯಗಳನ್ನು ನೀಡಲಾಗಿದೆ. In the coastal regions, for the development of Horticulture sector the following schemes are being implemented 1. Pradhan Mantri Krishi Sinchaye Yojana 2. National Horticulture Mission 3. Rashtriya Krishi Vikas Yojana 4. National Mission on Edible Oils- Oil Palm (NMEO-OP)

		5. Integrated Farming in Coconut for Productivity Improvement Programme 6. Comprehensive Horticulture Development 7. Scheme for Integrated Control of Pests & Diseases of Horticultural Crops 8. Development of Madhuvana and Apiculture 9. Bee keeping 10. Innovative Technology and Mechanization During the current year 6964 farmers have been given benefit under above-mentioned schemes.
ಆ)	ತೆಂಗು, ಅಡಿಕೆ, ಮೆಣಸಿನಕಾಳು, ಏಲಕ್ಕಿ ಮುಂತಾದ ಆರ್ಥಿಕ ಬೆಳೆಯಲ್ಲಿ ರೈತರು ತೊಡಗಿಸಿಕೊಳ್ಳಲು ಯೋಜನಾ ಸೌಲಭ್ಯಗಳು ಹಾಗೂ ಆಧುನಿಕ ತೋಟಗಾರಿಕಾ ಸಲಕರಣೆಗಳ ಬಳಕೆ ಮತ್ತಿತರ ಸೌಕರ್ಯಗಳನ್ನು ಒದಗಿಸಿಕೊಡಲು ನೂತನ ತೋಟಗಾರಿಕಾ ನೀತಿಗಳ ಬಳಕೆ ಕುರಿತು ಅರಿವು ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ತೆಂಗು, ಅಡಿಕೆ, ಮೆಣಸಿನಕಾಳು, ಏಲಕ್ಕಿ ಮುಂತಾದ ಆರ್ಥಿಕ ಬೆಳೆಯಲ್ಲಿ ರೈತರು ತೊಡಗಿಸಿಕೊಳ್ಳಲು ಕೈಗೊಂಡ ಯೋಜನಾ ಸೌಲಭ್ಯಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಆಧುನಿಕ ತೋಟಗಾರಿಕಾ ಸಲಕರಣೆಗಳ ಬಳಕೆ ಮತ್ತಿತರ ಸೌಕರ್ಯಗಳನ್ನು ಒದಗಿಸಿಕೊಡಲು ರಾಜ್ಯವಲಯ ಮತ್ತು ಕೇಂದ್ರ ನೆರವಿನ SMAM ಯೋಜನೆಗಳಡಿ ವಿವಿಧ ಯಂತ್ರೋಪಕರಣ ಮತ್ತು ತೋಟಗಾರಿಕೆ ಉಪಕರಣವನ್ನು, ಸಲಕರಣೆಗಳನ್ನು ಪ್ರೋತ್ಸಾಹಿಸಲು ಸಹಾಯಧನ ನೀಡಲಾಗುತ್ತಿದೆ. ಅಲ್ಲದೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 20 HPಗಿಂತ ಕಡಿಮೆ ಸಾಮರ್ಥ್ಯದ ಟ್ರಾಕ್ಟರ್ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. ಹಾಗೂ ಈಗಾಗಲೇ ಅಭಿವೃದ್ಧಿಗೊಂಡಿರುವ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ವಿನೂತನ ತೋಟಗಾರಿಕೆ ತಂತ್ರಜ್ಞಾನಗಳ ಪ್ರಾತ್ಯಕ್ಷಿತೆಗಳನ್ನು ಪ್ರದರ್ಶಿಸಲು ರೈತರಿಗೆ / ರೈತ ಉತ್ಪಾದಕ ಸಂಘ / ಇಲಾಖಾ ಅಧಿಕಾರಿಗಳಿಗೆ/ ಕೃಷಿ-ತೋಟಗಾರಿಕೆ ವಿಶ್ವವಿದ್ಯಾಲಯ ರವರುಗಳಿಗೆ ಅರಿವು ಮೂಡಿಸುವ ಸಲುವಾಗಿ ಫೆಬ್ರುವರಿ 2023ರಲ್ಲಿ ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ ಬೆಂಗಳೂರು ಇಲ್ಲಿ 2 ದಿನಗಳ Farm conclave and Innovations 2023 ಕಾರ್ಯಕ್ರಮವನ್ನು ಉದ್ಘೋಷಿಸಲಾಗಿದ್ದು, ಪ್ರಸ್ತುತ ಇದಕ್ಕೆ ಪೂರಕ ಸಿದ್ಧತೆಗಳು ನಡೆಯುತ್ತಿದೆ.

ನೂತನ ತೋಟಗಾರಿಕಾ ನೀತಿಗಳ ಬಳಕೆ ಕುರಿತು ಅರಿವು ಮೂಡಿಸಲು ಹೋಬಳಿ ಮಟ್ಟದ ಅಧಿಕಾರಿಗಳು ಗ್ರಾಮಸಭೆಗಳಲ್ಲಿ ಮಾಹಿತಿ ನೀಡುತ್ತಿದ್ದು, ರೇಡಿಯೋ, ದೂರದರ್ಶನ, ಕರಪತ್ರಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ. ಆಧುನಿಕ ರೀತ್ಯಾ ಬದಲಾವಣೆಗಳ ತಾಂತ್ರಿಕ ಮಾಹಿತಿಯ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಮಾಸಿಕ ತಾಂತ್ರಿಕ ಕೈಪಿಡಿ ಹಾಗೂ ರೈತ ಉತ್ಪಾದಕಾ ಸಂಸ್ಥೆ, ಉತ್ಕೃಷ್ಟ ಕೇಂದ್ರ, ರಾಜ್ಯ ಮತ್ತು ಕೇಂದ್ರ ಸಂಶೋಧನಾ ಕೇಂದ್ರಗಳಲ್ಲಿ ರೈತರಿಗೆ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ. ಅಲ್ಲದೇ ರೈತರ ತಾಕುಗಳಿಗೆ ನಿರಂತರವಾಗಿ ಕ್ಷೇತ್ರಭೇಟಿ, ಕೃಷಿ/ತೋಟಗಾರಿಕೆ ಮೇಳ, ಹಾಗೂ ಪ್ರವಾಸಗಳ ಮೂಲಕ ಅಧಿಕಾರಿಗಳು ಮಾಹಿತಿಯನ್ನು ನೀಡುತ್ತಿರುತ್ತಾರೆ. ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

The details of Scheme benefits provided to farmers for the commercial crops like coconut, Arecanut, Pepper and Cardamom are enclosed in Annexure-1

Subsidies are being given to encourage the use of various machinery and horticulture equipments and implements under State and Centrally assisted SMAM schemes. In addition, National Horticulture Mission Scheme is providing subsidy for purchase of tractors of less than 20 HP capacity.

Farm tech Start-up conclave and Innovations 2023 program has been proposed at University of Agricultural Sciences, GKVK, Bengaluru in February-2023 in order to create awarness among the farmers, the farmer producer organizations, Departmental officials, Agri/ Horticultural Universities and others to demonstrate the innovation horticulture technologies that are

		already developed and are being developed: Preparation are underway for the said programe. Hobli level Officials are giving awareness on technical aspects through village gram panchayat meetings, propaganda is being carried out through radio, television and pamphlets. Monthly technical manuals at the district level on modern technological developments, trainings, workshops and demonstrations are being organized for farmers at Research Institutes, Center of Excellence, State and Central Research Centers. Also, officials are providing information through field visits, agriculture/horticulture fairs, and farmer's tours. Details of training programs, workshops conducted on awareness is furnished in Annexure-2
೩)	ದಕ್ಷಿಣ ಕನ್ನಡ ಮತ್ತು ಉಡುಪಿ ಹಾಗೂ ಕಾರವಾರ ಜಿಲ್ಲೆಗಳಲ್ಲಿನ ತೋಟಗಾರಿಕಾ ವಲಯದಲ್ಲಿನ ಅಭಿವೃದ್ಧಿ ಮತ್ತು ಉತ್ಪನ್ನಗಳ ಹೆಚ್ಚಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ದಕ್ಷಿಣ ಕನ್ನಡ ಮತ್ತು ಉಡುಪಿ ಹಾಗೂ ಕಾರವಾರ ಜಿಲ್ಲೆಗಳಲ್ಲಿನ ತೋಟಗಾರಿಕಾ ವಲಯದಲ್ಲಿನ ಅಭಿವೃದ್ಧಿ ಮತ್ತು ಉತ್ಪನ್ನಗಳ ಹೆಚ್ಚಳಕ್ಕಾಗಿ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಹನಿ ನೀರಾವರಿ ಪ್ರದೇಶ ವಿಸ್ತರಣೆ, ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ (ಬಾಳೆ, ಅನಾನಸ್, ತರಕಾರಿ, ಹೂ ತಾಳೆ ಬೆಳೆ, ಸಾಂಬಾರು ಇತರೆ ತೋಟಗಾರಿಕೆ ಬೆಳೆಗಳು), ಹಳೆಯ ಅನುತ್ಪಾದಕ ತೋಟಗಳ ಪುನಶ್ಚೇತನ, ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮಗಳಾದ ನೀರಿನಲ್ಲಿ ಕರಗುವ ರಸಗೊಬ್ಬರ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, ಹಣ್ಣಿನ ಗಿಡಗಳ ಮೇಲಾವರಣ ನಿರ್ವಹಣೆ, ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ, ಯಾಂತ್ರಿಕರಣ ಉತ್ತೇಜನ ಘಟಕಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ ಅಲ್ಲದೇ ಮಹಾತ್ಮ ಗಾಂಧಿ ರಾಷ್ಟ್ರೀಯ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮುಖಾಂತರವೂ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲಾಗುತ್ತಿದೆ.

2. ಜೇನುಸಾಕಾಣಿಕೆಗಾಗಿ ಸಹಾಯಧನವನ್ನು ನೀಡಲಾಗುತ್ತಿದ್ದು, ಇದರಿಂದಾಗಿ ರೈತರು ಹೆಚ್ಚುವರಿ ಆದಾಯ ಗಳಿಸುವ ಜೊತೆಗೆ ತೋಟಗಾರಿಕೆ ಬೆಳೆಗಳಲ್ಲಿ ಪರಾಗಸ್ಪರ್ಶ ವನ್ನು ಹೆಚ್ಚಿಸಿ ಅಧಿಕ ಉತ್ಪಾದನೆಗೆ ಸಹಕಾರಿಯಾಗುತ್ತಿದೆ.
3. ಹವಾಮಾನ ವೈಪರೀತ್ಯದಿಂದ ತೋಟಗಾರಿಕೆ ಬೆಳೆಗಳಲ್ಲಿ ಉಂಟಾಗುವ ನಷ್ಟವನ್ನು ತುಂಬಿ ಕೊಡಲು ಕರಾವಳಿಯ ಪ್ರಮುಖ ಬೆಳೆಗಳಾದ ಅಡಿಕೆ ಮತ್ತು ಕಾಳುಮೆಣಸು ಬೆಳೆಗಳನ್ನು ಹವಾಮಾನ ಆಧಾರಿತ ಬೆಳೆ ವಿಮೆಗೆ ಸೇರ್ಪಡಿಸಲಾಗಿದೆ.
4. ರೈತ ಉತ್ಪಾದಕ ಸಂಸ್ಥೆಗಳಿಂದ ಗುಚ್ಛಮಾದರಿಯಲ್ಲಿ ತೋಟಗಾರಿಕೆ ಬೆಳೆಗಳ ಉತ್ಪಾದನೆಯನ್ನು ಉತ್ತೇಜಿಸುವುದು, ಪರಿಕರಗಳ ವ್ಯಾಪಾರ ಹಾಗೂ ಮಾರುಕಟ್ಟೆ ಬಲವರ್ಧನೆಯ ಮುಖಾಂತರ ರೈತರಿಗೆ ಉತ್ತಮ ಬೆಲೆ ದೊರಕಿಸಿಕೊಡಲಾಗುತ್ತಿದೆ.

The following actions are taken for the development and improvement in production under horticulture sector for Dakshina Kannada, Udupi and Karwar Districts.

1. Area expansion under drip irrigation, area expansion of horticulture crops (Banana, Pineapple, vegetable crops, flower crops, Oil palm, spices and other horticulture crops), rejuvenation of old unproductive plantations, special intervention programs like distribution of water-soluble fertilizer/Micronutrient Mixture/ Crop specials/ bio agents and bio mixtures/plant protection chemicals, canopy management and maintenance in fruit crops. Also, area expansion of

		horticulture crops is being implemented through Mahatma Gandhi National Rural Employment Guarantee Scheme (MGNREGA) 2. Assistance is provided for beekeeping to increase the farmer's income by increasing the pollination which in turn increases the productivity. 3. The major Horticulture crops grown in coastal regions like Arecanut and Pepper are covered under Weather Based Crop Insurance Scheme to bear the crop loss occurred due to the weather calamities. 4. Farmer Producer Organizations are encouraging cluster approach in Horticulture crop cultivation, end to end support to farmers, input businesses and strengthening marketing aspects and thereby help the farmers in getting better price for their produce.

No. HORTI 566 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಅನುಬಂಧ-1

ತೆಂಗು, ಅಡಿಕೆ, ಕಾಳುಮೆಣಸು, ಏಲಕ್ಕಿ ಮುಂತಾದ ಆರ್ಥಿಕ ಬೆಳೆಯಲ್ಲಿ ರೈತರು ತೊಡಗಿಸಿಕೊಳ್ಳಲು ಯೋಜನಾ ಸೌಲಭ್ಯಗಳ ವಿವರ

ಕ್ರ. ಸಂ.	ಯೋಜನೆ	ಉಪ ಯೋಜನೆ	ಘಟಕ ವೆಚ್ಚ (ರೂ. ಲಕ್ಷಗಳಲ್ಲಿ/ಪ್ರತಿ ಹೆಕ್ಟೇರ್ ಗೆ)	ಸಹಾಯಧನ %
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಸಹಾಯಗನದ ಮೊತ್ತ ಪ್ರತಿ ಹೆಕ್ಟೇರ್ ಗೆ)	ಬೆಳೆ - ಅಡಿಕೆ/ ಕಾಳುಮೆಣಸು	0.601	ಪರಿಶಿಷ್ಠ ಜಾತಿ ಮತ್ತು ಪಂಗಡದ ರೈತರಿಗೆ 90 % ಮತ್ತು ಸಾಮಾನ್ಯ ವರ್ಗದ ರೈತರಿಗೆ 75% ಸಹಾಯಧನ
		ಬೆಳೆ - ತೆಂಗು	0.253	
2	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ	ಪುನಃಶ್ಚೇತನ ಮತ್ತು ಮರುನಾಟ	0.448	100
		ಪುನಃಶ್ಚೇತನ ಮತ್ತು ಮರುನಾಟಿ ನಿರ್ವಹಣೆ	0.088	100
3	ರಾಷ್ಟ್ರೀಯ ತೋಟಗಾರಿಕಾ ಮಿಷನ್	ಕಾಳುಮೆಣಸು ಪ್ರದೇಶ ವಿಸ್ತರಣೆ	0.400	50
		ಕಾಳುಮೆಣಸು ಪುನಃಶ್ಚೇತನ	0.200	50
		ಸಸ್ಯ ಸಂರಕ್ಷಣಾ ಔಷಧಗಳ ಖರೀದಿಗೆ ಸಹಾಯಧನ	0.040	30
		ಪ್ಲಾಸ್ಟಿಕ್ ಹೊದಿಕೆ	0.320	50
4	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	ಸಸ್ಯ ಸಂರಕ್ಷಣಾ ಔಷಧಗಳ ಖರೀದಿಗೆ ಸಹಾಯಧನ	0.100	ಪರಿಶಿಷ್ಠ ಜಾತಿ ಮತ್ತು ಪಂಗಡದ ರೈತರಿಗೆ 90 % ಮತ್ತು ಸಾಮಾನ್ಯ ವರ್ಗದ ರೈತರಿಗೆ 75% ಸಹಾಯಧನ
5	ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ	ಅಡಿಕೆ ತೋಟವನ್ನು ಅಭಿವೃದ್ಧಿ ಪಡಿಸಲು	1.69	100
		ಕಾಳುಮೆಣಸು(ತೆಂಗಿನ ತೋಟದಲ್ಲಿ) ಅಭಿವೃದ್ಧಿ ಪಡಿಸಲು	0.23	100
		ಕಾಳುಮೆಣಸು(ಅಡಿಕೆ ತೋಟದಲ್ಲಿ) ಅಭಿವೃದ್ಧಿ ಪಡಿಸಲು	1.13	100
		ತೆಂಗಿನ ತೋಟವನ್ನು ಅಭಿವೃದ್ಧಿ ಪಡಿಸಲು	0.65	100

ಅನುಬಂಧ-2

ಆಧುನಿಕ ತೋಟಗಾರಿಕಾ ಸಲಕರಣೆಗಳ ಬಳಕೆ ಮತ್ತಿತರ ಸೌಕರ್ಯಗಳನ್ನು ಒದಗಿಸಿಕೊಡಲು ನೂತನ ತೋಟಗಾರಿಕಾ ನೀತಿಗಳ ಬಳಕೆ ಕುರಿತು ಅರಿವು ಮೂಡಿಸಲು ಭಾಗವಹಿಸಿದ ಫಲಾನುಭವಿಗಳ ಸಂಖ್ಯೆ

ಕಾರ್ಯಕ್ರಮ	ಜಿಲ್ಲಾವಾರು ಭಾಗವಹಿಸಿದ ರೈತರುಗಳ ಅಂದಾಜು ಸಂಖ್ಯೆ			
	ಉತ್ತರ ಕನ್ನಡ	ದಕ್ಷಿಣ ಕನ್ನಡ	ಉಡುಪಿ	ಒಟ್ಟು
ಕ್ಷೇತ್ರೋತ್ಸವ	250	450	200	900
ವಿಚಾರ ಸಂಕಿರ್ಣ	200	2590	200	2990
ಕೃಷಿ ಮೇಳ	500	1020	500	2020
ಒಟ್ಟು	950	4060	900	5910

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	401
ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿ/ ಜನಾಂಗ/ ಸಮುದಾಯವರು 2ಎ ಸರ್ಟಿಫಿಕೇಟ್ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳು ಯಾವುವು;	ಬಂದಿರುವುದಿಲ್ಲ.
ಆ)	ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಅಧಿಕೃತ ಹೆಸರುಗಳಿಗೆ ಕೆಲವೊಂದು ಜಿಲ್ಲೆಗಳಲ್ಲಿ ಪರ್ಯಾಯ ಪದಗಳ ದಾಖಲೆಗಳಲ್ಲಿರುವ ಹೆಸರುಗಳನ್ನು ಬಳಕೆ ಮಾಡಲು ನ್ಯಾಯೋಚಿತ ಕ್ರಮಗಳನ್ನು ಸರ್ಕಾರ ಕೈಗೊಳ್ಳುವ ಮೂಲಕ ಅನುಕೂಲ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರಲ್ಲಿರುವ ಹಿಂದುಳಿದ ವರ್ಗಕ್ಕೆ ಸೇರಿದವರು ಜಾತಿ ಪ್ರಮಾಣ ಪತ್ರ ಪಡೆಯಲು ಮಾತ್ರ ಅರ್ಹರಿರುತ್ತಾರೆ.
ಇ)	ಅಧಿಕೃತ ಪಟ್ಟಿಯಲ್ಲಿರುವ ಪದ್ಮಶಾಲಿ ಎಂಬ ಹೆಸರಿಗೆ ಪರ್ಯಾಯ ಜಾತಿಪದ ಆಗಿರುವ ಶೆಟ್ಟಿಗಾರ/ಸೆಟ್ಟಿಗಾರ ಎಂದು ದಾಖಲೆಯಲ್ಲಿರುವವರಿಗೆ ಪದ್ಮಶಾಲಿ ಎಂದು ಅಧಿಕೃತ 2ಎ ಸರ್ಟಿಫಿಕೇಟ್ ಗಳನ್ನು ಕರಾವಳಿ ಜಿಲ್ಲೆಗಳಿಗೆ ಸೀಮಿತವಾಗಿ ನೀಡುತ್ತಿರುವುದು ನ್ಯಾಯೋಚಿತವಾಗಿದ್ದು ಈ ಸೌಲಭ್ಯವನ್ನು ರಾಜ್ಯಾದ್ಯಂತ ಇರುವ ಫಲಾನುಭವಿಗಳಿಗೆ ಒದಗಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕ ಇ 225 ಬಿಸಿಎ 2000 ದಿನಾಂಕ: 30.03.2002ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪದ್ಮಶಾಲಿ ಜಾತಿಯು ಪ್ರವರ್ಗ-2ಎ ರ ಕ್ರಮಸಂಖ್ಯೆ:76 (k) ರಲ್ಲಿ ಸೇರ್ಪಡೆಗೊಂಡಿದ್ದು, ಈ ಜಾತಿಗೆ ಸೇರಿದವರು ಜಾತಿ ಪ್ರಮಾಣ ಪತ್ರ ಪಡೆಯಲು ಮಾತ್ರ ಅರ್ಹರಿರುತ್ತಾರೆ. ಸದರಿ ಆದೇಶದಲ್ಲಿ ಶೆಟ್ಟಿಗಾರ/ಸೆಟ್ಟಿಗಾರ ಜಾತಿಯು ಸೇರ್ಪಡೆಯಾಗಿರುವುದಿಲ್ಲ.

ಸಂಖ್ಯೆ: ಹಿಂವಕ 239 ಬಿಸಿಎ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	462
ಮಾನ್ಯ ಸದಸ್ಯರ ಹೆಸರು	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ಎಷ್ಟು ಕಟ್ಟಡ ಕಾರ್ಮಿಕರನ್ನು ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಲಾಗಿದೆ;	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 16,300 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ.
ಆ)	ಪ್ರತಿ ದಿನ ದುಡಿದು ಬದುಕುವ ಈ ಕಾರ್ಮಿಕರಿಗೆ ದುಡಿಮೆಗೆ ನೆರವಾಗಲು ಸರ್ಕಾರದಿಂದ ಒದಗಿಸಿರುವ ಸೌಲಭ್ಯಗಳಾವುವು; (ವಿವರವಾದ ಮಾಹಿತಿ ನೀಡುವುದು)	ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಭಿತರಿಗಾಗಿ ನೆರವಾಗಲು ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ. ಸೌಲಭ್ಯಗಳ ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ.
ಇ)	ಇವರ ದುಡಿಮೆ ನೆರವಾಗಲು ಪಿರಿಯಾಪಟ್ಟಣ ಮತಕ್ಷೇತ್ರದ ಕಟ್ಟಡ ಕಾರ್ಮಿಕರಿಗೆ ಹೆಚ್ಚುವರಿಯಾಗಿ ಅಗತ್ಯ ಪರಿಕರಗಳನ್ನು ಒದಗಿಸಲು ಸರ್ಕಾರ ಕೈಗೊಂಡಕ್ರಮವೇನು?	ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಅವರ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಕ್ಕೆ ಅನುಕೂಲವಾಗಲು ಟೂಲ್ ಕಿಟ್‌ಗಳನ್ನು ಜೇಷ್ಠತೆಯ ಆಧಾರದ ಮೇಲೆ ವಿತರಿಸಲಾಗುತ್ತಿದೆ. ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ವಿವಿಧ ವೃತ್ತಿಗಾನುಗುಣವಾಗಿ ಈಗಾಗಲೇ ಈ ಕೆಳಕಂಡಂತೆ 1,898 ಟೂಲ್ ಕಿಟ್‌ಗಳನ್ನು ವಿತರಿಸಲಾಗಿದೆ. 1. ಬಾರ್ ಬೆಂಡಿಂಗ್ ಟೂಲ್ ಕಿಟ್–108 2. ಪೇಟಿಂಗ್ ಟೂಲ್ ಕಿಟ್–218 3. ಪ್ಲಂಬರ್ ಟೂಲ್ ಕಿಟ್–114 4. ಕಾರ್ಪೆಂಟರ್ ಟೂಲ್ ಕಿಟ್–229 5. ಎಲೇಕ್ಟ್ರಿಷಿಯನ್ ಟೂಲ್ ಕಿಟ್–235 6. ಮೇಷನ್ ಟೂಲ್ ಕಿಟ್–994

ಕಾಇ 673 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ 25 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ **ರೂ.3,000/-**
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/- ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಭಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/-** ದವರೆಗೆ ಮುಂಗಡಸಾಲ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ**ರೂ.50,000/-**
9. **ಶಿಶು ಪಾಲನಾ ಸೌಲಭ್ಯ:ಕಾರ್ಮಿಕರ ಮಕ್ಕಳ ಪಾಲನೆಗಾಗಿ ರಾಜ್ಯದದ್ಯಾಂತ 100 ಕಿತ್ತೂರುರಾಣಿಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.**
10. **ಅಂತ್ಯಕ್ರಿಯೆವೆಚ್ಚ :ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.71,000/-**ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರಸಂ	**ತರಗತಿ (ಉತ್ತೀರ್ಣಕ್ಕೆ)**	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	**5,000**
2	1 ರಿಂದ 4ನೇ ತರಗತಿ	**5,000**
3	5 ರಿಂದ 8ನೇ ತರಗತಿ	**8,000**
4	9 ಹಾಗೂ 10ನೇ ತರಗತಿ	**12,000**
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯಪಿ.ಯು.ಸಿ	**15,000**
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	**20,000**
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್	**40,000**
8	ಡಿ.ಎಡ್	**25,000**
	ಬಿ.ಎಡ್	**35,000**
9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	**25,000**

10	ಎಲ್‌ಎಲ್‌ಬಿ / ಎಲ್‌ಎಲ್‌ಎಮ್	**30,000**
11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	**35,000 ಗರಿಷ್ಠ** **2 ವರ್ಷಅವಧಿಗೆ ಒಳಪಟ್ಟು**
	ತಾಂತ್ರೀಕ/ ವೈದ್ಯಕೀಯ ಎನ್‌ಇಇಟ ಅಥವಾ ಕೆಸಿಇಟಿ	
12	ಬಿಇ / ಬಿ.ಟೆಕ್‌ಅಥವಾ ಸಂಬಂಧಪಟ್ಟಯೂಜಿಕೋರ್ಸ್	**ಸದರಿ** **ಕೋರ್ಸ್‌ನಗರಿಷ್ಠ** **2 ವರ್ಷಅವಧಿಗೆ ಒಳಪಟ್ಟು** **ವಾರ್ಷಿಕ ರೂ.50,000**
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರಕೋರ್ಸ್)	**ಸದರಿ** **ಕೋರ್ಸ್‌ನಗರಿಷ್ಠ** **ಅವಧಿಗೆ ಒಳಪಟ್ಟು** **ವಾರ್ಷಿಕರೂ. 60,000**
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್‌ಎಸ್ / ಬಿಡಿಎಸ್ /ಬಿಹೆಚ್‌ಎಮ್‌ಎಸ್‌ಕೋರ್ಸ್‌ಗೆಅಥವಾಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರಕೋರ್ಸ್	**ರೂ.60,000** **(ಸದರಿ** **ಕೋರ್ಸ್‌ನಗರಿಷ್ಠ** **ಅವಧಿಗೆ ಒಳಪಟ್ಟು)**
	ಎಮ್‌ಡಿ	**ರೂ. 75,000 (ಸದರಿ** **ಕೋರ್ಸ್‌ನಗರಿಷ್ಠ** **ಅವಧಿಗೆ ಒಳಪಟ್ಟು)**
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆಗರಿಷ್ಠ ಮೂರು ವರ್ಷಗಳಿಗೆ ಹಾಗೂ ಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷ **ರೂ. 25,000 (ಯೂಜಿಸಿಯ** **ಜೂನಿಯರ್‌ರಿಸರ್ಚ್ ಫೆಲೋಶಿಫ್‌ಗೆ** **ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ** **ಮತ್ತು** **ರಾಜ್ಯ ಸರ್ಕಾರದಲ್ಲಿ ಕೆಲಸ** **ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ** **ಯೂಜಿಸಿ ನಿಯಮಗಳನ್ವಯ ವೇತನ** **ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ** **ಅನುದಾನಿತ** **ಕಾಲೇಜುಗಳಲ್ಲಿ ಕೆಲಸ** **ನಿರ್ವಹಿಸುತ್ತಿರುವ ಆಭ್ಯರ್ಥಿಗಳು** **ಈ ಸೌಲಭ್ಯವನ್ನು ಪಡೆಯಲು** **ಅರ್ಹರಿರುವುದಿಲ್ಲ.**
16	ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	**ಪಾವತಿಸಿದ ಬೋದನಾ ಶುಲ್ಕ**

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆ**ರೂ.300/– ರಿಂದರೂ.20,000/–ವರೆಗೆ**
13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ**ರೂ.5,00,000/–,** ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ **ರೂ.2,00,000/– ಮತ್ತು**ಭಾಗಶಃ ಶಾಶ್ವತದುರ್ಬಲತೆಯಾದಲ್ಲಿ **ರೂ.1,00,000/–**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/–**ವರೆಗೆ
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ **ರೂ.60,000/–**
16. **ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಮತ್ತುಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲುತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ನೋಂದಾಯಿತ ಫಲಾನುಭವಿಗಳಿಗೆ **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ**
19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ**ರೂ.6,000/–** ಗಳ ಸಹಾಯಧನ.
20. ಇಮ್ಯೂನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ
22. ಮೋಬೈಲ್ ಮೆಡಿಕಲ್‌ಕೇರ್‌ಯೂನಿಟ್
23. ಪೈಲಟ್‌ಟ್ರೈನಿಂಗ್: ಫಲಾನುಭವಿಯಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಶನ್‌ಕಿಟ್ಸ್:

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	463
ಸದಸ್ಯರ ಹೆಸರು	ಶ್ರೀ ಮಹದೇವ ಕೆ (ಪಿರಿಯಾಪಟ್ಟಣ)
ಉತ್ತರಿಸುವ ದಿನಾಂಕ	21-12-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಎಷ್ಟು ರೈತರು ವ್ಯವಸಾಯ ಮಾಡುತ್ತಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2.12 ಲಕ್ಷ ಎಕರೆ ಪ್ರದೇಶದಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ 83,058 ರೈತರು ವ್ಯವಸಾಯ ಮಾಡುತ್ತಿದ್ದಾರೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ)
ಆ)	ಸಾವಯವ ಪದ್ಧತಿಯಲ್ಲಿ ಕೃಷಿ ಮಾಡುತ್ತಿರುವ ರೈತರನ್ನು ಉತ್ತೇಜಿಸಲು ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು;	ಸಾವಯವ ಕೃಷಿ ಪದ್ಧತಿಯಲ್ಲಿ ವ್ಯವಸಾಯ ಮಾಡುವ ರೈತರನ್ನು ಉತ್ತೇಜಿಸಲು ಸರ್ಕಾರ ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. **ಅ)ಸಾವಯವ ಕೃಷಿ ಮತ್ತು ದೃಢೀಕರಣ:** ಸಾವಯವ ಕೃಷಿ/ ನೈಸರ್ಗಿಕ ಕೃಷಿಯನ್ನು ಅನುಸರಿಸುತ್ತಿರುವ ಅರ್ಹ ರೈತ/ ರೈತ ಗುಂಪುಗಳ ಪ್ರದೇಶವನ್ನು ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆ (KSSOCA) ಸಂಸ್ಥೆಯ ಮುಖಾಂತರ ಸಾವಯವ ಪ್ರಮಾಣೀಕರಣಕ್ಕೆ ನೋಂದಾಯಿಸಿ ಪ್ರಮಾಣೀಕರಣದ ಶುಲ್ಕ ಭರಿಸುವುದರೊಂದಿಗೆ ರೈತರ ಕ್ಷೇತ್ರವನ್ನು ಸಾವಯವ ಪ್ರಮಾಣೀಕರಣದ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. **ಆ)ಸಾವಯವ ಸಿರಿ:** 2021-22ನೇ ಸಾಲಿನ ಹೊಸ ಕಾರ್ಯಕ್ರಮ "ಸಾವಯವ ಸಿರಿ" ಯೋಜನೆಯಡಿ ರಾಜ್ಯದ ಅರ್ಹ ಆಸಕ್ತ ರೈತರಿಗೆ ಸಾವಯವ ಕೃಷಿಯಲ್ಲಿ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ನೀಡಲಾಗುತ್ತಿದೆ. **ಇ)ನೈಸರ್ಗಿಕ ಕೃಷಿ ಕಾರ್ಯಕ್ರಮ:**2018-19ನೇ ಸಾಲಿನ ನೈಸರ್ಗಿಕ ಕೃಷಿ ಯೋಜನೆಯಡಿ ನೈಸರ್ಗಿಕ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ಯೀಕರಣವನ್ನು ಕೃ.ವಿ.ವಿ.ಗಳ ಮುಖಾಂತರ ರಾಜ್ಯದ ಎಲ್ಲಾ 10 ಹವಾಮಾನ ವಲಯಗಳ ಸಂಶೋಧನ ಕೇಂದ್ರಗಳಲ್ಲಿ ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಪ್ರಯೋಗಗಳು ಮುಂದುವರೆದಿರುತ್ತದೆ. ಅಲ್ಲದೆ, 2022-23ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ನೈಸರ್ಗಿಕ ಕೃಷಿಯನ್ನು ಅಳವಡಿಸಲು ರೈತರನ್ನು [illegible] ಉದ್ದೇಶದಿಂದ ರಾಜ್ಯದ ಎಲ್ಲಾ ಕೃಷಿ/ ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಮುಖಾಂತರ ತಲಾ 1000 ಎಕರೆ ರೈತರ

		ಹೊಲಗಳಲ್ಲಿ ನೈಸರ್ಗಿಕ ಕೃಷಿ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಕಾರ್ಯಕ್ರಮದಡಿ ಯೋಜನಾ ಪ್ರದೇಶಗಳು, ರೈತರು ಮತ್ತು ಕ್ಲಸ್ಟರ್‌ಗಳನ್ನು ಗುರುತಿಸಲಾಗಿದ್ದು, ಎಲ್ಲಾ ಕ್ಲಸ್ಟರ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರಸ್ತುತ ಯೋಜನಾ ಪ್ರದೇಶದಲ್ಲಿ ಆಯ್ಕೆಯಾಗಿರುವ ನೈಸರ್ಗಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ರೈತರಿಗೆ ಪ್ರತಿ ಎಕರೆಗೆ ರೂ. 7000/- ಗಳನ್ನು ನೀಡಲಾಗುತ್ತಿರುತ್ತದೆ. **ಈ)ಸಿರಿಧಾನ್ಯ ಉತ್ತೇಜನ ಕಾರ್ಯಕ್ರಮಗಳು:** ರಾಜ್ಯದ ಸಿರಿಧಾನ್ಯ ಕ್ಷೇತ್ರವನ್ನು ವಿಸ್ತರಿಸುವ ನಿಟ್ಟಿನಲ್ಲಿ "ರೈತ ಸಿರಿ" ಯೋಜನೆಯನ್ನು 2019-20 ನೇ ಸಾಲಿನಿಂದ ಪ್ರಾರಂಭಿಸಿದ್ದು, ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ. 10,000/- ಗಳಂತೆ ಗರಿಷ್ಠ 2 ಹೆಕ್ಟೇರ್ ಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗಿದ್ದು, 2022-23 ನೇ ಸಾಲಿನಲ್ಲಿಯು ಸದರಿ ಯೋಜನೆಯು ಮುಂದುವರೆದಿದ್ದು ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಸಿರಿಧಾನ್ಯಗಳನ್ನು ಬೆಳೆದ ರೈತರುಗಳಿಗೆ ರೂ.6000 ಪ್ರೋತ್ಸಾಹಧನ ಪಾವತಿಸಲಾಗುತ್ತಿದೆ. ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳ ವರೆಗೆ ಸಹಾಯಧನವನ್ನು ನೀಡಲಾಗುವುದು, ಪ್ರಸ್ತುತ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗುತ್ತಿದೆ.
ಇ)	ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಸಾವಯವ ಕೃಷಿ ಮಾಡುತ್ತಿರುವ ರೈತರುಗಳೆಷ್ಟು; (ಬೆಳೆಯ ವಿವರದೊಂದಿಗೆ ಮಾಹಿತಿ ನೀಡುವುದು)	ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ 248 ರೈತರು ಸಾವಯವ ಕೃಷಿ ಮಾಡುತ್ತಿದ್ದಾರೆ. ಬೆಳೆವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಈ)	ಸಾವಯವ ಪದ್ಧತಿಯಲ್ಲಿ ಬೆಳೆದ ಬೆಳೆಗೆ ರೈತರಿಂದ ನೇರವಾಗಿ ಸರ್ಕಾರ ಖರೀದಿ ಮಾಡುವ ವ್ಯವಸ್ಥೆ ಅಥವಾ ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ರಾಜ್ಯದ ಸಾವಯವ ಬೆಳೆಗಾರರು ತಾವು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡುವ ನಿಟ್ಟಿನಲ್ಲಿ 2016-17ನೇ ಸಾಲಿನಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಾಜ್ಯಾದ್ಯಂತ ರಚಿಸಲಾಗಿದೆ. ಈ ಒಕ್ಕೂಟಗಳ ಮೂಲಕ ಸದಸ್ಯ ರೈತರು ಉತ್ಪಾದಿಸಿದ ಸಾವಯವ ಉತ್ಪನ್ನಗಳ ಸಂಸ್ಕರಣೆ, ವರ್ಗೀಕರಣ, ಮೌಲ್ಯವರ್ಧನೆ, ಪ್ಯಾಕಿಂಗ್ ಮತ್ತು ಮಾರಾಟ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ.

		ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಪರ್ಕ ಒದಗಿಸಿಕೊಡುವ ನಿಟ್ಟಿನಲ್ಲಿ ಹಾಗೆಯೇ ಗ್ರಾಹಕ/ಪಾಲುದಾರರಲ್ಲಿ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸಲು ರಾಜ್ಯದ ಹಲವಾರು ಕಡೆ ಸಾವಯವ ಮತ್ತು ಸಿರಿಧಾನ್ಯ ಕಾರ್ಯಾಗಾರ/ ಮೇಳ/ ವಸ್ತು ಪ್ರದರ್ಶನಗಳನ್ನು ಆಯೋಜಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಆಯೋಜಿಸಲಾಗುವ ಕೃಷಿ ಮೇಳಗಳಲ್ಲಿ ಸಾವಯವ ಸಿರಿಧಾನ್ಯ ಉತ್ಪನ್ನಗಳ ಪ್ರತ್ಯೇಕ ಪೆವಿಲಿಯನ್ ಗಳನ್ನು ಸ್ಥಾಪಿಸಲಾಗಿರುತ್ತದೆ. ಅಲ್ಲದೇ ಇತರೆ ರಾಜ್ಯಗಳಲ್ಲಿ ಆಯೋಜಿಸುವ ಮೇಳಗಳಲ್ಲಿ ಭಾಗವಹಿಸಲಾಗುತ್ತಿದೆ. ಮುಂದುವರೆದು, ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ರಾಷ್ಟ್ರೀಯ ಅಂತರರಾಷ್ಟ್ರೀಯ ಮಾರುಕಟ್ಟೆ ಸಂಪರ್ಕ ಕಲ್ಪಿಸಿಕೊಡುವ ನಿಟ್ಟಿನಲ್ಲಿ ರಾಜ್ಯದ ಸಾವಯವ ರಾಜ್ಯಧಾನಿಯಾದ ಬೆಂಗಳೂರಿನಲ್ಲಿ ಪ್ರಥಮವಾಗಿ 2017 ರಲ್ಲಿ ರಾಷ್ಟ್ರಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳ, ಇದರ ಯಶಸ್ಸಿನ ಆಧಾರದ ಮೇಲೆ ತದನಂತರ 2018 ಮತ್ತು 2019ರಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳನ್ನು ಆಯೋಜಿಸಲಾಗಿದೆ. ಮುಂದುವರೆದು, ಜನವರಿ 20,21 ಮತ್ತು 22, 2023 ರಂದು ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳವನ್ನು ಆಯೋಜಿಸಲಾಗುತ್ತಿದೆ.

ಸಂಖ್ಯೆ: AGRI-ACT/270/ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1 ಜಿಲ್ಲಾವಾರು ಸಾವಯವ ಕೃಷಿ ಪದ್ಧತಿ ಅಳವಡಿಸಿರುವ ವಿವರ (LAQ 463)			
ಕ್ರ.ಸಂ	ಜಿಲ್ಲೆ	ಸಾವಯವ ಕೃಷಿ ಪದ್ಧತಿ ಅಳವಡಿಸಿರುವ ವಿಸ್ತೀರ್ಣ (ಎಕರೆ ಗಳಲ್ಲಿ)	ರೈತರ ಸಂಖ್ಯೆ
1	ಬಾಗಲಕೋಟೆ	3573.37	1015
2	ಬೆಳಗಾವಿ	5895.03	1536
3	ಬೆಂಗಳೂರು ನಗರ	948.34	763
4	ಬೆಂಗಳೂರು ಗ್ರಾಮಾಂತರ	1996.12	2162
5	ಬಳ್ಳಾರಿ	7798.15	1758
6	ಬೀದರ	6118.38	3487
7	ಚಾಮರಾಜನಗರ	2541.93	1150
8	ಚಿಕ್ಕಮಗಳೂರು	4808.29	1572
9	ಚಿಕ್ಕಬಳ್ಳಾಪುರ	955.45	197
10	ಚಿತ್ರದುರ್ಗ	16370.10	7296
11	ದಾವಣಗೆರೆ	12821.40	5963
12	ಧಾರವಾಡ	3920.48	883
13	ದಕ್ಷಿಣ ಕನ್ನಡ	1439.05	1034
14	ಗದಗ	3542.50	3247
15	ಹಾವೇರಿ	16891.12	6282
16	ಹಾಸನ	13631.03	8210
17	ಕಲಬುರ್ಗಿ	11138.75	2213
18	ಕೊಡಗು	4260.75	1778
19	ಕೋಲಾರ	3178.70	1364
20	ಕೊಪ್ಪಳ	3015.73	841
21	ಮಂಡ್ಯ	4752.55	1805
22	ಮೈಸೂರು	3830.40	1610
23	ರಾಯಚೂರು	9037.21	1903
24	ರಾಮನಗರ	2553.40	729
25	ಶಿವಮೊಗ್ಗ	20692.76	7661
26	ತುಮಕೂರು	6563.50	2105
27	ಯಾದಗಿರಿ	3227.12	1358
28	ವಿಜಯಪುರ	24964.70	8722
29	ಉಡುಪಿ	4601.80	2201
30	ಉತ್ತರ ಕನ್ನಡ	5590.48	1785
31	ವಿಜಯನಗರ	1540.23	428
	ಒಟ್ಟು	212198.82	83058

ಅನುಬಂಧ-2
ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿವರ
(LAQ 463)

ಕ್ರ ಸಂ	ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿವರ		
	ಬೆಳೆಗಳ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)	ರೈತರ ಸಂಖ್ಯೆ
1	ಕಬ್ಬು	41	32
2	ಭತ್ತ	48	26
3	ರಾಗಿ	56	39
4	ಬಾಳೆ	25	42
5	ಅಲಸಂದೆ	16	14
6	ತರಕಾರಿ	29	20
7	ನವಣೆ	15	12
8	ಸಾಮೆ	15	10
9	ಶುಂಠಿ	16	12
10	ತೆಂಗು	36	25
11	ಅಡಿಕೆ	22	16
ಒಟ್ಟು	ಒಟ್ಟು	**319**	**248**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 464

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ಮಹದೇವ ಕೆ. (ಪಿರಿಯಾ ಪಟ್ಟಣ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 21.12.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಮತಕ್ಷೇತ್ರವು ಅರೆ ಮಲೆನಾಡು ಎಂದು ಗುರುತಿಸಿದ್ದು ಬೆಳೆ ಸಮೀಕ್ಷೆ ಪ್ರಕಾರ 1111.80 ಹೆಕ್ಟೇರ್ ಪ್ರದೇಶದಲ್ಲಿ ರೈತರು ಅಡಿಕೆ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ನರೇಗಾ ಹಾಗೂ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಇ)	ಅಡಿಕೆ ಬೆಳೆಯುವ ರೈತರಿಗೆ ಸಹಾಯಧನ ನೀಡಲು ರಾಜ್ಯ ಮಟ್ಟದ ಸಮಿತಿಯಲ್ಲಿ ಸೇರಿಸಿ ರೈತರಿಗೆ ಅನುಕೂಲ ಮಾಡಲು ಸರ್ಕಾರ ಕ್ರಮವಹಿಸುವುದೇ? (ವಿವರ ನೀಡುವುದು)	ಅಡಿಕೆ ಬೆಳೆಯ ಅಗಾಧ ಪ್ರದೇಶ ವಿಸ್ತರಣೆ,ಅಂತರ್ಜಲ ಸಮಸ್ಯೆ ಉಂಟಾಗಬಹುದಾದ ಮಾರುಕಟ್ಟೆ ಸಮಸ್ಯೆ ಇದನ್ನು ಪರಿಗಣಿಸಿ,ಈ ವಿಷಯವು ಸರ್ಕಾರದ ಪರಿಶೀಲನೆ ಹಂತದಲ್ಲಿದೆ.

No. HORTI 569 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	465
ಉತ್ತರಿಸಬೇಕಾದ ದಿನಾಂಕ	:	21.12.2022
ಸದಸ್ಯರ ಹೆಸರು	:	ಶ್ರೀ ಬಳ್ಳಾರಿ ವಿರೂಪಾಕ್ಷಪ್ಪ ರುದ್ರಪ್ಪ (ಬ್ಯಾಡಗಿ)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
1	ಕಳೆದ ಮೂರು ವರ್ಷಗಳಲ್ಲಿ ಹಾವೇರಿ ಜಿಲ್ಲೆಯಿಂದ ವಿವಿಧ ಕ್ರೀಡೆಗಳಲ್ಲಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಿದ ಕ್ರೀಡಾಪ್ರತಿಭೆಗಳ ಸಂಖ್ಯೆ ಎಷ್ಟು; (ಹೆಸರಿನೊಂದಿಗೆ ಮಾಹಿತಿ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಹಾವೇರಿ ಜಿಲ್ಲೆಯಿಂದ ವಿವಿಧ ಕ್ರೀಡೆಗಳಲ್ಲಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಿದ ಕ್ರೀಡಾಪ್ರತಿಭೆಗಳ ಸಂಖ್ಯೆ ಒಟ್ಟು 54 ವಿವರಗಳನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ.
2	ಪ್ರತಿಭೆಗಳ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;	ಕ್ರೀಡಾ ಪ್ರತಿಭೆಗಳ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡ ಕ್ರಮದ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.
3	ತಾಲ್ಲೂಕು ಕ್ರೀಡಾಂಗಣಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?	ರಾಜ್ಯದ 243 ತಾಲ್ಲೂಕುಗಳ ಪೈಕಿ 123 ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ತಾಲ್ಲೂಕು ಕ್ರೀಡಾಂಗಣಗಳು ಇಲ್ಲದಿರುವ ತಾಲ್ಲೂಕು ಕೇಂದ್ರಗಳಲ್ಲಿ, ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲು ಅವಶ್ಯವಿರುವ ಸೂಕ್ತ ನಿವೇಶನವನ್ನು ಗುರುತಿಸಿ, ಇಲಾಖೆಗೆ ಹಸ್ತಾಂತರಿಸುವಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಅಲ್ಲದೇ ಬಂಟ್ವಾಳ, ಬ್ರಹ್ಮಾವರ, ಬೈಂದೂರು, ಬಸವನಬಾಗೇವಾಡಿ, ನಿಡಗುಂದಿ, ಬಬಲೇಶ್ವರ, ರಾಮದುರ್ಗ, ಕಿತ್ತೂರು, ರಬಕವಿಬನಹಟ್ಟಿ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಸಹಯೋಗದೊಂದಿಗೆ ನಿರ್ಮಿಸುವ ಬಗ್ಗೆ ಕಾರ್ಯಸಾಧ್ಯತೆ ವರದಿ ಪಡೆಯಲು ಕ್ರಮವಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ / ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ.4147.20 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿಕೊಳ್ಳಲಾಗಿದೆ. ವಿವರವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

ವೈಎಸ್‌ಡಿ-ಇಬಿಬಿ/171/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಅನುಬಂಧ-01

ಕಳೆದ ಮೂರು ವರ್ಷಗಳಲ್ಲಿ ಹಾವೇರಿ ಜಿಲ್ಲೆಯಿಂದ ವಿವಿಧ ಕ್ರೀಡೆಗಳಲ್ಲಿ ರಾಜ್ಯಮಟ್ಟದಲ್ಲಿ ಮತ್ತು ಮೇಲ್ಮಟ್ಟು ಪ್ರತಿನಿಧಿಸಿದ ಕ್ರೀಡಾಪಟುಗಳ ಪಟ್ಟಿ

ಕ್ರ.ಸಂ	ಕ್ರೀಡಾಪಟುವಿನ ಹೆಸರು	ಕ್ರೀಡೆ
1	ಬಿ ಸುಮಯ್ಯಾ ಹುಮನಾಬಾದಿ	ಜುಡೊ
2	ದೀಪಾ ಮ. ಹೊಸಪೇಟೆ	ಬಾಸ್ಕೆಟ್ ಬಾಲ್
3	ಸವಿತಾ ಶಿ. ಹಿರೂರ	ಖೋ-ಖೋ
4	ಪಾರ್ವತಿ ನಿಂ. ಹೊಮ್ಮರಡಿ	ಖೋ-ಖೋ
5	ಮಧು ನಾ. ಕರಬಣ್ಣನವರ	ಖೋ-ಖೋ
6	ನಮ್ರುತಾ ಎಸ್ ಅನಿಶೆಟ್ಟರ	ಹ್ಯಾಂಡಬಾಲ್
7	ಮಂಜುಳಾ ಗ ಹಿರೇಮಠ	ಖೋ-ಖೋ
8	ನಾಗರಾಜ ದ್ಯಾ ಲಮಾಣಿ	ಥ್ರೋಬಾಲ್
9	ಶೃತಿ ಚಂ ನಡುವಿನಮನಿ	100 ಮೀ ಓಟ
10	ಪವಿತ್ರಾ ರಾಜಪ್ಪನವರ	ಖೋ-ಖೋ
11	ತೇಜಸ್ ಹೋಂಗಲಕರ್	ಫುಟ್ ಬಾಲ್
12	ಸೃಷ್ಟಿ.ಉಳ್ಳಪ್ಪ. ಕಲಿವಾಳ	ಅಥ್ಲೇಟಿಕ್ಸ್
13	ಸಚಿನ್ ಹೆಚ್ ನೀರೋಳ್ಳಿ,	ರೋಪ್ ಸ್ಕಿಪಿಂಗ್
14	ಮಹಬೂಬ್ಬಿ ಸೌದಾಗರ.	ವಾಲಿಬಾಲ್
15	ಪ್ರತೀಕ್ಷಾ. ಕ. ಚಿಕ್ಕಬಾಸೂರು,	ಹ್ಯಾಂಡ್‌ಬಾಲ್
16	ಪ್ರವೀಣ ಪ್ರಕಾಶ.ನಿರೋಳ್ಳಿ,	ರೋಪ್ ಸ್ಕಿಪಿಂಗ್
22	ಸಾಗರ, ಮೋರೆ	ಹ್ಯಾಂಡ್‌ಬಾಲ್
23	ಚೇತನಕುಮಾರ ಹಟ್ಟಿಯವರ	ಹಾಕಿ
24	ರಕ್ಷಿತಾ ಶ್ಯಾಮ ಉಪಳೆ	ಅಥ್ಲೇಟಿಕ್ಸ್
25	ಮಧುಸೂದನ ಟಿ ನಾಯಕ	ಹ್ಯಾಂಡಬಾಲ್
26	ಪುನಂ ಖೋಡೆ	ಹ್ಯಾಂಡಬಾಲ್
27	ಶರತ್ ವಿ ಮತ್ತಿಹಳ್ಳಿ	ಹ್ಯಾಂಡಬಾಲ್
28	ಕಾರ್ತಿಕ ಕೊಂಚಿಕೊರವರ	800ಮೀ
29	ರಾಜು ಹುಲಿಹಳ್ಳಿ	ನಡೆಗೆ
30	ರಚಿತಾ ಕರಬಣ್ಣನವರ	ಖೋ-ಖೋ
31	ಅನುಷ್ಕಾ	ಖೋ-ಖೋ
32	ಮೇಘಾ ರಾಜಪ್ಪನವರ	ಖೋ-ಖೋ
33	ರಫೀಕ್ ಸವಣೂರು	ಥ್ರೋಬಾಲ್
34	ಅಮರ್ ಬಾಟೆ	ಥ್ರೋಬಾಲ್
35	ಕವಿತಾ ಯು ಟಿ	ಖೋ-ಖೋ
36	ಭಾಗ್ಯ ಸಾಲಗೇರಿ	ಖೋ-ಖೋ
37	ತನು ಮರಿನಾಗಮ್ಮನವರ	ಖೋ-ಖೋ
38	ಪೂಜಾ ಹೊನ್ನಕ್ಕಳವರ	ಖೋ-ಖೋ
39	ಬೃಂದಾ ಮಾಕನೂರು	ಖೋ-ಖೋ
40	ಮಮತಾ ಸೋಟೇರ್	ಖೋ-ಖೋ
41	ರೋಹನ ಟಿ ಹಿರೇಮಠ	ಹ್ಯಾಂಡಬಾಲ್

42	ಹರ್ಷ ಕುಳೆನೂರ	ಹ್ಯಾಂಡಬಾಲ್
43	ಹೆಮಂತ ಬೇಟಗೇರಿ	ಹ್ಯಾಂಡಬಾಲ್
44	ಯುವರಾಜ ದೇವಗೇರಿ	ಹ್ಯಾಂಡಬಾಲ್
45	ಸಿದ್ದಲಿಂಗೇಶ ಮೇಣಸಿನಕಾಯಿ	ಹ್ಯಾಂಡಬಾಲ್
46	ಲಿಖಿತ ಹೆಬ್ಬಳ್ಳಿ	ಹ್ಯಾಂಡಬಾಲ್
47	ಶ್ರೀವತ್ಸ ಕುಲಕರ್ಣಿ	ಹ್ಯಾಂಡಬಾಲ್
48	ದರ್ಶನ ವಗ್ಗಣ್ಣನವರ	ಹ್ಯಾಂಡಬಾಲ್
49	ಪ್ರುಜ್ವಲ್ ಗುರಪ್ಪನವರ	ಹ್ಯಾಂಡಬಾಲ್
50	ಚಿರಂಜೀವಿ ನವಲಗುಂದ	ಹ್ಯಾಂಡಬಾಲ್
51	ಸುಜಯ ಕುಲಕರ್ಣಿ	ಹ್ಯಾಂಡಬಾಲ್
52	ಶ್ರವಣಿ ಹೆಚ್	ಖೋ-ಖೋ
53	ಹರ್ಷಿತ ಬಿ ಪಿ	ಖೋ-ಖೋ
54	ಮಹ್ಮದ್‌ಜೈದ್ ಮತ್ತಿಹಳ್ಳಿ	ಮ್ಯಾರಥಾನ್

ಅನುಬಂಧ-02

ಪ್ರತಿಭೆಗಳ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡ ಕ್ರಮಗಳು

- **ಕ್ರೀಡಾ ಮೂಲಭೂತ ಸೌಕರ್ಯಗಳ ಸೃಜನೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ನಿವೇಶನಗಳಲ್ಲಿ ಕ್ರಿಡಾ ಮೂಲಸೌಕರ್ಯಗಳನ್ನು ಸೃಜಿಸುವ ಮೂಲಕ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆ ಉತ್ತೇಜನ ನೀಡಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊರತುಪಡಿಸಿ, 29 ಜಿಲ್ಲಾ ಕೇಂದ್ರಗಳು ಹಾಗೂ 121 ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ರಾಜ್ಯದ 29 ಸ್ಥಳಗಳಲ್ಲಿ ಈಜುಕೊಳಗಳು ಹಾಗೂ 44 ಸ್ಥಳಗಳಲ್ಲಿ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಅಲ್ಲದೆ, ರಾಜ್ಯದ 15 ಸ್ಥಳಗಳಲ್ಲಿ ಆಧುನಿಕ ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್ ಗಳು ಹಾಗೂ 04 ಸ್ಥಳಗಳಲ್ಲಿ ಹಾಕಿ ಟರ್ಫ್ ಗಳನ್ನು ಅಳವಡಿಸಲಾಗಿದೆ.
- **ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

ಕ್ರ. ಸಂ	ವಿವರ	ಚಿನ್ನ	ಬೆಳ್ಳಿ	ಕಂಚು
1	ಒಲಂಪಿಕ್ಸ್ ಗೇಮ್ಸ್	500.00 ಲಕ್ಷ	300.00 ಲಕ್ಷ	200.00 ಲಕ್ಷ
2	ಏಷಿಯನ್ ಗೇಮ್ಸ್	25.00 ಲಕ್ಷ	15.00 ಲಕ್ಷ	8.00 ಲಕ್ಷ
3	ಕಾಮನ್ ವೆಲ್ತ್ ಗೇಮ್ಸ್	25.00 ಲಕ್ಷ	15.00 ಲಕ್ಷ	8.00 ಲಕ್ಷ
4	ವರ್ಲ್ಡ್ ಕಪ್ / ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು)	5.00 ಲಕ್ಷ	3.00 ಲಕ್ಷ	2.00 ಲಕ್ಷ
5	ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು)	5.00 ಲಕ್ಷ	3.00 ಲಕ್ಷ	2.00 ಲಕ್ಷ
6	ನ್ಯಾಷನಲ್ ಚಾಂಪಿಯನ್ ಷಿಪ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ)	2.00 ಲಕ್ಷ	1.00 ಲಕ್ಷ	0.50 ಲಕ್ಷ
7	ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ)	0.50 ಲಕ್ಷ	0.25 ಲಕ್ಷ	0.15 ಲಕ್ಷ
8	ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ)	0.25 ಲಕ್ಷ	0.15 ಲಕ್ಷ	0.10 ಲಕ್ಷ

- **ಏಕಲವ್ಯ ಪ್ರಶಸ್ತಿ :** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು.
- **ಜೀವಮಾನ ಸಾಧನೆ ಪ್ರಶಸ್ತಿ**: ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುವುದು.

- **ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಹಾಗೂ ನಗದನ್ನು ನೀಡಿ ಗೌರವಿಸಲಾಗುವುದು.
- **ಶೈಕ್ಷಣಿಕ ಶುಲ್ಕ ಮರುಪಾವತಿ** : ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.
- **ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
- **ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ** : ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ.
- ಅಂತರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸಾಮಗ್ರಿಗಳನ್ನು ನೀಡಲಾಗುತ್ತಿದೆ.
- **ಕ್ರೀಡಾ ವಸತಿ ಶಾಲೆ/ ನಿಲಯ**: ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.
- **ಗರಡಿ ಮನೆ ನಿರ್ಮಾಣ**: ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣ ಮತ್ತು ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.
- **ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಅನುದಾನ :** ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾಕೂಟಗಳ ಆಯೋಜನೆ, ತರಬೇತಿ ಶಿಬಿರಗಳು ಆಯೋಜನೆ ಹಾಗೂ ಕ್ರೀಡಾಕೂಟಗಳಿಗೆ ರಾಜ್ಯ ತಂಡದ ನಿಯೋಜನೆಗೆ ಅನುದಾನ ನೀಡಲಾಗುತ್ತಿದೆ.
- **ಅಮೃತ ಕ್ರೀಡಾದತ್ತು ಯೋಜನೆ**: ಭಾರತದ ಸ್ವಾತಂತ್ರ್ಯದ 75ನೇ ವರ್ಷದ ಆಚರಣೆಯ ಅಂಗವಾಗಿ 75 ಯುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಅವರಿಗೆ ಉತ್ತೇಜನ ನೀಡಲು ಅಮೃತ ಕ್ರೀಡಾದತ್ತು ಯೋಜನೆ " ರೂಪಿಸಲಾಗಿದೆ. 2024ನೇ ಪ್ಯಾರಿಸ್ ಒಲಂಪಿಕ್ಸ್ ನಲ್ಲಿ ರಾಷ್ಟ್ರಕ್ಕೆ ಕೀರ್ತಿ ತರಲು ಸಹಾಯಕವಾಗುವಂತೆ ಅವರ ಕ್ರೀಡಾ ತರಬೇತಿಗೆ ಅಂದಾಜು ತಲಾ ರೂ.5.00ಲಕ್ಷ ಅನುದಾನವನ್ನು ನೀಡಲಾಗಿದೆ.
- **ದಸರಾ ಸಿ.ಎಂ.ಕಪ್:** ದಸರಾ ಸಿ.ಎಂ.ಕಪ್ ಕ್ರೀಡಾಕೂಟವನ್ನು , ಪ್ರತಿ ವರ್ಷ ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ, ವಿಭಾಗಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಆಯೋಜಿಸಲಾಗುವುದು. ಈ ಕ್ರೀಡಾಕೂಟವು ಮುಕ್ತ ಕ್ರೀಡಾಕೂಟವಾಗಿದ್ದು ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.
- **ಗ್ರಾಮೀಣ ಕ್ರೀಡಾಕೂಟ:** ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸುವ ಸಲುವಾಗಿ ಪ್ರಾಮುಖ್ಯವಾಗಿ ಕಬಡ್ಡಿ, ಖೋ-ಖೋ, ಕುಸ್ತಿ ಮತ್ತು ಎತ್ತಿನಗಾಡಿ/ಕಂಬಳ, ಯೋಗ ಮತ್ತು ವಾಲಿಬಾಲ್ ಕ್ರೀಡೆಗಳಿಗೆ ಗ್ರಾಮೀಣ ಕೂಟವನ್ನು ಗ್ರಾಮ ಪಂಚಾಯತಿ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಆಯೋಜಿಸಲಾಗುತ್ತಿದೆ.
- **ಕುಸ್ತಿಹಬ್ಬ:** ಕುಸ್ತಿ ಕ್ರೀಡೆಯನ್ನು ಹಾಗೂ_ಮಣ್ಣಿನ ಕುಸ್ತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ಕುಸ್ತಿ ಹಬ್ಬವನ್ನು ಆಚರಿಸಲಾಗುತ್ತಿದೆ. ಭಾರತೀಯ ಮಣ್ಣಿನ ಕುಸ್ತಿ ಸಂಸ್ಥೆಯ ಮಾರ್ಗಸೂಚಿಯಂತೆ ದೇಹ ತೂಕದ ಆಧಾರದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.

ಅನುಬಂಧ-03

2022-23 ನೇ ಸಾಲಿನಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳಿಗೆ ಹಂಚಿಕೆಯಾಗಿರುವ ಅನುದಾನದ ವಿವರ

(ರೂ ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ವಿವರ	ಪ್ರಸಕ್ತ ಸಾಲಿನಲ್ಲಿ ಹಂಚಿಕೆಯಾದ ಅನುದಾನ
1	ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	100.00
2	ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	100.00
3	ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	100.00
4	ಕೊಡಗು ಜಿಲ್ಲೆ ವಿರಾಜಪೇಟೆ ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ (ಮುಂದುವರೆದ ಕಾಮಗಾರಿ)	54.40
5	ಹುಣಸೂರು ತಾಲ್ಲೂಕು ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	70.00
6	ಕೊಡಗು ಜಿಲ್ಲೆ ಕೂಡಿಗೆ ಕ್ರೀಡಾ ವಸತಿ ಶಾಲೆ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	75.00
7	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಕ್ರೀಡಾಂಗಣದಲ್ಲಿ ಈಜುಕೊಳ ನಿರ್ಮಾಣ (ಮುಂದುವರೆದ)	150.00
8	ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಒಳಾಂಗಣ ಕ್ರೀಡಾಂಗಣ ನಿರ್ಮಾಣ	100.00
9	ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	200.00
10	ಕೆ.ಆರ್.ಪೇಟೆ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	1,000.00
11	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ	50.00
12	ಕೊರಟಗೆರೆ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	75.00
13	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	50.00
14	**ಯಲಹಂಕ ತಾಲ್ಲೂಕು ರಾವುತ್ತನಹಳ್ಳಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ**	25.00
15	ಅಂಕೋಲಾ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	150.00
16	ಉತ್ತರ ಕನ್ನಡ ಜಿಲ್ಲೆ ಯಲ್ಲಾಪೂರ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ ಕಾಮಗಾರಿ)	50.00
17	ಉತ್ತರ ಕನ್ನಡ ಜಿಲ್ಲೆ ಮುಂಡಗೋಡು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ ಕಾಮಗಾರಿ)	50.00
18	ಕುಣಿಗಲ್ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	50.00
19	ಬೆಂಗಳೂರು ದಕ್ಷಿಣ ತಾಲ್ಲೂಕು ಹೊನ್ನಿಗಾನಹಟ್ಟಿಯಲ್ಲಿ ಕ್ರೀಡಾಂಗಣದಲ್ಲಿ ಈಜುಕೊಳ ನಿರ್ಮಾಣ	150.00

20	ಯಲಹಂಕ ತಾಲ್ಲೂಕು ಹೆಸರುಘಟ್ಟ ಹೋಬಳಿ ಮಾವಳ್ಳಿಪುರದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣ ಮತ್ತು ಕ್ರೀಡಾ ವಿ.ವಿ. ಸ್ಥಾಪನೆ (ಡಿ.ಪಿ.ಆರ್) ತಯಾರಿಕೆ	50.00
21	ನಂಜನಗೂಡು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	100.00
22	ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	100.00
23	ರಾಮದುರ್ಗ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	100.00
24	ಬಂಟ್ವಾಳ ತಾಲ್ಲೂಕು ಬಂಗ್ಲೆ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	50.00
25	ಕಾಗವಾಡ ಕ್ಷೇತ್ರದ ವ್ಯಾಪ್ತಿಯ ಐನಾಪೂರ ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ	100.00
26	ಸೋಮವಾರಪೇಟೆ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ (ಮುಂದುವರೆದ)	70.00
27	ಹಿರೇಕೆರೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	50.00
28	ಬ್ಯಾಡಗಿ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	75.00
29	ಸುಳ್ಯ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ (ಮುಂದುವರೆದ)	70.00
30	ಕಲಬುರ್ಗಿ ಜಿಲ್ಲೆ ಚಿಂಚೋಳಿ ವಿಧಾನ ಸಭಾ ಕ್ಷೇತ್ರದ ಕಾಳಗಿ ಒಳಾಂಗಣ ಕ್ರೀಡಾಂಗಣ ಕಾಮಗಾರಿ	50.00
31	ಬೇಲೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	25.00
32	ಮೂಡಿಗೆರೆ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	50.00
33	ತುರುವೇಕೆರೆ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	40.00
34	ಬೆಳ್ತಂಗಡಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	50.00
35	ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ಒಳಾಂಗಣ ಕ್ರೀಡಾಂಗಣ ಮುಂದುವರೆದ ಕಾಮಗಾರಿ	50.00
36	ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	35.00
37	ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ವಿವೇಕಾನಂದ ಕ್ರೀಡಾಂಗಣ (ಮುಂದುವರೆದ ಕಾಮಗಾರಿ)	25.00
38	ಮಳವಳ್ಳಿ ಪಟ್ಟಣದ ಶ್ರೀ ಭಕ್ತ ಕನಕದಾಸ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ	35.00
39	ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣದ ಹೆಚ್ಚುವರಿ ಕಾಮಗಾರಿ	90.00
40	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	11.10
41	ಉಡುಪಿ ಜಿಲ್ಲೆ ಬ್ರಹ್ಮಾವರ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	50.00
42	ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ	100.00
43	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರದ ಭಗತ್ ಸಿಂಗ್ ಕ್ರೀಡಾಂಗಣದ ಪೆವಿಲಿಯನ್ ಕಟ್ಟಡದ ದುರಸ್ಥಿ ಹಾಗೂ ಉನ್ನತೀಕರಣ ಕಾಮಗಾರಿ	15.70
44	ಬಾಗಲಕೋಟೆ ಜಿಲ್ಲೆ ತೇರದಾಳ ಕ್ರೀಡಾಂಗಣ ಉನ್ನತೀಕರಣ	25.00
45	ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ	131.00
	ಒಟ್ಟು	**4,147.20**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 466

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಬಳ್ಳಾರಿ ವಿರೂಪಾಕ್ಷಪ್ಪ ರುದ್ರಪ್ಪ (ಬ್ಯಾಡಗಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ

ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 21.12.2022

*****

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾವೇರಿ ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಲಾಗಿರುವ ಪ್ಯಾಕ್ ಹೌಸ್‌ಗಳೆಷ್ಟು; (ವಿವರ ನೀಡುವುದು)</td><td>2022-23ನೇ ಸಾಲಿಗೆ ಹಾವೇರಿ ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಲಾಗಿರುವ ಪ್ಯಾಕ್‌ಹೌಸ್ ವಿವರಗಳು ಈ ಕೆಳಕಂಡಂತಿವೆ
<table><tr><th>ಕ್ರ.ಸಂ</th><th>ವಿಧಾನಸಭಾ ಕ್ಷೇತ್ರ</th><th>ಮಂಜೂರಾದ ಪ್ಯಾಕ್ ಹೌಸ್ ವಿವರ</th></tr><tr><td></td><td>ಬ್ಯಾಡಗಿ</td><td>11</td></tr><tr><td></td><td>ಹಾವೇರಿ</td><td>02</td></tr><tr><td></td><td>ಹಾನಗಲ್ಲ</td><td>01</td></tr><tr><td></td><td>ಹಿರೇಕೆರೂರು</td><td>28</td></tr><tr><td></td><td>ರಾಣೇಬೆನ್ನೂರು</td><td>0</td></tr><tr><td></td><td>ಶಿಗ್ಗಾಂವ/ ಸವಣೂರ</td><td>03</td></tr><tr><td></td><td>ಒಟ್ಟು</td><td>45</td></tr></table></td></tr>
<tr><td>ಆ)</td><td>ತೋಟಗಾರಿಕೆಯೇ ಮೂಲ ಕೃಷಿಯಾಗಿರುವ ಬ್ಯಾಡಗಿ ಕ್ಷೇತ್ರಕ್ಕೆ ಕಡಿಮೆ ಪ್ಯಾಕ್‌ಹೌಸ್ ಮಂಜೂರಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಬಂದಿದೆ.
ಕೇಂದ್ರ ಸರ್ಕಾರದಿಂದ ನಿಗಧಿಪಡಿಸುವ ಅನುದಾನದ ಲಭ್ಯತೆಯ ಮೇರೆಗೆ ಗುರಿಗಳನ್ನು ನಿಗಧಿಪಡಿಸಲಾಗಿರುತ್ತದೆ. ರಾಜ್ಯಾದ್ಯಂತ ಹೆಚ್ಚುವರಿ ಬೇಡಿಕೆ ಇರುವ ಕಾರಣ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಅನುದಾನದ ಬಿಡುಗಡೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.</td></tr>
<tr><td>ಇ)</td><td>ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?</td></tr>
</table>

No. HORTI 570 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	467
ಸದಸ್ಯರ ಹೆಸರು	:	ಶ್ರೀ ಐಹೊಳೆ ಡಿ ಮಹಾಲಿಂಗಪ್ಪ
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಮುದಾಯಗಳ ಅಭಿವೃದ್ಧಿ ಮತ್ತು ಅನುಕೂಲಕ್ಕಾಗಿ ಸರ್ಕಾರ ರೂಪಿಸಿ ಜಾರಿಗೊಳಿಸಿರುವ ಯೋಜನೆಗಳಾವುವು; (ಸಂಪೂರ್ಣ ವಿವರ ನೀಡುವುದು)	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.
ಆ)	ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಯಭಾಗ ಮತಕ್ಷೇತ್ರಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು)	ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಯಭಾಗ ಮತಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ವಿವರವನ್ನು ಅನುಬಂಧ-2, 3 ಮತ್ತು 4 ರಲ್ಲಿ ನೀಡಿದೆ.
ಇ)	ಈ ಅನುದಾನದಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಾವುವು; (ಸಂಪೂರ್ಣ ವಿವರ ನೀಡುವುದು)	ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗಳಡಿ ವಿವಿಧ ಇಲಾಖೆಗಳಿಂದ ಬಿಡುಗಡೆಯಾದ ಅನುದಾನದ ವಿವರ ಮತ್ತು ಈ ಅನುದಾನದಡಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು ಅನುಬಂಧ-5 ರಲ್ಲಿ ನೀಡಿದೆ.
ಈ)	ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ ರಾಯಭಾಗ ಮತಕ್ಷೇತ್ರದಲ್ಲಿ ಕೈಗೊಂಡ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಈವರೆವಿಗೂ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಉ)	ಬಂದಿದ್ದಲ್ಲಿ, ಪೂರ್ಣಗೊಂಡ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಸಮುದಾಯ ಭವನಗಳ ನಿರ್ಮಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬಾಕಿ ಅನುದಾನ ಬಿಡುಗಡೆ ಕೋರಿ ಜಿಲ್ಲೆಯಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಊ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು; ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	ಮುಂದುವರೆದು, ಪ್ರಗತಿ ಕಾಲೋನಿ ಯೋಜನೆಯಡಿ ಮಂಜೂರಾತಿ ನೀಡಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ, ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.183.05 ಲಕ್ಷಗಳ ಅನುದಾನ ಬಿಡುಗಡೆ ಕೋರಿ ಜಿಲ್ಲೆಯಿಂದ ಪ್ರಸ್ತಾವನೆ ಸ್ವೀಕೃತಗೊಂಡಿರುತ್ತದೆ

		ಈ ಸಂಬಂಧವಾಗಿ, ಸದರಿ ಯೋಜನೆಯಡಿ 2018-19ನೇ ಸಾಲಿನಿಂದ ಇದುವರೆವಿಗೂ ಹೊರಡಿಸಲಾಗಿರುವ ಮಂಜೂರಾತಿ ಆದೇಶಗಳ ಒಟ್ಟು ಮೊತ್ತ ರೂ.1349.39 ಕೋಟಿಗಳಿಗೆ ಅನುಗುಣವಾಗಿ, ರೂ.727.87 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು, ರೂ.621.52 ಕೋಟಿಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. ಮಂಜೂರಾತಿ ನೀಡಿ, ಬಿಡುಗಡೆ ಮಾಡಿದ ಮೊತ್ತಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ನಿರ್ವಹಿಸಿದ ನಂತರ ಬಾಕಿ ಅನುದಾನ ಬಿಡುಗಡೆ ಕೋರಿ ಸ್ಥಳ ಮಹಜರು ವರದಿ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ರೂ.185.04 ಕೋಟಿಗಳ ಬಾಕಿ ಅನುದಾನ ಬಿಡುಗಡೆ ಕೋರಿ ಜಿಲ್ಲೆಗಳಿಂದ ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತವೆ. 2022-23ನೇ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಬಂಡವಾಳ ಲೆಕ್ಕಶೀರ್ಷಿಕೆ:4225-01-796-0-01 ರಡಿ ಪ್ರಗತಿ ಕಾಲೋನಿ ಯೋಜನೆಯ ಅನುಷ್ಠಾನಕ್ಕಾಗಿ ರೂ.40.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಈ ಪೈಕಿ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಿರುವ ರೂ.30.00 ಕೋಟಿಗಳನ್ನು ಸಂಪೂರ್ಣವಾಗಿ ವೆಚ್ಚ ಮಾಡಲಾಗಿದ್ದು, ನಾಲ್ಕನೇ ಕಂತಿನಲ್ಲಿ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. ಮೇಲ್ಕಂಡಂತೆ ಬಿಡುಗಡೆ ಮಾಡಲು ಬಾಕಿ ಇರುವ ರೂ.621.52 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಹೆಚ್ಚುವರಿ ಅನುದಾನ ಬಿಡುಗಡೆಯಾದ ನಂತರ, ಅನುದಾನ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಸಕಇ 745 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 467ಕ್ಕೆ ಅನುಬಂಧ–1

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ವಿವರ.

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ 5 ರಿಂದ 10ನೇ ತರಗತಿಯವರೆಗೆ ಓದುತ್ತಿರುವ ಪರಿಶಿಷ್ಟ ಜಾತಿ/ ಪ.ವರ್ಗದ ಬಾಲಕ, ಬಾಲಕಿಯರು ತಮ್ಮ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.

- ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1650.00 ಗಳ ಭೋಜನಾ ವೆಚ್ಚ ಹಾಗೂ ಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಹಾಸಿಗೆ, ಹೊದಿಕೆ, ಶುಚಿ ಸಂಭ್ರಮ ಕಿಟ್, ಶೂ, ಮತ್ತು ಇತರ ವೆಚ್ಚಗಳನ್ನು ಭರಿಸಲಾಗುತ್ತಿದೆ.

2. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ

- ಗ್ರಾಮೀಣ ಪ್ರದೇಶಗಳಿಂದ ಕಾಲೇಜು ಶಿಕ್ಷಣ ಪಡೆಯಲು ಬರುವ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಗೆ ತಮ್ಮ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಿ ಉಚಿತ ಊಟ ಮತ್ತು ವಸತಿ ಸೌಲಭ್ಯ ನೀಡಲಾಗುತ್ತದೆ.
- ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷದ ಒಳಗಿನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ಅರ್ಹ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1750.00 ಗಳ ಭೋಜನಾ ವೆಚ್ಚ ಭರಿಸಲಾಗುತ್ತಿದೆ.

3. ಕ್ರೈಸ್ ವಸತಿ ಶಾಲೆಗಳಲ್ಲಿ ಪ್ರವೇಶ.

ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರವು 826 ವಸತಿ ಶಾಲೆಗಳನ್ನು ಪ್ರಾರಂಭಿಸಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ನಿರ್ವಹಿಸಲಾಗುತ್ತದೆ. 503 ಪ.ಜಾತಿ, 156 ಪ.ವರ್ಗ (12 ಏಕಲವ್ಯ ಮಾದರಿ ಶಾಲೆ) ಮತ್ತು 167 ಹಿಂದುಳಿದ ವರ್ಗಗಳ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಅದರಲ್ಲಿ ಒಟ್ಟು 79 ಪದವಿ ಪೂರ್ವ ಕಾಲೇಜುಗಳು ಸಹ ಒಳಗೊಂಡಿವೆ.

- ಈ ವಸತಿ ಶಾಲೆಗಳಲ್ಲಿ 6ನೇ ತರಗತಿಯಿಂದ ಪ್ರವೇಶ ನೀಡಲಾಗುವುದು.
- ಕುಟುಂಬದ ವಾರ್ಷಿಕ ಆದಾಯದ ಮಿತಿ ರೂ.2.50 ಲಕ್ಷದೊಳಗೆ ಇರುವ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರು.
- ಪ್ರತಿ ವಸತಿ ಶಾಲೆಗೆ ಪ್ರತಿ ತರಗತಿಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ 50 ಇದ್ದು, 6 ರಿಂದ 10ನೇ ತರಗತಿಯವರೆಗೆ ಒಟ್ಟು 250 ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಮೀಸಲಾತಿ ಅನುಸರಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- 5 ನೇ ತರಗತಿ ವಿದ್ಯಾರ್ಥಿಗಳು ಪ್ರತಿ ವರ್ಷವೂ ಕ್ರೈಸ್‌ನಿಂದ ಹೊರಡಿಸುವ ಅಧಿಸೂಚನೆಯಂತೆ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಬಹುದು ಮತ್ತು ಪ್ರವೇಶ ಪರೀಕ್ಷೆ ನಡೆಸಲು ನಿಗದಿಪಡಿಸಿದ ದಿನಾಂಕದಂದು ಪ್ರವೇಶ ಪರೀಕ್ಷೆ ಬರೆಯಬೇಕಾಗಿದೆ.
- ಆಯ್ಕೆ ಮಾಡಿಕೊಂಡ ಶಾಲೆಯಲ್ಲಿ ವಸತಿ ಶಾಲೆ ಪ್ರಾರಂಭವಾದ ದಿನದಿಂದ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು.
- ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಶಾಲೆಗಳಲ್ಲಿ ಮೀಸಲಾತಿ ಈ ಕೆಳಗಿನಂತೆ ಇರುತ್ತದೆ.

ಶಾಲೆಯ ವರ್ಗ	ಪ.ಜಾತಿಯ ವಿದ್ಯಾರ್ಥಿಗಳು	ಪ.ಪಂಗಡದ ವಿದ್ಯಾರ್ಥಿಗಳು	ಹಿಂದುಳಿದ ವರ್ಗದ ವಿದ್ಯಾರ್ಥಿಗಳು
ಪರಿಶಿಷ್ಟ ಜಾತಿ ಶಾಲೆ	75%	10%	15%
ಪರಿಶಿಷ್ಟ ಪಂಗಡ/ಇ.ಎಂ.ಆರ್ ಶಾಲೆ	10%	75%	15%
ಹಿಂದುಳಿದ ವರ್ಗಗಳ ಶಾಲೆ	15%	10%	75%

ಮೇಲ್ಕಂಡ ಪ್ರತಿಶತಗಳಲ್ಲಿ ಆಂತರಿಕ ಮೀಸಲಾತಿಯನ್ನು ಸಹ ಅನುಸರಿಸಲಾಗುವುದು.

- ಅಲೆಮಾರಿ, ಸಫಾಯಿಕರ್ಮಚಾರಿ, ಮಾಜಿ ಸೈನಿಕ, ಆಶ್ರಮ ಶಾಲೆ ವಿದ್ಯಾರ್ಥಿಗಳಿಗೆ ಸಹ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯಲು ಮೀಸಲಾತಿಯನ್ನು ಕಲ್ಪಿಸಲಾಗಿದೆ.
- ಕೆಲವು ಶಾಲೆಗಳಲ್ಲಿ ಪಿ.ಯು.ಸಿ ಪ್ರವೇಶಕ್ಕೆ ಅವಕಾಶವಿದೆ. ಈ ಶಾಲೆ/ಕಾಲೇಜುಗಳಲ್ಲಿ ಪಿ.ಯು ಮೊದಲನೇ ವರ್ಷ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಪ್ರವೇಶ ನೀಡಲಾಗುವುದು. ಪ್ರಸ್ತುತ ಎಂ.ಸಿ.ಸಿ./ಪಿ.ಸಿ.ಎಂ.ಬಿ ಕೋರ್ಸ್‌ಗಳಲ್ಲಿ ಪ್ರವೇಶ ನೀಡಲಾಗುವುದು. ಪ್ರತಿ ಕೋರ್ಸ್‌ಗೆ ಪಿ.ಯು ಮೊದಲನೇ ವರ್ಷ 40 ವಿದ್ಯಾರ್ಥಿಗಳಿಗೆ ಅವಕಾಶ ಮತ್ತು ಪಿ.ಯು ಎರಡನೇ ವರ್ಷ 40 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.
- ಕ್ರೈಸ್ ವಸತಿ ಶಾಲೆಗಳಲ್ಲಿ 25% ಸೀಟ್‌ಗಳನ್ನು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು.
- ವಸತಿ ಶಾಲೆ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚಕ್ಕಾಗಿ ಪ್ರತಿ ತಿಂಗಳು ರೂ.1600/-ಗಳನ್ನು ನೀಡಲಾಗುವುದು ಮತ್ತು ಸಮವಸ್ತ್ರ, ಪಠ್ಯ ಪುಸ್ತಕ, ನೋಟ್ ಬುಕ್, ಸ್ಕೂಲ್ ಬ್ಯಾಗ್, ಶುಚಿ ಸಂಭ್ರಮ ಕಿಟ್ ಇತ್ಯಾದಿ ಉಚಿತವಾಗಿ ನೀಡಲಾಗುವುದು.
- ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳಿವೆ (ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳು). ಆದರೆ, ಇತರೆ ಶಾಲೆಗಳಲ್ಲಿ ಬಾಲಕಿಯರಿಗೆ ಪ್ರವೇಶಾವಕಾಶವಿದೆ.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಬಾಲಕಿಯರಿಗೆ ಸರಬರಾಜು ಮಾಡಲಾಗುತ್ತಿದೆ.
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಡಾರ್ಮೆಟರಿ ವ್ಯವಸ್ಥೆ ಇದೆ.
- ವಸತಿ ಶಾಲೆಗಳಲ್ಲಿ ಕ್ರೀಡಾ ಚಟುವಟಿಗಳಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

4. ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರವೇಶ

- ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆ ಮಾಡಲಾದ ಖಾಸಗಿ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸಿ ಬೋಧನಾ ಶುಲ್ಕ ಮತ್ತು ವಸತಿ ಸೌಕರ್ಯ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ.
- ಪ್ರತಿ ವಿದ್ಯಾರ್ಥಿಗೆ ಆಯ್ಕೆಯಾದ ಶಾಲೆ ಇರುವ ಪ್ರದೇಶದ ಆಧಾರದ ಮೇಲೆ ರೂ.50,000/- ದಿಂದ ರೂ.1.00 ಲಕ್ಷದ ವರೆಗೆ ವೆಚ್ಚವನ್ನು ಭರಿಸಲಾಗುವುದು.
- ಪ್ರತಿ ವರ್ಷ ಪ.ಜಾತಿ 1000 ಹಾಗೂ ಪ.ಪಂಗಡದ 500 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತಿದೆ.
- ಅರ್ಹತೆ-ವಿದ್ಯಾರ್ಥಿಗಳ ಕುಟುಂಬ ವಾರ್ಷಿಕ ಆದಾಯ ಮಿತಿ ರೂ.2.00 ಲಕ್ಷ.

5. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ (ಡೇ ಸ್ಕಾಲರ್‌ಶಿಪ್)

ವಿದ್ಯಾರ್ಥಿನಿಲಯಗಳಲ್ಲಿ ಇಲ್ಲದೇ ಇರುವ ಪರಿಶಿಷ್ಟ ಜಾತಿಯ 1 ರಿಂದ 8ನೇ ತರಗತಿಯವರೆಗಿನ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಲು ಹಾಗೂ ವಿದ್ಯಾಭ್ಯಾಸದ ನಡುವೆ ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸಲು ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.

- ಅರ್ಹತೆ-ವಿದ್ಯಾರ್ಥಿಗಳ ಕುಟುಂಬ ವಾರ್ಷಿಕ ಆದಾಯ ಮಿತಿ – ರೂ. 6.00 ಲಕ್ಷ

ಕ್ರ.ಸಂ	ತರಗತಿ	ವಾರ್ಷಿಕ ವಿದ್ಯಾರ್ಥಿವೇತನ	
		ಬಾಲಕರು	ಬಾಲಕಿಯರು
1.	1 ರಿಂದ 5	1000.00	1100.00
2.	6 ರಿಂದ 7	1150.00	1250.00
3.	8ನೇ ತರಗತಿ	1250.00	1350.00

- ಸರ್ಕಾರಿ ಶಾಲೆಗಳಲ್ಲಿ ಮತ್ತು ಮಾನ್ಯತೆ ಪಡೆದ ಅನುದಾನಿತ/ಖಾಸಗಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ.

ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ಜಮೆ ಮಾಡಲಾಗುತ್ತದೆ.

ಮೆಟ್ರಿಕ್ ಪೂರ್ವ 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ – ಕೇಂದ್ರ ಪುರಸ್ಕೃತ ಯೋಜನೆ

ತರಗತಿ	ಡೇ ಸ್ಕಾಲರ್	ಹಾಸ್ಟೆಲರ್	ಕುಟುಂಬದ ವಾರ್ಷಿಕ ಮಿತಿ
9 – 10	ರೂ. 3000/– ವಾರ್ಷಿಕ	ರೂ.6250/– ವಾರ್ಷಿಕ	ರೂ.2.50 ಲಕ್ಷದ ಒಳಗಿರಬೇಕು.

ಅನೈರ್ಮಲ್ಯ ವೃತ್ತಿಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ

ತರಗತಿ	ಡೇ ಸ್ಕಾಲರ್	ಹಾಸ್ಟೆಲರ್
1 – 10	ರೂ. 3000/– ವಾರ್ಷಿಕ	ರೂ.8000/– ವಾರ್ಷಿಕ

6. **ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ**
   - ಈ ವಿದ್ಯಾರ್ಥಿ ವೇತನದಲ್ಲಿ ಬೋಧನಾ ಶುಲ್ಕ ಮತ್ತು ಇತರೆ ಕಡ್ಡಾಯ ಶುಲ್ಕಗಳ ಪಾವತಿ, ಡೇ ಸ್ಕಾಲರ್ ವಿದ್ಯಾರ್ಥಿಗಳ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳ ಭೋಜನಾ ವೆಚ್ಚವು ಸ್ಥಿರಿರುತ್ತದೆ.
   - ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಮಿತಿಯೊಳಗಿನ ಕಾಲೇಜು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.
   - ವಿದ್ಯಾರ್ಥಿ ವೇತನ ಪಡೆಯಲು State Scholarship Portal (SSP) ನಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವುದು.
   - NRI, Management Quota ದಲ್ಲಿ On the spot ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಹರಲ್ಲ.

ಕೋರ್ಸ್	**ಭಾರತ ಸರ್ಕಾರ ನಿಗದಿ ಪಡಿಸಿರುವ ದರ** (10 ತಿಂಗಳ ಅವಧಿಗೆ)	
	ಡೇ ಸ್ಕಾಲರ್ಸ್	**ಹಾಸ್ಟೆಲರ್ಸ್**
ಗ್ರೂಪ್ –I ಇಂಜಿನಿಯರಿಂಗ್, ಮೆಡಿಕಲ್ ಇತ್ಯಾದಿ	ರೂ.7000/–	ರೂ.13500/–
ಗ್ರೂಪ್ – II ಸ್ನಾತಕೋತ್ತರ ಪದವಿ	ರೂ.6500/–	ರೂ.9500/–
ಗ್ರೂಪ್ – III ಪದವಿ	ರೂ.3000/–	ರೂ.6000/–
ಗ್ರೂಪ್ – IV ಪಿ.ಯು.ಸಿ & ಸಮಾನ ಕೋರ್ಸ್‌ಗಳು	ರೂ.2500/–	ರೂ.4000/–

- ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಕ್ಕಿಂತ ಮೇಲ್ಪಟ್ಟು ರೂ.10.00 ಲಕ್ಷದ ಒಳಗೆ ಇರುವ ವೈದ್ಯಕೀಯ, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳಿಂದ ಸರ್ಕಾರ ನಿಗದಿಪಡಿಸಿದ 100% ಬೋಧನಾ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತದೆ. ಇತರೆ ಕೋರ್ಸ್‌ಗಳಿಗೆ 50% ಬೋಧನಾ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತದೆ.

7. **ರಾಷ್ಟ್ರ ಮಟ್ಟದ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ:**

- IIT/IIM/AIMS/IISc/NIT/IIIT/National Law University/college ಇತ್ಯಾದಿ ರಾಷ್ಟ್ರ ಮಟ್ಟದ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ರೂ.2.00 ಲಕ್ಷ ಪ್ರೋತ್ಸಾಹಧನ ನೀಡಲಾಗುತ್ತಿದೆ.
- ಸಿ.ಎ / ಐ.ಸಿ.ಡಬ್ಲ್ಯೂ.ಎ / ಕಂಪನಿ ಸೆಕ್ರೆಟರಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಇಂಟರ್ ಕೋರ್ಸಿಗೆ ರೂ.1.00 ಲಕ್ಷ ಮತ್ತು ಫೈನಲ್ ಪರೀಕ್ಷೆಗೆ ರೂ.1.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.
- ಆದಾಯ ಮಿತಿ ಇರುವುದಿಲ್ಲ.

8. **ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ**

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹಧನ ನೀಡಲಾಗುತ್ತದೆ.

ಕೋರ್ಸ್		ಪ್ರೋತ್ಸಾಹಧನ (ರೂ.ಗಳಲ್ಲಿ)
ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ	60–74.99% ಅಂಕ ಪಡೆದವರಿಗೆ	7000/-
	75%ಕ್ಕಿಂತ ಮೇಲ್ಪಟ್ಟು ಅಂಕ ಪಡೆದವರಿಗೆ	15000/-
ದ್ವಿತೀಯ ಪಿ.ಯು.ಸಿ ಅಂತಿಮ ಪರೀಕ್ಷೆ		20,000/-
ಪದವಿ ಅಂತಿಮ ಪರೀಕ್ಷೆ		25,000/-
ಸ್ನಾತಕೋತ್ತರ ಪದವಿ ಅಂತಿಮ ಪರೀಕ್ಷೆ		30,000/-
ವೃತ್ತಿಪರ ಕೋರ್ಸ್ ಅಂತಿಮ ಪರೀಕ್ಷೆ – ವೈದ್ಯಕೀಯ, ಇಂಜಿನಿಯರಿಂಗ್ ಇತ್ಯಾದಿ		35,000/-
ಸ್ನಾತಕೋತ್ತರ ಪದವಿಯಲ್ಲಿ ವಿಶ್ವವಿದ್ಯಾಲಯದಲ್ಲಿ 1 ರಿಂದ 5 ರ್‍ಯಾಂಕ್ ವಿಜೇತರಿಗೆ		50,000/-

- ಆದಾಯಮಿತಿ ಇರುವುದಿಲ್ಲ.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.

9. **ಕಾನೂನು ಪದವೀಧರರಿಗೆ ಪ್ರಾಯೋಗಿಕ ತರಬೇತಿ ಅವಧಿಯಲ್ಲಿ ಶಿಷ್ಯವೇತನ**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾನೂನು ಪದವೀಧರರು ಹಿರಿಯ ವಕೀಲರಿಂದ ಪ್ರಾಯೋಗಿಕ ತರಬೇತಿ ಪಡೆದು ಸ್ವತಂತ್ರವಾಗಿ ವಕೀಲ ವೃತ್ತಿ ನಡೆಸಲು ಅನುಕೂಲವಾಗುವಂತೆ ಶಿಷ್ಯ ವೇತನವನ್ನು ನೀಡಲಾಗುತ್ತದೆ. ಸದರಿ ಸೌಲಭ್ಯವನ್ನು ಪಡೆಯಲು ನಿಗದಿಪಡಿಸಿರುವ ಗರಿಷ್ಠ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷ.

- ತರಬೇತಿ ಅವಧಿ – 2 ವರ್ಷ
- ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ.10,000/- ಶಿಷ್ಯವೇತನ ನೀಡಲಾಗುತ್ತದೆ.
- ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ.
- ತರಬೇತಿಯ ಅವಧಿಯಲ್ಲಿ ಮಾಸಿಕ ವರದಿ ಮತ್ತು ಹಾಜರಾತಿ ಸಲ್ಲಿಸಬೇಕಾಗಿದ್ದು, ಅದರನ್ವಯ ಶಿಷ್ಯವೇತನವನ್ನು ಪಾವತಿಸಲಾಗುತ್ತದೆ.
- ತರಬೇತಿ ಪಡೆದ ಕಾನೂನು ಪದವೀಧರರಿಗೆ ಕಛೇರಿ ಸ್ಥಾಪನೆಗೆ ತಾಲ್ಲೂಕು ಮಟ್ಟದಲ್ಲಿ ರೂ.50000/-, ನಗರ ಪಾಲಿಕೆ/ ಮಹಾನಗರ ಪಾಲಿಕೆ/ಬಿ.ಬಿಎಂ.ಪಿ ವ್ಯಾಪ್ತಿಯಲ್ಲಿ ರೂ.1,00,000/- ಧನಸಹಾಯ ನೀಡಲಾಗುತ್ತದೆ.

10. "ಪ್ರಬುದ್ಧ" – ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಧನಸಹಾಯ:

ಈ ಯೋಜನೆಯಡಿ ಸರ್ಕಾರದಿಂದ ಅನುಮೋದಿಸಿರುವ ವಿದೇಶದಲ್ಲಿರುವ ವಿಶ್ವವಿದ್ಯಾಲಯಗಳು / ಶಿಕ್ಷಣ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿ.ಹೆಚ್.ಡಿ ಪದವಿಗಳನ್ನು ಕೆಳಕಂಡ ನಿಗದಿತ ವಿಷಯಗಳಲ್ಲಿ ವ್ಯಾಸಂಗ ಮಾಡಲು ಆಯ್ಕೆಯಾದವರಿಗೆ ಆರ್ಥಿಕ ಸಹಾಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ www.sw.kar.nic.in ರಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

ವಿಷಯಗಳು

- Engineering and Management
- Pure Sciences and Applied Sciences
- Agriculture Sciences & Medicine
- International Commerce, Economics, Accounting Finance
- Humanities, Social Science, Fine Arts and Law

ವಾರ್ಷಿಕ ಆದಾಯ ಮಿತಿ

- ರೂ.8.00 ಲಕ್ಷಗಳು – 100% ವೆಚ್ಚ ಭರಿಸುವುದು.
- ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳು – 50% ವೆಚ್ಚ ಭರಿಸುವುದು
- ರೂ.15.00 ಲಕ್ಷಗಳಿಂದ ರೂ.25.00 ಲಕ್ಷಗಳು – 33% ವೆಚ್ಚ ಭರಿಸುವುದು

ಧನ ಸಹಾಯದ ವಿವರ

- ನಿರ್ವಹಣಾ ವೆಚ್ಚ – ವಾರ್ಷಿಕ ನಿರ್ವಹಣೆ, ಊಟ ಮತ್ತು ವಸತಿ ವೆಚ್ಚಕ್ಕಾಗಿ ಪ್ರತಿ ಅಭ್ಯರ್ಥಿಗೆ ರೂ. 8.00 ಲಕ್ಷಗಳು ಅಥವಾ ವಿಶ್ವವಿದ್ಯಾಲಯಗಳು ನೀಡುವ ಅಂದಾಜು ವೆಚ್ಚದ ಶೇ.75 ರಷ್ಟು, ಇವುಗಳೆರಡರಲ್ಲಿ ಯಾವುದೋ ಕಡಿಮೆಯೋ ಅದನ್ನು ಪ್ರತಿ ಒಂದು ವರ್ಷದ ಕೋರ್ಸಿಗೆ ನೀಡಲಾಗುವುದು.
- ಬೋಧನಾ ಶುಲ್ಕ–ನಿಗದಿಪಡಿಸಿದ ವಾಸ್ತವ ಶುಲ್ಕ(ಒಂದು ವೇಳೆ ಅಭ್ಯರ್ಥಿಗೆ ವಿದ್ಯಾರ್ಥಿವೇತನ ಮಂಜೂರಾಗಿದ್ದಲ್ಲಿ ವಾಸ್ತವ ಶುಲ್ಕದಲ್ಲಿ ವಿದ್ಯಾರ್ಥಿವೇತನದ ಮೊತ್ತವನ್ನು ಕಳೆದು ಬಾಕಿ ಉಳಿದ ಮೊತ್ತವನ್ನು ಪಾವತಿಸಲಾಗುವುದು).
- ಸ್ನಾತಕೋತ್ತರ ಪದವಿಗೆ – ಗರಿಷ್ಟ 2 ವರ್ಷ ಅವಧಿ
- ಪಿ.ಎಚ್.ಡಿ – ಗರಿಷ್ಟ 4 ವರ್ಷ
- ವೈದ್ಯಕೀಯ ವಿಮೆಗೆ–ನಿಗದಿಪಡಿಸಿದ ವಾಸ್ತವ ಶುಲ್ಕ
- ಪುಸ್ತಕಗಳು ಮತ್ತು ಇನ್ನಿತರ ವಿವಿಧ ಭತ್ಯೆಗಳಿಗೆ–ವಾರ್ಷಿಕ ರೂ.1.00 ಲಕ್ಷ
- ವೀಸಾ ಶುಲ್ಕ–ವಾಸ್ತವ ಶುಲ್ಕವನ್ನು Indian currency ಮೂಲಕ ಪಾವತಿಸಲಾಗುವುದು.
- ವಿಮಾನಯಾನ ಭತ್ಯೆ Economy class ticket by shortest route – ಭಾರತ ದೇಶದಿಂದ ವಿದೇಶಿ ವಿಶ್ವವಿದ್ಯಾಲಯದ (ಶಿಕ್ಷಣ ಸಂಸ್ಥೆ) ಹತ್ತಿರದ ವಿಮಾನ ನಿಲ್ದಾಣದ ಸ್ಥಳಕ್ಕೆ ಮತ್ತು ಭಾರತಕ್ಕೆ ಹಿಂದಿರುಗುವಾಗ ವಿಮಾನಯಾನ ಭತ್ಯೆ ನೀಡಲಾಗುವುದು.

ಪ್ರಬುದ್ಧ – ಧನಸಹಾಯ ಪಡೆಯಲು ಅಭ್ಯರ್ಥಿಗಳು ಹೊಂದಿರಬೇಕಾಗಿರುವ ಅರ್ಹತೆಗಳು.

- ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
- ಕರ್ನಾಟಕ ರಾಜ್ಯ ಪ್ರಕಟಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
- ಇಲಾಖೆಯಿಂದ ಪ್ರಕಟಿಸಲಾದ ವಿದೇಶಿ ವಿಶ್ವವಿದ್ಯಾಲಯದಿಂದ ಆಫರ್ ಲೆಟರ್ ಪಡೆದಿರಬೇಕು.
- ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಉದ್ದೇಶಿಸಿರುವ ಅಭ್ಯರ್ಥಿಯು ಯು.ಜಿ.ಸಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು. ಪಿ.ಹೆಚ್.ಡಿ ಅಧ್ಯಯನಕ್ಕೆ ತೆರಳುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿರಬೇಕು.

11. **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ (ಯು.ಪಿ.ಎಸ್.ಸಿ/ಕೆ.ಪಿ.ಎಸ್.ಸಿ ಮತ್ತು ಬ್ಯಾಂಕಿಂಗ್)**

- ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು ಮತ್ತು ಪದವೀಧರರಾಗಿಬೇಕು.
- ಕರ್ನಾಟಕ ರಾಜ್ಯ ಪ್ರಕಟಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
- ವಾರ್ಷಿಕ ಆದಾಯ ಮಿತಿ ರೂ. 5.00 ಲಕ್ಷ
- ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ತರಬೇತಿ ಸಂಸ್ಥೆಯನ್ನು ಅಭ್ಯರ್ಥಿಗಳೇ ಕೌನ್ಸಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಬಹುದಾಗಿದೆ.
- ದೆಹಲಿ, ಹೈದರಾಬಾದ್, ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ. ಮತ್ತು ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಲಾಖೆಯಿಂದ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಶುಲ್ಕ ಮತ್ತು ತರಬೇತಿಯ ಅವಧಿಯಲ್ಲಿ ಶಿಷ್ಯವೇತನವನ್ನು ನೀಡಲಾಗುತ್ತದೆ. (ಮಾಸಿಕ ರೂ. 5000/- ದಿಂದ ರೂ. 10000/- ದವರೆಗೆ)
- ತರಬೇತಿ ಸಂಸ್ಥೆಗಳಿಗೆ ಕಾಲ ಕಾಲಕ್ಕೆ ನಿಗದಿ ಪಡಿಸಲಾದ ತರಬೇತಿ ಶುಲ್ಕವನ್ನು ನೀಡಲಾಗುತ್ತದೆ.

12. **ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ** : ಅಸ್ಪೃಶ್ಯತಾ ನಿವಾರಣೆ ಉದ್ದೇಶದಿಂದ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ.

- ಪರಿಶಿಷ್ಟ ಜಾತಿ ಯುವಕರು ಇತರೆ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.2.50 ಲಕ್ಷಗಳ ಪ್ರೋತ್ಸಾಹಧನ
- ಪರಿಶಿಷ್ಟ ಜಾತಿ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ.
- ಅಂತರ್‌ಜಾತಿ ವಿವಾಹವನ್ನು ನೊಂದಾಯಿಸತಕ್ಕದ್ದು.
- ಮದುವೆಯಾದ ನಂತರ 18 ತಿಂಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಯುವತಿಯ ವಯಸ್ಸು 18 ರಿಂದ 42 ವರ್ಷ.
- ಯುವಕನ ವಯಸ್ಸು 21 ರಿಂದ 45 ವರ್ಷ.
- ವಾರ್ಷಿಕ ಆದಾಯ ಮಿತಿ ರೂ.5.00 ಲಕ್ಷಗಳು.

13. **ವಿಧವಾ ಮರು ವಿವಾಹಕ್ಕೆ ಪ್ರೋತ್ಸಾಹಧನ:** ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿಧವೆಯರು ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

- ವಿಧವೆಯ ವಯೋಮಿತಿ 18 ರಿಂದ ಗರಿಷ್ಠ 42 ವರ್ಷ
- ವಿವಾಹವಾಗುವ ವರನ ವಯೋಮಿತಿ 21 ರಿಂದ 45 ವರ್ಷ
- ಮರು ವಿವಾಹದ ಬಗ್ಗೆ ನೊಂದಾಯಿಸತಕ್ಕದ್ದು.
- ವಿವಾಹವಾದ 1 ವರ್ಷದೊಳಗೆ ಅರ್ಜಿ ಸಲ್ಲಿಸಬೇಕು.
- ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

14. **ಒಳ ಪಂಗಡಗಳ ಅಂತರ್‌ಜಾತಿ ವಿವಾಹ:** ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಯುವಕ/ಯುವತಿಯರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಉಪ ಜಾತಿಗಳ ಯುವತಿ/ಯುವಕರನ್ನು ವಿವಾಹವಾದಲ್ಲಿ ರೂ.2.00 ಲಕ್ಷ ಪ್ರೋತ್ಸಾಹಧನ ನೀಡಲಾಗುತ್ತಿದೆ.

- ವಯೋಮಿತಿ-ಯುವಕ 21 ರಿಂದ 45 ವರ್ಷ ಹಾಗೂ ಯುವತಿ 18 ರಿಂದ 42 ವರ್ಷ.
- ದಂಪತಿಗಳ ವಾರ್ಷಿಕ ಆದಾಯ ರೂ. 5.00 ಲಕ್ಷ ಮೀರಿರಬಾರದು
- ಅಂತರ್‌ಜಾತಿ ವಿವಾಹ/ವಿಧವಾ ಮರು ವಿವಾಹ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.
- ಮದುವೆಯಾದ ನಂತರ 18 ತಿಂಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

15. **ಸರಳ ವಿವಾಹ** : ಸರ್ಕಾರದ ಆದೇಶ ಸಂಖ್ಯೆ:ಸಕಇ 262 ಎಸ್‌ಎಲ್‌ಪಿ 2015 ದಿನಾಂಕ:11.08.2015 ರನ್ವಯ ಈ ಕಾಯಕ್ರಮವನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯನ್ವಯ ನೋಂದಾಯಿತ ಸಂಘ-ಸಂಸ್ಥೆಗಳು. ಧಾರ್ಮಿಕ ಸಂಸ್ಥೆಗಳು ವ್ಯವಸ್ಥೆ ಮಾಡುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾಗುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ದಂಪತಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.
    - ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಿವಾಹವಾಗಿರಬೇಕು, ವಿವಾಹವಾದ 1 ವರ್ಷದೊಳಗೆ ಅರ್ಜಿಸಲ್ಲಿಸಬೇಕು.
    - ಇಂತಹ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಕನಿಷ್ಠ 10 ಜೋಡಿಗಳು ವಿವಾಹವಾಗಿರತಕ್ಕದ್ದು.
    - ಸರಳವಾಗಿ ವಿವಾಹದ ದಂಪತಿಗಳಿಗೆ ರೂ.50,000/- ಸಾವಿರ ಪ್ರೋತ್ಸಾಹಧನ ನೀಡಲಾಗುವುದು.
    - ಇಂತಹ ಕುಟುಂಬದ ವಾರ್ಷಿಕ ವರಮಾನ ರೂ.5.00 ಲಕ್ಷಗಳಿಗೆ ಮೀರಿಬಾರದು.
    - ಸರಳ ವಿವಾಹವಾಗುವ ದಂಪತಿಗಳಲ್ಲಿ ಯುವಕನ ವಯಸ್ಸು 21 ರಿಂದ 45 ವರ್ಷ ಯುವತಿಯ ವಯಸ್ಸು 18 ರಿಂದ 42 ವರ್ಷ
    - ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಏರ್ಪಡಿಸುವ ಆಯೋಜಕರುಗಳಿಗೆ ಪ್ರೋತ್ಸಾಹಧನ ಹಾಗೂ ವಿವಾಹದ ಖರ್ಚು-ವೆಚ್ಚಗಳಿಗಾಗಿ ಪ್ರತಿ ಜೋಡಿಗೆ ರೂ.2,000/- ಸಾವಿರಗಳನ್ನು ನೀಡಲಾಗುವುದು.
    - ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

16. **ದೇವದಾಸಿಯರ ಮಕ್ಕಳ ಮದುವೆಗೆ ಪ್ರೋತ್ಸಾಹಧನ**
    - ಮಾಜಿ ದೇವದಾಸಿಯರ ಗಂಡು ಮಕ್ಕಳು ಇತರೆ ದೇವದಾಸಿಗಳಲ್ಲದ ಯಾವುದೇ ಜಾತಿಯ ಯುವತಿಯರನ್ನು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ. ಮಾಜಿ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ದೇವದಾಸಿಗಳಲ್ಲದ ಯಾವುದೇ ಜಾತಿಯ ಯುವಕರನ್ನು ವಿವಾಹವಾದಲ್ಲಿ ಅಂತಹ ದಂಪತಿಗೆ ರೂ.5.00 ಲಕ್ಷ ಗಳ ಪ್ರೋತ್ಸಾಹಧನ.
    - ವಿವಾಹವಾದ 18 ತಿಂಗಳೊಳಗೆ ವಿವಾಹವಾದ ಬಗ್ಗೆ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿ ಅರ್ಜಿ ಸಲ್ಲಿಸಿರಬೇಕು.
    - ಯುವತಿಯ ವಯಸ್ಸು 18 ರಿಂದ 42 ವರ್ಷ.
    - ಯುವಕನ ವಯಸ್ಸು 21 ರಿಂದ 45 ವರ್ಷ.
    - ಆದಾಯ ಮಿತಿ ರೂ.5.00 ಲಕ್ಷಗಳು.
    - ಗುರ್ತಿಸಲ್ಪಟ್ಟ ದೇವದಾಸಿಯವರ ಮಕ್ಕಳನ್ನು ಗುರ್ತಿಸಲ್ಪಟ್ಟ ಇನ್ನೊಬ್ಬ ದೇವದಾಸಿಯವರ ಮಕ್ಕಳನ್ನು ಮದುವೆ ಮಾಡಿಕೊಂಡರೆ ಪ್ರೋತ್ಸಾಹಧನ ಪಡೆಯಲು ಅರ್ಹರಿರುವುದಿಲ್ಲ.

    ಮೇಲ್ಕಂಡ ಎಲ್ಲಾ ವಿವಾಹ ಪ್ರೋತ್ಸಾಹಧನಗಳಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿದ್ದು, ವೆಬ್‌ಸೈಟ್ ವಿಳಾಸ www.sw.kar.nic.in.

17. **ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ಪರಿಹಾರ:**
    - ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989 ಮತ್ತು ನಿಯಮಗಳು 1995 ಹಾಗೂ ಪರಿಷ್ಕೃತ ಅಧಿನಿಯಮ 2016 ರ ಅನ್ವಯ ಸರ್ಕಾರದ ಆದೇಶ ಸಂ:ಸಕಇ 37 ಎಸ್‌ಪಿಎ 2016, ಬೆಂಗಳೂರು ದಿನಾಂಕ: 20.06.2016 ರನ್ವಯ

ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಸಂತ್ರಸ್ತರಿಗೆ ದೌರ್ಜನ್ಯದ ಸ್ವರೂಪ ಮತ್ತು ತೀವ್ರತೆ ಆಧರಿಸಿ ಕನಿಷ್ಠ ರೂ.85,000/- ಗಳಿಂದ ಗರಿಷ್ಠ ರೂ.8,25,000/- ಗಳವರೆಗೆ ಪರಿಹಾರಧನ ನೀಡಲಾಗುತ್ತದೆ.

- ದೌರ್ಜನ್ಯದಲ್ಲಿ ಕುಟುಂಬದ ದುಡಿಯುವ ವ್ಯಕ್ತಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಲಾಗುತ್ತದೆ.
- ಪರಿಹಾರ ಧನವನ್ನು ಮತ್ತು ಪುನರ್ವಸತಿಗಳನ್ನು ಮೇಲ್ಕಂಡ ಕಾಯ್ದೆಯ ನಿಯಮ 12(ಎ) ಅಡಿ ಒದಗಿಸುವುದು.

18. **ಪ್ರಗತಿ ಕಾಲೋನಿ :** ಪ.ಜಾತಿ /ಪ.ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿ.ಸಿ.ರಸ್ತೆ ಮತ್ತು ಚರಂಡಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.

19. **ಸ್ಮಶಾನ ಅಭಿವೃದ್ಧಿ:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ಅಭಿವೃದ್ಧಿ.
- ಸರ್ಕಾರಿ ಜಾಗ ಇಲ್ಲದೇ ಇರುವ ಸ್ಥಳಗಳಲ್ಲಿ ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ನಿವೇಶನ ಖರೀದಿಗೆ ಅವಕಾಶವಿದೆ.

20. **ಸಮುದಾಯ ಭವನ ನಿರ್ಮಾಣ :** ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರ ಕಾಲೋನಿಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಲಾಗುತ್ತದೆ. ನಿಗದಿಪಡಿಸಿದ ಮೊತ್ತದ ವಿವರ.
ಗ್ರಾಮಮಟ್ಟದಲ್ಲಿ – ರೂ.20.00 ಲಕ್ಷ, ಹೋಬಳಿ – ರೂ.50.00 ಲಕ್ಷ,
ತಾಲ್ಲೂಕು ಮಟ್ಟದಲ್ಲಿ – ರೂ.1.00 ಕೋಟಿ, ಜಿಲ್ಲಾ ಮಟ್ಟದಲ್ಲಿ – ರೂ.3.00 ಕೋಟಿ

21. **ಮಹಿಳಾ ಸ್ವಸಹಾಯ ಸಂಘಗಳಿಗೆ ಕಿರು ಸಾಲ ಯೋಜನೆ :** ಆದಾಯ ಉತ್ಪನ್ನ ಚಟುವಟಿಕೆಗಳಿಗಾಗಿ ಸ್ವಸಹಾಯ ಸಂಘದ ಸದಸ್ಯರಿಗೆ ತಲಾ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲದಂತೆ 10 ಸದಸ್ಯರಿರುವ ಸಂಘಕ್ಕೆ ರೂ.1.50 ಲಕ್ಷ ಸಹಾಯಧನ ಮತ್ತು ರೂ.1.00 ಲಕ್ಷ ಸಾಲವನ್ನು ಸಮಾಜ ಕಲ್ಯಾಣ ಇಲಾಖೆಯ ವಿವಿಧ ನಿಗಮಗಳ ಮೂಲಕ ನೀಡಲಾಗುತ್ತದೆ.

22. **4% ಬಡ್ಡಿ ಸಹಾಯಧನ ಕಾರ್ಯಕ್ರಮ.**

- ಪರಿಶಿಷ್ಟ ಜಾತಿ/ಪ.ಪಂಗಡದ ಉದ್ದಿಮೆದಾರರು ಎಂ.ಎಸ್.ಎಂ.ಇ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ / ಜಿಲ್ಲಾ ಸಹಕಾರಿ ಬ್ಯಾಂಕ್/ಅಪೆಕ್ಸ್ ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ 4% ಬಡ್ಡಿ ಸಹಾಯಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
- ಸಾಲದ ಮಿತಿ – ಕನಿಷ್ಟ ರೂ.10.00 ಲಕ್ಷದಿಂದ ಗರಿಷ್ಟ ರೂ.10.00 ಕೋಟಿಗಳವರೆಗೆ ಈ ಯೋಜನೆಯಡಿ ಸಹಾಯಧನಕ್ಕೆ ಅವಕಾಶವಿದೆ. ಸಾಲದ ಮರು ಪಾವತಿ ಅವಧಿ 8 ವರ್ಷಗಳಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ SWD/158/SLP/2016, Dated: 12.07.2016.
- 2021-22ನೇ ಸಾಲಿನಿಂದ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳಾದ ಮಳಿಗೆ/ಡೀಲರ್ ಶಿಪ್/ಫ್ರಾಂಚೈಸಿ ಮತ್ತು ಹೋಟೆಲ್ ಉದ್ಯಮಗಳನ್ನು ಪ್ರಾರಂಭಿಸಲು ಸಹ 4% ಬಡ್ಡಿ ಸಹಾಯಧನ ಯೋಜನೆಯನ್ನು ವಿಸ್ತರಿಸಿದ್ದು, ಈ ಯೋಜನೆಯಡಿ ಗರಿಷ್ಟ ರೂ.1.00 ಕೋಟಿವರೆಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ SWD/157/SLP/2021, Dated: 25.08.2021.

23. **ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ ಯಿಂದ ಸಾಲ ಮಂಜೂರಾತಿಗೆ Collateral Security ಒದಗಿಸುವುದು.**

- ಕೆ.ಎಸ್.ಎಫ್.ಸಿ ಯಿಂದ ಪ.ಜಾತಿ / ಪ.ವರ್ಗದವರಿಗೆ ಮಂಜೂರು ಮಾಡುವ ಸಾಲಕ್ಕೆ ಗರಿಷ್ಠ ರೂ.2.00 ಕೋಟಿಗಳವರೆಗೆ Collateral Security ಯನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ. ಉಳಿದ ಮೊತ್ತಕ್ಕೆ ಫಲಾನುಭವಿಗಳು ಸಮಾನಾಂತರ ಖಾತ್ರಿಯನ್ನು ಒದಗಿಸಬೇಕಾಗುತ್ತದೆ.

- ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯುವವರಿಗೆ ಭಾರತ ಸರ್ಕಾರದ ನಿಯಮಗಳಂತೆ Collateral Securi ಒದಗಿಸಲು ವಿನಾಯಿತಿ ನೀಡಲಾಗಿದೆ.

24. ಸ್ವಯಂ ಉದ್ಯೋಗ

ಅ) **ನೇರ ಸಾಲ/ಸಹಾಯಧನ ಯೋಜನೆ:** ತರಕಾರಿ, ಹಣ್ಣು-ಹಂಪಲು, ಮೀನು, ಮಾಂಸ ಮಾರಾಟ, ಕುರಿ/ಹಂದಿ/ ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ/ ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಗರಿಷ್ಟ ಘಟಕ ವೆಚ್ಚ ರೂ.1.00 ಲಕ್ಷದಲ್ಲಿ 50% ಸಾಲ ಮತ್ತು 50% ಸಹಾಯಧನ ನೀಡಲಾಗುವುದು.

ಆ) **ಇತರೆ ಬ್ಯಾಂಕ್ ಲಿಂಕ್ಡ್ ಸ್ವಯಂ ಉದ್ಯೋಗ ಕಾರ್ಯಕ್ರಮ**ಗಳಿಗೆ ಐ.ಎಸ್.ಬಿ ಮಾರ್ಗಸೂಚಿಗಳಂತೆ ಘಟಕ ವೆಚ್ಚದಲ್ಲಿ ಸಹಾಯಧನವನ್ನು ಗರಿಷ್ಠ ರೂ.2.00 ಲಕ್ಷಕ್ಕೆ ಮಿತಿಗೊಳಿಸಿ ಬ್ಯಾಂಕ್ ಸಾಲದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಇ) **ಸರಕು ವಾಹನ**ಗಳಿಗೆ ಗರಿಷ್ಟ ರೂ.3.50 ಲಕ್ಷ ಸಹಾಯಧನ (ಬ್ಯಾಂಕ್ ಲಿಂಕ್ಡ್ ಸಾಲದೊಂದಿಗೆ) ಸಮಾಜ ಕಲ್ಯಾಣ ಇಲಾಖೆಯ ನಿಗಮಗಳ ಮೂಲಕ ಆನ್‌ಲೈನ್ ಅರ್ಜಿ ಸ್ವೀಕರಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

25. ಗಂಗಾ ಕಲ್ಯಾಣ ಯೋಜನೆ :

- ಪರಿಶಿಷ್ಟ ಜಾತಿ/ಪಂಗಡದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೊಳವೆಬಾವಿ/ತೆರೆದಬಾವಿ ಕೊರೆದು ಪಂಪ್‌ಸೆಟ್ ಸೌಲಭ್ಯದೊಂದಿಗೆ ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಘಟಕ ವೆಚ್ಚ ರೂ.3.50 ಲಕ್ಷಗಳಲ್ಲಿ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತದೆ. (ರೂ.50,000/- ಇಂಧನ ಇಲಾಖೆಗೆ ವಿದ್ಯುತ್ ಸಂಪರ್ಕಕ್ಕಾಗಿ)
- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಈ 6 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.4.50 ಲಕ್ಷಗಳಲ್ಲಿ ರೂ.4.00 ಲಕ್ಷ ಸಹಾಯಧನ ನೀಡಲಾಗುತ್ತದೆ. (ರೂ.50,000/- ಇಂಧನ ಇಲಾಖೆಗೆ ವಿದ್ಯುತ್ ಸಂಪರ್ಕಕ್ಕಾಗಿ)
- ಅವಧಿ ಸಾಲ ರೂ.50,000/- ವನ್ನು ನಿಗಮಗಳಿಂದ 6% ರ ಬಡ್ಡಿದರದಲ್ಲಿ ನೀಡಲಾಗುವುದು. 10 ಅರ್ಧವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.

26. ಭೂ ಒಡೆತನ ಯೋಜನೆ :

- ಭೂ ರಹಿತ ಕೃಷಿ ಕಾರ್ಮಿಕ ಕುಟುಂಬದ ಮಹಿಳೆಯರಿಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನನ್ನು ಖರೀದಿಸಿ ನೋಂದಣಿ ಮಾಡಲಾಗುತ್ತದೆ. ಸದರಿ ಯೋಜನೆಯಡಿ ಘಟಕ ವೆಚ್ಚ ರೂ.15.00 ಲಕ್ಷಗಳಲ್ಲಿ 50% ಸಾಲ, 50% ಸಹಾಯಧನವನ್ನು ನಿಗಮಗಳಿಂದ ನೀಡಲಾಗುತ್ತದೆ. (ಪ್ರಸಕ್ತ ಸಾಲಿನಿಂದ ಘಟಕ ವೆಚ್ಚವನ್ನು ರೂ.20.00 ಲಕ್ಷಕ್ಕೆ ಹೆಚ್ಚಿಸಲಾಗಿದೆ)
- ಬೆಂಗಳೂರು ವಿಭಾಗದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಿಗೆ ಘಟಕ ವೆಚ್ಚ ರೂ.20.00 ಲಕ್ಷಗಳಲ್ಲಿ ರೂ.10.00 ಲಕ್ಷ ಸಾಲ ಮತ್ತು ರೂ.10.00 ಲಕ್ಷ ಸಹಾಯಧನವನ್ನು ನಿಗಮಗಳಿಂದ ನೀಡಲಾಗುತ್ತದೆ.
- ಸಾಲವನ್ನು 6% ರ ಬಡ್ಡಿದರದಲ್ಲಿ 20 ಅರ್ಧವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು.

ಕೃಷಿ ಇಲಾಖೆ

1. **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ**

   ರೈತರಿಗೆ ವಾರ್ಷಿಕ ರೂ. 6000/- + ರೂ. 4000/- ಪ್ರೋತ್ಸಾಹಧನ (ಕೇಂದ್ರ ಮತ್ತು ರಾಜ್ಯದ ಪಾಲು ಸೇರಿಸಿ) ರೂ 2000/- ದಂತೆ 5 ಸಮಾನ ಕಂತುಗಳಲ್ಲಿ ನೀಡುವುದು.

2. **ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮಗಳು**

   ರೈತಸಿರಿ ಯೋಜನೆಯಡಿ ಸಿರಿಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ.10,000/- ನಗದು ಪ್ರೋತ್ಸಾಹಧನ ನೀಡಲಾಗುತ್ತದೆ. (ಗರಿಷ್ಟ 2 ಹೆಕ್ಟೇರ್)

3. **ಸೂಕ್ಷ್ಮ ನೀರಾವರಿ ಯೋಜನೆ**

   ರೈತರಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಸಹಾಯಧನ

   - ಎರಡು ಹೆಕ್ಟೇರ್ ಪ್ರದೇಶದವರೆಗೆ – 90% ರಷ್ಟು ಸಹಾಯಧನ.
   - 2.00 ಹೆಕ್ಟೇರ್ ಗಿಂತ ಮೇಲ್ಪಟ್ಟು 5.00 ಹೆಕ್ಟೇರ್ ಗರಿಷ್ಟ ಮಿತಿಯೊಳಗೆ–45% ರಷ್ಟು ಸಹಾಯಧನ.

4. **ಬೆಳೆ ವಿಮಾ ಯೋಜನೆ**

   - Revamped PMFBY ಬೆಳೆ ವಿಮಾ ಯೋಜನೆಯಡಿ ಅಧಿಸೂಚನೆಯಲ್ಲಿ ನಿಗದಿಪಡಿಸಿದ ವಿವಿಧ ಬೆಳೆಗಳಿಗೆ ವಿಮೆ ಮಾಡಲಾಗುತ್ತದೆ.
   - ಬ್ಯಾಂಕ್‌ಗಳಿಂದ ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದವರು ಈ ಯೋಜನೆಯಡಿಯಲ್ಲಿ ವಿಮೆಗೆ ಅರ್ಹರಾಗಿರುತ್ತಾರೆ. ಅದರಂತೆ, ಸಾಲ ಪಡೆಯದೇ ಇರುವ ರೈತರಿಗೂ ಇದು ಅನ್ವಯಿಸುತ್ತದೆ.
   - ಅಧಿಸೂಚನೆಯಂತೆ ವಿಮಾ ಮೊತ್ತವನ್ನು (Insurance Premium) ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಫಲಾನುಭವಿಗಳಿಂದ ಭರಿಸಲಾಗುತ್ತದೆ.

5. **ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ**

   - ಈ ಯೋಜನೆಯನ್ನು ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತದೆ.
   - ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಹೊಂದಿರುವ ಜಮೀನುಗಳಲ್ಲಿ ನೀರು ಸಂಗ್ರಹಣಾ ವಿನ್ಯಾಸಗಳಾದ ತಡೆ ಅಣೆ / ಕಿಂಡಿ ಅಣೆ, ನಾಲಾಬದು, ಜಿನುಗುಕೆರೆ, ಗೋಕಟ್ಟೆ ಇತ್ಯಾದಿಗಳನ್ನು ಅನುಷ್ಠಾನ ಮಾಡಿ ಜಮೀನು ಅಭಿವೃದ್ಧಿ ಪಡಿಸಲಾಗುತ್ತದೆ.
   - ಸದರಿ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುತ್ತದೆ.

6. **ರಾಷ್ಟ್ರೀಯ ಆಹಾರ ಸುರಕ್ಷಾ ಅಭಿಯಾನ ಇತ್ಯಾದಿ ಯೋಜನೆಗಳಲ್ಲಿ – ಕೃಷಿ ಪರಿಕರಗಳ ವಿತರಣೆ ಮತ್ತು ಗುಣಮಟ್ಟ ನಿಯಂತ್ರಣ, ಕೃಷಿ ಯಾಂತ್ರಿಕತೆ ಅಭಿಯಾನ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ.**

   - ಬೀಜಗಳ ಪೂರೈಕೆ: ಪ.ಜಾತಿ/ಪ.ಪಂಗಡದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ 75% ಅಥವಾ ನಿಗದಿಪಡಿಸಿದ ರಿಯಾಯಿತಿ ದರದಲ್ಲಿ ಪ್ರಮಾಣಿತ/ ಗುಣಮಟ್ಟದ ಬಿತ್ತನೆ ಬೀಜಗಳ ವಿತರಣೆ.
   - ಪವರ್ ಟಿಲ್ಲರ್, ಭೂಮಿ ಸಿದ್ದತೆ ಉಪಕರಣಗಳು, ಸಸ್ಯ ಸಂರಕ್ಷಣ ಉಪಕರಣ, ಅಂತರ್ ಬೇಸಾಯ ಉಪಕರಣ, ಡೀಸೆಲ್ ಪಂಪ್ ಸೆಟ್, ಕಬ್ಬು / ಮೇವು ಕಟಾವು ಯಂತ್ರ, ಕೊಯ್ಲು ಮತ್ತು ಸಂಸ್ಕರಣ ಘಟಕಗಳಿಗೆ 90% ಅಥವಾ ಗರಿಷ್ಟ ರೂ.1.00 ಲಕ್ಷ ಸಹಾಯಧನ ನೀಡುವುದು.
   - ಟ್ರಾಕ್ಟರ್‌ಗಳಿಗೆ ಗರಿಷ್ಟ ಸಹಾಯಧನ ರೂ.3.00 ಲಕ್ಷ.

ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ: ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಸಲುವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.75ರ ರಿಯಾಯತಿ ದರದಲ್ಲಿ ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ ಹಾಗೂ ಎಣ್ಣೆ ರಹಿತ ಹಿಂಡಿ ಗೊಬ್ಬರಗಳ ವಿತರಣೆ.

- ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮಾಡಲು ಕೃಷಿ ಸಂಸ್ಕರಣಾ ಘಟಕಗಳ ಸ್ಥಾಪನೆಗೆ 90% ಅಥವಾ ಗರಿಷ್ಠ ರೂ.1.00 ಲಕ್ಷ ಸಹಾಯಧನ.
- ಕೃಷಿ ಉತ್ಪನ್ನಗಳನ್ನು ಮಳೆಯಿಂದ ರಕ್ಷಿಸಲು ಮತ್ತು ಒಣಗಿಸಲು ಟಾರ್ಪಾಲಿನ್‌ಗಳನ್ನು ವಿತರಿಸುವುದು (250 GSM ಕಪ್ಪು ಬಣ್ಣದ HDPE 8 x 6 mtr ಅಳತೆ) ಮತ್ತು ರೈತರಿಗೆ ಶುದ್ಧ ಖಾದ್ಯ ತೈಲ ಲಭ್ಯವಾಗುವಂತೆ ಮಾಡಲು ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳಿಗೆ ಸಹಾಯಧನ. (ಶೇ.90 ಅಥವಾ ಗರಿಷ್ಠ ರೂ.1.00 ಲಕ್ಷವರೆಗೆ ಸಹಾಯಧನ ನೀಡುವುದು)
- ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ರೈತರು ಉಪಯೋಗಿಸಿದ ಯಂತ್ರೋಪಕರಣಗಳಿಗೆ ನೇರ ಸೌಲಭ್ಯ ನಗದು ವರ್ಗಾವಣೆ (DBT).
- ಪ.ಜಾತಿ/ಪ.ಪಂಗಡದ ರೈತರ ಜಮೀನುಗಳಲ್ಲಿ ಬೆಳೆ ಪ್ರಾತ್ಯಕ್ಷಿಕೆ.
- ಪ.ಜಾತಿ/ಪ.ಪಂಗಡದ ರೈತರಿಗೆ ಕೃಷಿ ಕಾರ್ಯಕ್ರಮಗಳ ಬಗ್ಗೆ ತರಬೇತಿ.
- ರೈತರ ಬೆಳೆ ಸಂರಕ್ಷಣೆಗೆ ಕೀಟನಾಶಕ ಔಷಧಗಳ ಖರೀದಿಗೆ ಮತ್ತು ರಾಸಾಯನಿಕ/ ಜೈವಿಕ ಗೊಬ್ಬರ ಖರೀದಿಗೆ ಸಹಾಯಧನ.
- ಕೃಷಿ ಕಣಗಳ ನಿರ್ಮಾಣಕ್ಕೆ ಸಹಾಯಧನ.

7. **ಕೃಷಿ ಇಲಾಖೆ ವ್ಯಾಪ್ತಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.**

- ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/- ಶಿಷ್ಯವೇತನ.
- ಶುಲ್ಕ ಮರುಪಾವತಿ (ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 50% ರಷ್ಟು ಶುಲ್ಕ ಮರುಪಾವತಿ ಮಾಡುವುದು)
- ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷದೊಳಗೆ ಇರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.
- ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.

ತೋಟಗಾರಿಕೆ ಇಲಾಖೆ

1. **ಪಿ.ಎಂ.ಕೆ.ಎಸ್.ವೈ-ರಾಷ್ಟ್ರಿಯ ಸುಸ್ಥಿರ ಕೃಷಿ ಅಭಿಯಾನ, ಸಮಗ್ರ ತೋಟಗಾರಿಕೆ ಅಭಿವೃದ್ಧಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಸೇರಿಸಿ ಸಹಾಯಧನ ನೀಡಲಾಗುತ್ತದೆ.**

   - ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಮತ್ತು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಹನಿ /ತುಂತುರು ನೀರಾವರಿ ಘಟಕಗಳನ್ನು ಅಳವಡಿಸಿದ ಪ್ರತಿ ರೈತ ಕುಟುಂಬಕ್ಕೆ ಮೊದಲ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90 ಮತ್ತು 2 ಹೆಕ್ಟೇರ್ ಮೇಲ್ಪಟ್ಟು 5 ಹೆಕ್ಟೇರ್ ವರೆಗೆ (ಒಟ್ಟು ಗರಿಷ್ಠ 5 ಹೆಕ್ಟೇರ್) ಶೇ.45 ರಷ್ಟು ಮಿತಿಯೊಳಗೆ ಸಹಾಯಧನ ನೀಡಲಾಗುವುದು.
   - ಪ್ರತಿ ಫಲಾನುಭವಿಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಹಾಗೂ ತರಕಾರಿ ಮತ್ತು ಹೂ ಬೆಳೆಗಳಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುವುದು.

- ಕೃಷಿ ಯಂತ್ರೋಪಕರಣಗಳಿಗೆ ಟಿಲ್ಲರ್ ಇತ್ಯಾದಿಗಳಿಗೆ ಶೇ.90 ಅಥವಾ ಗರಿಷ್ಟ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಶೇ.90 ಸಹಾಯಧನವನ್ನು ಈ ಕೆಳಕಂಡ ಚಟುವಟಿಕೆಗಳಿಗೆ ನೀಡಲಾಗುತ್ತದೆ.
    * ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ / ನಿರ್ವಹಣೆ/ ಪುನಶ್ಚೇತನ
    * ನೀರು ಸಂಗ್ರಹಣಾ ಘಟಕ/ ಸಂರಕ್ಷಿತ ಬೇಸಾಯ/ ಜೇನು ಸಾಕಾಣಿಕೆ
    * ಯಾಂತ್ರೀಕರಣ / ಸಮಗ್ರ ಪೋಷಕಾಂಶ / ಕೀಟ ನಾಶಕ
    * ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ಅಭಿವೃದ್ಧಿ
- ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ – ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಬಾಧೆಯ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಶೇ.90 ರಂತೆ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ.9,000/– ರಂತೆ ಗರಿಷ್ಠ 2 ಹೆಕ್ಟೇರ್‌ಗಳವರೆಗೆ ಸಹಾಯಧನ ನೀಡಲಾಗುವುದು.

2. ತೋಟಗಾರಿಕೆ ಇಲಾಖೆ ವ್ಯಾಪ್ತಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

- ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/– ಶಿಷ್ಯವೇತನ.
- ಶುಲ್ಕ ಮರುಪಾವತಿ (ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 50% ರಷ್ಟು ಶುಲ್ಕ ಮರುಪಾವತಿ ಮಾಡುವುದು)
- ಕುಟುಂಬದ ವಾರ್ಷಿಕ ಅದಾಯ ರೂ.5.00 ಲಕ್ಷದೊಳಗೆ ಇರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.
- ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.

ರೇಷ್ಮೆ ಇಲಾಖೆ

1. ರೇಷ್ಮೆ ಇಲಾಖೆಯಿಂದ ಪ.ಜಾತಿ/ಪ.ಪಂಗಡದ ರೈತರಿಗೆ ಈ ಕೆಳಗಿನ ಸೌಲಭ್ಯಗಳಡಿ ಶೇ.90 ರಷ್ಟು ಸಹಾಯಧನ ಒದಗಿಸಲಾಗುವುದು.

(ರೂ. ಲಕ್ಷಗಳಲ್ಲಿ)

ಕ್ರಸಂ	ಸೌಲಭ್ಯದ ವಿವರ	ಘಟಕ ವೆಚ್ಚ	ಗರಿಷ್ಟ ಸಹಾಯಧನ.
1	ಹುಳು ಸಾಕಾಣಿಕೆ ಸಲಕರಣೆ / ಹಿಪ್ಪುನೇರಳೆ ತೋಟ ನಿರ್ವಹಣಾ ಸಲಕರಣೆ	0.75	0.675
2	ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ (ಕನಿಷ್ಟ 225 ಚ.ಅಡಿಯಿಂದ 1000 ಚ.ಅಡಿಯವರೆಗೆ)	0.90–4.00	0.81–3.60
3	ಮೌಂಟಿಂಗ್ ಹಾಲ್ ನಿರ್ಮಾಣ (ಕನಿಷ್ಟ 600 ಚ.ಅಡಿಯಿಂದ 1800 ಚ.ಅಡಿಯವರೆಗೆ)	0.26–0.83	0.24–0.75
4	ಚಾಕಿ ಸಾಕಾಣಿಕೆ ಕೇಂದ್ರ ನಿರ್ಮಾಣ	12.00	10.80
5	ರೀಲಿಂಗ್ ಶೆಡ್ ನಿರ್ಮಾಣ		
	• 10 ಬೇಸಿನ್ ಮಲ್ಟಿಎಂಡ್ ರೀಲಿಂಗ್ ಘಟಕ (1200 ಚ.ಅಡಿ)	7.20	6.48
	• 06 ಬೇಸಿನ್ ಮಲ್ಟಿಎಂಡ್ ರೀಲಿಂಗ್ ಘಟಕ (900 ಚ.ಅಡಿ)	5.40	4.86
	• 48 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್ (900 ಚ.ಅಡಿ)	5.40	4.86
	• 36 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್(900 ಚ.ಅಡಿ)	5.40	4.86
	• ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ – ಕನಿಷ್ಟ 02 ಟೇಬಲ್ ಇರುವ (600 ಚ.ಅಡಿ)	3.60	3.24

ಕ್ರಸಂ	ಸೌಲಭ್ಯದ ವಿವರ	ಘಟಕ ವೆಚ್ಚ	ಗರಿಷ್ಠ ಸಹಾಯಧನ.
6	ಸೋಲಾರ್ ವಾಟರ್ ಹೀಟರ್ (200 ಲೀ. – 1000 ಲೀ.)	0.54–2.42	0.48–2.17
7	ಹೀಟ್ ರಿಕವರಿ ಯುನಿಟ್	0.25	0.22

ಪಶುಸಂಗೋಪನೆ ಇಲಾಖೆ

1. **ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ :**

- ಕುರಿ ಮತ್ತು ಮೇಕೆ 6+1 ಘಟಕಗಳಿಗೆ ಘಟಕ ವೆಚ್ಚದ ಶೇ.90 ರಷ್ಟು ಸಹಾಯಧನ. ರೂ.45,000/– ಘಟಕ ವೆಚ್ಚದಲ್ಲಿ ರೂ.40,500/– ಬ್ಯಾಂಕ್ ಸಾಲ ಮತ್ತು ರೂ.4,500/– ಫಲಾನುಭವಿಗಳ ವಂತಿಕೆ.
- ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ಆರು ತಿಂಗಳ ಮೇಲಿನ ಕುರಿ/ಮೇಕೆಗೆ ರೂ.5,000/– ಹಾಗೂ ಆರು ತಿಂಗಳ ಒಳಗಿನ ಕುರಿ/ಮೇಕೆಗೆ ರೂ.2,500/– ಪರಿಹಾರ.
- ಪ.ಜಾತಿ /ಪ.ಪಂಗಡದ ಫಲಾನುಭವಿಗಳು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರ ಸಂಘದ ಸದಸ್ಯರಾಗಿರಬೇಕು.

2. **ಜಾನುವಾರು ರೋಗಗಳ ನಿಯಂತ್ರಣ** : ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರ ಜಾನುವಾರುಗಳಿಗೆ ಸಮೂಹ ಲಸಿಕೆ ಹಾಕುವುದು.

3. **ಹಾಲು ಉತ್ಪಾದಕರಿಗೆ ಉತ್ತೇಜನ :**
    - ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ರೂ.5/– ರಂತೆ ಪ್ರೋತ್ಸಾಹಧನ.
    - ಹಾಲು ಉತ್ಪಾದಕರ ಸಂಘಗಳಲ್ಲಿ ಪ.ಜಾತಿ/ಪ.ಪಂಗಡದ ರೈತರನ್ನು ಸದಸ್ಯರನ್ನಾಗಿ ನೋಂದಾಯಿಸುವುದು.
    - ಹೈನುಗಾರಿಕೆಗೆ 75% ಸಹಾಯಧನ.

4. **ರಾಷ್ಟ್ರೀಯ ಜಾನುವಾರು ಮಿಷನ್:** ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರ ಜಾನುವಾರುಗಳಿಗೆ ಉಚಿತ ವಿಮಾ ಯೋಜನೆ.

5. **ಪಶುಸಂಗೋಪನೆ ಇಲಾಖೆ ವ್ಯಾಪ್ತಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.**

- ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/– ಶಿಷ್ಯವೇತನ.
- ಶುಲ್ಕ ಮರುಪಾವತಿ (ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 50% ರಷ್ಟು ಶುಲ್ಕ ಮರುಪಾವತಿ ಮಾಡುವುದು)
- ಕುಟುಂಬದ ವಾರ್ಷಿಕ ಅದಾಯ ರೂ.5.00 ಲಕ್ಷದೊಳಗೆ ಇರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.
- ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.

ಮೀನುಗಾರಿಕೆ ಇಲಾಖೆ

1. **ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ:** ನೀಲಿ ಕ್ರಾಂತಿ/ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆಯಡಿ ಮೀನು ಕೃಷಿ/ ಮೀನು ಮಾರಾಟ/ ಮೀನು ಸಂಸ್ಕರಣೆ ಮುಂತಾದ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರಿಗೆ ವಿವಿಧ ಕಾರ್ಯಕ್ರಮಗಳಿಗೆ ಶೇ.60 ರಂತೆ ಗರಿಷ್ಠ ರೂ.6.00 ಲಕ್ಷ ಸಹಾಯಧನ ಮತ್ತು ಶೇ.40 ರಂತೆ ಫಲಾನುಭವಿಗಳ ವಂತಿಕೆ / ಬ್ಯಾಂಕ್ ಸಾಲ ನೀಡಲಾಗುತ್ತದೆ.

2. ಮೀನುಮರಿಗಳ ಖರೀದಿಗೆ ಸಹಾಯಧನ :

1) ಮೀನು ಮರಿಗಳನ್ನು ಖರೀದಿಸಲು ಒಬ್ಬ ವ್ಯಕ್ತಿಗೆ ರೂ 5000/– ಸಹಾಯಧನ ನೀಡಲಾಗುತ್ತದೆ.
2) ಮೀನುಗಾರಿಕಾ ಸಹಕಾರ ಸಂಘಕ್ಕೆ ರೂ 20000/– ಸಹಾಯಧನ ನೀಡಲಾಗುತ್ತದೆ.
3) ನೋಂದಾಯಿತ ಮೀನು ಮರಿಗಳ ಸಾಕಣೆ ಕೇಂದ್ರಗಳಿಗೆ ರೂ 25,000/– ಸಬ್ಸಿಡಿ ನೀಡಲಾಗುತ್ತದೆ.

3. ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ದೋಣಿ ವಿತರಣೆ : ಒಳನಾಡು ಜಲಸಂಪನ್ಮೂಲಗಳಾದ ಕೆರೆಗಳು, ಜಲಾಶಯಗಳು ಮತ್ತು ನದಿ ತೀರಗಳಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಮೀನುಗಾರಿಕೆ ಇಲಾಖೆಯಿಂದ ಫೈಬರ್ ಗ್ಲಾಸ್ ಕೊರಾಕಲ್ ಅನ್ನು ವಿತರಿಸಲಾಗುತ್ತದೆ. ಈ ಯೋಜನೆಯಡಿ ಒಳನಾಡು ಮೀನುಗಾರರಿಗೆ ರೂ.10,000/– ಮೌಲ್ಯದ ಫೈಬರ್ ಗ್ಲಾಸ್ ಕೊರಾಕಲ್ (ಫೈಬರ್ ಗ್ಲಾಸ್ ದೋಣಿ) ಮತ್ತು ಎರಡು ಹುಟ್ಟುಗಳನ್ನು ಉಚಿತವಾಗಿ ನೀಡಲಾಗುತ್ತದೆ.

4. ಮೀನುಗಾರಿಕೆ ಸಲಕರಣೆ ವಿತರಣೆ :

- ಒಳನಾಡು ಮೀನುಗಾರರಿಗೆ ಮೀನುಗಾರಿಕೆ ಬಲೆ ಮತ್ತು ಪರಿಕರಗಳ ಕಿಟ್ ವಿತರಿಸಲಾಗುತ್ತದೆ.
- ಮೀನುಗಾರಿಕೆ ಬಲೆ ಮತ್ತು ಪರಿಕರಗಳ ಒಟ್ಟು ಮೌಲ್ಯ ರೂ 10,000/– ದ ಕಿಟ್ ಅನ್ನು ಒಳನಾಡು ಮೀನುಗಾರರಿಗೆ ಉಚಿತವಾಗಿ ನೀಡಲಾಗುತ್ತದೆ.

5. ಸಾಮೂಹಿಕ ವಿಮಾ ಯೋಜನೆ (ಗುಂಪು ವಿಮಾ ಯೋಜನೆ) :

- ನೈಸರ್ಗಿಕ ವಿಕೋಪಗಳಿಂದ ಮೀನುಗಾರರನ್ನು ರಕ್ಷಿಸಲು, ಮೀನುಗಾರ ಅಥವಾ ಮೀನುಗಾರರ ಸಂಬಂಧಿಕರಿಗೆ ವಿಮಾ ಸೌಲಭ್ಯವನ್ನು ನೀಡಲಾಗುತ್ತದೆ.
- ಮರಣ/ಶಾಶ್ವತ ಅಂಗವಿಕಲತೆಯ ಪ್ರಕರಣಗಳಲ್ಲಿ ರೂ 2.00 ಲಕ್ಷ ಮತ್ತು ಭಾಗಶಃ ಅಂಗವಿಕಲತೆಯ ಪ್ರಕರಣಗಳಲ್ಲಿ ರೂ 1.00 ಲಕ್ಷ ವಿಮೆ ನೀಡಲಾಗುತ್ತದೆ.

6. ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ :

- ಮೀನುಗಾರಿಕಾ ದೋಣಿಯ ಎಂಜಿನ್ ಹಾರ್ಸ್ ಪವರ್ (HP) ಆಧಾರದ ಮೇಲೆ, ವಿತರಣಾ ಹಂತದಲ್ಲಿ ರಾಜ್ಯ ಮಾರಾಟ ತೆರಿಗೆ ವಿನಾಯಿತಿ ಡೀಸೆಲ್ ನೀಡಲಾಗುತ್ತದೆ.

7. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ನೆರವು :

- ಮೀನು ಸಾಕಾಣಿಕೆ ಕೊಳಗಳ ನಿರ್ಮಾಣಕ್ಕಾಗಿ ಪ್ರತಿ ಹೆಕ್ಟೇರ್‌ಗೆ ರೂ.7.00 ಲಕ್ಷಗಳಿಗೆ ಶೇ.60 ರಷ್ಟು,
- ಹೂಡಿಕೆ ವೆಚ್ಚ ರೂ.4.00 ಲಕ್ಷಕ್ಕೆ ಶೇ.60 ರಷ್ಟು ಸಹಾಯಧನ (ಕೊಳದ ಕನಿಷ್ಟ ವಿಸ್ತೀರ್ಣ ಅರ್ಧ ಎಕರೆ)
- ಫಲಾನುಭವಿಗಳ ವಂತಿಕೆ/ಬ್ಯಾಂಕ್ ಸಾಲ – 40% (ಗರಿಷ್ಟ ರೂ.3.50 ಲಕ್ಷ).

6. ಮೀನುಗಾರರ ಕಲ್ಯಾಣ ಕಾರ್ಯಕ್ರಮ :

- ಮೀನುಗಾರಿಕೆ ರಜೆ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೆರವು ನೀಡಲಾಗುತ್ತದೆ.
- ಈ ಯೋಜನೆಯಡಿ ಮೀನುಗಾರಿಕೆ ಅವಧಿಯಲ್ಲಿ ಪ್ರತಿ ಮೀನುಗಾರರಿಂದ ಒಟ್ಟು ರೂ.1500/– ಸಂಗ್ರಹಿಸಲಾಗುತ್ತದೆ ಮತ್ತು ಇದಕ್ಕೆ ಹೊಂದಾಣಿಕೆಯ ಕೊಡುಗೆಯಾಗಿ ರಾಜ್ಯ ಮತ್ತು ಕೇಂದ್ರ ಸರಕಾರದಿಂದ ತಲಾ ರೂ.1500/– ಗಳನ್ನು ನೀಡಲಾಗುತ್ತದೆ. ಹೀಗೆ ಸಂಗ್ರಹಿಸಿದ ರೂ.4500/– ಅನ್ನು ಮೀನುಗಾರಿಕೆ ನಿಷೇಧದ 3 ತಿಂಗಳ ಅವಧಿಯಲ್ಲಿ ಫಲಾನುಭವಿಗಳಿಗೆ ಸಮಾನವಾಗಿ ಒಂದು ತಿಂಗಳಿಗೆ ರೂ.1500/– ರಂತೆ ನೀಡಲಾಗುತ್ತದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

1. **ಗ್ಯಾಸ್ ಸಿಲಿಂಡರ್‌ಗಳಿಗೆ ರೀ-ಫಿಲ್ಲಿಂಗ್ ಸೌಲಭ್ಯ** : ಅರಣ್ಯ ಮತ್ತು ಅರಣ್ಯದಂಚಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರಿಗೆ ಈ ಹಿಂದೆ ಎಲ್.ಪಿ.ಜಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಅಂತಹ ಫಲಾನುಭವಿಗಳಿಗೆ 2 ಸಿಲಿಂಡರ್‌ಗಳನ್ನು ರೀ-ಫಿಲ್ಲಿಂಗ್ ಮಾಡಲಾಗುವುದು.

2. **ರಾಷ್ಟ್ರೀಯ ಬಿದಿರು ಅಭಿಯಾನ** : ಪ.ಜಾತಿ/ಪ.ಪಂಗಡದ ರೈತರ ಜಮೀನಿನಲ್ಲಿ ಬಿದಿರು ಬೆಳೆಯಲು ಪ್ರೋತ್ಸಾಹ ನೀಡುವುದು. ಬುಟ್ಟಿ ಹೆಣೆಯುವವರಿಗೆ ಪ್ರತೀ ಫಲಾನುಭವಿಗಳಿಗೆ 50 ಬೊಂಬುಗಳನ್ನು ಉಚಿತವಾಗಿ ನೀಡುವುದು.

ಸಹಕಾರ ಇಲಾಖೆ

1. **ಬೆಳೆ ಸಾಲಕ್ಕಾಗಿ ಹಾಗೂ ಸ್ವಸಹಾಯ ಸಂಘಗಳಿಗೆ ಬಡ್ಡಿ ಸಹಾಯಧನ.**

ಬೆಳೆ ಸಾಲಕ್ಕಾಗಿ ಬಡ್ಡಿ ಸಹಾಯಧನ : ರೈತರಿಗೆ 0% ಬಡ್ಡಿದರದಲ್ಲಿ ರೂ.3.00 ಲಕ್ಷಗಳವರೆಗಿನ ಅಲ್ಪಾವಧಿ ಹಾಗೂ 3% ಬಡ್ಡಿದರದಲ್ಲಿ ರೂ.10.00 ಲಕ್ಷದವರೆಗಿನ ದೀರ್ಘಾವಧಿ ಕೃಷಿ ಸಾಲವನ್ನು ಸಹಕಾರ ಸಂಘಗಳ ಮೂಲಕ ವಿತರಿಸುವುದು.

ಅಡಮಾನ ಸಾಲಕ್ಕೆ ಬಡ್ಡಿ ಸಹಾಯಧನ : ಸಣ್ಣ ರೈತರು ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಂದ ಮತ್ತು ತಾಲ್ಲೂಕು ಕೃಷಿ ಉತ್ಪಾದನೆ ಮತ್ತು ಸಹಕಾರಿ ಮಾರುಕಟ್ಟೆ ಸಂಸ್ಥೆಗಳಿಂದ ಗೋದಾಮುಗಳಲ್ಲಿ ಸಂಗ್ರಹಿಸುವ ಕೃಷಿ ಉತ್ಪನ್ನಗಳ ಮೇಲೆ 7% ಬಡ್ಡಿದರದಂತೆ ರೂ.2.00 ಲಕ್ಷದವರೆಗೆ ಸಾಲ ನೀಡುವುದು.

ಸ್ವಸಹಾಯ ಗುಂಪುಗಳ ಮೂಲಕ ಬಡ್ಡಿ ಸಹಾಯಧನ :

- **ಮಹಿಳಾ ಸ್ವಸಹಾಯ ಸಂಘಗಳಿಗೆ** : ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಶೂನ್ಯಬಡ್ಡಿ ದರದಂತೆ ರೂ.5.00 ಲಕ್ಷಗಳವರೆಗೆ ಮತ್ತು ಶೇ.4ರ ಬಡ್ಡಿ ದರದಂತೆ ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ ಸಾಲ ಸೌಲಭ್ಯ.
- **ಪುರುಷರ ಸ್ವಸಹಾಯ ಸಂಘಗಳಿಗೆ** : ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಶೇ.4ರ ಬಡ್ಡಿದರದಂತೆ ರೂ.5.00 ಲಕ್ಷಗಳವರೆಗೆ ಸಾಲ ಸೌಲಭ್ಯ.

2. **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸುವುದು.**

- ಕಬ್ಬು/ಸಕ್ಕರೆ ಸಹಕಾರಿ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಗರಿಷ್ಠ ರೂ.2500/- ಗಳನ್ನು ಭರಿಸುವುದು.
- ಇತರೆ ಸಹಕಾರಿ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಗರಿಷ್ಠ ರೂ.1000/-ಗಳನ್ನು ಭರಿಸುವುದು.

3. **ಗೋದಾಮುಗಳಲ್ಲಿ ಕೃಷಿ ಉತ್ಪನ್ನಗಳ ಶೇಖರಣೆಗೆ ಬಾಡಿಗೆ ವೆಚ್ಚ ಭರಿಸಲು ಸಹಾಯಧನ.**
ರೈತರು ಕೃಷಿ ಉತ್ಪನ್ನವನ್ನು ಗೋದಾಮುಗಳಲ್ಲಿ ಶೇಖರಿಸಲು ತಗಲುವ ಬಾಡಿಗೆ ವೆಚ್ಚದಲ್ಲಿ ಪ.ಜಾತಿ/ಪ.ಪಂಗಡದ ರೈತರಿಗೆ 50% ರಷ್ಟು ಸಹಾಯಧನ/ ರಿಯಾಯಿತಿ ನೀಡಲಾಗುವುದು. (ಸಾಮಾನ್ಯ ರೈತರಿಗೆ 25%)

4. **ಲ್ಯಾಂಪ್ಸ್ ಸಂಯುಕ್ತ ಸಂಘಗಳಿಗೆ ಮಾರುಕಟ್ಟೆ ಮೂಲ ಸೌಕರ್ಯಗಳ ಸ್ಥಾಪನೆ.**
ಪರಿಶಿಷ್ಟ ಪಂಗಡಕ್ಕೆ ಸೇರಿದ ಲ್ಯಾಂಪ್ಸ್ ಸಂಘಗಳಿಗೆ ಮೂಲಭೂತ ಸೌಕರ್ಯವನ್ನು ಸ್ಥಾಪಿಸಲು ಸರ್ಕಾರದಿಂದ ಅನುದಾನ ಒದಗಿಸಲಾಗುವುದು.

ಸಾರಿಗೆ ಇಲಾಖೆ

1. **ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್:**

- ವಿದ್ಯಾರ್ಥಿಗಳು ನಿಯಮಿತ ಶಾಲೆ/ಕಾಲೇಜುಗಳು/ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಯಾಗಿರಬೇಕು.

- ಸೇವಾ ಸಿಂಧುವಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1. **ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಆರ್.ಡಿ.ಪಿ.ಆರ್ ಇಲಾಖೆಗಳ ವ್ಯಾಪ್ತಿಯ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.**

- ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/- ಶಿಷ್ಯವೇತನ.
- ಶುಲ್ಕ ಮರುಪಾವತಿ (ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 50% ರಷ್ಟು ಶುಲ್ಕ ಮರುಪಾವತಿ ಮಾಡುವುದು)
- ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷದೊಳಗೆ ಇರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.
- ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.

2. **ಕುಡಿಯುವ ನೀರಿನ ಸಂಪರ್ಕ :**

ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸಾಮೂಹಿಕ ಮತ್ತು ವೈಯಕ್ತಿಕ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗುತ್ತಿದೆ.

3. **ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ :**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಪ.ಜಾತಿ/ಪ.ಪಂಗಡದ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮಗಳಿಗೆ ಸಂಪರ್ಕ ರಸ್ತೆ ನಿರ್ಮಿಸುವುದು.

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರು ಹೆಚ್ಚಾಗಿ ವಾಸಿಸುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿ ಸೌಲಭ್ಯ ಒದಗಿಸಲಾಗುತ್ತದೆ.

4. **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :**

- ಸದರಿ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರಿಗೆ ಜಾಬ್ ಕಾರ್ಡ್ ನೀಡಿ ಕನಿಷ್ಠ 100 ದಿನಗಳ (ಸರ್ಕಾರ ಅಧಿಸೂಚಿಸಿದ ಬರಪೀಡಿತ ಮತ್ತು ಪ್ರವಾಹಪೀಡಿತ ತಾಲ್ಲೂಕುಗಳಲ್ಲಿ 150 ದಿನಗಳು) ಕೆಲಸವನ್ನು ಒದಗಿಸಲಾಗುತ್ತದೆ. ದಿನದ ಕೂಲಿ ವೆಚ್ಚ ರೂ.289/-.
- ಎಸ್.ಸಿ/ಎಸ್.ಟಿ ರೈತರು ತಮ್ಮ ಜಮೀನುಗಳ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲು ಕೂಲಿ ವೆಚ್ಚವನ್ನು ಈ ಯೋಜನೆಯಡಿ ಭರಿಸಲು ಅವಕಾಶವಿದೆ.
- ಪ.ಜಾತಿ/ಪ.ಪಂಗಡದವರಿಗೆ ಸ್ಮಶಾನ ನಿರ್ಮಾಣ, ಶಾಲೆಯ ಆವರಣ ಗೋಡೆ, ಅಂಗನವಾಡಿ ನಿರ್ಮಾಣ ಇತ್ಯಾದಿಗಳಿಗೆ ನಿಯಮಾನುಸಾರ ವೆಚ್ಚ ಭರಿಸಲು ಅವಕಾಶವಿದೆ.

5. **ಸ್ವಚ್ಛ ಭಾರತ ಅಭಿಯಾನ :**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಾಣಕ್ಕಾಗಿ 2021-22ನೇ ಸಾಲಿನಿಂದ ರೂ.20,000/- ಸಹಾಯಧನ ನೀಡಲಾಗುತ್ತದೆ.

ವಸತಿ ಇಲಾಖೆ

1. **ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ:**

ಪ್ರತಿ ಮನೆಗೆ ಸಹಾಯಧನ

- ಗ್ರಾಮೀಣ ಪ್ರದೇಶ – ರೂ 1,75,000/– (ಪ್ರಸಕ್ತ ಸಾಲಿನಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಲಾಗಿದೆ)
- ನಗರ ಪ್ರದೇಶ – ರೂ.2,00,000/– ಮತ್ತು ಇದರೊಂದಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿಯಲ್ಲಿ ರೂ.1,50,000/–ಗಳ ಸಹಾಯಧನವನ್ನು ಸೇರಿಸಿ ಒಟ್ಟು ರೂ.3.50 ಲಕ್ಷ ಸಹಾಯಧನ ನೀಡಲಾಗುವುದು. ಫಲಾನುಭವಿಗಳ ವಂತಿಕೆ ರೂ.1.50 ಲಕ್ಷ ಒಟ್ಟು ಘಟಕ ವೆಚ್ಚ ರೂ.5.00 ಲಕ್ಷ.
- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) – ಸಹಾಯಧನ ರೂ.1.50 ಲಕ್ಷ (ಕೇಂದ್ರ ಸರ್ಕಾರದಿಂದ ರೂ.72,000/– ಮತ್ತು ರಾಜ್ಯ ಸರ್ಕಾರದಿಂದ ರೂ.78,000/–), ಆದರೆ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ರೂ.25,000/– ನೀಡಿ ಒಟ್ಟು ಸಹಾಯಧನ ರೂ.1.75 ಲಕ್ಷಗಳನ್ನು ನೀಡಲು ಕ್ರಮವಹಿಸಲಾಗುವುದು. (ಪ್ರಸಕ್ತ ಸಾಲಿನಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಲಾಗಿದೆ)

ಅರ್ಹತೆ – ವಾರ್ಷಿಕ ಆದಾಯ ಮಿತಿ

- ಗ್ರಾಮೀಣ ಪ್ರದೇಶ– ರೂ. 32,000/–
- ನಗರ ಪ್ರದೇಶ – ರೂ. 87,600/–

ಯೋಜನೆಯ ಪ್ರಮುಖ ಅಂಶಗಳು

- ಸ್ವತಃ ಫಲಾನುಭವಿಗಳೇ ಮನೆಗಳನ್ನು ನಿರ್ಮಿಸಿಕೊಳ್ಳಲು ಮೊದಲ ಆದ್ಯತೆ.
- ಆನ್‌ಲೈನ್‌ನಲ್ಲಿ ಕಾಮಗಾರಿ ಆದೇಶ ನೀಡುವಿಕೆ.
- ಜಿಪಿಎಸ್ ಆಧಾರಿತ ಭೌತಿಕ ಪ್ರಗತಿ ಪರಿಶೀಲನೆ.
- ಫಲಾನುಭವಿಗಳ ಖಾತೆಗೆ ನೇರವಾಗಿ ಸಹಾಯಧನ ಬಿಡುಗಡೆ.
- ಸಹಾಯಧನ ಬಿಡುಗಡೆ ವಿವರಗಳನ್ನು ಎಸ್.ಎಂ.ಎಸ್ ಮೂಲಕ ಫಲಾನುಭವಿಗಳಿಗೆ ತಿಳಿಸಲಾಗುವುದು.

2. **ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) – AHP–Affortable housing Programme.**

ವರ್ಗ	ವಾರ್ಷಿಕ ಆದಾಯ	ಮನೆಯ ವಿಸ್ತೀರ್ಣ
ಬಿ.ಪಿ.ಎಲ್	87600/– ವರೆಗೆ	30 sqmt
ಆರ್ಥಿಕ ಹಿಂದುಳಿದವರು	ರೂ 87600/– ರಿಂದ ರೂ 3 ಲಕ್ಷದವರೆಗೆ	60 sqmt
ಎಲ್.ಐ.ಜಿ	ರೂ 3 ಲಕ್ಷ ದಿಂದ 6 ಲಕ್ಷದವರೆಗೆ	60 sqmt
ಎಂ.ಐ.ಜಿ–1	ರೂ 6 ಲಕ್ಷದಿಂದ 12 ಲಕ್ಷದವರೆಗೆ	160 sqmt
ಎಂ.ಐ.ಜಿ–2	ರೂ 12 ಲಕ್ಷದಿಂದ 18 ಲಕ್ಷದವರೆಗೆ	200 sqmt

ಮೇಲ್ಕಂಡ ಯೋಜನೆಯಡಿ ಸಹಾಯಧನ ರೂ.3.50 ಲಕ್ಷ ಮಾತ್ರ ನೀಡಲಾಗುತ್ತದೆ. (ಡಾ.ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆಯಡಿ ರೂ.2.00 ಲಕ್ಷ ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ರೂ.1.50 ಲಕ್ಷ ಸೇರಿಸಿ)

3. **ಕೊಳಚೆ ಪ್ರದೇಶಾಭಿವೃದ್ಧಿ ಮಂಡಳಿ :**

ನಗರ ಪ್ರದೇಶಗಳಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಘೋಷಿಸಲಾದ ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ. ಒಟ್ಟು ಸಹಾಯಧನ ರೂ.3.50 ಲಕ್ಷ. (ಡಾ.ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆಯಡಿ ರೂ.2.00 ಲಕ್ಷ ಮತ್ತು ಪ್ರಧಾನ

ಮಂತ್ರಿ ಆವಾಸ್ ಯೋಜನೆಯಡಿ ರೂ.1.50 ಲಕ್ಷ ಸೇರಿಸಿ) ಫಲಾನುಭವಿಗಳ ವಂತಿಕೆಯಲ್ಲಿ 50% ಗರಿಷ್ಟ ರೂ.75,000/- ವನ್ನು ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಭರಿಸಲು ತಿಳಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆ

1.ಖಾಯಂ ಪೌರ ಕಾರ್ಮಿಕರ ವಸತಿ ಯೋಜನೆ :

- ವಸತಿ ಸೌಲಭ್ಯವನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಶಾಸ್ವತ ವಸತಿ ರಹಿತ ಪೌರಕಾರ್ಮಿಕರು, ಲೋಡರ್‌ಗಳು, ಸಹಾಯಕರು, ಯು.ಜಿ.ಡಿ ಕೆಲಸಗಾರರು ಮತ್ತು ಕ್ಲೀನರ್‌ಗಳಿಗೆ ನೀಡಲಾಗುವುದು.
- ಘಟಕ ಸಹಾಯಧನ ರೂ. 6.00 ಲಕ್ಷ.

2. ಸ್ವಚ್ಛಭಾರತ ಮಿಷನ್ :

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕಾಗಿ ರೂ. 15000/- ಗಳ ಸಹಾಯಧನ ನೀಡಲಾಗುವುದು.

3. ನಗರಸಭೆ ಮತ್ತು ಪುರಸಭೆಗಳಿಗೆ ಮುಖ್ಯ ಮಂತ್ರಿಗಳ ನಗರೋತ್ಥಾನ ಯೋಜನೆ :

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ವಾಸಸ್ಥಳಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಯುಜಿಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತದೆ.

4. ಕುಡಿಯುವ ನೀರಿನ ಸರಬರಾಜು

ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ ಮೂಲಕ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಕಲ್ಪಿಸಲಾಗುತ್ತದೆ.

5. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ವಿಶೇಷ ಮೂಲಭೂತ ಸೌಕರ್ಯ

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಯುಜಿಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತದೆ.

ಲೋಕೋಪಯೋಗಿ ಇಲಾಖೆ

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಸಿ.ಸಿ.ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಹತ್ತಿರದ ಮುಖ್ಯ ರಸ್ತೆಯಿಂದ ಕಾಲೋನಿಗೆ ಸಂಪರ್ಕ ರಸ್ತೆ ನಿರ್ಮಿಸುವುದು.

ಇಂಧನ ಇಲಾಖೆ

1) ಪ.ಜಾತಿ/ಪ.ಪಂಗಡದ ರೈತರ 10 ಹೆಚ್.ಪಿ ವರೆಗಿನ ಕೃಷಿ ನೀರಾವರಿ ಪಂಪು ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಸಹಾಯಧನ ಒದಗಿಸುವುದು.
2) ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.
3) ಪ್ರಧಾನ ಮಂತ್ರಿ ಕುಸುಮ್ ಯೋಜನೆಯ ಮಾರ್ಗಸೂಚಿಯಂತೆ ಪ.ಜಾತಿ/ಪ.ಪಂಗಡದ ರೈತರ ತೆರೆದ ಬಾವಿ/ಕೊಳವೆ ಬಾವಿಗಳಿಗೆ ಗರಿಷ್ಠ 7.5 ಹೆಚ್.ಪಿ ಸಾಮರ್ಥ್ಯವರೆಗಿನ ಸೌರಶಕ್ತಿ ಆಧಾರಿತ ನೀರಾವರಿ ಪಂಪು ಸೆಟ್‌ಗಳಿಗೆ 80% ಸಹಾಯಧನ ನೀಡುವುದು.
4) ಪ.ಜಾತಿ/ಪ.ಪಂಗಡದವರ ವಾಸಸ್ಥಳಗಳಿಗೆ / ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವುದು.

5) ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ.

ಭಾರೀ ನೀರಾವರಿ ಇಲಾಖೆ

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಆಯಾ ನಿಗಮಗಳ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಪ.ಜಾತಿ/ಪ.ಪಂಗಡದ ರೈತರ ಜಮೀನಿನ ವಿಸ್ತೀರ್ಣದ ಆಧಾರದ ಮೇಲೆ ನಿಗಮ ಇತ್ಯಾದಿಗಳಿಗೆ ಹಂಚಿಕೆ ಮಾಡುವುದು.

ಸಾಮಾನ್ಯ ನೀರಾವರಿ ಕಾಮಗಾರಿ :

ಸಾಮಾನ್ಯ ನೀರಾವರಿ ಯೋಜನೆಗಳಿಗೆ ಪ.ಜಾತಿ/ ಪ.ಪಂಗಡದ ರೈತರ ಜಮೀನಿನ ವಿಸ್ತೀರ್ಣದ ಆಧಾರದ ಅನುಪಾತದಲ್ಲಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ವೆಚ್ಚ ಭರಿಸುವುದು.

ಸಾಮೂಹಿಕ ನೀರಾವರಿ :

- ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿ 50% ಮೇಲ್ಪಟ್ಟು ಪ.ಜಾತಿ/ ಪ.ಪಂಗಡದ ರೈತರ ಜಮೀನು ಇದ್ದಲ್ಲಿ 100% ವೆಚ್ಚವನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಭರಿಸುವುದು.
- 50% ಕ್ಕಿಂತ ಕಡಿಮೆ ಇದ್ದಲ್ಲಿ ಪ.ಜಾತಿ/ ಪ.ಪಂಗಡದ ರೈತರ ಜಮೀನಿನ ಅನುಪಾತಕ್ಕೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ವೆಚ್ಚ ಭರಿಸುವುದು.

ವೈಯಕ್ತಿಕ ನೀರಾವರಿ ಸೌಲಭ್ಯ :

- ಅಚ್ಚುಕಟ್ಟು ಪ್ರದೇಶದಲ್ಲಿ ಕಾಲುವೆಗಳ ಮೂಲಕ ನೀರು ಸರಬರಾಜು ಆಗದೇ ಇರುವ ಪ್ರದೇಶಗಳಲ್ಲಿ ಆದ್ಯತೆ ಮೇಲೆ ಗಂಗಾ ಕಲ್ಯಾಣ ಯೋಜನೆಯ ಮಾದರಿಯಲ್ಲಿ ಕೊಳವೆ ಬಾವಿ ಮತ್ತು ತೆರೆದ ಬಾವಿ ಸೌಲಭ್ಯವನ್ನು ಕಲ್ಪಿಸುವುದು.

ಸಣ್ಣ ನೀರಾವರಿ ಇಲಾಖೆ

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನಿನಲ್ಲಿ ವೈಯಕ್ತಿಕ ನೀರಾವರಿ ಮತ್ತು ಸಾಮೂಹಿಕ ನೀರಾವರಿ ಸೌಲಭ್ಯ ಒದಗಿಸಲಾಗುವುದು.(ಏತ ನೀರಾವರಿ/ ಕೊಳವೆಬಾವಿ/ತೆರೆದ ಬಾವಿ/ಚೆಕ್ ಡ್ಯಾಮ್)

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಜನಸಂಖ್ಯೆಯ ಆಧಾರದ ಮೇಲೆ ಜಿಲ್ಲೆಗಳಿಗೆ ಹಂಚಿಕೆ ಮಾಡುವುದು.

ಸಾಮೂಹಿಕ ನೀರಾವರಿ :

- ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿ 50% ಮೇಲ್ಪಟ್ಟು ಪ.ಜಾತಿ/ ಪ.ಪಂಗಡದ ರೈತರ ಜಮೀನು ಇದ್ದಲ್ಲಿ 100% ವೆಚ್ಚವನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಭರಿಸುವುದು.
- 50% ಕ್ಕಿಂತ ಕಡಿಮೆ ಇದ್ದಲ್ಲಿ ಪ.ಜಾತಿ/ ಪ.ಪಂಗಡದ ರೈತರ ಜಮೀನಿನ ಅನುಪಾತಕ್ಕೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ವೆಚ್ಚ ಭರಿಸುವುದು.
- ನದಿ ನಾಲೆಗಳಿಗೆ ಸಣ್ಣ ಮಟ್ಟದ ಬ್ಯಾರೇಜ್‌ಗಳ ನಿರ್ಮಾಣ – ಏತ ನೀರಾವರಿಗೆ ನಿಗದಿಪಡಿಸಿರುವ ಮೇಲ್ಕಂಡ ಷರತ್ತುಗಳಂತೆ ನಿರ್ಮಿಸುವುದು.

ವೈಯಕ್ತಿಕ ನೀರಾವರಿ ಸೌಲಭ್ಯ :

- ಕೊಳವೆ ಬಾವಿ ಮತ್ತು ತೆರೆದ ಬಾವಿ ಸೌಲಭ್ಯವನ್ನು ಗಂಗಾ ಕಲ್ಯಾಣ ಯೋಜನೆಯ ಮಾದರಿಯಲ್ಲಿ ನೀಡಲಾಗುವುದು.
- ಫಲಾನುಭವಿ ಕನಿಷ್ಟ ಒಂದು ಎಕರೆ ಜಮೀನು ಹೊಂದಿರಬೇಕು ಆದರೆ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಫಲಾನುಭವಿಗಳು ಕನಿಷ್ಟ ಅರ್ಧ ಎಕರೆ ಜಮೀನು ಹೊಂದಿರಬೇಕು.

- ಸಮಾಜ ಕಲ್ಯಾಣ ಇಲಾಖೆಯ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳು ಸಣ್ಣ ನೀರಾವರಿ ಇಲಾಖೆಯಿಂದ ಸೌಲಭ್ಯ ಪಡೆಯಲು ಅರ್ಹರಲ್ಲ.
- ಫಲಾನುಭವಿಗಳನ್ನು ಪಾರದರ್ಶಕವಾಗಿ ಪ್ರಕಟಣೆಗಳ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಆಯ್ಕೆ ಮಾಡುವುದು. (ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮದಂತೆ)

ಚೆಕ್ ಡ್ಯಾಂಗಳ ನಿರ್ಮಾಣ (ಮಣ್ಣಿನ ತೇವಾಂಶವನ್ನು ಮತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು) : ಪ.ಜಾತಿ/ಪ.ಪಂಗಡದ ರೈತರ ಜಮೀನುಗಳ ಅಭಿವೃದ್ಧಿಗಾಗಿ ಪೂರಕವಾಗುವಂತೆ ಜಮೀನಿನ ಅಕ್ಕ-ಪಕ್ಕದಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸತಕ್ಕದ್ದು.

ಯೋಜನಾ ಇಲಾಖೆ

1. **ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ:** ವಿಧಾನಸಭಾ ಕ್ಷೇತ್ರವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಮೂಲಭೂತ ಸೌಕರ್ಯ - ಸಿ.ಸಿ ರಸ್ತೆ, ಚರಂಡಿ, ಅಂಗನವಾಡಿ ಕಟ್ಟಡ/ ಕಂಪೌಂಡ್ ವಾಲ್, ಸಮುದಾಯ ಭವನ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಯೋಜನಾ ಇಲಾಖೆಗಳಿಂದ ಅನುಷ್ಠಾನ ಮಾಡಲಾಗುತ್ತದೆ.
2. **ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕಲಬುರಗಿ)** : ಮಂಡಳಿಯ ವ್ಯಾಪ್ತಿಗೆ ಬರುವ ಎಲ್ಲಾ ಜಿಲ್ಲೆಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

   1) ಪ.ಜಾತಿ/ಪಂಗಡದ ಕಾಲೋನಿಗಳಿಗೆ ಸಂಪರ್ಕ ರಸ್ತೆ, ಬೀದಿ ದೀಪ, ಶುದ್ಧ ಕುಡಿಯುವ ನೀರಿನ ಘಟಕ, ಒಳಚರಂಡಿ ಇತ್ಯಾದಿ ಸೌಕರ್ಯ ಕಲ್ಪಿಸುವುದು.

   2) ಪ.ಜಾತಿ/ಪಂಗಡದ ವಿದ್ಯಾರ್ಥಿಗಳು ಹೆಚ್ಚಿಗೆ ಇರುವ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅಂಗನವಾಡಿ ಕಟ್ಟಡ ನಿರ್ಮಾಣ/ಕಂಪೌಂಡ್ ವಾಲ್.

   3) ಪ.ಜಾತಿ/ಪಂಗಡದ ಜನರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ/ಉಪಕೇಂದ್ರಗಳನ್ನು ಅಭಿವೃದ್ಧಿ ಪಡಿಸುವುದು.
3. **ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ (ಚಿತ್ರದುರ್ಗ):** ಮಂಡಳಿಯ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ ಅಂಗನವಾಡಿ ಮತ್ತು ಶಾಲೆಗಳಿಗೆ ಹೆಚ್ಚುವರಿ ಕೊಠಡಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತದೆ.
4. **ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ಶಿವಮೊಗ್ಗ):** ಮಂಡಳಿಯ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ ಪ.ಜಾತಿ/ಪ.ಪಂಗಡದ ಜನವಸತಿ ಪ್ರದೇಶಗಳಲ್ಲಿ ರಸ್ತೆ ಮತ್ತು ಸೇತುವೆ, ಬಾಕ್ಸ್ ಚರಂಡಿ, ತೂಗು ಸೇತುವೆ, ಕಾಲು ಸಂಕಗಳ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

1. **ಸರ್ಕಾರಿ ಖಾಸಗಿ ಸಹಭಾಗಿತ್ವದಲ್ಲಿ ರೋಗ ಪತ್ತೆ ಪರೀಕ್ಷೆ ಹಾಗೂ ಡಯಾಲಿಸೀಸ್ ಚಿಕಿತ್ಸೆಗಳು.**
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕೊನೆಯ ಹಂತದ ಮೂತ್ರಪಿಂಡ ವೈಫಲ್ಯದ ರೋಗಿಗಳಿಗೆ ಡಯಾಲಿಸಿಸ್ ಸೇವೆಗಳನ್ನು ಉಚಿತವಾಗಿ ನೀಡಲಾಗುತ್ತದೆ.

2. **ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ.**

ಸರ್ಕಾರಿ ಆಸ್ಪತ್ರೆಗಳಲ್ಲಿ ಜನನಿ ಸುರಕ್ಷಾ ಯೋಜನೆ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ರೋಗ ನಿರೋಧಕ ಲಸಿಕೆ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮ, ರಾಷ್ಟ್ರೀಯ ನಗರ ಆರೋಗ್ಯ ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ ಮತ್ತು ಆರೋಗ್ಯ ಘಟಕಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

3. **ಇ.ಎಂ.ಆರ್.ಐ. (Establishment of EMRI) ಸ್ಥಾಪನೆ (ಆರೋಗ್ಯ ಕವಚ) ಯೋಜನೆ.**
ಎಲ್ಲಾ ರೀತಿಯ ವೈದ್ಯಕೀಯ ತುರ್ತು ಪರಿಸ್ಥಿತಿಗಳಲ್ಲಿ ಹಾಗೂ ರಸ್ತೆ ಸಂಚಾರ ಅಪಘಾತಕ್ಕೀಡಾದ ಸಂತ್ರಸ್ತರನ್ನು ಆಸ್ಪತ್ರೆಗೆ ಕರೆದೊಯ್ಯಲು ಟೋಲ್ ಫ್ರೀ '108' ಸಂಖ್ಯೆಯ ಸಾರಿಗೆ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತದೆ.

4. **ಆಯುಷ್ಮಾನ್ ಭಾರತ – ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ**
ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ರೂ.5.00 ಲಕ್ಷಗಳು ಮತ್ತು ಎ.ಪಿ.ಎಲ್ ಕಾರ್ಡ್ ಹೊಂದಿರುವ ಪ್ರತಿ ಕುಟುಂಬಕ್ಕೆ ಕಾರ್ಯವಿಧಾನದ ದರಗಳ ಮಿತಿಯನ್ವಯ 30% ನಂತೆ ವರ್ಷಕ್ಕೆ ರೂ.1.50 ಲಕ್ಷಗಳ ಆರ್ಥಿಕ ನೆರವು ನೀಡಲಾಗುವುದು.

5. **ಶುಚಿ ಯೋಜನೆ**
ಎಸ್.ಸಿ/ಎಸ್.ಟಿ ಸೇರಿದಂತೆ ಎಲ್ಲಾ ವರ್ಗಗಳ ಹದಿಹರೆಯದ ಹೆಣ್ಣು ಮಕ್ಕಳು ಋತು ಕಾಲದ ಸಮಯದಲ್ಲಿ ಉತ್ತಮ ಶುಚಿತ್ವ ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವ ಸ್ಯಾನಿಟರಿ ನ್ಯಾಪ್ಕಿನ್ಸ್‌ಗಳನ್ನು ಉಚಿತವಾಗಿ ಪೂರೈಸುವುದು.

6. **ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆ.**
ಕಿವುಡು ನಿವಾರಣೆಗೆ ಸಂಬಂಧಿಸಿದಂತೆ ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆ ಮಾಡಲಾಗುವುದು.

ವೈದ್ಯಕೀಯ ಶಿಕ್ಷಣ ಇಲಾಖೆ

1. **ವೈದ್ಯಕೀಯ ಶಿಕ್ಷಣ ಇಲಾಖೆ**
ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಪ.ಜಾತಿ/ಪ.ಪಂಗಡದ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುವುದು.

2. **ಎಂ.ಬಿ.ಬಿ.ಎಸ್/ಎಂ.ಡಿ/ಎಂ.ಎಸ್ ವೈದ್ಯಕೀಯ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು:**
   - ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷ ಮೇಲ್ಪಟ್ಟು ರೂ.10.00 ಲಕ್ಷದೊಳಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 100% ಶುಲ್ಕ ಮರುಪಾವತಿ.
   - ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವಾರ್ಷಿಕ ಕುಟುಂಬ ಆದಾಯ ರೂ.5.00 ಲಕ್ಷದೊಳಗಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳ ವಿತರಣೆ.
   - ವೈದ್ಯಕೀಯ ಉಪಕರಣ (Stethoscope, apron, emergency light, BP apparetus, mask, gloves) ಮತ್ತು ವೈದ್ಯಕೀಯ ಪುಸ್ತಕಗಳ ವಿತರಣೆ.
   - ವಿದ್ಯಾರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
   - ಬೇರೆ ರಾಜ್ಯಗಳಿಂದ ಕರ್ನಾಟಕದಲ್ಲಿನ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದವರು ಮೇಲ್ಕಂಡ ಸೌಲಭ್ಯಗಳಿಗೆ ಅರ್ಹರಲ್ಲ. ಅಂತಹ ವಿದ್ಯಾರ್ಥಿಗಳು ಆಯಾ ರಾಜ್ಯಗಳಿಂದ ವಿದ್ಯಾರ್ಥಿವೇತನ ಸೌಲಭ್ಯ ಪಡೆಯಬಹುದಾಗಿದೆ.

3. **ಆಯುಷ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು (ಆಯುರ್ವೇದ, ಹೋಮಿಯೋಪತಿ, ಯುನಾನಿ, ಸಿದ್ಧ)**
   - ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷ ಮೇಲ್ಪಟ್ಟು ರೂ.10.00 ಲಕ್ಷದೊಳಗಿನ ವಿದ್ಯಾರ್ಥಿಗಳಿಗೆ 100% ಶುಲ್ಕ ಮರುಪಾವತಿ.

- ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವಾರ್ಷಿಕ ಕುಟುಂಬ ಆದಾಯ ರೂ.5.00 ಲಕ್ಷದೊಳಗಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗುವುದು.
- ವೈದ್ಯಕೀಯ ಉಪಕರಣ ಮತ್ತು ವೈದ್ಯಕೀಯ ಪುಸ್ತಕಗಳ ವಿತರಣೆ.
- ವಿದ್ಯಾರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
- ಬೇರೆ ರಾಜ್ಯಗಳಿಂದ ಕರ್ನಾಟಕದಲ್ಲಿನ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದವರು ಮೇಲ್ಕಂಡ ಸೌಲಭ್ಯಗಳಿಗೆ ಅರ್ಹರಲ್ಲ. ಅಂತಹ ವಿದ್ಯಾರ್ಥಿಗಳು ಆಯಾ ರಾಜ್ಯಗಳಿಂದ ವಿದ್ಯಾರ್ಥಿವೇತನ ಸೌಲಭ್ಯ ಪಡೆಯಬಹುದಾಗಿದೆ.

ಉನ್ನತ ಶಿಕ್ಷಣ ಇಲಾಖೆ

1. ವಿಶ್ವವಿದ್ಯಾಲಯಗಳಲ್ಲಿ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು.

- ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/– ಶಿಷ್ಯವೇತನ ನೀಡುವುದು (ವಿಶ್ವವಿದ್ಯಾಲಯ / ಸ್ನಾತಕೋತ್ತರ ಕೇಂದ್ರ / ಸಂಯೋಜಿತ ಇತ್ಯಾದಿ ಕಾಲೇಜುಗಳಲ್ಲಿ ಪಿ.ಹೆಚ್.ಡಿ ಗೆ ಆಯ್ಕೆ ಮಾಡಿದ ವಿದ್ಯಾರ್ಥಿಗಳಿಗೆ)
- ಶುಲ್ಕ ಮರುಪಾವತಿ (ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ 50% ರಷ್ಟು ಶುಲ್ಕ ಮರುಪಾವತಿ ಮಾಡುವುದು)
- ಕುಟುಂಬದ ವಾರ್ಷಿಕ ಅದಾಯ ರೂ.5.00 ಲಕ್ಷದೊಳಗೆ ಇರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವುದು.
- ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.

2. ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ಮರುಪಾವತಿ.

- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ಮರುಪಾವತಿಸುವುದು.
- ಉನ್ನತ ಶಿಕ್ಷಣ ಇಲಾಖೆಯಿಂದ ಶುಲ್ಕ ವಿನಾಯಿತಿ ಪಡೆಯುತ್ತಿರುವ ವಿದ್ಯಾರ್ಥಿನಿಯರು ಸಮಾಜ ಕಲ್ಯಾಣ ಇಲಾಖೆಯಡಿ ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ.

3. ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ.

- ವಾರ್ಷಿಕ ಆದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗಿನ ಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ (UG & PG) ಮತ್ತು ಪಾಲಿಟೆಕ್ನಿಕ್ ಕೋರ್ಸ್‌ಗಳಲ್ಲಿ ಸರ್ಕಾರ ನಿಗದಿಪಡಿಸಿದ 100% ಶುಲ್ಕ ಮರುಪಾವತಿ (ಸಿ.ಇ.ಟಿ & ಕಾಮೆಡ್–ಕೆ ಯಿಂದ ಆಯ್ಕೆಯಾದವರಿಗೆ).

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆ

1. **ಆರ್.ಟಿ.ಇ (Right to Education Act.) ಕಾಯ್ದೆ ಅಡಿ ವಿದ್ಯಾರ್ಥಿಗಳಿಗೆ ಖಾಸಗಿ ಶಾಲೆಗಳ ಶುಲ್ಕ ಮರುಪಾವತಿ:** ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ 1 ರಿಂದ 8ನೇ ತರಗತಿವರೆಗೆ ತಗಲುವ ಬೋಧನಾ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುವುದು. (ಸರ್ಕಾರಿ ಶಾಲೆಗಳು ಇಲ್ಲದೇ ಇರುವ ಪ್ರದೇಶಗಳಲ್ಲಿ ಮಾತ್ರ)

2. **ವಿದ್ಯಾ ವಿಕಾಸ ಯೋಜನೆ :** ಪಠ್ಯ–ಪುಸ್ತಕ ಮತ್ತು ಸಮವಸ್ತ್ರ ವಿತರಣೆ – ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಯೋಜನೆಗೆ ಒಳಪಡುತ್ತಾರೆ.

3. **ಮಧ್ಯಾಹ್ನದ ಬಿಸಿ ಊಟ ಮತ್ತು ಕ್ಷೀರ ಭಾಗ್ಯ ಯೋಜನೆ :** ಈ ಯೋಜನೆಯು ಸರ್ಕಾರಿ ಮತ್ತು ಅನುದಾನಿತ ಶಾಲೆ 1 ರಿಂದ 10ನೇ ತರಗತಿಯ ಮಕ್ಕಳಿಗೆ ಎಲ್ಲಾ ಕೆಲಸದ ದಿನಗಳಲ್ಲಿ ಮಧ್ಯಾಹ್ನದ ಬಿಸಿ ಊಟವನ್ನು ಹಾಗೂ ಕ್ಷೀರ ಭಾಗ್ಯ ಯೋಜನೆಯಡಿ ವಾರದಲ್ಲಿ ಐದು ದಿನಗಳವರೆಗೆ ವಿದ್ಯಾರ್ಥಿಗಳಿಗೆ ಹಾಲನ್ನು ಸಹ ನೀಡಲಾಗುವುದು.

4. **ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ :** ಈ ಯೋಜನೆಯಡಿಯಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಶಾಲೆಗಳಲ್ಲಿ 6 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಎಸ್.ಸಿ/ಎಸ್.ಟಿ ಬಾಲಕರು ಮತ್ತು ಬಾಲಕಿಯರಿಗೆ ಶುಲ್ಕವನ್ನು (ಪರೀಕ್ಷಾ ಶುಲ್ಕ ಸೇರಿ) ಮರುಪಾವತಿಸಲಾಗುತ್ತದೆ.

5. **ಪದವಿ ಪೂರ್ವ ಶಿಕ್ಷಣ :** ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ದ್ವಿತೀಯ ಪಿ.ಯು.ಸಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವಿಶ್ವಾಸ ಕಿರಣ ಕಾರ್ಯಕ್ರಮದಡಿ ಇಂಗ್ಲಿಷ್ ಗ್ರಾಮರ್/ ಸಂವಹನ ತರಗತಿಗಳನ್ನು ನಡೆಸುವುದು.

   ದ್ವಿತೀಯ ಪದವಿ ಪೂರ್ವ ವಾರ್ಷಿಕ ಪರೀಕ್ಷೆಯಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚಿನ ಅಂಕಗಳಿಸುವ ತಲಾ 5 ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

1. **ಭಾಗ್ಯಲಕ್ಷ್ಮಿ ಯೋಜನೆ :** ಭಾಗ್ಯಲಕ್ಷ್ಮಿ– ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬದ ಎರಡು ಹೆಣ್ಣು ಮಕ್ಕಳಿಗೆ ಸೀಮಿತಗೊಳಿಸಿ ವಾರ್ಷಿಕ ತಲಾ ರೂ.3,000/– ರಂತೆ 15 ವರ್ಷಗಳವರೆಗೆ ಪ್ರೀಮಿಯಂ ತುಂಬುವುದು. (ಮರುಪಾವತಿಯ ಮೊತ್ತ ರೂ.1.27 ಲಕ್ಷ).

2. **ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ :** ಗರ್ಭಿಣಿ /ಬಾಣಂತಿ ಮಹಿಳೆಯರಿಗೆ ರೂ.5000/– ಗಳ ಸಹಾಯಧನವನ್ನು ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ವರ್ಗಾಯಿಸಲಾಗುತ್ತದೆ

3. **ಸ್ತ್ರೀ ಶಕ್ತಿ ಯೋಜನೆ :**
   - ಅರ್ಹ ಸ್ತ್ರೀ ಶಕ್ತಿ ಗುಂಪಿಗೆ ಪ್ರತೀ ವರ್ಷ ರೂ.5,000/– ರಂತೆ 5 ವರ್ಷಗಳಿಗೆ ರೂ. 25,000/– ಸುತ್ತು ನಿಧಿ.
   - ಸ್ತ್ರೀ ಶಕ್ತಿ ಗುಂಪುಗಳಿಗೆ ಆದಾಯ ಹೆಚ್ಚಿಸುವ ಚಟುವಟಿಕೆಗಾಗಿ ಉಳಿತಾಯ ರೂ. 75,000/– ದಿಂದ 1.00 ಲಕ್ಷ ಇದ್ದಲ್ಲಿ ರೂ. 15,000/– ಪ್ರೋತ್ಸಾಹಧನ.
   - ರೂ. 1.00 ಲಕ್ಷಕ್ಕಿಂತ ಹೆಚ್ಚು ಉಳಿತಾಯ ಇದ್ದಲ್ಲಿ ರೂ. 20,000/– ಪ್ರೋತ್ಸಾಹಧನ.

4. **ಐ.ಸಿ.ಡಿ.ಎಸ್.– ರಾಷ್ಟ್ರೀಯ ಪೌಷ್ಟಿಕ ಆಹಾರ ಯೋಜನೆ**
   - 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಸಾಮಾನ್ಯ ಮಕ್ಕಳು: ಪ್ರತಿ ಮಗುವಿಗೆ ದಿನಕ್ಕೆ ರೂ.8.00 ಘಟಕ ವೆಚ್ಚದಲ್ಲಿ 300 ದಿನ ಪೌಷ್ಟಿಕ ಆಹಾರ.
   - ಗರ್ಭಿಣಿ/ಬಾಣಂತಿ/ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿಯರು – ಪ್ರತಿ ಫಲಾನುಭವಿಗೆ ರೂ.9.50 ರಂತೆ 300 ದಿನಗಳಿಗೆ ಪೌಷ್ಟಿಕ ಆಹಾರ
   - 6 ತಿಂಗಳಿಂದ 6 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳು – ಪ್ರತಿ ಫಲಾನುಭವಿಗೆ ರೂ.12 ರಂತೆ 300 ದಿನಗಳಿಗೆ
   - 6 ತಿಂಗಳಿಂದ ರಿಂದ 3 ವರ್ಷದ ತೀವ್ರ ಅಪೌಷ್ಟಿಕ ಮಕ್ಕಳು/6 ಜಿಲ್ಲೆಗಳ (ರಾಯಚೂರು, ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ) ಸಾಧಾರಣ ಅಪೌಷ್ಟಿಕ ಮಕ್ಕಳು : ಪ್ರತಿ ಮಗುವಿಗೆ ವಾರದಲ್ಲಿ 5 ದಿನ ಹಾಲು ಮತ್ತು 3 ದಿನ ಮೊಟ್ಟೆ ವಿತರಣೆ (150 ದಿನ)

- 3 ವರ್ಷದಿಂದ 6 ವರ್ಷದ ತೀವ್ರ/6 ಜಿಲ್ಲೆಗಳ (ರಾಯಚೂರು, ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ) ಸಾಧಾರಣ ಅಪೌಷ್ಠಿಕ ಮಕ್ಕಳು: ಪ್ರತಿ ಮಗುವಿಗೆ ವಾರದಲ್ಲಿ 5 ದಿನ ಮೊಟ್ಟೆ ಮತ್ತು 5 ದಿನ ಹಾಲು ವಿತರಣೆ (250 ದಿನ)
- 6 ತಿಂಗಳಿಂದ 6 ವರ್ಷದ ಎಲ್ಲಾ ಪ.ಜಾತಿ/ಪ.ಪಂಗಡದ ಮಕ್ಕಳಿಗೆ ವಾರದಲ್ಲಿ 5 ದಿನ ಹಾಲು (250 ದಿನ)
- 3 ವರ್ಷಗಳಿಂದ 6 ವರ್ಷದ ಎಲ್ಲಾ ಪ.ಜಾತಿ/ಪ.ಪಂಗಡದ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ (100 ದಿನ)
- ಮಾತೃ ಪೂರ್ಣ ಯೋಜನೆಯಡಿ ಗರ್ಭಿಣಿ/ಬಾಣಂತಿ/ ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿಯರು:
- ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನ – ಪ್ರತಿ ಫಲಾನುಭವಿಗೆ ರೂ.11.50 ರಂತೆ 300 ದಿನಗಳಿಗೆ.

ಮಹಿಳಾ ಅಭಿವೃದ್ಧಿ ನಿಗಮ :

1. ಚೇತನ (ಲೈಂಗಿಕ ಕಾರ್ಯಕರ್ತೆಯರಿಗೆ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ) :

- ವಯೋಮಿತಿ – 18 ವರ್ಷ.
- ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮೋದಿತ ಯಾವುದಾದರೂ ಸಮುದಾಯ ಸಂಸ್ಥೆಗಳಲ್ಲಿ ಅರ್ಜಿದಾರರು ಹೆಸರನ್ನು ನೋಂದಾಯಿಸಿರಬೇಕು.
- ರಾಷ್ಟ್ರೀಕೃತ / ಸಹಕಾರಿ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿರಬೇಕು.
- ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.
- ಸಹಾಯಧನದ ಮೊತ್ತ – ರೂ 30,000/–

2. ದೇವದಾಸಿಯರಿಗೆ ಆರ್ಥಿಕ ಚಟುವಟಿಕೆಗಳಿಗೆ ಸಹಾಯಧನ:

- 1993–94 ಮತ್ತು 2007–08 ರ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ದೇವದಾಸಿಯರಾಗಿರಬೇಕು.
- ರಾಷ್ಟ್ರೀಕೃತ / ಸಹಕಾರಿ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿರಬೇಕು.
- ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು
- ಸಹಾಯಧನದ ಮೊತ್ತ – ರೂ. 30,000/–

3. ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ :

- ವಯೋಮಿತಿ – 18 ರಿಂದ 45 ವರ್ಷ.
- ಆರ್ಥಿಕವಾಗಿ ಹಿಂದುಳಿದ, ವಿಧವೆ, ನಿರಾಶ್ರಿತ, ವಿಕಲ ಚೇತನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಉದ್ಯಮಶೀಲತಾ ತರಬೇತಿ ನೀಡಲಾಗುವುದು.
- ಕೌಶಲ್ಯಾಭಿವೃದ್ಧಿ ತರಬೇತಿ ಇಲಾಖೆಯಿಂದ ಮಾನ್ಯತೆ ಹೊಂದಿರುವ ತರಬೇತಿ ಸಂಸ್ಥೆಗಳ ಮೂಲಕ ತರಬೇತಿ ನೀಡಲಾಗುವುದು.

4. ಉದ್ಯೋಗಿನಿ :

- ವಯೋಮಿತಿ – 18 ರಿಂದ 55 ವರ್ಷ
- ವಾರ್ಷಿಕ ಆದಾಯ ಮಿತಿ – ರೂ 2.00 ಲಕ್ಷ
- ರಾಷ್ಟ್ರೀಕೃತ / ಸಹಕಾರಿ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿರಬೇಕು
- ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು
- ಸಹಾಯಧನ ಮತ್ತು ಸಾಲ ಬಿಡುಗಡೆಯ ಪೂರ್ವದಲ್ಲಿ ಉದ್ಯಮಶೀಲತಾ ತರಬೇತಿಯನ್ನು ಪಡೆದಿರಬೇಕು
- ನಿಗಮದಿಂದ 50% ಸಹಾಯಧನ ಮತ್ತು ಬ್ಯಾಂಕ್‌ಗಳ ಮೂಲಕ 50% ಸಾಲ

5. ದೇವದಾಸಿಯರ ಪಿಂಚಣಿ ಯೋಜನೆ :

* ವಯೋಮಿತಿ – 45 ಮತ್ತು 45ಕ್ಕಿಂತ ಹೆಚ್ಚು
* 1993–94 ಮತ್ತು 2007–08 ರ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ದೇವದಾಸಿಯರಾಗಿರಬೇಕು
* ಮಾಸಿಕ ಪಿಂಚಣಿಯ ಮೊತ್ತ – ರೂ 1,500/-

6. **ದೇವದಾಸಿಯರಿಗೆ ವಸತಿ ಸೌಲಭ್ಯ :**
   * ವಯೋಮಿತಿ – 45 ಮತ್ತು 45ಕ್ಕಿಂತ ಹೆಚ್ಚು
   * 1993–94 ಮತ್ತು 2007–08 ರ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ದೇವದಾಸಿಯರಾಗಿರಬೇಕು
   * ನಿವೇಶನ ಹೊಂದಿರುವ ವಸತಿ ರಹಿತ ದೇವದಾಸಿಯರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ವಸತಿ ಸೌಲಭ್ಯ ಒದಗಿಸಲಾಗುತ್ತದೆ.
   * ಘಟಕ ಸಹಾಯಧನ ಗ್ರಾಮೀಣ ಪ್ರದೇಶದಲ್ಲಿ ರೂ.1.75 ಲಕ್ಷ ಮತ್ತು ನಗರ ಪ್ರದೇಶದಲ್ಲಿ ರೂ.2.00 ಲಕ್ಷ.

7. **ಸ್ವಸಹಾಯ ಸಂಘಗಳಿಗೆ ಕಿರು ಸಾಲ ಯೋಜನೆ**
   * ಸ್ತ್ರೀ ಶಕ್ತಿ / ಸ್ವಸಹಾಯ ಗುಂಪುಗಳು ಸಣ್ಣ ಉದ್ದಿಮೆ ಅಥವಾ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆ ಹೊಂದಲು ಬಡ್ಡಿರಹಿತ ಸಾಲ.
   * ಸಾಲದ ಮೊತ್ತ ರೂ.1.00 ಲಕ್ಷ ರಿಂದ ರೂ.3.00 ಲಕ್ಷವನ್ನು ಒದಗಿಸಲಾಗುವುದು.

ವಿಕಲಚೇತನರ ಕಲ್ಯಾಣ ಇಲಾಖೆ

1. **ದೈಹಿಕ ಮತ್ತು ಮಾನಸಿಕವಾಗಿ ಸವಾಲಿಗೊಳಗಾದವರ ಕಲ್ಯಾಣ**
   ಆಧಾರ ಯೋಜನೆ, ವಿವಾಹ ಪ್ರೋತ್ಸಾಹಧನ ಯೋಜನೆ, ನಿರಾಮಯ, ಶುಲ್ಕ ಮರುಪಾವತಿ, ವೈದ್ಯಕೀಯ ಪರಿಹಾರ ನಿಧಿ ಯೋಜನೆ, ಪ್ರತಿಭೆ, ಶಿಶು ಪಾಲನಾ ಭತ್ಯೆ ಯೋಜನೆಗಳಡಿ ಧನಸಹಾಯ ಮಾಡುವುದು.

2. **ವಿಕಲಚೇತನರಿಗೆ ಸಾಧನ ಮತ್ತು ಸಲಕರಣೆಗಳು**
   ವಿಕಲಚೇತನರಿಗೆ ಸಾಧನ ಸಲಕರಣೆ, ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಹಾಗೂ ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವುದು.

3. **ಹಿರಿಯ ನಾಗರಿಕರ ನೀತಿ**
   ಪ.ಜಾತಿ / ಪ.ಪಂಗಡದ ಹಿರಿಯ ನಾಗರಿಕರ ಸಹಾಯವಾಣಿ ಹಾಗೂ ಹಗಲು ಯೋಗಕ್ಷೇಮ ಕೇಂದ್ರಗಳ ಅನುಷ್ಠಾನ.

4. **ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು**
   ಪ.ಜಾತಿ/ಪ.ಪಂಗಡದ ವಿಕಲಚೇತನರ ಮಕ್ಕಳಿಗೆ ವಿಶೇಷ ಶಾಲೆ ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ.

ಕೌಶಲ್ಯಾಭಿವೃದ್ಧಿ ಇಲಾಖೆ

1) ಕೌಶಲ್ಯಾಭಿವೃದ್ಧಿ ಮಿಷನ್ :

ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ ಉಚಿತವಾಗಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುವುದು.

2) ಐ.ಟಿ.ಐ ವಿದ್ಯಾರ್ಥಿಗಳಿಗೆ ಟೂಲ್‌ಕಿಟ್ ವಿತರಣೆ :

ಐ.ಟಿ.ಐ ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ ಪ.ಪಂಗಡದ ವಿದ್ಯಾರ್ಥಿಗಳಿಗೆ ಟೂಲ್‌ಕಿಟ್, ಲೇಖನ ಸಾಮಗ್ರಿ ವಿತರಣೆ.

3) ಇ.ಡಿ.ಪಿ ತರಬೇತಿ :

ಪ.ಜಾತಿ/ ಪ.ಪಂಗಡದ ಅಭ್ಯರ್ಥಿಗಳಿಗೆ ಉದ್ಯಮಶೀಲತಾ ತರಬೇತಿ ನೀಡಲಾಗುತ್ತದೆ. (ಇ.ಡಿ.ಪಿ)

ಅರ್ಹತೆಗಳು :

18 ರಿಂದ 35 ವಯೋಮಿತಿಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿಗಳು ಆನ್‌ಲೈನ್ ಮುಖಾಂತರ ಸದರಿ ಇಲಾಖೆಯ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಿ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ತರಬೇತಿ ಪಡೆಯಬಹುದು.

4) **ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ**

- ನಗರ ಪ್ರದೇಶಗಳಲ್ಲಿ ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳಿಗೆ
- Social Mobilization & Institution Development (SM&ID),
- Employment through Skill Training and Placement (EST&P),
- Capacity Building and Training (CB&T)
- Scheme of shelter for Urban Homeless (SUH)
- Support to Urban Street Vendors (SUSV)
- Self Employment Programme(SEP,)
- Information, Education and Communication (IEC) ರಡಿ ಸ್ವ-ಸಹಾಯ ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಲಾಗುವುದು.
- ಸಾಲದ ಮೊತ್ತ – ಬ್ಯಾಂಕ್‌ಗಳಿಂದ ಪ್ರತಿ ಸ್ವಸಹಾಯ ಸಂಘಕ್ಕೆ ರೂ.1.00 ಲಕ್ಷದವರೆಗೆ ಸಾಲ ಪಡೆಯಲು ಅವಕಾಶವಿದೆ.
- ಬಡ್ಡಿ ಸಹಾಯಧನ – ಸ್ವಸಹಾಯ ಗುಂಪುಗಳು ಬಡ್ಡಿದರದಲ್ಲಿ 7% ವರೆಗೆ ಭರಿಸಬೇಕಾಗಿದೆ. 7% ಕ್ಕಿಂತ ಮೇಲ್ಪಟ್ಟ ಬಡ್ಡಿದರದ ಮೊತ್ತಕ್ಕೆ ಸಹಾಯಧನ ನೀಡಲಾಗುವುದು. ನಿಯಮಿತವಾಗಿ ಸಾಲವನ್ನು ಮರುಪಾವತಿಸುವ ಸ್ವಸಹಾಯ ಸಂಘಗಳಿಗೆ 3% ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನವನ್ನು ನೀಡಲಾಗುವುದು.
- ಸುತ್ತು ನಿಧಿ – ಪ್ರತಿ ಸ್ವಸಹಾಯ ಸಂಘಕ್ಕೆ ರಚನೆಯಾದ 3 ತಿಂಗಳ ನಂತರ ರೂ.10,000/- ಆವರ್ತಕ ನಿಧಿಯನ್ನು ನೀಡಲಾಗುತ್ತಿದೆ.
- ಸಂಘಗಳು ಬ್ಯಾಂಕಿನಿಂದ ಸಾಲ ಸೌಲಭ್ಯ ಈ ಕೆಳಕಂಡಂತಿದೆ.
  - ವೈಯಕ್ತಿಕ ಕಿರು ಉದ್ದಿಮೆ – ರೂ. 2.00 ಲಕ್ಷದವರೆಗೆ
  - ಗುಂಪು ಕಿರು ಉದ್ದಿಮೆ – ರೂ. 10.00 ಲಕ್ಷದವರೆಗೆ
  - ಬಡ್ಡಿ ಸಹಾಯಧನ – ಸ್ವಸಹಾಯ ಗುಂಪುಗಳು ಬಡ್ಡಿದರದಲ್ಲಿ 7% ವರೆಗೆ ಭರಿಸಬೇಕಾಗಿದೆ. 7% ಕ್ಕಿಂತ ಮೇಲ್ಪಟ್ಟ ಬಡ್ಡಿದರದ ಮೊತ್ತಕ್ಕೆ ಸಹಾಯಧನ ನೀಡಲಾಗುವುದು. ನಿಯಮಿತವಾಗಿ ಸಾಲವನ್ನು ಮರುಪಾವತಿಸುವ ಸ್ವಸಹಾಯ ಸಂಘಗಳಿಗೆ 3% ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನವನ್ನು ನೀಡಲಾಗುವುದು.

5) **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:**

- ಗ್ರಾಮೀಣ ಭಾಗದ ಸ್ವಸಹಾಯ ಗುಂಪುಗಳಿಗೆ ಕಮ್ಯುನಿಟಿ ಇನ್‌ವೆಸ್ಟ್‌ಮೆಂಟ್ ಫಂಡ್ ಹಾಗೂ ರಿವಾಲ್‌ವಿಂಗ್ ಫಂಡ್ ಒದಗಿಸುವುದು.
- ಸ್ವಸಹಾಯ ಗುಂಪುಗಳಿಗೆ ರೂ.1.25 ಲಕ್ಷ ಸಾಲ, ರೂ.15000/- ಸಹಾಯಧನ, ರೂ. 15000/- ಸುತ್ತು ನಿಧಿಯನ್ನು ಒದಗಿಸಲಾಗುತ್ತದೆ.

ಕೈಮಗ್ಗ ಮತ್ತು ಜವಳಿ ಇಲಾಖೆ

1) ನೇಕಾರರ ಪ್ಯಾಕೇಜ್

ಅ) ಕೈಮಗ್ಗ /ವಿದ್ಯುತ್ ಮಗ್ಗ ಮತ್ತು ಎಲೆಕ್ಟ್ರಾನಿಕ್ ಜಕಾರ್ಡ್‌ಗಳ ಖರೀದಿಗೆ ಸಹಾಯಧನ :

- ಕೈಮಗ್ಗ /ವಿದ್ಯುತ್ ಮಗ್ಗದ ತರಬೇತಿ ಹೊಂದಿದವರು / ಸಾಂಪ್ರದಾಯಿಕ ನೇಕಾರರಾಗಿರಬೇಕು
- ವೈಯಕ್ತಿಕ ಫಲಾನುಭವಿಗಳಿಗೆ ಸಹಾಯಧನ ಸೌಲಭ್ಯ ಒದಗಿಸಲಾಗುವುದು.
- ಮಗ್ಗಗಳನ್ನು ಸ್ಥಾಪಿಸಲು ಸ್ಥಳಾವಕಾಶ ಹೊಂದಿರಬೇಕು.
- ಸಹಾಯಧನದ ಮೊತ್ತ.

ಕೈಮಗ್ಗಗಳಿಗೆ	– 90% ಅಥವಾ ಗರಿಷ್ಟ ರೂ 27,000/– ಸಹಾಯಧನ
ವಿದ್ಯುತ್ ಮಗ್ಗಗಳಿಗೆ (2 ಮಗ್ಗಗಳಿಗೆ ಮಾತ್ರ)	– 90% ಅಥವಾ ಗರಿಷ್ಟ ರೂ 2,70,000/– ಸಹಾಯಧನ
ಎಲೆಕ್ಟ್ರಾನಿಕ್ ಜಕಾರ್ಡ್‌ಗಳಿಗೆ	– 90% ಅಥವಾ ಗರಿಷ್ಟ ರೂ 4,05,000/– ಸಹಾಯಧನ

ಆ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನೇಕಾರರ ಸಂಘಗಳಿಗೆ ಮಗ್ಗ ಪೂರ್ವ ಸೌಲಭ್ಯ : ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನೇಕಾರರ ಸಂಘಗಳಿಗೆ ಮಗ್ಗಗಳ ಸ್ಥಾಪನೆಗೆ ಬೇಕಾದ ವೈಂಡಿಂಗ್, ವಾರ್ಪಿಂಗ್, ಟ್ವಿಸ್ಟಿಂಗ್ ಮತ್ತು ಡೈಯಿಂಗ್ ಉಪಕರಣಗಳ ಖರೀದಿಗೆ ಗರಿಷ್ಟ ರೂ.6,00,000/– ಸಹಾಯಧನ ನೀಡಲಾಗುವುದು.

2) ಸಣ್ಣ ಮತ್ತು ಅತೀ ಸಣ್ಣ ಜವಳಿ ಘಟಕಗಳ ಸ್ಥಾಪನೆಗೆ ಸಹಾಯಧನ.

- ಬಂಡವಾಳ ಸಹಾಯಧನ – 75%
- ಬಡ್ಡಿ ಸಹಾಯಧನ – 15%
- ಎಸ್.ಎಂ.ಇ ಜವಳಿ/ಸಿದ್ಧ ಉಡುಪು ಘಟಕಗಳಿಗೆ ಬಂಡವಾಳ (ಸ್ಥಿರಾಸ್ಥಿ) ಹೂಡಿಕೆ ಮೊತ್ತದಲ್ಲಿ (ನಿವೇಶನ ವೆಚ್ಚ ಹೊರತುಪಡಿಸಿ) 75% ರಂತೆ ಬಂಡವಾಳ ಸಹಾಯಧನ ಅಥವಾ ಗರಿಷ್ಠ ರೂ.2.00 ಕೋಟಿವರೆಗೆ ಯಾವುದು ಕಡಿಮೆ ಅದನ್ನು ನೀಡುವುದು.
- ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್‌ಗಳಿಂದ 4% ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಸಾಲ ಪಡೆದ ಘಟಕಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಬಡ್ಡಿ ಸಹಾಯಧನ ನೀಡತಕ್ಕದ್ದಲ್ಲ. ಇತರೆ ಪ್ರಕರಣಗಳಲ್ಲಿ ಬಡ್ಡಿ ಸಹಾಯಧನ ನೀಡಬಹುದು.

3) ತರಬೇತಿ ಕಾರ್ಯಕ್ರಮಗಳು

ವಿವರ	**ಅಡ್ವಾನ್ಸ್‌ಡ್ ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ / ಕೈಮಗ್ಗ ಮತ್ತು ವಿದ್ಯುತ್ ತರಬೇತಿಗಳ ನೇಯ್ಗೆ ತರಬೇತಿ**	**ಬೊಟಿಕ್ ತರಬೇತಿ**
ವಿದ್ಯಾರ್ಹತೆ	5ನೇ ತರಗತಿ ಉತ್ತೀರ್ಣ	10ನೇ ತರಗತಿ ಉತ್ತೀರ್ಣ
ವಯೋಮಿತಿ	18 ರಿಂದ 35 ವರ್ಷ	18 ರಿಂದ 35 ವರ್ಷ
ತರಬೇತಿ ಅವಧಿ	45 ದಿನ	45 ದಿನಗಳು
ಶಿಷ್ಯ ವೇತನ	ರೂ 3,500/–	ರೂ 3,500/–
ಕಚ್ಚಾ ಮಾಲು ವೆಚ್ಚ	ರೂ 1,000/–	ರೂ. 4,500/–
ಸಂಸ್ಥೆಯ ನಿರ್ವಹಣೆ ವೆಚ್ಚ	ರೂ 5,000/– (ಎಸ್‌ಡಿಸಿ) ರೂ 6,500/– ಖಾಸಗಿ	ರೂ. 7,500/– (ಎಸ್‌ಡಿಸಿ)
ಒಟ್ಟು ಒಬ್ಬ ಅಭ್ಯರ್ಥಿಗೆ ತಗಲುವ ವೆಚ್ಚ	ರೂ 9500/– (ಎಸ್‌ಡಿಸಿ) ರೂ 11,000/– ಖಾಸಗಿ	ರೂ.15,500/–

ಸಣ್ಣ ಕೈಗಾರಿಕೆ ಇಲಾಖೆ

1. **ಕೈಗಾರಿಕಾ ನಿವೇಶನಗಳು ಮತ್ತು ಶೆಡ್‌ಗಳಿಗೆ 75% ಸಹಾಯಧನ**

7	ಹೊಸದುರ್ಗದಿಂದ ಶೀಲಾಪುರ, ಕೊಂಡಜ್ಜಿ, ಚೌಳಹಿರಿಯೂರು ಯಗಟಿ, ಗರ್ಜೆ ಮಾರ್ಗ ಕಡೂರಿಗೆ & ವಾಪಸ್ಸು ಅದೇ ಮಾರ್ಗವಾಗಿ ಸಾರಿಗೆ ಸೌಲಭ್ಯ ಕೋರಿ.	ಚೌಳಹಿರಿಯೂರು ಗ್ರಾಮಸ್ಥರು	ಅನುಸೂಚಿ ಸಂಖ್ಯೆ 96ಎಬಿ ಮಧ್ಯಾಹ್ನ 12.00 ಕ್ಕೆ ಸದರಿ ಮಾರ್ಗದಲ್ಲಿ ಸಾರಿಗೆ ಸೌಕರ್ಯ ಕಲ್ಪಿಸಲಾಗಿತ್ತು. ಆದರೆ, ಸದರಿ ಸಾರಿಗೆಯಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ವಿರಳವಾಗಿರುವುದರಿಂದ ಸದರಿ ಸುತ್ತುವಳಿಯನ್ನು ಕಡಿತಗೊಳಿಸಲಾಗಿದೆ.

ಕ್ರ. ಸಂ.	ಮಾರ್ಗ	ಮನವಿದಾರರ ವಿವರ	ಕೈಗೊಂಡಿರುವ ಕ್ರಮ
8	ಕಡೂರು ಬಿರೆನಲ್ಲೂರು, ತಮ್ಮಟದಹಳ್ಳಿ, ಅಂತರಘಟ್ಟೆ, ಚೌಳಹಿರಿಯೂರು, ಭಾಗರೆಟ್ಟಿಹಳ್ಳಿ–ಕಂಗುವಳ್ಳಿ ಮಾರ್ಗ ಹೊಸದುರ್ಗಕ್ಕೆ ಸಾರಿಗೆ ಸೌಲಭ್ಯ ಕೋರಿ.	ಚೌಳಹಿರಿಯೂರು ಗ್ರಾಮಸ್ಥರು	ಸದರಿ ಮಾರ್ಗದಲ್ಲಿ ಸಾರಿಗೆಗಳನ್ನು ಕಾರ್ಯಾಚರಿಸಲು ಪರವಾನಗಿಯ ಅವಶ್ಯಕತೆಯಿದ್ದು, ಸಮಗ್ರ ಪ್ರಾದೇಶಿಕ ಸಾರಿಗೆ ಯೋಜನೆಯಡಿಯಲ್ಲಿ ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಲಾಗಿದೆ.
9	ಕಡೂರು–ಯಗಟಿ–ಬೆಂಗಳೂರು (9ನೇ ಮೈಲಿ, ಸಿಂಗಟಗೆರೆ, ಕೆ.ಬಿದರೆ, ರೇಟ್ಟಿಹಳ್ಳಿ, ಕಲ್ಲುಸಾದರಹಳ್ಳಿ, ಕಲ್ಲುಂಡಿ, ಮಡಾಳು, ಜೆ.ಸಿ.ಪುರ, ತಿಪಟೂರು, ತುಮಕೂರು–ಬೆಂಗಳೂರು) ಮಾರ್ಗ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ.	ಮಾನ್ಯ ಶಾಸಕರು, ಕಡೂರು ಮತ್ತು ಯಗಟಿ ಗ್ರಾಮಸ್ಥರು	ಸದರಿ ಮಾರ್ಗ ಈ ಹಿಂದೆ ಕಾರ್ಯಾಚರಣೆಯಾಗುತ್ತಿದ್ದ ಮಾರ್ಗವಾಗಿದ್ದು, ಮುಂದಿನ ದಿನಗಳಲ್ಲಿ ವಾಹನ ಲಭ್ಯತೆಗೆ ಅನುಗುಣವಾಗಿ ಕಾರ್ಯಾಚರಣೆ ಮಾಡಲಾಗುವುದು.
10	ಕಡೂರು–ಬೀರೂರು–ಅಜ್ಜಂಪುರ–ಅಂತರಘಟ್ಟೆ–ಸಾಣೆಹಳ್ಳಿ ಮಾರ್ಗವಾಗಿ ಚಿತ್ರದುರ್ಗಕ್ಕೆ ಹೆಚ್ಚುವರಿಯಾಗಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ.	ಸಾಣೆಹಳ್ಳಿ ಗ್ರಾಮಸ್ಥರು	ಕಡೂರು–ಬೀರೂರು–ಅಜ್ಜಂಪುರ–ಅಂತರಘಟ್ಟೆ–ಸಾಣೆಹಳ್ಳಿ ಮಾರ್ಗವಾಗಿ ಚಿತ್ರದುರ್ಗಕ್ಕೆ ಈಗಾಗಲೇ ನಿಗಮದಿಂದ ಶಾಲಾ ಕಾಲೇಜು ಸಮಯಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
11	ಕಡೂರು–ಚಿಕ್ಕಮಗಳೂರು ಮಾರ್ಗ ಬೆಳಿಗ್ಗೆ ಮತ್ತು ಸಂಜೆ ತಡೆರಹಿತ ಸಾರಿಗೆಗಳನ್ನು ಪ್ರಾರಂಭಿಸುವಂತೆ ಮನವಿ ಸಲ್ಲಿಸಿರುತ್ತಾರೆ.	ಸಾರ್ವಜನಿಕ ಪ್ರಯಾಣಿಕರು	ಕಡೂರು ಘಟಕದ ಅನುಸೂಚಿ ಸಂಖ್ಯೆ 138, 139, 140ರಲ್ಲಿ ಚಿಕ್ಕಮಗಳೂರು–ಕಡೂರು ಮಾರ್ಗ ತಡೆರಹಿತ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	472
ಸದಸ್ಯರ ಹೆಸರು :	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಉತ್ತರಿಸಬೇಕಾದ ದಿನಾಂಕ :	21.12.2022
ಉತ್ತರಿಸುವ ಸಚಿವರು :	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ನಿಗಮಗಳಲ್ಲಿ ವಿವಿಧ ಯೋಜನೆಗಳಿಗೆ ವಾರ್ಷಿಕವಾಗಿ ತೀರಾ ಕನಿಷ್ಠ ಗುರಿಗಳನ್ನು ನಿಗದಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಗುರಿಗಳನ್ನು ನಿಗದಿಪಡಿಸಲು ಇರುವ ಮಾನದಂಡಗಳೇನು; (ನಿಗಮವಾರು ಮಾಹಿತಿ ನೀಡುವುದು.	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮಗಳಿಗೆ ಪ್ರತೀ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನಿಗಧಿಪಡಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಿದೆ.
ಆ)	ನಿಗದಿಪಡಿಸಿರುವ ಗುರಿಗಳಿಗನುಗುಣವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಜನಸಾಮಾನ್ಯರು ಹಾಗೂ ಜನಪ್ರತಿನಿಧಿಗಳಿಂದ ಶಾಸರಿಗೆ ತೀವ್ರವಾದ ಒತ್ತಡ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಯೋಜನೆಗಳಡಿ ಗುರಿಗಳನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಹಾಗಿದ್ದಲ್ಲಿ, ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು ; (ನಿಗಮವಾರು ಮಾಹಿತಿ ನೀಡುವುದು)	ಅಯವ್ಯಯದಲ್ಲಿ ಒದಗಿಸಿದ ಅನುದಾನಕ್ಕೆ ಅನುಗುಣವಾಗಿ ನಿಗಧಿಪಡಿಸುವ ಗುರಿಗಳಿಗನುಗುಣವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ.
ಇ)	ಗುರಿಗಳನ್ನು ಹೆಚ್ಚಿಸಲು ಸಾಧ್ಯವಾಗದೇ ಇದ್ದಲ್ಲಿ ಕಾರಣಗಳೇನು; (ನಿಗಮವಾರು ಮಾಹಿತಿ ನೀಡುವುದು)	
ಈ)	ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ಜನಸಂಖ್ಯಾಧಾರಿತ ಜಾತಿಗನುಗುಣವಾಗಿ ಆಯಾ ನಿಗಮಗಳಲ್ಲಿ ಗುರಿಗಳನ್ನು ನಿಗದಿಪಡಿಸುವ ಕುರಿತು ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)	

.....2

ಉ)	ಜನಸಂಖ್ಯಾಧಾರಿತ ಜಾತಿಗನುಗುಣವಾಗಿ ಆಯಾ ನಿಗಮಗಳಲ್ಲಿ ಗುರಿಗಳನ್ನು ಹೆಚ್ಚಿಸಲು ಸಾಧ್ಯವಾಗದೇ ಇದ್ದಲ್ಲಿ ಆ ಯೋಜನೆಗಳನ್ನು ಕೈಬಿಡುವ ಕುರಿತು ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.
ಊ)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳು ಎಷ್ಟು; ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಿರುವ ಅರ್ಜಿಗಳೆಷ್ಟು; ನಿಗಧಿಪಡಿಸಿದ ಗುರಿ ಮತ್ತು ಸ್ವೀಕರಿಸಿದ ಅರ್ಜಿಗಳಿಗೆ ಅನುಗುಣವಾಗಿ ಹೇಗೆ ಆಯ್ಕೆ ಮಾಡಲಾಗುವುದು; ಆಯ್ಕೆ ಮಾಡಲು ಇರುವ ಮಾನದಂಡಗಳೇನು? (ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳು ,ಸ್ವೀಕರಿಸಿರುವ ಅರ್ಜಿಗಳು, ಸ್ವೀಕೃತ ಅರ್ಜಿಗಳಿಗನುಗುಣವಾಗಿ ಆಯ್ಕೆ ಮಾಡಲು ಇರುವ ಮಾನದಂಡಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.

ಸಂಖ್ಯೆ:ಹಿಂವಕ 771 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ-01

ವಿಧಾನ ಸಭೆಯ ಸದಸ್ಯರಾದ ಶ್ರೀ/ಶ್ರೀಮತಿ ಬೆಳ್ಳಿಪ್ರಕಾಶ್(ಕಡೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ- 472 ಕ್ಕೆ ನಿಗಮದ ಉತ್ತರ.

2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಮತ್ತು ಗುರಿಗಳ ವಿವರ ಈ ಕೆಳಕಂಡಂತಿದೆ.

ಡಿ.ದೇವರಾಜ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ.,

(ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಯೋಜನೆ	17920	8960.00
2	ಗಂಗಾ ಕಲ್ಯಾಣ ನೀರಾವರಿ ಯೋಜನೆ	4896	11750.00
3	ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)	750	750.00
4	ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ)	2992	2380.00
5	ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ	100	500.00
6	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	20000	2000.00
7	ಕೊಡವ ಸಮಾಜ ಅಭಿವೃದ್ಧಿ	-	1000.00
8	ಆಡಳಿತಾತ್ಮಕ ವೆಚ್ಚ	0	1600.00
	ಒಟ್ಟು	**46658**	**28940.00**

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿ.,

(ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಯೋಜನೆ	562	280.79
2	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	500	250.00
3	ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)	50	25.00
4	ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ)	29	29.00
5	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	250	50.00
6	ಆಡಳಿತಾತ್ಮಕ ವೆಚ್ಚ	-	5.00
	ಒಟ್ಟು	**1391**	**639.79**

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿ.,

(ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಯೋಜನೆ	638	313.08
2	ಗಂಗಾ ಕಲ್ಯಾಣ ನೀರಾವರಿ ಯೋಜನೆ	97	240.00
3	ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)	29	29.00
4	ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ)	35	25.00
5	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	250	50.00
6	ಆಡಳಿತಾತ್ಮಕ ವೆಚ್ಚ	-	125.00
	ಒಟ್ಟು	**1049**	**782.08**

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿ.,

(ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಯೋಜನೆ	380	190.00
2	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	423	211.39
3	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	100	20.00
4	ಆಡಳಿತಾತ್ಮಕ ವೆಚ್ಚ	-	100.00
	ಒಟ್ಟು	**903**	**521.39**

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ

ಕ್ರ. ಸಂ.	ಯೋಜನೆಗಳ ಹೆಸರು	ಗುರಿ	
		ಭೌತಿಕ	ಆರ್ಥಿಕ (ರೂ.ಲಕ್ಷಗಳಲಿ)
1	ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೇರವು ಯೋಜನೆ	50	50.00
2	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	200	200.00
3	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	200	100.00
4	ಅರಿವು ಶೈಕ್ಷಣಿಕ ಸಾಲ ಯೋಜನೆ	253	303.00
5	ಗಂಗಾ ಕಲ್ಯಾಣ ವೈಯಕ್ತಿಯ ನೀರಾವರಿ ಯೋಜನೆ	69	197.00
	ಒಟ್ಟು	772	850.00

ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ

ಕ್ರ. ಸಂ.	ಯೋಜನೆಗಳ ಹೆಸರು	ಗುರಿ	
		ಭೌತಿಕ	ಆರ್ಥಿಕ (ರೂ.ಲಕ್ಷಗಳಲಿ)
1	ಗಂಗಾ ಕಲ್ಯಾಣ ನೀರಾವರಿ ಯೋಜನೆ	174	400.00
2	2021-22ನೇ ಸಾಲಿನ ಗಂಗಾ ಕಲ್ಯಾಣ ನೀರಾವರಿ ಯೋಜನೆ(ಭೌತಿಕ ಗುರಿ-32)	-	80.00
3	ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆ	600	300.00
4	ಅರಿವು ಶೈಕ್ಷಣಿಕ ಸಾಲ ಯೋಜನೆ	76	50.00
5	ಬ್ಯಾಂಕ್ ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ(ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಸಾಲ ಯೋಜನೆ)	200	50.00
6	ಅಮೃತ ಮುನ್ನಡೆ	-	100.00
	ಒಟ್ಟು	1050	1100.00

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ

(ಲಕ್ಷ ರೂ.ಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಸ್ವಯಂ ಉದ್ಯೋಗ ಸಾಲ ಯೋಜನೆ	1280	640.00
2	ಗಂಗಾ ಕಲ್ಯಾಣ ನೀರಾವರಿ ಯೋಜನೆ (2022-23)	174	369.00
3	ಗಂಗಾ ಕಲ್ಯಾಣ ನೀರಾವರಿ ಯೋಜನೆ (2021-22)	32	81.00
3	ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)	80	80.00
4	ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ)	137	105.00
5	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	375	75.00
6	ಆಡಳಿತಾತ್ಮಕ ವೆಚ್ಚ		150.00
	ಒಟ್ಟು	2078	1,500.00

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ

ಕ್ರ. ಸಂ	ಯೋಜನೆಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ	ಆರ್ಥಿಕ
1	ಬಸವ ಬೆಳಗು	1793	1793.00
2	ವಿದೇಶ ವಿದ್ಯಾ ವಿಕಾಸ	224	784.00
3	ಕಾಯಕ ಕಿರಣ	1344	1344.00
3	ಜೀವಜಲ	1586	4247.00
4	ಸ್ವ ಸಹಾಯ ಸಂಘಗಳಿಗೆ ಉತ್ತೇಜನ	3360	504.00
5	ಪರಿಪೂರ್ಣದೆಡೆಗೆ	64	76.80
6	ಶರಣಸೇನೆ	160	51.20
7	ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ	10000	1000
	ಒಟ್ಟು	18531	19550.00

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮಗಳ ಹೆಸರು	ನಿಗದಿಪಡಿಸಿದ ಗುರಿ	
		ಭೌತಿಕ ಗುರಿ	ಆರ್ಥಿಕ
1.	ಜೀಜಾವು-ಜಲಬಾಗ್ಯ ಯೋಜನೆ (ಗಂಗಾ ಕಲ್ಯಾಣ ನೀರಾವಿ ಯೋಜನೆ	960	2400.00
2.	ಶ್ರೀ ಶಹಜೀರಾಜೇ ಸಮ್ಮೃದ್ಧಿ ಯೋಜನೆ (S.S.R.S.Y) ಸ್ವಯಂ ಉದ್ಯೋಗ, ನೇರಸಾಲ ಮತ್ತು ಸಹಾಯಧನ ಯೋಜನೆ	6106	3,853.00
4.	ಅಮೃತ್ ಯೋಜನೆ (ಅಮೃತ್ ಮುನ್ನಡೆ)	-	1000.00
5.	ಅರಿವು ಶೈಕ್ಷಣಿಕ ಸಾಲ ಯೋಜನೆ	250	1000.00
6.	ಶ್ರೀ ಷಹಾಜೀರಾಜೇ ಭೋಸಲೆ ಸ್ಮೃತಿಸ್ಥಳ (ಸಮಾಧಿ)ಮತ್ತು ಕೊಪ್ಪಳ ಜಿಲ್ಲೆ-ಕನಕಗಿರಿಯಲ್ಲಿರುವ ಶ್ರೀ ಸಂಬಾಜಿರಾಜೇ ಭೋಸಲೆ ಸ್ಮೃತಿಸ್ಥಳ	-	200.00
7.	ವಿದೇಶಿ ಸಾಲ ಯೋಜನೆ	100.00	1000.00
8.	ಮರಾಠ ಮಿಲ್ಟ್ರಿ ಹೋಟಲ್	40	100.00
9.	ನಿಮಗದ ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ನಿಗಮದ ಯೋಜನಜೆಗಳ ಬಗ್ಗೆ ಅರಿವು ಮೂಡಿಸುವ (ಓರಿಯಂಟೇಶನ್) ಕಾರ್ಯಕ್ರಮದ ವೆಚ್ಚ	-	20.00
	ಒಟ್ಟು	11092	10000.00

ಕರ್ನಾಟಕ ಒಕ್ಕಲಿಗ ಸಮುದಾಯಗಳ ಅಭಿವೃದ್ಧಿ ನಿಗಮ

ಕ್ರ. ಸಂ.	ಯೋಜನೆಗಳ ಹೆಸರು	ಗುರಿ (ರೂ.ಕೋಟಿಗಳಲ್ಲಿ)	
		ಆರ್ಥಿಕ(	ಭೌತಿಕ
1	ನಿರುದ್ಯೋಗಿ ಯುವಕರಿಗೆ ಟೂರಿಷ್ಟ ಟ್ಯಾಕ್ಸಿ/ ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆ	15.36	512
2	ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಲ್ಲಿ ನಿರುದ್ಯೋಗಿ ಯುವಕ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ '	10.00	10000
3	ಒಕ್ಕಲಿಗರ ಸ್ವಯಂ ಉದ್ಯೋಗ ಯೋಜನೆ	26.55	3100
4	ಗಂಗಾ ಕಲ್ಯಾಣ ಯೋಜನೆ	41.00	-

ಅನುಬಂಧ-2

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳು ಹಾಗೂ ಸ್ವೀಕರಿಸಿದ ಅರ್ಜಿಗಳು ಈ ಕೆಳಕಂಡಂತಿದೆ.

ಕ್ರ. ಸಂ.	ಯೋಜನೆಗಳ ಹೆಸರು	ಗುರಿ		ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
		ಭೌತಿಕ	ಆರ್ಥಿಕ	
1	ಸ್ವಯಂ ಉದ್ಯೋಗ ಸಾಲ ಯೋಜನೆ	72	36.00	149
2	ಗಂಗಾ ಕಲ್ಯಾಣ ನೀರಾವರಿ ಯೋಜನೆ	25	50.00	45
3	ಅರಿವು ಶೈಕ್ಷಣಿಕ ಸಾಲ ಯೋಜನೆ	3	3.00	7
ಒಟ್ಟು		**100**	**89.00**	**201**

ಮೇಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೇಲ್ಕಂಡ ಯೋಜನೆಗಳಡಿಯಲ್ಲಿ ಆಯಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗುವ ಆಯ್ಕೆ ಸಮಿತಿ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶೇ.33ರಷ್ಟು ಮಹಿಳೆಯರಿಗೆ ಮತ್ತು ಶೇ.5ರಷ್ಟು ಅಂಗವಿಕಲರಿಗೆ ಅದರಲ್ಲಿ ಕಡ್ಡಾಯವಾಗಿ ಶೇ.2.5ರಷ್ಟು ಮಹಿಳಾ ಅಂಗವಿಕಲರನ್ನು ಆಯ್ಕೆ ಮಾಡಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ ಲಾಟರಿ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಗಳಲ್ಲಿ ಜಿಲ್ಲಾವಾರು ಗುರಿಯನ್ನು ನಿಗಧಿ ಪಡಿಸಲಾಗಿರುತ್ತದೆ.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಜಿಲ್ಲಾವಾರು ಗುರಿ ನಿಗಧಿಪಡಿಸಿದ್ದು, ಹಾಗೂ 2022-23ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಗೆ ಒಟ್ಟು ಭೌತಿಕ 14 ಆರ್ಥಿಕ ರೂ.14.50 ಲಕ್ಷಗಳ ಗುರಿ ನಿಗದಿಪಡಿಸಿದ್ದು, ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.

ಕ್ರ.ಸ.	ಯೋಜನ ಹೆಸರು	ಜಿಲ್ಲೆಗಳಿಂದ ಸ್ವೀಕರಿಸಿದ ಅರ್ಜಿ ಸಂಖ್ಯೆ	ಕ.ವಿ.ಸಾ.ಕ್ಷೇತ್ರದ ಡಿ ಸ್ವೀಕರಿಸಿದ ಅರ್ಜಿಗಳ ವಿವರ	ಜಿಲ್ಲಾವಾರು ನಿಗದಿಪಡಿಸಿದ ಗುರಿ(ರೂ.ಲಕ್ಷಗಳಲ್ಲಿ)	
				ಭೌತಿಕ	ಆರ್ಥಿಕ
1.	ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಸಾಲ ಯೋಜನೆ	4	0	1	1.00
2.	ಸ್ವಯಂ ಉದ್ಯೋಗ ಸಾಲ ಯೋಜನೆ	49	2	5	5.00
3.	ಅಮೃತ ಮುನ್ನಡೆ ಯೋಜನೆ	5	0	5	2.50
4.	ಅರಿವು ಶೈಕ್ಷಣಿಕ ಸಾಲ ಯೋಜನೆ	7	0	1	1.00
5.	ಗಂಗಾ ಕಲ್ಯಾಣ ನೀರಾವರಿ ಯೋಜನೆ	15	6	2	5.00
	ಒಟ್ಟು	**80**	**8**	**14**	**14.50**

ಮೇಲ್ಕಂಡ ಯೋಜನೆಯ ಮಾರ್ಗಸೂಚಿಗಳನ್ವಯ ಫಲಾನುಭವಿಗಳನ್ನು ಆಯಾ ಜಿಲ್ಲಾ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು.

1. ಅರ್ಜಿದಾರರು ಹಿಂದುಳಿದ ವರ್ಗಗಳ ಪ್ರವರ್ಗ 2ಎರಡಿ ಬರುವ ವಿಶ್ವಕರ್ಮ ಹಾಗೂ ಅದರ ಉಪಜಾತಿಗಳಿಗೆ ಸೇರಿದವರಾಗಿರಬೇಕು.
2. ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರ ಮತ್ತು ಅವರ ಕುಟುಂಬ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮಾಂತರ ಪ್ರದೇಶದವರಿಗೆ ರೂ.98,000/- ಹಾಗೂ ನಗರ ಪ್ರದೇಶದವರಿಗೆ ರೂ.1,20,000/- ನಿಗಧಿಪಡಿಸಿದೆ (ಅರಿವು ಶೈಕ್ಷಣಿಕ ಯೋಜನೆ ಹೊರತುಪಡಿಸಿ).
3. ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು.
4. ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಪಡೆಯಲು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಜಮೀನಿಗೆ ನೀರಾವರಿ ಸೌಲಭ್ಯ ಹೊಂದಿರಬಾರದು.
5. ಪಂಚವೃತ್ತಿ ಸಾಲ ಯೋಜನೆಯಡಿ ಸೌಲಭ್ಯ ಪಡೆಯಲು ಯೋಜನೆಯಲ್ಲಿ ಗುರಿತಿಸಿರುವ ವೃತ್ತಿಗಳನ್ನು ನಿರ್ವಹಿಸುತ್ತಿರಬೇಕು.
6. ಅರ್ಜಿದಾರರು ಮತ್ತು ಅವರ ಕುಟುಂಬದ ಸದಸ್ಯರು ಕಳೆದ ಯಾವುದೇ ವರ್ಷಗಳಲ್ಲಿ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ/ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ).ದಿಂದ ಯಾವುದೇ ಸಾಲ ಮತ್ತು ಸೌಲಭ್ಯಗಳನ್ನು ಪಡೆದಿರಬಾರದು.

<u>ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ</u>

ಕ್ರ.ಸಂ	ಯೋಜನ ಹೆಸರು	ಜಿಲ್ಲೆಗಳಿಂದ ಸ್ವೀಕರಿಸಿದ ಅರ್ಜಿ ಸಂಖ್ಯೆ	ಕ.ವಿ.ಸಾ.ಕ್ಷೇತ್ರವಡಿ ಸ್ವೀಕರಿಸಿದ ಅರ್ಜಿಗಳ ವಿವರ	ಜಿಲ್ಲಾವಾರು ನಿಗದಿಪಡಿಸಿದ ಗುರಿ(ರೂ.ಲಕ್ಷಗಳಲ್ಲಿ)	
				ಭೌತಿಕ	ಆರ್ಥಿಕ
1.	ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಸಾಲ ಯೋಜನೆ	4	0	1	1.00
2.	ಸ್ವಯಂ ಉದ್ಯೋಗ ಸಾಲ ಯೋಜನೆ	49	2	5	5.00
3.	ಅಮೃತ ಮುನ್ನಡೆ ಯೋಜನೆ	5	0	5	2.50
4.	ಅರಿವು ಶೈಕ್ಷಣಿಕ ಸಾಲ ಯೋಜನೆ	7	0	1	1.00
5.	ಗಂಗಾ ಕಲ್ಯಾಣ ನೀರಾವರಿ ಯೋಜನೆ	15	6	2	5.00
	ಒಟ್ಟು	**80**	8	**14**	**14.50**

ಸ್ವೀಕೃತ ಅರ್ಜಿಗಳನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು.

<u>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ</u>

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	ಗುರಿ		ಸ್ವೀಕರಿಸಿದ ಅರ್ಜಿಗಳು
		ಭೌತಿಕ	ಆರ್ಥಿಕ	
01	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	45	22.50	180
02	ಗಂಗಾ ಕಲ್ಯಾಣ	3	6.75	-
03	ಅರಿವು ಶೈಕ್ಷಣಿಕ	3	3.00	2
04	ಅಮೃತ ಮುನ್ನಡೆ ಯೋಜನೆ	18	3.60	-
	ಒಟ್ಟು	**69**	**35.85**	**182**

ಅನುಬಂಧ -2.

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

1. ಸ್ವಯಂ ಉದ್ಯೋಗ ಸಾಲ ಯೋಜನೆಗೆ ರೂಪಿಸಿರುವ ಮಾನ ದಂಡಗಳು:-

ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30.03.2002ರ ಸಂಖ್ಯೆ ಸಕಿ 225 ಬಿಸಿಎ 2000 ಆದೇಶದಲ್ಲಿ ಗುರ್ತಿಸಿದ ಪ್ರವರ್ಗ-1 ರಲ್ಲಿ 6(a) ಯಿಂದ 6(ak) ಬರುವ ಬೆಸ್ತ, ಕೋಳಿ, ಕಬ್ಬಲಿಗ ಮೊಗವೀರ, ಗಂಗಾಮತ ಮತ್ತು ಇದರ ಉಪಜಾತಿಗಳಿಗೆ ಸೇರಿದವರಾಗಿರಬೇಕು.

- ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ 98,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ 1,20,000/-ಗಳನ್ನು ಮೀರಿರಬಾರದು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯೊಳಗಿರಬೇಕು.
- ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ವಿಕಲಚೇತನರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.
- ಈ ಯೋಜನೆಯಲ್ಲಿ ಒಬ್ಬ ವ್ಯಕ್ತಿ ಅಥವಾ ಸ್ವ-ಸಹಾಯ ಗುಂಪುಗಳ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸೌಲಭ್ಯ ಒದಗಿಸುವುದು.
- ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.
- ಫಲಾನುಭವಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡುವುದು.
- ಆಯಾ ಜಿಲ್ಲೆಗೆ ನಿಗದಿಪಡಿಸಿದ ಗುರಿಯನ್ವಯ ಆಯ್ಕೆ ಮಾಡಲಾಗುವುದು.

2. ಗಂಗಾ ಕಲ್ಯಾಣ ನೀರಾವರಿ ಯೋಜನೆ:-

- ದಿನಾಂಕ 30.03.2002ರ ಸಂಖ್ಯೆ ಸಕಇ 225 ಬಿಸಿಎ 2000 ಆದೇಶದಲ್ಲಿ ಗುರ್ತಿಸಿದ ಪ್ರವರ್ಗ-1 ರಲ್ಲಿ 6(a) ಯಿಂದ 6(ak) ಬರುವ ಬೆಸ್ತ, ಕೋಳಿ, ಕಬ್ಬಲಿಗ ಮೊಗವೀರ, ಗಂಗಾಮತ ಮತ್ತು ಇದರ ಉಪಜಾತಿಗಳಿಗೆ ಸೇರಿರಬೇಕು.
- ಅರ್ಜಿದಾರರು ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಕ್ಕೆ ಸೇರಿದವರಾಗಿದ್ದು, ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.
- ಅರ್ಜಿದಾರರು ವ್ಯವಸಾಯ ವೃತ್ತಿಯನ್ನು ನಿರ್ವಹಿಸುತ್ತಿರಬೇಕು.
- ಅರ್ಜಿದಾರರ ವಾರ್ಷಿಕ ವರಮಾನವು ಗ್ರಾಮಾಂತರ ಪ್ರದೇಶದಲ್ಲಿ ರೂ.98,000/-ಗಳನ್ನು ಮೀರಿರಬಾರದು.
- ಜಂಟಿ ಖಾತೆಯಲ್ಲಿರುವ ಅರ್ಹ ಅರ್ಜಿದಾರರನ್ನು ಪರಿಗಣಿಸಬಹುದಾಗಿದೆ.
- ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- ನಿಗಮದ ನಿರ್ದೇಶಕ ಮಂಡಳಿಯು ಕಾಲ ಕಾಲಕ್ಕೆ ವಿಧಿಸುವ ಅರ್ಹತೆಗಳನ್ನು ಹೊಂದಿದವರಾಗಿರಬೇಕು.
- ಆಯಾ ಜಿಲ್ಲೆಗೆ ನಿಗದಿಪಡಿಸಿದ ಗುರಿಯನ್ವಯ ಆಯ್ಕೆ ಮಾಡಲಾಗುವುದು.

3. **'ಅರಿವು'** **ಶೈಕ್ಷಣಿಕ** ಸಾಲ [illegible] ಮಾನದಂಡಗಳು:-

- ವಿದ್ಯಾರ್ಥಿಯು ಕರ್ನಾಟಕ [illegible] ಯಾಗಿರಬೇಕು ಮತ್ತು ರಾಜ್ಯ ಸರ್ಕಾರವು ಅಂಗೀಕರಿಸಿ ಅಧಿಸೂಚಿಸಿರುವ ಹಿಂದುಳಿದ [illegible] ಬರುವ ಬೆಸ್ತ, ಕೋಲಿ, ಕಬ್ಬಲಿಗ, ಗಂಗಾಮತ, ಮೊಗವೀರ ಮತ್ತು ಇದರ [illegible]
- ವಿದ್ಯಾರ್ಥಿಯ ವಯಸ್ಸು [illegible]
- ವಿದ್ಯಾರ್ಥಿ ಮತ್ತು ಅವರ [illegible] ಆದಾಯವು ಎಲ್ಲಾ ಮೂಲಗಳಿಂದ ರೂ.3.50ಲಕ್ಷಗಳ ಮೀರಿರಬಾರದು.
- ವಿದ್ಯಾರ್ಥಿಯು ಸರ್ಕಾರಿ [illegible] ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾ[illegible] ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು.
- ವಿದ್ಯಾರ್ಥಿಯು ಶೈಕ್ಷಣಿಕ [illegible] ಬ್ಯಾಂಕ್/ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿರಬಾರದು.
- ಫಲಾನುಭವಿಗಳನ್ನು ಆಯಾ [illegible] ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ [illegible]
- ಆಯಾ ಜಿಲ್ಲೆಗೆ ನಿಗದಿಪಡಿಸಿದ [illegible] ಮಾಡಲಾಗುವುದು.

ಅನುಬಂಧ-0 [illegible]

1. ಬಸವ ಬೆಳಗು (ವೃತ್ತಿಪರ ಕೋರ್ಸ್‌ಗಳಿಗೆ ಆರ್ಥಿಕ ನೆರವು)

ಅರ್ಹತೆ:

- ಅರ್ಜಿದಾರರು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿರಬೇಕು ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
- ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ (ಸಿ.ಇ.ಟಿ/ನೀಟ್/ಜೆಇಇ ಇತ್ಯಾದಿ) ಪದವಿ/ಸ್ನಾತಕೋತ್ತರ ಪದವಿ ಕೋರ್ಸ್ ಗಳಿಗೆ ಪ್ರವೇಶ ಪಡೆದಿರಬೇಕು
- ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 3.50 ಲಕ್ಷಗಳ ಮಿತಿಯಲ್ಲಿರಬೇಕು.
- ತಾಂತ್ರಿಕೇತರ ಪದವಿ / ಸ್ನಾತ್ತಕೋತ್ತರ ಕೋರ್ಸ್‌ಗಳಿಗೆ ಆಯ್ಕೆಯಾಗಿರುವ ಅಭ್ಯಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದು.

2. ವಿದೇಶ ವಿದ್ಯಾವಿಕಾಸ (ಮಾನ್ಯತೆ ಪಡೆದಿರುವಂತಹ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು)

ಅರ್ಹತೆ:

- ಆದಾಯ ಮಿತಿ: ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 6 ಲಕ್ಷಗಳು.
- ವಯೋಮಿತಿ: ಅಭ್ಯರ್ಥಿಯ ವಯಸ್ಸು 25 (ಸ್ನಾತಕೊತ್ತರ ಪದವೀಧರರಿಗೆ) ಮತ್ತು ಪಿಎಚ್.ಡಿ ಪದವೀಧರರಿಗೆ 27 ವರ್ಷಗಳ ವಯೋಮಿತಿಯಲ್ಲಿರಬೇಕು.
- ಅರ್ಹತಾ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.
- ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ ಪತ್ರ ವೀಸಾ, ಪಾಸ್ಪೋರ್ಟ್, ಏರ್‌ಟಿಕೇಟ್ ಪ್ರತಿ ಒದಗಿಸಬೇಕು.
- ಸಾಲದ ಭದ್ರತೆಗೆ ವಿದ್ಯಾರ್ಥಿಯ ತಂದೆ ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯನ್ನು ನಿಗಮಕ್ಕೆ ಆಧಾರ ಮಾಡಬೇಕು (ಕೊಲ್ಯಾಟರಲ್ ಸೆಕ್ಯೂರಿಟಿ).

3. ಪರಿಪೂರ್ಣದೆಡೆಗೆ (ಸಂಶೋಧನಾ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಆರ್ಥಿಕ ನೆರವು)

ಅರ್ಹತೆ:

- ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.
- ಕುಟುಂಬದ ಒಟ್ಟು ವಾರ್ಷಿಕ ಆದಾಯ ಮಿತಿ ರೂ.3.50 ಲಕ್ಷಗಳು.
- ಅರ್ಜಿದಾರರು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿರಬೇಕು ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
- ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ/ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪೂರ್ಣಾವಧಿ (fulltime) ಪಿಹೆಚ್.ಡಿ, ಅಧ್ಯಯನದಲ್ಲಿ ತೊಡಗಿರಬೇಕು. ಈ ಸೌಲಭ್ಯವನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಯು ಭಾರತ

ಸರ್ಕಾರ/ಕರ್ನಾಟಕ ಸರ್ಕಾರ/ವಿಶ್ವವಿದ್ಯಾಲಯ ಅಥವಾ ಇತರೆ ಯಾವುದೇ ಸಂಸ್ಥೆಗಳಿಂದ ಮಾಸಿಕ ವ್ಯಾಸಂಗ ವೇತನ / ಫೆಲೋಶಿಫ್‌ಗೆ ಆಯ್ಕೆಯಾಗಿರಬಾರದು.

- ವ್ಯಾಸಂಗ ಪ್ರೋತ್ಸಾಹಧನ /ಫೆಲೋಶಿಪ್ ಅನ್ನು ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಒದಗಿಸತಕ್ಕದ್ದಲ್ಲ.

4. ಜೀವಜಲ (ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಆರ್ಥಿಕ ನೆರವು)

ಅರ್ಹತೆ:

- ಅರ್ಜಿದಾರರು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿರಬೇಕು ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
- ಹಾಲಿ ಜಮೀನುಗಳಿಗೆ ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿಲ್ಲದೆ ಮಳೆ ಆಧಾರಿತವಾಗಿ ಖುಷ್ಕಿಯಾಗಿರಬೇಕು.
- ವೀರಶೈವ ಲಿಂಗಾಯತ ಸಮುದಾಯದ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಯಲ್ಲಿ ಒಳಪಡುವ ನಿಗಮಗಳಲ್ಲಿ ಬೇರೆ ಯಾವುದಾದರು ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸೌಲಭ್ಯ ಪಡೆದಿರಬಾರದು.
- ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/- ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳ ಮಿತಿಯಲ್ಲಿರಬೇಕು.

5. ಸ್ವಸಹಾಯ ಸಂಘಗಳಿಗೆ ಉತ್ತೇಜನ (ಸ್ವಸಹಾಯ ಸಂಘಗಳಿಗೆ ಸಾಲ ಮತ್ತು ಸಹಾಯಧನ)

ಅರ್ಹತೆ:

- ಈ ಯೋಜನೆಯಲ್ಲಿ ಸಾಲ ಪಡೆಯ ಬಯಸುವ ಅರ್ಜಿದಾರರು ಯಾವುದಾದರು ಆರ್ಥಿಕ ಚಟುವಟಿಕೆ ಕೈಗೊಳ್ಳಬೇಕು.
- ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದ್ದು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡಿರಬೇಕು ಸ್ವಸಹಾಯ ಸಂಘದ ಮುಖೇನ ಸದಸ್ಯರಿಗೆ ಸೌಲಭ್ಯ ಒದಗಿಸಲಾಗುವುದು.
- ಸ್ವಸಹಾಯ ಸಂಘವು ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಶಾಖೆಯಲ್ಲಿ ಖಾತೆ ಹೊಂದಿರಬೇಕು.

6. ಕಾಯಕಕಿರಣ (ವೃತ್ತಿ ಕಸುಬುದಾರರು ಹಾಗೂ ಕುಶಲಕರ್ಮಿಗಳಿಗೆ ಸಾಲ ಮತ್ತು ಸಹಾಯಧನ)

ಅರ್ಹತೆ:

- ಅರ್ಜಿದಾರರು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿರಬೇಕು ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
- ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/- ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳ ಮಿತಿಯಲ್ಲಿರಬೇಕು.
- ಅರ್ಜಿದಾರರ ವಯಸ್ಸು 18 ವರ್ಷ ಮೇಲ್ಪಟ್ಟು 55 ವರ್ಷ ಒಳಗಿನವರಾಗಿರಬೇಕು.
- ಕಳೆದ 03 ವರ್ಷಗಳಿಂದ ಸರ್ಕಾರದ/ ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಹಾಯಧನ / ಸಾಲ ಪಡೆದವರು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಲ್ಲ.
- ಒಂದು ಕುಟುಂಬದಲ್ಲಿ ಒಬ್ಬ ಅಭ್ಯರ್ಥಿಗೆ ಮಾತ್ರ ಅವಕಾಶವಿರುತ್ತದೆ.

7. ಶರಣ ಸೇನೆ (ಸೇನೆ ಹಾಗೂ ಸಿವಿಲ್ ಪೋಲಿಸ್ ಸೇವೆಗೆ ಸೇರಲು ಇಚ್ಛಿಸುವ ಅಭ್ಯರ್ಥಿಗಳಿಗೆ ತರಬೇತಿ)

ಅರ್ಹತೆ:

- ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.
- ವಯೋಮಿತಿ: ಅಭ್ಯರ್ಥಿಯು ಗರಿಷ್ಠ ವಯೋಮಿತಿ 17 ರಿಂದ 35 ವರ್ಷಗಳು.
- ಅರ್ಜಿದಾರರು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿರಬೇಕು ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
- ಕುಟುಂಬದ ವಾರ್ಷಿಕ ವರಮಾನ ರೂ. 5,00,000/-ಗಳ ಮಿತಿಯಲ್ಲಿರಬೇಕು.

(ಅಮರೇಗೌಡ ಹೆಚ್ ಮಾಲಿಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವೀರಶೈವ ಲಿಂಗಾಯತ
ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕ [illegible] ಅಭಿವೃದ್ಧಿ ನಿಗಮ

- 2021-22 ಹಾಗೂ 2022-23 ನೇ ಸಾಲಿನ [illegible] ಕ್ಷೇತ್ರಕ್ಕೆ ನಿಗಧಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು 2022-23 ನೇ ಸಾಲಿನ [illegible] ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು 15.12.2022 ಅಂತಿಮ [illegible] ಸಲ್ಲಿಕೆಯಾದ ಅರ್ಜಿಗಳನ್ನು ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ [illegible] ಅಭಿವೃದ್ಧಿ ನಿಗಮರವರು ಪರಿಶೀಲಿಸಿ ನಿಗಧಿಪಡಿಸಿದ ಗುರಿಗನುಗುಣವಾಗಿ [illegible] ಫಲಾನುಭವಿಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, [illegible] ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುವುದು.

ಕರ್ನಾಟಕ [illegible] ಅಭಿವೃದ್ಧಿ ನಿಗಮ

2022-23ನೇ ಸಾಲಿನಲ್ಲಿ ಜೀಜಾವ್ರು [illegible] ಗಂಗಾ ಕಲ್ಯಾಣ) ಮತ್ತು ಸ್ವಯಂ ಉದ್ಯೋಗ ಯೋಜನೆಗಳಿಗೆ ಫಲಾನುಭವಿ [illegible] ವಿವರ ಕೆಳಕಂಡಂತಿದೆ.

ಕ್ರ. ಸಂ	ಯೋಜನೆ	[illegible] ಗುರಿ (ರೂ [illegible])		ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
		[illegible]	ಆರ್ಥಿಕ	
1	ಜೀಜಾವ್ರು ಜಲ [illegible] (ಗಂಗಾ ಕಲ್ಯಾಣ	[illegible]	2.00	
2	ಸ್ವಯಂ ಉದ್ಯೋಗ [illegible]	[illegible]	31.00	66

ಕರ್ನಾಟಕ [illegible] ಅಭಿವೃದ್ಧಿ ನಿಗಮ

ಕ್ರ. ಸಂ	ಯೋಜನೆ	[illegible] ಗುರಿ (ರೂ ಲಕ್ಷಗಳಲ್ಲಿ)		ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
		[illegible]	ಆರ್ಥಿಕ	
1	ಸ್ವಯಂ ಉದ್ಯೋಗ [illegible]		17.50	92
2	ಗಂಗಾ ಕಲ್ಯಾಣ ಯೋಜನೆ	[illegible]	20.00	20
3	ಟೂರಿಸ್ಟ್ ಟ್ಯಾಕ್ಸಿ [illegible] ಯೋಜನೆ	[illegible]	9.00	15

[illegible]

ಯೋಜನೆ	[illegible]	ಆರ್ಥಿಕ ಗುರಿ	ಸ್ವೀಕರಿಸಿದ ಅರ್ಜಿ ಸಂಖ್ಯೆ
ಸ್ವಯಂ ಉದ್ಯೋಗ-ನೇರಸಾಲ ಯೋಜನೆ	[illegible]	[illegible]	162
ದ್ವಿ/ತ್ರಿಚಕ್ರ ವಾಹನ ಯೋಜನೆ	[illegible]	9.50	04
ಉದ್ಯಮ ಶೀಲತಾ ಯೋಜನೆ	[illegible]	[illegible]	23
4 ಚಕ್ರದ ಸರಕು ವಾಹನ	[illegible]	3.50	48
ಗಂಗಾ ಕಲ್ಯಾಣ ಯೋಜನೆ	[illegible]	[illegible]	28

ವೈಯಕ್ತಿಕ ಫಲಾನುಭವಿ ಆಧಾರಿತ ಯೋಜನೆಗಳಿಗೆ ಅನುಸರಿಸುವ ಮಾನದಂಡಗಳ ವಿವರ

ನೇರಸಾಲ ಯೋಜನೆ

ನೇರಸಾಲ ಯೋಜನೆ :ಚಟುವಟಿಕೆಗಳು :- ಘಟಕ ವೆಚ್ಚ ರೂ. 1,00,000/-ಗಳ (ಗರಿಷ್ಟ ಸಹಾಯಧನ ರೂ.50,000/- ಸಾಲ ರೂ.50,000/-) ಸೌಲಭ್ಯವನ್ನು ನಿಗಮದಿಂದ ನೇರವಾಗಿ ಮಂಜೂರಾತಿ ಮಾಡಲಾಗುವುದು.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.

ಉದ್ಯಮಶೀಲತಾ ಯೋಜನೆ :

ಪರಿಶಿಷ್ಟ ಜಾತಿಯ ಲಂಬಾಣಿ/ಬಂಜಾರ/ಲಮಾಣಿ ಜನಾಂಗದ ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡು, ಆದಾಯ ಗಳಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿAದ ಮಂಜೂರಾದ ಸಾಲದ ಶೇ. 70 ರಷ್ಟು ಅಥವಾ ಗರಿಷ್ಠ ರೂ. 2.00 ಲಕ್ಷದವರೆಗೆ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಲಾಗುವುದು.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡೀತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಬ್ಯಾಂಕ್ ಕ್ಲೇಮ್‌ನೊಂದಿಗೆ ಹಣ ಬಿಡುಗಡೆಗೆ ಸಲ್ಲಿಸುವುದು.

ದ್ವಿ/ತ್ರಿಚಕ್ರ ಸರಕು ಸಾಗಾಣಿಕೆ ವಾಹನ ಯೋಜನೆ :

ಪರಿಶಿಷ್ಟ ಜಾತಿಯ ಲಂಬಾಣಿ/ಬAಜಾರ/ಲಮಾಣಿ ಜನಾಂಗದ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ಹಾಗೂ ಆತ್ಮ ವಿಶ್ವಾಸವನ್ನು ವೃದ್ದಿಸಲು ವಿದ್ಯುತ್ ಚಾಲಿತ/ಇತರೆ ದ್ವೀಚಕ್ರ ಸರಕು ವಾಹನಗಳನ್ನು ಖರೀದಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿAದ ಮಂಜೂರಾದ ಸಾಲದ ಶೇ. 70 ರಷ್ಟು ಅಥವಾ ಗರಿಷ್ಠ ರೂ. 0.50 ಲಕ್ಷದವರೆಗೆ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಿ ಬ್ಯಾಂಕ್ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮಾನದಂಡಗಳು

1. ಜಾತಿ ಪ್ರಮಾಣ ಪತ್ರ ಸಲ್ಲಿಸುವುದು.
2. ಅಭ್ಯರ್ಥಿಗಳು ನಗರ ಪ್ರದೇಶದವರಾಗಿದ್ದಲ್ಲಿ ರೂ.2.00 ಲಕ್ಷ ಮತ್ತು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.1.50 ಲಕ್ಷಗಳ ಒಳಗೆ ಆದಾಯ ಮಿತಿಯನ್ನು ಹೊಂದಿರತಕ್ಕದ್ದು ಹಾಗೂ ತಹಶೀಲ್ದಾರ್ ರವರಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
3. ದ್ವಿಚಕ್ರ ವಾಹನ ಚಾಲನಾ ಪರವಾನಗಿ ಹೊಂದಿರಬೇಕು.
4. ಕನಿಷ್ಟ 10ನೇ ತರಗತಿ ಉತ್ತೀರ್ಣರಾಗಿರಬೇಕು.
5. ವಯೋಮಿತಿ ಕನಿಷ್ಟ 21 ವರ್ಷ ಗರಿಷ್ಟ 50 ವರ್ಷ
6. ಇ-ಕಾರ್ಮಸ್ ನಲ್ಲಿ ಸರಕು ಮಾರಾಟ ಮಾಡುತ್ತಿರುವ ಬಗ್ಗೆ ಸ್ವಯಂ ಅಫಿಡವಿಟ್ ಅನ್ನು ಸಲ್ಲಿಸತಕ್ಕದ್ದು. .

4 ಚಕ್ರದ ಸರುಕು ಸಾಗಾಣಿಕೆ ವಾಹನ ಯೋಜನೆ :

ಪರಿಶಿಷ್ಟ ಜಾತಿಯ ಲಂಬಾಣಿ/ಬAಜಾರ/ಲಮಾಣಿ ಜನಾಂಗದ ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡು, ಆದಾಯ ಗಳಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿAದ ಮಂಜೂರಾದ ಸಾಲದ ಶೇ. 70 ರಷ್ಟು ಅಥವಾ ಸರಕು ವಾಹನಗಳಿಗೆ ಗರಿಷ್ಟ ರೂ.3.50 ಲಕ್ಷ ಸಹಾಯಧನ ನಿಗಮದಿಂದ ಮಂಜೂರು ಮಾಡಿ ಬ್ಯಾಂಕ್ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡೀತರ ಚೀಟಿ, ಭಾವಚಿತ್ರ, ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.

3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಬ್ಯಾಂಕ್ ಕ್ಲೇಮ್‌ನೊಂದಿಗೆ ಹಣ ಬಿಡುಗಡೆಗೆ ಸಲ್ಲಿಸುವುದು.

ಮೈಕ್ರೋಕ್ರೆಡಿಟ್ ಯೋಜನೆ

ಮಹಿಳೆಯರಲ್ಲಿ ಗುಂಪು ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮಹಿಳಾ ಗುಂಪುಗಳು ಸ್ವಯಂ ಉದ್ಯೋಗ ಕೈಗೊಂಡು ಆದಾಯ ಗಳಿಸಲು ಕನಿಷ್ಠ 10 ಸಂಖ್ಯೆಯ ಸದಸ್ಯರಿರುವ ನೋಂದಾಯಿತ ಮಹಿಳಾ ಸ್ವಸಹಾಯ ಸಂಘಗಳಿಗೆ ರೂ. 2.50 ಲಕ್ಷಗಳ (ಪ್ರತಿ ಸದಸ್ಯರಿಗೆ ರೂ.15,000/-ಗಳ ಸಹಾಯಧನ ಮತ್ತು ರೂ.10,000/-ಗಳ ಬೀಜಧನ) ಸೌಲಭ್ಯವನ್ನು ನಿಗಮದಿಂದ ಮಂಜೂರು ಮಾಡಲಾಗುವುದು

ಮಾನದಂಡಗಳು

1. ಸಂಘದ ನೊಂದಣಿ, ನವೀಕರಣ ಪಡೆಯುವುದು.
2. ಲಂಬಾಣಿ/ಬಂಜಾರ ಜನಾಂಗದ 18 ವರ್ಷ ಮೇಲ್ಪಟ್ಟ ಮಹಿಳಾ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಸಾಲ ಮಂಜೂರಾದ 30 ದಿನದೊಳಗಾಗಿ ಸಂಘಗಳಿಗೆ ಸಾಲ ಬಿಡುಗಡೆ ಮಾಡಿ ನಿಗದಿತ ನಮೂನೆಯಲ್ಲಿ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಸಲ್ಲಿಸುವುದು.
5. ಸಾಲ ಮರುಪಾವತಿ ಜವಾಬ್ದಾರಿ ವಹಿಸಿಕೊಳ್ಳುವ ಬಗ್ಗೆ ಸ್ವ ಸಹಾಯ ಸಂಘಗಳ ಕಾರ್ಯದರ್ಶಿಗಳಿಗೆ ಜವಾಬ್ದಾರಿ ವಹಿಸಿ ಛಾಪಾ ಕಾಗದದಲ್ಲಿ ಒಪ್ಪಂದ ಕರಾರು ಮಾಡಿಕೊಳ್ಳತಕ್ಕದ್ದು, ಪ್ರಾಮಿಸರಿ ನೋಟ್, ಕನ್ಸಿಡರೇಷನ್ ರಸೀದಿ, ವಾರಸುದಾರರನ್ನು ನೇಮಕ ಮಾಡುವ ಪತ್ರ ಹಾಗೂ ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್‌ನ್ನು ಸ್ವಸಹಾಯ ಸಂಘದ ಸದಸ್ಯರಿಂದ ಪಡೆಯುವುದು.
6. ಉಲ್ಲೇಖ(1)ರ ಸರ್ಕಾರ ಸುತ್ತೋಲೆಯಂತೆ ಕನಿಷ್ಠ 10 ಮಹಿಳೆಯರು ಸ್ವ ಸಹಾಯ ಗುಂಪಿಗೆ ಮಾತ್ರ ಹಣ ಬಿಡುಗಡೆ ಮಾಡತಕ್ಕದ್ದು, ಸದರಿ ಸ್ವಸಹಾಯ ಸಂಘವು ನೊಂದಣಿಯಾದ ಸಂಘ ಆಗಿರಬೇಕು.
7. ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.
8. ಒಬ್ಬ ಸದಸ್ಯರಿಗೆ ಒಟ್ಟು ರೂ. 25,000/- ರಂತೆ (ರೂ.15,000/- ಸಹಾಯಧನ ಮತ್ತು ರೂ. 10,000/- ಸಾಲ) ಒಟ್ಟು 10 ಸದಸ್ಯರಿಗೆ ಒಟ್ಟು ರೂ. 2.50 ಲಕ್ಷ ನೀಡುವುದು. ಒಂದು ವೇಳೆ
9. ಸಂಘದಲ್ಲಿ 10 ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಸದರಿ ಸಂಖ್ಯೆಗನುಗುಣವಾಗಿ ಸಾಲ ಸಹಾಯಧನ ನೀಡುವುದು.
10. ಸದರಿ ಸ್ವ ಸಹಾಯ ಸಂಘ ಆದಾಯ ಬರುವ ಆರ್ಥಿಕ ಚಟುವಟಿಕೆಗಳಾದ ಉತ್ಪಾದನಾ/ಸೇವಾ ಘಟಕಗಳನ್ನು ಕೈಗೊಳ್ಳತಕ್ಕದ್ದು

ಗಂಗಾ ಕಲ್ಯಾಣ ಯೋಜನೆ :

ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ ಖುಷ್ಕಿ ಜಮೀನಿಗೆ ರೂ. 3.50/4.50 ಲಕ್ಷಗಳ ಘಟಕ ವೆಚ್ಚದಲ್ಲಿ ಕೊಳವೆಬಾವಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು

ಮಾನದಂಡಗಳು

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಅರ್ಜಿದಾರರು ಪರಿಶಿಷ್ಟ ಲಂಬಾಣಿ ಜಾತಿಗೆ ಸೇರಿದವರಾಗಿರಬೇಕು.
3. ಸಣ್ಣ ಮತ್ತು ಅತೀ ಸಣ್ಣ ರೈತರ ಪ್ರಮಾಣ ಪತ್ರ ಇರಬೇಕು.
4. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಕನಿಷ್ಠ 1 ಎಕರೆ ಹೊಂದಿರಬೇಕು. ಹಾಗೂ ಇತರೆ ಜಿಲ್ಲೆಗಳಲ್ಲಿ 1.50 ಎಕರೆಯಿಂದ 5.00 ಎಕರೆ ವರೆಗೆ ಖುಷ್ಕಿ ಜಮೀನು ಹೊಂದಿರಬೇಕು.
5. ಅರ್ಜಿದಾರರು/ಕುಟುಂಬದ ಅವಲಂಬಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ/ಸರ್ಕಾರದಿಂದ ರೂ.1,00,000/ ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

1. ಅರ್ಜಿಗಳನ್ನು ಆಹ್ವಾನಿಸುವಾಗ ದಿನಾಂಕ ನಿಗದಿಪಡಿಸಿ ಸದರಿ ದಿನಾಂಕದೊಳಗೆ ಬಂದ ಅರ್ಜಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಬಾರದು ಮತ್ತು ಅವುಗಳನ್ನು ತಿರಸ್ಕರಿಸುವುದು.
2. ಬಂದಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಮುಂದೆ ಸಲ್ಲಿಸುವುದು ಮತ್ತು ಅರ್ಹರಾಗಿದ್ದಲ್ಲಿ ಮಾತ್ರ ಆಯ್ಕೆ ಮಾಡುವುದು.
3. ಅರ್ಜಿದಾರರು ಒಂದು ಬಾರಿಗಿಂತ ಹೆಚ್ಚಾಗಿ ಎರಡು ಮೂರು ಬಾರಿ ಅರ್ಜಿ ಸಲ್ಲಿಸಿದವರಿಗೆ ಮೊದಲನೇ ಆದ್ಯತೆ ನೀಡಿ ಆಯ್ಕೆ ಮಾಡುವುದು.
4. ಅರ್ಹ ಅಭ್ಯರ್ಥಿಗಳು ಹೆಚ್ಚಿಗೆ ಇದ್ದಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿ ಸೇರಿಸಿ ಮುಂದಿನ ಆಯ್ಕೆಯಲ್ಲಿ ಆದ್ಯತೆ ನೀಡುವುದು.
5. ವಿಧಾನಸಭಾ ಕ್ಷೇತ್ರಕ್ಕೆ ನೀಡಿದ ಗುರಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿವಿಧ ಜಾತಿಗಳ ಜನಸಂಖ್ಯೆಯ ಆಧಾರದ ಮೇಲೆ ಆಯ್ಕೆ ಮಾಡುವುದು ಅಂದರೆ ಬಡವರಲ್ಲಿ ಅತಿ ಬಡವರನ್ನು ಆಯ್ಕೆ ಮಾಡುವುದು.
6. ಆಯ್ಕೆ ಸಮಿತಿಯ ಆಯ್ಕೆ ಸಮಿತಿ ಸಭೆಯ ನಡವಳಿಗಳನ್ನು ವಿಡಿಯೋಗ್ರಾಫ್ ಮಾಡುವುದು.
7. ತಾಲ್ಲೂಕು ಮಟ್ಟದ ಸಮಿತಿ ಆಯ್ಕೆ ಪ್ರಕ್ರಿಯೆಯನ್ನು ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಒಳಗೆ ಪೂರ್ಣಗೊಳಿಸುವುದು. ಒಂದು ವೇಳೆ ಪೂರ್ಣಗೊಳಿಸದೇ ಇದ್ದಲ್ಲಿ ಅವುಗಳನ್ನು ಜಿಲ್ಲಾಧಿಕಾರಿಗಳು ಅಕ್ಟೋಬರ್ ತಿಂಗಳೊಳಗೆ ಆಯ್ಕೆ ಮಾಡುವುದು.
8. ಸದರಿ ಸಮಿತಿಯ ನಡವಳಿಯನ್ನು ಪಾರದರ್ಶಕವಾಗಿ ಯಾವುದೇ ಲೋಪ-ದೋಷಗಳು ಇಲ್ಲದೆ ಹೊರಡಿಸಬೇಕು. ಅದರಲ್ಲಿ ಲೋಪ-ದೋಷಗಳು ಇದ್ದಲ್ಲಿ ಸದರಿ ಸಮಿತಿಯ ಕಾರ್ಯದರ್ಶಿಗಳು ಹೊಣೆಗಾರರಾಗಿರುತ್ತಾರೆ.
9. ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಗ್ರಾಮವಾರು ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಮರುದಿನ ಪ್ರದರ್ಶಿಸುವುದು.
10. ಸದರಿ ಸಮಿತಿ ಅರ್ಜಿದಾರರ ದೂರುಗಳನ್ನು ಸಹ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು. ಸದರಿ ಸಮಿತಿ ಸಹ ಕೊನೆ ದಿನಾಂಕವನ್ನು ನಿಗದಿಪಡಿಸಿ ಅರ್ಜಿಗಳನ್ನು ಆಹ್ವಾನಿಸಿ ಆಯ್ಕೆ ಮಾಡುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 473
ಮಾನ್ಯ ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್
ಉತ್ತರಿಸುವ ದಿನಾಂಕ : 21-12-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿ ಈ ಯೋಜನೆಯು ಯಾವಾಗ ಜಾರಿಗೊಳಿಸಲಾಗುವುದು; ಈ ಯೋಜನೆಯ ಮಾರ್ಗಸೂಚಿಗಳೇನು; (ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಶೇ.50 ರಷ್ಟು ಪರಿಶಿಷ್ಟ ಜಾತಿ ಜನಾಂಗದವರು ವಾಸಿಸುತ್ತಿರುವ ಗ್ರಾಮಗಳಲ್ಲಿ ವಿವಿಧ ಇಲಾಖೆಗಳಿಂದ ಅನುಷ್ಠಾನ ಮಾಡುತ್ತಿರುವ ಯೋಜನೆಗಳನ್ನು ಒಳಗೊಂಡಂತೆ Convergence ಆಧಾರದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಮೂಲಕ ಸದರಿ ಗ್ರಾಮಗಳನ್ನು ಆದರ್ಶ ಗ್ರಾಮಗಳನ್ನಾಗಿ ಪರಿವರ್ತಿಸುವುದು ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯ ಉದ್ದೇಶವಾಗಿರುತ್ತದೆ. ರಾಜ್ಯದಲ್ಲಿ ಸದರಿ ಯೋಜನೆಯು 2016-17ನೇ ಸಾಲಿನಿಂದ ಜಾರಿಯಲ್ಲಿರುತ್ತದೆ.</td></tr>
<tr><td>ಆ)</td><td>ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನವೆಷ್ಟು; ಈ ಯೋಜನೆಯು ಜಾರಿಯಾದ ದಿನದಿಂದ ಇಲ್ಲಿಯವರೆಗೆ ರಾಜ್ಯದ ಎಷ್ಟು ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ; ಅನುಷ್ಠಾನಗೊಳಿಸಲಾದ ಕಾಮಗಾರಿಗಳಿಗೆ ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಗ್ರಾಮವಾರು ಮತ್ತು ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td><td rowspan="2">ಸದರಿ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತಿ ಗ್ರಾಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒದಗಿಸಬೇಕಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.
(ರೂ.ಲಕ್ಷಗಳಲ್ಲಿ)
<table>
<tr><th rowspan="2">ವರ್ಷ</th><th colspan="2">ಕೇಂದ್ರದ ಪಾಲು</th><th rowspan="2">ರಾಜ್ಯದ ಪಾಲು</th><th rowspan="2">ಒಟ್ಟು</th></tr>
<tr><th>ಅಭಿವೃದ್ಧಿ ವೆಚ್ಚ</th><th>ಆಡಳಿತಾತ್ಮಕ ವೆಚ್ಚ</th></tr>
<tr><td>2016-17</td><td>20.00</td><td>-</td><td>20.00</td><td>40.00</td></tr>
<tr><td>2018-19 ರಿಂದ 2021-22</td><td>20.00</td><td>1.00</td><td>20.00</td><td>41.00</td></tr>
</table>
ಸದರಿ ಯೋಜನೆಯಡಿ 2016-17ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಒಟ್ಟು 1349 ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಇ)</td><td>ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಇದುವರೆಗೂ ಹಣ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td></tr>
</table>

ಈ)	ಈ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದುವರೆಗೆ ಕೈಗೊಂಡ ಎಲ್ಲಾ ಕಾಮಗಾರಿಗಳ ಭೌತಿಕ, ಆರ್ಥಿಕ ಪ್ರಗತಿಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಈ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಮತ್ತು ಆರ್ಥಿಕ ಪ್ರಗತಿಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.
ಉ)	ಈ ಯೋಜನೆಯಡಿ ಕಾಮಗಾರಿ ಅನುಷ್ಠಾನಗೊಳಿಸಿದ ಕೆಲವರಿಗೆ ಬಿಲ್ಲನ್ನು ಪಾವತಿ ಮಾಡದಿರಲು ಕಾರಣಗಳೇನು; ಪಾವತಿ ಮಾಡಲು ಇರುವ ಪ್ರಕರಣಗಳು ಎಷ್ಟು; ಯಾವಾಗ ಪಾವತಿ ಮಾಡಲಾಗುವುದು; ಪಾವತಿ ಮಾಡುವ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)	ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಸದರಿ ಯೋಜನೆಯಡಿ ಆಯ್ಕೆಯಾಗಿರುವ ಕಾಮಗಾರಿಗಳ ಪೈಕಿ, ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ನಿರ್ಮಾಣ ಏಜೆನ್ಸಿಯಿಂದ ಸಲ್ಲಿಸಲಾಗಿರುವ ಎಲ್ಲಾ ಬಿಲ್‌ಗಳನ್ನು ಪಾವತಿ ಮಾಡಲಾಗಿರುತ್ತದೆ.

ಸಕಇ 747 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬೆಳ್ಳಿಪ್ರಕಾಶ್ (ಕಡೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 473 ಕ್ಕೆ ಅನುಬಂಧ-1

2016-17 ರಿಂದ 2021-22ನೇ ಸಾಲಿನವರೆಗೆ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.

ರೂ.ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲೆ	ಆಯ್ಕೆಯಾಗಿರುವ ಗ್ರಾಮಗಳ ಸಂಖ್ಯೆ	ಬಿಡುಗಡೆ ಮಾಡಿದ ಮೊತ್ತ
1	ಬೆಂಗಳೂರು ನಗರ	26	650.39
2	ಬೆಂಗಳೂರು ಗ್ರಾಮಾಂತರ	42	920.22
3	ಚಿತ್ರದುರ್ಗ	97	2813.53
4	ದಾವಣಗೆರೆ	75	1379.19
5	ಕೋಲಾರ	138	3245.73
6	ತುಮಕೂರು	61	1291.32
7	ರಾಮನಗರ	32	754.32
8	ಚಿಕ್ಕಬಳ್ಳಾಪುರ	62	1274.00
9	ಶಿವಮೊಗ್ಗ	67	1412.58
10	ಮೈಸೂರು	87	2582.14
11	ಚಾಮರಾಜನಗರ	49	1496.47
12	ಮಂಡ್ಯ	24	615.74
13	ಹಾಸನ	84	1672.42
14	ಚಿಕ್ಕಮಗಳೂರು	49	1048.80
15	ಕೊಡಗು	3	111.97
16	ಬೆಳಗಾವಿ	21	563.77
17	ವಿಜಯಪುರ	55	1152.74
18	ಬಾಗಲಕೋಟೆ	22	581.10
19	ಗದಗ	31	737.00
20	ಹಾವೇರಿ	49	1048.80
21	ಉತ್ತರ ಕನ್ನಡ	7	261.26
22	ಕಲಬುರಗಿ	96	2796.20
23	ರಾಯಚೂರು	29	702.35
24	ಕೊಪ್ಪಳ	20	546.45
25	ಬಳ್ಳಾರಿ	49	1168.80
26	ಬೀದರ್	30	719.68
27	ಯಾದಗಿರಿ	44	979.64
ಒಟ್ಟು		**1349**	**32526.61**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	474
ಸದಸ್ಯರ ಹೆಸರು	ಶ್ರೀ ದೊಡ್ಡನಗೌಡ ಜಿ ಪಾಟೀಲ್ (ಹುನಗುಂದ)
ಉತ್ತರಿಸುವ ದಿನಾಂಕ	21-12-2022
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರದ ಇಳಕಲ್ ತಾಲ್ಲೂಕು ಹೊಸದಾಗಿ ಪ್ರಾರಂಭ ಆಗಿದ್ದು, ರೈತ ಸಂಪರ್ಕ ಕೇಂದ್ರ ಮರು ವಿಂಗಡಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ರೈತ ಸಂಪರ್ಕ ಕೇಂದ್ರ ಮರು ವಿಂಗಡಣೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. ಮುಂದುವರೆದು, ಬಾಗಲಕೋಟೆ ಜಿಲ್ಲೆಯಲ್ಲಿ ಹೋಬಳಿಗೆ ಒಂದರಂತೆ ಒಟ್ಟು 18 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಹುನಗುಂದ ವಿಧಾನಸಭಾ ಕ್ಷೇತ್ರದ ಇಳಕಲ್ ತಾಲ್ಲೂಕು ಹೊಸದಾಗಿ ಪ್ರಾರಂಭ ಆಗಿದ್ದು, ಕರ್ನಾಟಕ ರಾಜ್ಯ ಪತ್ರ, ಕಂದಾಯ ಇಲಾಖೆಯ ಅಧಿಸೂಚನೆ (RD 131 BHUDAPU 2017, Bengaluru, Date:18.01.2018) ಪ್ರಕಾರ ಇಳಕಲ್ ಹೋಬಳಿಯ ಎಲ್ಲಾ ಗ್ರಾಮಗಳು, ಕರಡಿ ಮತ್ತು ಅಮೀನಗಡ ಹೋಬಳಿಗಳ ಆಯ್ದ ಗ್ರಾಮಗಳನ್ನು ಸೇರಿ ಇಳಕಲ್ ತಾಲ್ಲೂಕಿನ ಇಳಕಲ್ ಹೋಬಳಿಯನ್ನಾಗಿ ಘೋಷಣೆ ಮಾಡಲಾಗಿದೆ. ಸದರಿ ಅಧಿಸೂಚನೆ ಪ್ರಕಾರ ಇಳಕಲ್ ತಾಲ್ಲೂಕಿನಲ್ಲಿ ಒಂದೇ ಹೋಬಳಿ ಇರುವುದರಿಂದ ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99 ದಿ:29.06.2000 ರಂತೆ ಈಗಾಗಲೇ ಇಳಕಲ್ ಹೋಬಳಿಯಲ್ಲಿ ರೈತ ಸಂಪರ್ಕ ಕೇಂದ್ರ ಕಾರ್ಯನಿರ್ವಹಿಸುತ್ತಿದೆ.
ಆ	ಹಾಗಿದ್ದಲ್ಲಿ, ರೈತ ಸಂಪರ್ಕ ಕೇಂದ್ರ ಮರು ವಿಂಗಡಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಅನ್ವಯಿಸುವುದಿಲ್ಲ.

ಸಂಖ್ಯೆ: AGRI-ACT/269/ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	475
ಮಾನ್ಯ ಸದಸ್ಯರ ಹೆಸರು	:	ಶ್ರೀ ದೊಡ್ಡನಗೌಡ ಜಿ ಪಾಟೀಲ್
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರಿಗೆ ಹೊಸದಾಗಿ ವಿದ್ಯಾರ್ಥಿನಿಲಯ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಹೊಸದಾಗಿ ವಿದ್ಯಾರ್ಥಿನಿಲಯ ಮಂಜೂರಾತಿ ಬಗ್ಗೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.
ಆ)	ಹಾಗಿದ್ದಲ್ಲಿ, ಹೊಸದಾಗಿ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	

ಸಕಇ 748 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	490
ಮಾನ್ಯ ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್ ಜಾರಕಿಹೊಳಿ
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಅಂತರ್ ಜಾತಿ ವಿವಾಹ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಎಷ್ಟು:	ಕಳೆದ ಮೂರು ವರ್ಷಗಳಲ್ಲಿ ಅಂತರ್ ಜಾತಿ ವಿವಾಹ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ವಿವರ.

ಕ್ರ.ಸಂ	ಕಾರ್ಯಕ್ರಮದ ಹೆಸರು	2019-20	2020-21	2021-22	2022-23ನೇ (ನವೆಂಬರ್ 2022 ರ ಅಂತ್ಯಕ್ಕೆ
1	ಅಂತರ್ ಜಾತಿ	5020	4142	6079	1432

ಕ್ರ. ಸಂ	ಪ್ರಶ್ನೆ	ಉತ್ತರ
ಆ)	ಫಲಾನುಭವಿಗಳಿಗೆ ನೀಡಲಾದ ಸಹಾಯಧನದ ಮೊತ್ತವೆಷ್ಟು?	ಅಂತರ್ ಜಾತಿ ವಿವಾಹ ಯೋಜನೆಯಡಿ ಪ್ರೋತ್ಸಾಹಧನ ನೀಡಲಾದ ಫಲಾನುಭವಿಗಳ (ದಂಪತಿಗಳ) ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮದ ಹೆಸರು	2019-20	2020-21	2021-22	2022-23ನೇ (ನವೆಂಬರ್ 2022 ರ ಅಂತ್ಯಕ್ಕೆ
1	ಅಂತರ್ ಜಾತಿ	8951.74	9986.85	17169.22	3456.50

ಸಕಇ 751 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 476

ಸದಸ್ಯರ ಹೆಸರು : ಶ್ರೀ ದೊಡ್ಡನಗೌಡ ಜಿ. ಪಾಟೀಲ್ (ಹುನಗುಂದ)

ಉತ್ತರಿಸುವ ದಿನಾಂಕ : 21-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಾಗಲಕೋಟೆ ಜಿಲ್ಲೆಗೆ ಕೃಷಿ ಯಂತ್ರೋಪಕರಣಗಳಿಗಾಗಿ ಪ್ರಸಕ್ತ ವರ್ಷ ಮಂಜೂರು ಮಾಡಿರುವ ಅನುದಾನವೆಷ್ಟು; (ಮತಕ್ಷೇತ್ರವಾರು ವಿವರ ನೀಡುವುದು)	ಬಾಗಲಕೋಟೆ ಜಿಲ್ಲೆಯಲ್ಲಿ ಕೃಷಿ ಯಂತ್ರೋಪಕರಣಗಳಿಗಾಗಿ ಪ್ರಸಕ್ತ ವರ್ಷ ನವೆಂಬರ್-2022 ಅಂತ್ಯಕ್ಕೆ ರೂ.404.79 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಮತಕ್ಷೇತ್ರವಾರು ವಿವರ ಈ ಕೆಳಕಂಡಂತಿವೆ; (ಆರ್ಥಿಕ:ರೂ.ಲಕ್ಷಗಳಲ್ಲಿ)

ಕ್ರ.ಸಂ.	ಮತಕ್ಷೇತ್ರ	ಒಟ್ಟು
1.	ಬಾದಾಮಿ	55.37
2.	ಬಾಗಲಕೋಟೆ	52.98
3.	ಹುನಗುಂದ	71.16
4.	ಬೀಳಗಿ	87.52
5.	ಜಮಖಂಡಿ	46.36
6.	ಮುಧೋಳ	60.50
7.	ತೇರದಾಳ	30.90
ಒಟ್ಟು		404.79

During current year upto November-2022 Rs.404.79 Lakhs has been sanctioned to Bagalkot District for Farm Machineries.

Constituency - wise details are as below;

(Fin: Rs. in lakhs)

Sl.No.	Constituency	Total
1.	Badami	55.37
2.	Bagalkot	52.98
3.	Hunagund	71.16
4.	Bilagi	87.52
5.	Jamakhandi	46.36
6.	Mudhol	60.50
7.	Terdal	30.90
Total		404.79

ಆ)	ಸಾಮಾನ್ಯ ವರ್ಗದವರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ರಿಯಾಯಿತಿ ದರವನ್ನು ಹೆಚ್ಚಿಸಲಾಗುವುದು;	ಸರ್ಕಾರದ ಆದೇಶ ಸಂ:ಕೃಇ/63/ಕೃಮಸ/2015/ ಬೆಂಗಳೂರು, ದಿ:16.05.2015 & 05.09.2015 ಗಳನ್ವಯ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಎಲ್ಲಾ ವರ್ಗದ ರೈತರಿಗೆ ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ನೀಡಲಾಗುತ್ತಿದೆ. ಸಾಮಾನ್ಯ ವರ್ಗದವರಿಗೆ ಕೃಷಿ ಯಂತ್ರೋಪಕರಣಗಳ ರಿಯಾಯಿತಿ ದರವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. As per Government Order No:AGD/63/ASC/2015/ dated:16.05.2015 & 05.09.2015 under Farm Mechanization scheme. 50% subsidy is being provided for general category farmers and 90% to Scheduled Caste and Scheduled Tribes for various Farm Machineries, limiting to Rs.1.00 Lakh subsidy for all category farmers. There is no proposal in the Government regarding increasing the subsidy amount to General category of farmers for farm machineries.
ಇ)	ರೈತರಿಗೆ ಯಾವ ಯಾವ ಕೃಷಿ ಯಂತ್ರೋಪಕರಣಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಕೃಷಿ ಯಾಂತ್ರೀಕರಣ ಯೋಜನೆಯಡಿ ರೈತರಿಗೆ 45 PTO HP ವರೆಗಿನ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಒಳಗೊಂಡಂತೆ ವಿವಿಧ ಕೃಷಿ ಯಂತ್ರೋಪಕರಣಗಳಾದ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಹಾಗೂ ಇತ್ಯಾದಿ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನ ಒದಗಿಸಿ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗೂ ಕೊಯ್ಲು ನಂತರ ಕೃಷಿ ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ. Under Farm Mechanization scheme including Tractors upto 45 PTO HP Power Tillers, various types of Farm Machineries like Land Preparation Equipments, Sowing/ Transplanting Equipments, Power Operated Plant Protection Equipments, Power Operated Inter Cultivation Equipments, Harvesting and Threshing Equipments, Equipments for Residue Management, Diesel Pumpsets, Agro Processing units etc., are being distributed under subsidy programmes to the farmers. Various farm machineries which are required from Land Preparation to Harvesting and Post Harvesting agro processing equipment are being distributed to the farmers under subsidy.

ಸಂಖ್ಯೆ: AGRI-ASC/95/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	477
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ. ದೊಡ್ಡನಗೌಡ ಜಿ ಪಾಟೀಲ್ (ಹುನಗುಂದ)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	21.12.2022

****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಾಗಲಕೋಟೆ ಜಿಲ್ಲೆ ಹುನಗುಂದ ಮತಕ್ಷೇತ್ರ ಡಾ: ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕಾಗಿದ್ದು, ಕ್ಷೇತ್ರದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ ಎಷ್ಟು;	ಬಾಗಲಕೋಟೆ ಜಿಲ್ಲೆ ಹುನಗುಂದ ಮತಕ್ಷೇತ್ರ ಅಭಿವೃದ್ಧಿಗೆ 2022-23ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು **ರೂ122.78** ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.
ಆ)	ಈ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ರೈತರು ತೋಟಗಾರಿಕೆ ಬೆಳೆಗಳ ಮೇಲೆ ಅವಲಂಬಿತರಾಗಿದ್ದು, ಈ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಇದುವರೆಗೆ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ನೀಡುವುದು)	ಈ ಕ್ಷೇತ್ರದ ಅಭಿವೃದ್ಧಿಗೆ ತೋಟಗಾರಿಕೆ ಇಲಾಖೆ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯದವತಿಯಿಂದ ತಾಂತ್ರಿಕ ತರಬೇತಿಗಳನ್ನು ಆಯೋಜಿಸಲಾಗುತ್ತಿದ್ದು, ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ, ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ ಹಾಗೂ ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃಧ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಹನಿ

		ನೀರಾವರಿ, ತಾಳೆಬೆಳೆ ಪ್ರದೇಶ ವಿಸ್ತರಣೆ, ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ರೋಗ ಮತ್ತು ಕೀಟ ನಿಯಂತ್ರಣ, ಈರುಳ್ಳಿ ಶೇಖರಣಾ ಘಟಕ, ಸಂರಕ್ಷಣಾ ಘಟಕ, ಜೇನು ಸಾಕಾಣಿಕೆ ಮತ್ತು ಇತರೆ ಘಟಕಗಳಿಗೆ ಸಹಾಯಧನ ನೀಡುವುದರ ಮುಖಾಂತರ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

No. HORTI 573 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	478
ಸದಸ್ಯರ ಹೆಸರು	:	ಶ್ರೀ ದೊಡ್ಡನಗೌಡ ಜಿ ಪಾಟೀಲ್ (ಹುನಗುಂದ)
ಉತ್ತರಿಸಬೇಕಾದ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಬಾಗಲಕೋಟೆ ಜಿಲ್ಲಾ ಹುನಗುಂದ ಮತಕ್ಷೇತ್ರ ಡಾ:ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕಾಗಿದ್ದು ಈ ಕ್ಷೇತ್ರದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನವೆಷ್ಟು;	ಡಾ: ಡಿ.ಎಂ.ನಂಜುಂಡಪ್ಪ ವರದಿಯನ್ವಯ ವಿಧಾನ ಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡುವುದಿಲ್ಲ. ಅನುದಾನವನ್ನು ತಾಲ್ಲೂಕುಗಳ ದುಸ್ಥಿತಿ ಸೂಚ್ಯಾಂಕ ಅನುಗುಣವಾಗಿ ಹಂಚಿಕೆ ಮಾಡಲಾಗುತ್ತದೆ. ಅದರಂತೆ, ಬಾಗಲಕೋಟೆ ಜಿಲ್ಲೆಯ ಹುನಗುಂದ ಅತೀ ಹಿಂದುಳಿದ ತಾಲ್ಲೂಕುಯಾಗಿದ್ದು, 2022-23ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ತಾಲ್ಲೂಕು ದುಸ್ಥಿತಿ ಸೂಚ್ಯಾಂಕದ ಅನ್ವಯ ರೂ. 2546.72 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಈ ಪೈಕಿ ರೂ. 1764.87 ಲಕ್ಷಗಳು ಬಿಡುಗಡೆಯಾಗಿರುತ್ತದೆ.
ಆ)	ಈಗಾಗಲೇ ಸಲ್ಲಿಸಿರುವ ಪ್ರಸ್ತಾವನೆಗೆ ಮಂಜೂರಾತಿ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು)	2022-23ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ವಿವಿಧ ಇಲಾಖೆಗಳು ಸಲ್ಲಿಸಿದ್ದ ಕ್ರಿಯಾ ಯೋಜನೆಗೆ ಈಗಾಗಲೇ ಮಂಜೂರಾತಿ ನೀಡಲಾಗಿರುತ್ತದೆ. ಯಾವುದೇ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದು ಬಾಕಿ ಇರುವುದಿಲ್ಲ.

ಪಿಡಿಎಸ್ 71 ಎಸ್‌ಡಿಪಿ 2022

(ಮುನಿರತ್ನ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	479
ಮಾನ್ಯ ಸದಸ್ಯರ ಹೆಸರು	:	ಶ್ರೀ ಮಹದೇವ.ಕೆ
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯ ಗುರಿ, ಉದ್ದೇಶಗಳೇನು; ಪ್ರಸ್ತುತ ಈ ಯೋಜನೆ ಜಾರಿಯಲ್ಲಿದೆಯೇ; ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ಈ ಯೋಜನೆಗೆ ಆಯ್ಕೆಗೊಂಡ ಗ್ರಾಮಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು)</td>
<td>ರಾಜ್ಯದಲ್ಲಿ ಶೇ.50 ರಷ್ಟು ಪರಿಶಿಷ್ಟ ಜಾತಿ ಜನಾಂಗದವರು ವಾಸಿಸುತ್ತಿರುವ ಗ್ರಾಮಗಳಲ್ಲಿ ವಿವಿಧ ಇಲಾಖೆಗಳಿಂದ ಅನುಷ್ಠಾನ ಮಾಡುತ್ತಿರುವ ಯೋಜನೆಗಳನ್ನು ಒಳಗೊಂಡಂತೆ Convergence ಆಧಾರದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಮೂಲಕ ಸದರಿ ಗ್ರಾಮಗಳನ್ನು ಆದರ್ಶ ಗ್ರಾಮಗಳನ್ನಾಗಿ ಪರಿವರ್ತಿಸುವುದು ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯು ಪ್ರಸ್ತುತ ಜಾರಿಯಲ್ಲಿರುತ್ತದೆ.

2016-17ನೇ ಸಾಲಿನಿಂದ ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಯ್ಕೆಯಾಗಿರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಗ್ರಾಮದ ಹೆಸರು</th></tr>
<tr><td>1</td><td rowspan="6">2016-17</td><td>ಮುಮ್ಮಡಿಕಾವಲ್</td></tr>
<tr><td>2</td><td>ಬೆಣಗಾಲು</td></tr>
<tr><td>3</td><td>ಮಾಕನಹಳ್ಳಿ</td></tr>
<tr><td>4</td><td>ನಾಗನಹಳ್ಳಿ</td></tr>
<tr><td>5</td><td>ಸತ್ಯಗಾಲ ಎ ಕಾವಲ್</td></tr>
<tr><td>6</td><td>ವಡ್ಡರ ಬೈಲುಕುಪ್ಪೆ</td></tr>
<tr><td>7</td><td rowspan="4">2020-21</td><td>ಆರ್ ಹೊಸಹಳ್ಳಿ</td></tr>
<tr><td>8</td><td>ಮರಡಿಯೂರು</td></tr>
<tr><td>9</td><td>ಅನಿವಾಳು</td></tr>
<tr><td>10</td><td>ಎಂ ಹೊಸಹಳ್ಳಿ</td></tr>
<tr><td>11</td><td>2021-22</td><td>ಅಳಲೂರು</td></tr>
</table>
</td>
</tr>
</table>

ಆ)	ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿವೆ; ಎಷ್ಟು ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ; (ಮಾಹಿತಿ ನೀಡುವುದು)	2016-17ನೇ ಸಾಲಿನಲ್ಲಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಕೈಗೊಳ್ಳಲಾಗಿರುವ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 2020-21ನೇ ಸಾಲಿನಲ್ಲಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 2021-22ನೇ ಸಾಲಿನಲ್ಲಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. ಮೇಲ್ಕಂಡಂತೆ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

ಆಯ್ಕೆಯಾದ ಗ್ರಾಮಗಳ ಸಂಖ್ಯೆ	ಮಂಜೂರಾತಿ ಮೊತ್ತ		ಬಿಡುಗಡೆ ಮಾಡಿದ ಮೊತ್ತ	
	ಕೇಂದ್ರ	ರಾಜ್ಯ	ಕೇಂದ್ರ	ರಾಜ್ಯ
11	225.00	220.00	205.00	120.00

ಇ)	ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲು ಎಷ್ಟು ಹಾಗೂ ಕೇಂದ್ರ ಸರ್ಕಾರದ ಅನುದಾನ ಎಷ್ಟು;	ಸದರಿ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತಿ ಗ್ರಾಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒದಗಿಸಬೇಕಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

ವರ್ಷ	ಕೇಂದ್ರದ ಪಾಲು		ರಾಜ್ಯದ ಪಾಲು	ಒಟ್ಟು
	ಅಭಿವೃದ್ಧಿ ವೆಚ್ಚ	ಆಡಳಿತಾತ್ಮಕ ವೆಚ್ಚ		
2016-17	20.00	-	20.00	40.00
2018-19 ರಿಂದ 2021-22	20.00	1.00	20.00	41.00

ಈ)	ಇದುವರೆವಿಗೆ ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡದಿರಲು ಕಾರಣವೇನು? (ವಿವರ ನೀಡುವುದು)	ಸದರಿ ಯೋಜನೆಯಡಿ ರಾಜ್ಯಾದ್ಯಂತ 2016-17 ಮತ್ತು 2018-19ನೇ ಸಾಲಿನಲ್ಲಿ ಆಯ್ಕೆಯಾದ ಒಟ್ಟು 433 ಗ್ರಾಮಗಳಿಗೆ ಸಂಬಂಧಿಸಿದಂತೆ ರಾಜ್ಯ ಪಾಲಿನ ಸಂಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, 2019-20ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಆಯ್ಕೆಯಾಗಿರುವ ಒಟ್ಟು 898 ಗ್ರಾಮಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.

ಸಕಇ 749 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 480
ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಹಾಸನ ಜಿಲ್ಲೆಯ ಹಾಸನ ನಗರದಲ್ಲಿ ಸುಮಾರು 100 ವರ್ಷಗಳ ಹಳೆಯದಾದ ಕರ್ನಾಟಕ ಇಂಪ್ಲಿಮೆಂಟೇಶನ್ ಫ್ಯಾಕ್ಟರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರವಾಗಿ (ಬಸ್ಸುಗಳ ಬಾಡಿ ನಿರ್ಮಾಣ ಮಾಡುವ) ರೀಜನಲ್ ವರ್ಕ್ ಶಾಪ್ ನವೀಕರಣ ಮಾಡುವ ಕಾಮಗಾರಿಗೆ ಅಂದಾಜು ಮೊತ್ತ ರೂ.42.00 ಕೋಟಿಗಳ ಅನುದಾನ ಮಂಜೂರಾಗಿದ್ದು, ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಹಾಸನ ನಗರದಲ್ಲಿರುವ ಪ್ರಾದೇಶಿಕ ಕಾರ್ಯಾಗಾರವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ ಕೆಲಸಗಳನ್ನು ಮತ್ತು ನೂತನ ಯಂತ್ರೋಪಕರಣಗಳನ್ನು ಅಳವಡಿಸುವ ಯೋಜನೆಗೆ ರೂ.42.00 ಕೋಟಿಗಳ ಯೋಜನಾ ವೆಚ್ಚದಲ್ಲಿ ಹಂತ ಹಂತವಾಗಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಒಟ್ಟಾರೆ ಯೋಜನೆಯ ಮೊತ್ತವಾದ ರೂ.42.00 ಕೋಟಿಗಳಲ್ಲಿ ರೂ.10.00 ಕೋಟಿಗಳನ್ನು ಆಧುನಿಕ ಯಂತ್ರೋಪಕರಣ ಒದಗಿಸಲು ಮೀಸಲಿರಿಸಿ, ರೀಜನಲ್ ವರ್ಕ್ ಶಾಪ್ ನವೀಕರಣ ಕಾಮಗಾರಿಗಾಗಿ ರೂ.31.00 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಆ.	ಈ ರೀಜನಲ್ ವರ್ಕ್ ಶಾಪ್ ನವೀಕರಣ ಕಾಮಗಾರಿಯನ್ನು ಇ-ಪ್ರಕ್ಯೂರ್‌ಮೆಂಟ್‌ಗಳ ಮೂಲಕ ರೂ.31.00 ಕೋಟಿಗಳಿಗೆ ಟೆಂಡರ್ ಕರೆದಿರುವುದು ನಿಜವೇ; ಎಷ್ಟು ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ; ಟೆಂಡರ್ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಟೆಂಡರ್‌ನಲ್ಲಿ ಒಟ್ಟು 6 ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ 5 ಜನ ಗುತ್ತಿಗೆದಾರರು ಅನರ್ಹಗೊಂಡಿದ್ದು, ಒಬ್ಬರೇ ಗುತ್ತಿಗೆದಾರರು ಅರ್ಹಗೊಂಡ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುತ್ತದೆ.

ಇ.	ಕೆಲವು ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಸರಿಯಾಗಿ ದಾಖಲಾತಿಗಳನ್ನು ಸಲ್ಲಿಸದೆ ಮತ್ತು ಅರ್ಹತೆ ಇಲ್ಲದಿದ್ದರೂ ಸಹ ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಈಗಾಗಲೇ ಪ್ರಾರಂಭಿಸಿರುವ ಟೆಂಡರ್ ಪ್ರಕ್ರಿಯೆಗಳನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ (ಸಂಪೂರ್ಣ ಮಾಹಿತಿ ನೀಡುವುದು.	ಸದರಿ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಗಳ ಮೂಲಕ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಎಲ್ಲಾ ಗುತ್ತಿಗೆದಾರರು ಮುಕ್ತ ಅವಕಾಶ ಹೊಂದಿರುತ್ತಾರೆ. ಇ-ಪ್ರಕ್ಯೂರ್‌ಮೆಂಟ್ ಮುಖಾಂತರವೇ ಎಲ್ಲಾ ಗುತ್ತಿಗೆದಾರರು ದಾಖಲಾತಿಗಳನ್ನು ದಾಖಲಿಸಿರುತ್ತಾರೆ. ಗುತ್ತಿಗೆದಾರರು ದಾಖಲಿಸುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಟೆಂಡರ್ ನಿಬಂಧನೆಗಳ ಪ್ರಕಾರ ಕ್ರಮಬದ್ಧವಾಗಿದ್ದಲ್ಲಿ ಮಾತ್ರ ತಾಂತ್ರಿಕವಾಗಿ ಅರ್ಹಗೊಳಿಸಲಾಗುತ್ತದೆ. ಅರ್ಹಗೊಂಡ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ ಒಬ್ಬರೇ ಗುತ್ತಿಗೆದಾರರು ಅರ್ಹಗೊಂಡ ಹಿನ್ನಲೆಯಲ್ಲಿ, ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ : ಟಿಡಿ 13 ಟಿಸಿಬಿ 2019, ದಿನಾಂಕ: 02-08-2021ರಲ್ಲಿ ರೂ.10.00 ಕೋಟಿಗಳಿಗೆ ಮಿತಿಗೊಳಿಸಲು ಸೂಚಿಸಿರುವಂತೆ, ಸದರಿ ನವೀಕರಣ ಕಾಮಗಾರಿಗಾಗಿ ಒದಗಿಸಿರುವ ರೂ.10.00 ಕೋಟಿಗಳ ಅನುದಾನದಲ್ಲಿ ರೂ.4.00 ಕೋಟಿಗಳನ್ನು ಯಂತ್ರೋಪಕರಣಗಳಿಗೆ ಮೀಸಲಿರಿಸಿ, ರೂ.6.00 ಕೋಟಿಗಳ ಮೊತ್ತದ ಕಾಮಗಾರಿ ಕೆಲಸಗಳಿಗೆ ನಿಯಮಾನುಸಾರ ಮರುಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಮರುಟೆಂಡರ್‌ನಲ್ಲಿ ಇಬ್ಬರು ಬಿಡ್ಡುದಾರರು ಭಾಗವಹಿಸಿರುತ್ತಾರೆ ಹಾಗೂ ತಾಂತ್ರಿಕವಾಗಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿರುತ್ತಾರೆ. ಈ ಇಬ್ಬರು ಬಿಡ್ಡುದಾರರಲ್ಲಿ, ಕಡಿಮೆ ದರ ನಮೂದಿಸಿದ (L1) ಬಿಡ್ಡುದಾರರನ್ನು ನಿಯಮಾನುಸಾರ ಆಯ್ಕೆ ಮಾಡಿ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.
ಈ.	ಪ್ರಸ್ತುತ ಹಾಸನದ ರೀಜನಲ್ ವರ್ಕ್‌ಶಾಪ್ ನವೀಕರಣ ಕಾಮಗಾರಿ ಯಾವ ಹಂತದಲ್ಲಿರುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ನವೀಕರಣ ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿರುತ್ತದೆ.

ಸಂಖ್ಯೆ: ಟಿಡಿ 260 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	481
ಮಾನ್ಯ ಸದಸ್ಯರ ಹೆಸರು	ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿರುವುದು; ಹಾಸನ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆವತಿಯಿಂದ ಸದಸ್ಯತ್ವವನ್ನು ನೋಂದಣಿ ಮಾಡಿಸಲು ಅನುಸರಿಸಲಾಗುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಸಂಘಟಿತ ಹಾಗೂ ಅಸಂಘಟಿತ ವಲಯದ ವಿವಿಧ ವರ್ಗಗಳ ಕಾರ್ಮಿಕರು ಅರ್ಹರಿದ್ದು, ಸದರಿ ಕಾರ್ಮಿಕರು ನೊಂದಣಿಯಾಗಲು ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿರುತ್ತದೆ. ಸದರಿ ಯೋಜನೆಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳ ಕುರಿತ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ: __ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ__ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗಾಗಿ ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಯ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 18-60ರ ವಯೋಮಾನದ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಅರ್ಹರಿರುತ್ತಾರೆ. **ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:** ಎ) ನಮೂನೆ-5ರಲ್ಲಿ ಅರ್ಜಿ ಬಿ) ಮಾಲೀಕರ ಪ್ರಮಾಣ ಪತ್ರ: ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್‌ನವರು ನಮೂನೆ-V(A)ರಲ್ಲಿ

ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ-V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ-V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'.

ಸಿ) ಪಾಸ್ ಪೋರ್ಟ್ ಅಳತೆಯ ಭಾವಚಿತ್ರ

ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ಇಎಸ್‌ಐ ಆಸ್ಪತ್ರೆ/ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ.

ನೋಂದಣಿ ಮಾಡುವ ಕಛೇರಿಗಳು:

ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆಈ ಮೇಲೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಆನ್ ಲೈನ್ ಮೂಲಕ ಸಂಬಂಧಪಟ್ಟ ಕಾರ್ಯವ್ಯಾಪ್ತಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>

ಈ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ದೊರಕುವ ಸೌಲಭ್ಯಗಳು ಹಾಗು ಇಲಾಖೆವತಿಯಿಂದ ಸದಸ್ಯತ್ವವನ್ನು ನೋಂದಣಿ ಮಾಡಿಸಲು ಅನುಸರಿಸಲಾಗುವ ಮಾನದಂಡಗಳು ಈ ಕೆಳಗಿನಂತಿದೆ.

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಅ) **ಅಪಘಾತ ಪರಿಹಾರ ಸೌಲಭ್ಯ : ಈ** ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

<u>ಮಾನದಂಡ:-</u>

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 20 ರಿಂದ 70 ವರ್ಷಗಳು.
- ಅಪಘಾತದ ಸಮಯದಲ್ಲಿ ಚಾಲಕನು ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ಚಾಲನ ಪತ್ರ ಹೊಂದಿರತಕ್ಕದ್ದು.
- ನಿರ್ವಾಹಕರಿಗೆ ಸಂಬಂಧಿಸಿದಂತೆ ಆತನು/ಆಕೆಯು ಮೋಟಾರು ವಾಹನಗಳ ಕರ್ನಾಟಕ ನಿಯಮಗಳು, 1989ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನೀಡಲಾಗಿರುವ ಊರ್ಜಿತ ನಿರ್ವಾಹಕರ ಪರವಾನಿಗೆಯನ್ನು ಹೊಂದಿರತಕ್ಕದ್ದು ಹಾಗೂ ಯೋಜನೆಯಡಿ ನಿಗದಿ ಪಡಿಸಿದ ನೋಂದಣಿ ಅಧಿಕಾರಿಯವರಲ್ಲಿ ನೋಂದಾಯಿಸಿಕೊಂಡಿರಬೇಕು.
- ಕ್ಲೀನರ್‌ಗಳು ಯೋಜನೆಯಡಿ ನಿಗದಿ ಪಡಿಸಿದ ನೋಂದಣಿ ಅಧಿಕಾರಿಯವರಲ್ಲಿ ನೋಂದಾಯಿಸಿಕೊಂಡಿರಬೇಕು.
- ಅರ್ಜಿದಾರರು ವಾಣಿಜ್ಯ ಸಾರಿಗೆ ವಾಹನ/ಸಂಸ್ಥೆಯಲ್ಲಿ ಹಿಂದಿನ 12 ತಿಂಗಳಿನಲ್ಲಿ ತೊಂಬತ್ತು ದಿನಗಳಿಗೆ ಕಡಿಮೆ ಇಲ್ಲದಂತೆ ಕಾರ್ಯ ನಿರ್ವಹಿಸಿರತಕ್ಕದ್ದು.

(ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

<u>ಮಾನದಂಡ:-</u>

- ಖಾಸಗಿ ವಾಣಿಜ್ಯ ಸಾರಿಗೆಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಅಪಘಾತದಿಂದ ಶಾಶ್ವತದುರ್ಬಲತೆಅಥವಾ ಮರಣಹೊಂದಿದ ಪ್ರಕರಣಗಳಲ್ಲಿ ಮಂಡಳಿಯಿಂದ ಸೌಲಭ್ಯ ಪಡೆದಿರಬೇಕು.
- ಗರಿಷ್ಠ ಇಬ್ಬರು ಮಕ್ಕಳಿಗೆ ಮಾತ್ರ.
- 1ನೇ ತರಗತಿಯಿಂದ ಪದವಿ ಪೂರ್ವ / 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು.

2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** ಈ ಯೋಜನೆಯಡಿ, 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಗೃಹ ಕಾರ್ಮಿಕರು, ಟೈಲರ್ಸ್, ಚಿಂದಿ ಆಯುವವರು, ಮೆಕ್ಯಾನಿಕ್ಸ್, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕ ನೋಂದಣಿ ಮಾಡಿಕೊಂಡು ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತಿದ್ದು, ಯಾವುದೇ ಆರ್ಥಿಕ ಸೌಲಭ್ಯ ನೀಡುತ್ತಿಲ್ಲ.

ಮಾನದಂಡ:-

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 60 ವರ್ಷಗಳು.
- ಪ್ರಸ್ತುತ ಮೇಲ್ಕಂಡ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ.

(3) ಇ-ಶ್ರಮ್ ಕಾರ್ಯಕ್ರಮ (ಅಸಂಘಟಿತ ಕಾರ್ಮಿಕರ ನೋಂದಣಿ) :-

2019-20	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	1097	43,55,000
	ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ	7	35,000
2020-21	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	595	23,50,000
	ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ	8	40,000
2021-22	ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ	427	16,87,000
	ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ	7	35,000

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ.

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಹಾಲಪ್ಪ ಹರತಾಳ್ ಹೆಚ್ (ಸಾಗರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 488ಕ್ಕೆ ಅನುಬಂಧಗಳು:

ಅನುಬಂಧ-1:

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯ ಧನ ನೀಡಲು ಈ ಕೆಳಕಂಡ 25 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1500/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ. ಶ್ರವಣಯಂತ್ರ. ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ
5. ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸಾಲ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ.50,000/-
9. ಶಿಶು ಪಾಲನಾ ಸೌಲಭ್ಯ: ಕಾರ್ಮಿಕರ ಮಕ್ಕಳ ಪಾಲನೆಗಾಗಿ ರಾಜ್ಯದದ್ಯಾಂತ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.
10. ಅಂತ್ಯಕ್ರಿಯೆ ವೆಚ್ಚ : ರೂ.4,000/- ಹಾಗೂ ಅನುಗ್ರಹ ರಾಶಿ ರೂ.71,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	5,000
2	1 ರಿಂದ 4ನೇ ತರಗತಿ	5,000
3	5 ರಿಂದ 8ನೇ ತರಗತಿ	8,000
4	9 ಹಾಗೂ 10ನೇ ತರಗತಿ	12,000
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	15,000
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	20,000
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್	40,000
8	ಬಿ.ಎಡ್	25,000

	ಬಿ.ಎಡ್	35.000
9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	25.000
10	ಎಲ್ಎಲ್ಬಿ / ಎಲ್ಎಲ್ಎಮ್	30,000
11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	35,000 ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು
ತಾಂತ್ರೀಕ/ ವೈದ್ಯಕೀಯ ಎನ್ಇಇಟಿ ಅಥವಾ ಕೆಸಿಇಟಿ		
12	ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್	ಸದರಿ ಕೋರ್ಸ್‌ನ ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು ವಾರ್ಷಿಕ ರೂ.50,000
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್)	ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು ವಾರ್ಷಿಕ ರೂ. 60.000
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್ಎಸ್ / ಬಿಡಿಎಸ್ /ಬಿಹೆಚ್ಎಮ್ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್	ರೂ.60.000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
	ಎಮ್‌ಡಿ	ರೂ. 75,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠ ಮೂರು ವರ್ಷಗಳಿಗೆ ಹಾಗೂ ಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷ ರೂ. 25.000 (ಯೂಜಿಸಿಯ ಜೂನಿಯರ್ ರಿಸರ್ಚ್ ಫೆಲೋಶಿಫ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಮತ್ತು ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು

		ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್ಐಟಿ/ ಐಐಎಸ್ಇಆರ್/ ಎಐಐಎಮ್ಎಸ್ /ಎನ್ಎಲ್ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋಧನಾ ಶುಲ್ಕ

12. ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300/- ರಿಂದ ರೂ.20,000/-ವರೆಗೆ
13. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿ ರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2.00.000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-
14. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ): ಹೃದ್ರೋಗ. ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ. ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ. ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ. ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ
15. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.60.000/-
16. ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಮತ್ತು ಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತಗಲುವ ವೆಚ್ಚವನ್ನು ಮಂಡಳಿವತಿಯಿಂದ ಭರಿಸಲಾಗುವುದು.
17. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
18. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ನೋಂದಾಯಿತ ಫಲಾನುಭವಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ
19. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/- ಗಳ ಸಹಾಯಧನ.
20. ಇಮ್ಯೂನಿಟಿ ಬೂಸ್ಟರ್ ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್ ಯೋಜನೆ
22. ಮೊಬೈಲ್ ಮೆಡಿಕಲ್ ಕೇರ್ ಯೂನಿಟ್
23. ಪೈಲಟ್ ಟ್ರೈನಿಂಗ್: ಫಲಾನುಭವಿಯ ಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯ ಧನ ಸೌಲಭ್ಯ
25. ನ್ಯೂಟ್ರೀಶನ್ ಕಿಟ್ಸ್:

ಅನುಬಂಧ–02

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವಿಧ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:

ನಿಯಮ 39: ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಣಿಯಾಗಿ ಕನಿಷ್ಠ 3 ವರ್ಷ ಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ 60 ವರ್ಷ ವಯಸ್ಸಾಗಿರಬೇಕು.
- ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಈ ಸೌಲಭ್ಯ ಪಡೆಯತ್ತಿರಬಾರದು.
- ಜೀವಿತ ಪ್ರಮಾಣ ಪತ್ರ ಸಲ್ಲಿಸುವುದು.
- ಫಲಾನುಭವಿಯ ಆಧಾರ್ ಕಾರ್ಡ್/ರೇಷನ್ ಕಾರ್ಡ್ ಸಲ್ಲಿಸುವುದು.

ನಿಯಮ 40: ದುರ್ಬಲತೆ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನ ಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಶಾಶ್ವತದುರ್ಬಲತೆ ಯಾಗಿರುವುದಕ್ಕೆ ಕಟ್ಟಡ ಕಾರ್ಮಿಕನ ಭಾವಚಿತ್ರ (ಫೋಟೋ).
- ದುರ್ಬಲತೆ ಗುರುತಿನ ಚೀಟಿ ಪಡೆದ ನಂತರ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಪಘಾತ ಉಂಟಾಗಿ ಅದರಿಂದ ದುರ್ಬಲತೆಯಾಗಿರಬೇಕು.
- ಫಲಾನುಭವಿಗೆ ದುರ್ಬಲತೆಯಾಗಿರುವುದಕ್ಕೆ ಹಿರಿಯ ನಾಗರಿಕರ ಹಾಗೂ ಅಂಗವಿಕಲ ಸಬಲೀಕರಣ ಇಲಾಖೆ ಇವರಿಂದ ಪಡೆದ ಅಂಗವಿಕಲ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು.
- ಫಲಾನುಭವಿಯ ಆಧಾರ್ ಕಾರ್ಡ್/ರೇಷನ್ ಕಾರ್ಡ್ ಸಲ್ಲಿಸುವುದು.

ನಿಯಮ 39(ಎ): ಕುಟುಂಬ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-12(ಎ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಅರ್ಜಿದಾರರ ಕೋರಿಕೆ ಪತ್ರ.
- ಮೃತ ಪಿಂಚಣಿದಾರರ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
- ನಾಮನಿರ್ದೇಶಿತರು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಪಿಂಚಣಿದಾರರು ಮಂಡಳಿಯಿಂದ ಪಿಂಚಣಿ ಪಡೆಯುತ್ತಿರುವಅವಧಿಯಲ್ಲಿ ಮರಣ ಹೊಂದಿದರೆ ಮಾತ್ರ ಕುಟುಂಬ ಪಿಂಚಣಿ ಪಡೆಯಲು ಅವಕಾಶವಿರುತ್ತದೆ.
- ನಾಮ ನಿರ್ದೇಶಿತರ ಆಧಾರ್ ಕಾರ್ಡ್/ರೇಷನ್ ಕಾರ್ಡ್ ಸಲ್ಲಿಸುವುದು.

ನಿಯಮ 41: ಶ್ರಮ ಸಾಮರ್ಥ್ಯ ಟೂಲ್‌ಕಿಟ್ ವಿತ್ ಟ್ರೈನಿಂಗ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-15ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯ ಸದಸ್ಯತ್ವ ಅವಧಿಯಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.
- ಫಲಾನುಭವಿಯು ತರಬೇತಿ ಪಡೆಯಲು 55 ವರ್ಷ ವಯಸ್ಸಿನ ಒಳಗಿರಬೇಕು

ನಿಯಮ 42: ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ (ಕಾರ್ಮಿಕ ಗೃಹ ಭಾಗ್ಯ) ನೀಡುವ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-16 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಅರ್ಜಿ ಸಲ್ಲಿಸುವ ಫಲಾನುಭವಿಗೆ ಕನಿಷ್ಠ 21 ಹಾಗೂ 50 ವರ್ಷ ಮೀರಿರಬಾರದು.
- ಸರ್ಕಾರದಿಂದ ಯಾವುದಾದರೂ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಸಾಲ ಮಂಜೂರಾಗಿರಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 43: ಹೆರಿಗೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-17ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯುತನ್ನ ಮೊದಲ 2 ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ. (ಕೇವಲ ಎರಡು ಜೀವಂತ ಮಕ್ಕಳಿದ್ದಾರೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.)
- ಇದು ಎರಡನೇ ಹೆರಿಗೆ ಎಂದು ಅಫಿಡವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ನೊಂದಣಾಧಿಕಾರಿಗಳಿಂದ ಪಡೆದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 43-ಎ: ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕಾಂಶಗಳನ್ನು ಮಹಿಳಾ ಫಲಾನುಭವಿಯು ಮೊದಲ ಎರಡು ಮಕ್ಕಳಿಗಾಗಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್. (ತಾಯಿ ಮಗು ಸಹಾಯ ಹಸ್ತ)

- ನಮೂನೆ-17-ಎ ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯು ತನ್ನ ಮೊದಲ ಎರಡು ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ.
- ಎರಡನೇ ಹೆರಿಗೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಫಿಡವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ಅಧಿಕಾರಿಗಳಿಂದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 44:ಅಂತ್ಯಕ್ರಿಯೆ ಸಂಸ್ಕಾರ ಮತ್ತು ಅನುಗ್ರಹರಾಶಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-18ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.

- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
- ಮೃತ ಫಲಾನುಭವಿಯ ವಯಸ್ಸು 60 ವರ್ಷ ಮೀರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಅರ್ಜಿದಾರನನ್ನು ಮೃತ ಫಲಾನುಭವಿಯ ನಾಮನಿರ್ದೇಶಿತನಾಗಿ ನೋಂದಾಯಿಸಲಾಗಿದೆಯೇ ಎಂದು
- ಖಚಿತ ಪಡಿಸಿಕೊಳ್ಳಬೇಕು.
- ಫಲಾನುಭವಿಯು ಮೃತನಾದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 45: ಶೈಕ್ಷಣಿಕ ಸಹಾಯ ಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-19 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾಭವಿಯ ಮಗ / ಮಗಳು ಉತ್ತೀರ್ಣ ಆಗಿರುವ ಕುರಿತು ಅಂಕಪಟ್ಟಿ ಹಾಗೂ ವ್ಯಾಸಂಗ ಮಾಡುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ವ್ಯಾಸಂಗ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಫಲಾನುಭವಿಯ ಪ್ರಸ್ತುತ ಅರ್ಜಿಯು ಈ ಹಿಂದೆ ಶೈಕ್ಷಣಿಕ ಸಹಾಯಧನ ಪಡೆದ ಇಬ್ಬರು ಮಕ್ಕಳಿಗೆ ಅನ್ವಯಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಶೈಕಣಿಕ ಸಹಾಯಧನ ಅರ್ಜಿಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನದಿಂದ 6 ತಿಂಗಳ ಒಳಗೆ ಸಲ್ಲಿಸಬೇಕು.

ನಿಯಮ 46: ಒಳರೋಗಿ ವೈದ್ಯಕೀಯ ಸಹಾಯ ಧನಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-20 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.

- ಫಲಾನುಭವಿಯು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಹಾಗೂ ಬಿಡುಗಡೆಯಾದ ದಿನಾಂಕ ವಿವರಗಳನ್ನು ನಮೂದಿಸಬೇಕು.
- ಫಲಾನುಭವಿಯು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ (ಶೆಡ್ಯೂಲ್ 1ಗೆ ಸೇರಿದ) ಖಾಸಗಿ ಆಸ್ಪತ್ರೆಗಳಲ್ಲಿ ಕನಿಷ್ಠ ಎರಡು ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಗೆದಾಖಲಾದ ದಿನಾಂಕದಿಂದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 47: ಅಪಘಾತ ಮರಣ, ಶಾಶ್ವತ ಸಂಪೂರ್ಣ / ಭಾಗಶಃದುರ್ಬಲತೆ ಸಹಾಯ ಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-21ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಅಪಘಾತದ ಸ್ವರೂಪವನ್ನು ನಮೂದಿಸಬೇಕು.
- ದುರ್ಬಲತೆ ಪ್ರಕರಣವಿದ್ದಲ್ಲಿ, ಅಪಘಾತದ ಪರಿಣಾಮವಾಗಿರುವ ಶಾಶ್ವತ-ಸಂಪೂರ್ಣ (ಪ್ರತಿ ಶತಃ 100ರಷ್ಟು) ಅಥವಾ ಶಾಶ್ವತ-ಭಾಗಶಃ (ಪ್ರತಿ ಶತಃ 100ಕ್ಕಿಂತ ಕಡಿಮೆ) ದುರ್ಬಲತೆಯಾದ ಬಗ್ಗೆ ಹಾಗೂ ದುರ್ಬಲತೆಯಶೇಕಡವಾರು ಪ್ರಮಾಣ ನಮೂದಿಸಬೇಕು.
- ಫಲಾನುಭವಿಗೆದುರ್ಬಲತೆಯಾದ ನಂತರತಪಾಸಣೆ ಮಾಡಿದ ಸರ್ಕಾರಿ / ಸರ್ಕಾರದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರಿಂದ ಶೇಕಡವಾರುದುರ್ಬಲತೆಖಚಿತ ಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸುವುದು.
- ನಮೂನೆ 21ಎ ನಲ್ಲಿ ನಿಯೋಜಕರಿಂದ ಪಡೆದ ವರದಿಯನ್ನು ಸಲ್ಲಿಸಬೇಕು.
- ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 48: ಪ್ರಮುಖ ವೈದ್ಯಕೀಯ ವೆಚ್ಚ (ಕಾರ್ಮಿಕ ಚಿಕಿತ್ಸಾ ವೆಚ್ಚ) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-22 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ನಮೂನೆ-22 (ಎ) ರಲ್ಲಿಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸುವುದು
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ

- ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ/ಆರ್.ಎಸ್.ಬಿ.ವೈ. ಯೋಜನೆಯಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು
- ಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ದಾಖಲೆಗಳನ್ನು ಮತ್ತು ಬಿಲ್ಲುಗಳನ್ನು ಸಲ್ಲಿಸುವುದು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49: ಮದುವೆ ಸಹಾಯಧನ (ಗೃಹಲಕ್ಷ್ಮೀ ಬಾಂಡ್) ಸೌಲಭ್ಯಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ನೋಂದಣಿಯಾಗಿ ಒಂದು ವರ್ಷ ಪೂರೈಯಿಸಿದ ನಂತರ ಫಲಾನುಭವಿ/ಮಕ್ಕಳಿಗೆ ಮದುವೆಯಾಗಿರಬೇಕು
- ಮದುವೆಯಾದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49(ಇ): ಬಿ.ಎಂ.ಟಿ.ಸಿ. ಬಸ್ ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 (ಬಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್ ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಖಾಯಂ ವಿಳಾಸ ಹೊಂದಿರುವ ಫಲಾನುಭವಿಯಾಗಿರಬೇಕು
- ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಪ್ರತಿ ಸಲ್ಲಿಸುವುದು.
- ಬಿಎಂಟಿಸಿ ಸಂಸ್ಥೆ ನೀಡುವ ಬಸ್ ಪಾಸ್ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.

<u>ಅನುಬಂಧ-03 :</u>

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಕಾರ್ಮಿಕ ಕಲ್ಯಾಣ ಯೋಜನೆಗಳ ವಿವರ

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಸಂಸ್ಥೆಗಳು/ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

<u>ಸೂಚನೆ :</u>

1. ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 15 ರೊಳಗೆ ಕಾರ್ಮಿಕರು. ಮಾಲೀಕರು ರೂ. 20 : 40 ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 60/- ಗಳಂತೆ ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.
2. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಪಡೆಯಲು ವಿದ್ಯಾರ್ಥಿಗಳು. ಶೈಕ್ಷಣಿಕ ಸಂಸ್ಥೆಗಳು, ಕಾರ್ಖಾನೆಗಳು/ಸಂಸ್ಥೆಗಳು <u>klwb.karnataka.gov.in</u> ಇಲ್ಲಿ ನೊಂದಾಯಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು <u>klwb.karnataka.gov.in</u> ಇಲ್ಲಿ ತಮ್ಮ ಸಂಸ್ಥೆಗಳನ್ನು ನೊಂದಾಯಿಸಿ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.

<u>ಈ ಕೆಳಗಿನ ಯೋಜನೆಗೆ ಮಾಸಿಕ ವೇತನ ರೂ. 35,000/- ಗಿಂತ ಮೀರಿರಬಾರದು.</u>

1. **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ:** ಪ್ರೌಢಶಾಲೆ. (8 ರಿಂದ 10ನೇ ತರಗತಿವರೆಗೆ) ರೂ.6,000/ ಪಿಯುಸಿ/ಡಿಪ್ಲೊಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.8,000/- ಪದವಿ ಶಿಕ್ಷಣಕ್ಕಾಗಿ ರೂ.10,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.12,000/- ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.20,000/-ಗಳ ಪ್ರೋತ್ಸಾಹ ಧನ ನೀಡಲಾಗುವುದು. **(ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾ / ಪ. ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು)**

<u>ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60 ವರ್ಷ</u>

2. **ಕಾರ್ಮಿಕರಿಗೆ ವೈದ್ಯಕೀಯ ನೆರವು :** ಹೃದಯ ಶಸ್ತ್ರಚಿಕಿತ್ಸೆ. ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್. ಕ್ಯಾನ್ಸರ್. ಆಂಜಿಯೋಪ್ಲಾಸ್ಟಿ, ಕಣ್ಣು. ಅರ್ಥೋಪೆಡಿಕ್. ಗರ್ಭಕೋಶದ ಶಸ್ತ್ರ ಚಿಕಿತ್ಸೆ. ಗಾಲ್ ಬ್ಲಾಡರ್ ತೊಂದರೆ. ಮೂಳೆನ ರಕ್ತಸ್ರಾವ ಚಿಕಿತ್ಸೆಗೆ

ಕನಿಷ್ಠ **ರೂ. 1,000/-**ದಿಂದ ಗರಿಷ್ಠ **ರೂ,25,000/-**ವರೆಗೆ ಮತ್ತು ಆರೋಗ್ಯ ತಪಾಸಣೆಗೆ **ರೂ. 500/-**ರಿಂದ **ರೂ, 1000/-**ವರೆಗೆ ಧನ ಸಹಾಯ ನೀಡಲಾಗುವುದು.

3. **ಕಾರ್ಮಿಕರಿಗೆ ಅಪಘಾತ ಧನ ಸಹಾಯ** : ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಕನಿಷ್ಠ **ರೂ. 1,000/-** ಗರಿಷ್ಠ **ರೂ. 10,000/-** ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

4. **ಹೆರಿಗೆ ಭತ್ಯೆ ಸೌಲಭ್ಯ** : ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ **ರೂ. 10,000/-**

ಧನ ಸಹಾಯ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

5. **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ:** ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು

ಕಾರ್ಮಿಕ ಮೃತಪಟ್ಟ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, **ರೂ. 10,000/-** ಧನ ಸಹಾಯ ನೀಡಲಾಗುವುದು.

6. **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ **ರೂ. 1,00,000/-** ಧನ ಸಹಾಯ ನೀಡಲಾಗುವುದು.

7. **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ **ರೂ. 1,00,000/-** ಧನ ಸಹಾಯ ನೀಡಲಾಗುವುದು.

<u>ಧನ ಸಹಾಯವನ್ನು ಫಲಾನುಭವಿಗಳ ಉಳಿತಾಯ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್. ಮೂಲಕ ಜಮಾ ಮಾಡಲಾಗುವುದು.</u>

ಅನುಬಂಧ-04 :

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಡಿ ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಯೋಜನ ಪಡೆದುಕೊಂಡ ಫಲಾನುಭವಿಗಳ ಯೋಜನೆವಾರು ಹಾಗೂ ತಾಲ್ಲೂಕುವಾರು ಮಾಹಿತಿ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ (ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ)				ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ (ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದ್ದು, ಯಾವುದೇ ಆರ್ಥಿಕ ಸೌಲಭ್ಯ ಒದಗಿಸುತ್ತಿಲ್ಲ)	ಕೋವಿಡ್ -19 ರ ವಿಶೇಷ ಪ್ಯಾಕೇಜ್‌ಗಳಡಿ ನೆರವು ಪಡೆದುಕೊಂಡ ಕಾರ್ಮಿಕರು		ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ಕಾರ್ಮಿಕರು (ದಿನಾಂಕ: 06-12-2022 ರವರೆಗೆ)
	ಅಪಘಾತ ಪರಿಹಾರ		ಶೈಕ್ಷಣಿಕ ಧನ ಸಹಾಯ					
	ಪ್ರಕರಣಗಳ ಸಂಖ್ಯೆ	ಸೌಲಭ್ಯದ ಮೊತ್ತ	ವಿದ್ಯಾರ್ಥಿಗಳ ಸಂಖ್ಯೆ	ಸೌಲಭ್ಯದ ಮೊತ್ತ	ನೊಂದಾಯಿತ ಕಾರ್ಮಿಕರ ಸಂಖ್ಯೆ	ಫಲಾನುಭವಿಗಳ ಸಂಖ್ಯೆ	ಮೊತ್ತ	ನೊಂದಾಯಿತ ಕಾರ್ಮಿಕರ ಸಂಖ್ಯೆ
ಭದ್ರಾವತಿ	3	15.00	2	0.20	1003	4895	97.90	2,69,240 (ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಕಾರ್ಮಿಕರ ಮಾಹಿತಿ ಲಭ್ಯವಿದ್ದು ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ)
ಹೊಸನಗರ	–	–	4	0.40	149	597	11.94	
ಸಾಗರ	–	–	–	–	903	2358	47.16	
ಶಿಕಾರಿಪುರ	4	20.00	1	0.10	754	3579	71.58	
ಶಿವಮೊಗ್ಗ	7	35.00	18	1.80	3499	8163	163.26	
ಸೊರಬ	–	–	–	–	1364	1731	34.62	
ತೀರ್ಥಹಳ್ಳಿ	–	–	–	–	576	1901	38.02	
ಒಟ್ಟು	14	70.00	25	2.50	8248	23,224	464.48	

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	489
2)	ಮಾನ್ಯ ಸದಸ್ಯರ ಹೆಸರು	ಶ್ರೀ ಸತೀಶ್ ಎಲ್. ಜಾರಕಿಹೊಳಿ (ಯಮಕನಮರಡಿ)
3)	ಉತ್ತರಿಸಬೇಕಾದ ದಿನಾಂಕ	21-12-2022
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಪ್ರಸ್ತುತ ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು	ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದ ದಾಖಲೆಗಳನ್ವಯ ನವೆಂಬರ್ 2022ರ ಅಂತ್ಯಕ್ಕೆ 2,76,356 ನಿರುದ್ಯೋಗಿಗಳಿರುತ್ತಾರೆ.
ಆ)	ನಿರುದ್ಯೋಗ ಪ್ರಮಾಣ ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	1. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳ ಮೂಲಕ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಜ್ಯದ ಯುವ ಜನತೆಗೆ ಕೌಶಲ್ಯತೆಯೊಂದಿಗೆ ಉದ್ಯಮಶೀಲರನ್ನಾಗಿಸುವ ಮಹತ್ವಕಾಂಕ್ಷೆಯನ್ನು ಹೊಂದಲಾಗಿದೆ ಹಾಗೂ ಪ್ರಾದೇಶಿಕ, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಉದ್ಯೋಗ ಮೇಳಗಳ ಮೂಲಕ ಮತ್ತು ವರ್ಚುಯಲ್ ಉದ್ಯೋಗ ಮೇಳಗಳ ಮೂಲಕ ರಾಜ್ಯದ ಯುವ ಜನತೆಗೆ ಉದ್ಯೋಗಾವಕಾಶ ಒದಗಿಸಲು ಕ್ರಮವಹಿಸಲಾಗಿದೆ. 2. ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ನಗರದ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಕಲಾಂಗರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಈ ಕೆಳಕಂಡ ಉಪಘಟಕವಾರು ನೆರವುಗಳನ್ನು ನೀಡಲು ಕ್ರಮಕೈಗೊಳ್ಳಲಾಗಿದೆ. • **ಸ್ವಯಂ ಉದ್ಯೋಗ ಕಾರ್ಯಕ್ರಮ:-** ಈ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು. • **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:** ಈ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

- **ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:** ಈ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಪಿಎಂ ಸ್ವ-ನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳಿಗೆ ಪ್ರಾಥಮಿಕ ಹಂತದಲ್ಲಿ ರೂ.10,000/- ತದನಂತರ ನಿಯಮಿತವಾಗಿ ಸಾಲ ಮರುಪಾವತಿ ಆಧಾರದ ಮೇಲೆ ರೂ.20,000/- ಮತ್ತು ರೂ.50,000/-ಗಳ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗುವುದು. ಸದರಿ ಸಾಲದ ಮೊತ್ತಕ್ಕೆ ಶೇ.7 ರವರೆಗೆ ತಗಲುವ ಬಡ್ಡಿ ಸಹಾಯಧನವನ್ನು ಕೇಂದ್ರ ಸರ್ಕಾರವು ಭರಿಸಿ ಪಾವತಿಸುತ್ತದೆ.

- **ನಗರದ ವಸತಿ ರಹಿತರಿಗೆ ಆಶ್ರಯ:** – ಈ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು ಹಾಗೂ ಹೊಸ ಆಶ್ರಯ ನಿರ್ಮಾಣ, ಆಶ್ರಯ ನವೀಕರಣಕ್ಕೆ ಬೆಂಬಲವನ್ನು ನೀಡಲಾಗುವುದು.

3. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರಿಗೆ ಎನ್‌ಆರ್‌ಎಲ್‌ಎಂ ಯೋಜನೆಯ ಸೌಲಭ್ಯಗಳು, ಹಣಕಾಸು ನಿರ್ವಹಣೆ, ಉಳಿತಾಯದ ದಶಸೂತ್ರಗಳು, ಕಿರು ಉದ್ದಿಮೆ, ಪಿಎಂಎಫ್‌ಎಂಇ, ಮುಂತಾದ ವಿಷಯಗಳನ್ನು ತರಬೇತಿ ನೀಡಿ, ಸ್ವ-ಉದ್ಯೋಗ ಕಲ್ಪಿಸಿಕೊಡಲು ಒಗ್ಗೂಡಿಸುವ ಮೂಲಕ ಇತರೆ ಇಲಾಖೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ಉತ್ತೇಜಿಸಲಾಗುತ್ತಿದೆ.

4. ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ (ಡಿಡಿಯುಜಿಕೆವೈ) ಮೆ॥ ಶಾಹಿ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು, ಬಸವಕಲ್ಯಾಣ ತಾಲೂಕಿನಲ್ಲಿ ನಿರುದ್ಯೋಗ ಮಹಿಳೆಯರಿಗೆ ಟೇಲರಿಂಗ್ ತರಬೇತಿ ನೀಡಿ ಉದ್ಯೋಗವನ್ನು 90 ಜನ ಮಹಿಳೆಯರಿಗೆ ಮೆ॥ ಶಾಹಿ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇಲ್ಲಿ ಕಲ್ಪಿಸಲಾಗಿದೆ.

5. ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ) ಯೋಜನೆಯಡಿ ಸ್ವ ಉದ್ಯೋಗ ತರಬೇತಿ ಸಂಸ್ಥೆಗಳ ಮೂಲಕ ಗ್ರಾಮೀಣ ಬಡತನ ರೇಖೆಗಿಂತ ಕೆಳಗಿನ ನಿರೋದ್ಯೋಗಿ ಯುವಕ/ಯುವತಿಯರಿಗೆ ಟೇಲರಿಂಗ್, ಬ್ಯೂಟಿಪಾರ್ಲರ್, ಗೊಂಬೆ ತಯಾರಿಕೆ, ಆಭರಣಗಳ ತಯಾರಿಕೆ, ದ್ವಿಚಕ್ರ ರಿಪೇರಿ ತರಬೇತಿ ಸಿಸಿ ಕ್ಯಾಮರಾ ತರಬೇತಿ, ಬೋರವೇಲ್ ಮೋಟಾರ್ ತರಬೇತಿ ಮತ್ತು ಕ್ಯಾಂಡಲ್ ಮೇಕಿಂಗ್ ತರಬೇತಿ, ಹಾರ್ಡ್‌ವೇರ್ ನೆಟ್‌ವರ್ಕಿಂಗ್ ಮುಂತಾದ ಯೋಜನೆಗಳ ಬಗ್ಗೆ ತರಬೇತಿ ನೀಡಿ ಸ್ವ ಉದ್ಯೋಗ ಕಲ್ಪಿಸಿಕೊಡಲಾಗಿದೆ.

6. ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ವು ರಾಜ್ಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.
   - ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು
   - ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು
   - ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು
   - ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾಯಕ್ರಮಗಳು

		ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಆಸಕ್ತ 18 ವರ್ಷ ಮೀರಿದ ನಿರುದ್ಯೋಗ ಯುವಕ/ಯುವತಿಯರನ್ನು ಪತ್ರಿಕಾ ಪ್ರಕಟಣೆ ಹಾಗೂ ಇತರೆ ಉದ್ಯಮಗಳ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. 7. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನೋಂದಾಯಿಸಿ ಕೊಳ್ಳಲಾಗುತ್ತಿದ್ದು, ಅವರ ವಿದ್ಯಾರ್ಹತೆಗೆ ತಕ್ಕಂತೆ ಲಭ್ಯವಿರುವ ಶಿಕ್ಷಣ / ತರಬೇತಿ ಸೌಲಭ್ಯ ಹಾಗೂ ಉದ್ಯೋಗಾವಕಾಶಗಳ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ವೃತ್ತಿ ಸಮಾಲೋಚನೆ ಸೌಲಭ್ಯ ನೀಡಲಾಗುತ್ತಿದೆ. 8. ಸ್ಪಡಿ ಸರ್ಕಲ್: ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಡೆಯುತ್ತಿರುವುದರಿಂದ ಅದರಲ್ಲೂ ಗ್ರಾಮೀಣ ಭಾಗದ ಅಭ್ಯರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗ, ಸಿಬ್ಬಂದಿ ನೇಮಕಾತಿ ಆಯೋಗ, ರೈಲ್ವೆ ಇಲಾಖೆ, ರಕ್ಷಣಾ ಪಡೆ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಲ್ಲಾ ವರ್ಗದ (ಗ್ರೂಪ್-ಎ, ಬಿ & ಸಿ) ನೇಮಕಾತಿಗಾಗಿ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಪರೀಕ್ಷಾ ಪೂರ್ವ ತರಬೇತಿಗಳನ್ನು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ಸ್ಪಡಿ ಸರ್ಕಲ್ ಕಾರ್ಯಕ್ರಮದಡಿ ಸಂಬಂಧಿತ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ ಆಧಾರ ನುರಿತ ಸಂಪನ್ಮೂಲ ವ್ಯಕ್ತಿಗಳ ಉಪನ್ಯಾಸದ ಮೂಲಕ ತರಬೇತಿ ಒದಗಿಸಲಾಗುತ್ತಿದೆ. 9. ಉದ್ಯೋಗ ಮೇಳ: ಉದ್ಯೋಗಾಕಾಂಕ್ಷಿಗಳು ಮತ್ತು ನಿಯೋಜಕರನ್ನು ಒಂದೇ ವೇದಿಕೆಯಡಿ ತರಲು ನೇರ ಸಂದರ್ಶನ, ಅಧಿಸೂಚಿತ ಹುದ್ದೆಗಳಿಗೆ ಪುರಸ್ಕರಣೆ ಹಾಗೂ ಉದ್ಯೋಗ ಮೇಳಗಳನ್ನು ಪ್ರತಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳ ಮೂಲಕ ಆಯೋಜಿಸಲಾಗುತ್ತಿದ್ದು, ಉದ್ಯೋಗಾಕಾಂಕ್ಷಿಗಳು ಅವರವರ ಶೈಕ್ಷಣಿಕ ಅರ್ಹತೆ ಅನುಸಾರ ಖಾಸಗಿ ಕ್ಷೇತ್ರದ ಉದ್ಯೋಗದಾತರನ್ನು ಸಂಪರ್ಕಿಸಿ ಉದ್ಯೋಗ ಪಡೆದುಕೊಳ್ಳುವ ಅವಕಾಶವನ್ನು ಉದ್ಯೋಗ ಮೇಳಗಳ ಮೂಲಕ ಕಲ್ಪಿಸಲಾಗುತ್ತಿದೆ. ಇದರಿಂದ ಉದ್ಯೋಗಾವಕಾಶಗಳ ಲಭ್ಯತೆ ಮತ್ತು ಅಗತ್ಯ ಮಾನವ ಸಂಪನ್ಮೂಲಗಳ ನೇಮಕಕ್ಕೆ ಅವಕಾಶ ನೀಡಲಾಗುತ್ತಿದೆ.

ಸಂಖ್ಯೆ: ಕೌಉಜೀಇ 101 ಕೃತಪ್ರ 2022

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	490
ಮಾನ್ಯ ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್ ಜಾರಕಿಹೊಳಿ
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಅಂತರ್ ಜಾತಿ ವಿವಾಹ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಎಷ್ಟು:</td><td>ಕಳೆದ ಮೂರು ವರ್ಷಗಳಲ್ಲಿ ಅಂತರ್ ಜಾತಿ ವಿವಾಹ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ವಿವರ.
<table>
<tr><th>ಕ್ರ.ಸಂ</th><th>ಕಾರ್ಯಕ್ರಮದ ಹೆಸರು</th><th>2019-20</th><th>2020-21</th><th>2021-22</th><th>2022-23ನೇ (ನವೆಂಬರ್ 2022 ರ ಅಂತ್ಯಕ್ಕೆ</th></tr>
<tr><td>1</td><td>ಅಂತರ್ ಜಾತಿ</td><td>5020</td><td>4142</td><td>6079</td><td>1432</td></tr>
</table>
</td></tr>
<tr><td>ಆ)</td><td>ಫಲಾನುಭವಿಗಳಿಗೆ ನೀಡಲಾದ ಸಹಾಯಧನದ ಮೊತ್ತವೆಷ್ಟು?</td><td>ಅಂತರ್ ಜಾತಿ ವಿವಾಹ ಯೋಜನೆಯಡಿ ಪ್ರೋತ್ಸಾಹಧನ ನೀಡಲಾದ ಫಲಾನುಭವಿಗಳ (ದಂಪತಿಗಳ) ವಿವರ.
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ.ಸಂ</th><th>ಕಾರ್ಯಕ್ರಮದ ಹೆಸರು</th><th>2019-20</th><th>2020-21</th><th>2021-22</th><th>2022-23ನೇ (ನವೆಂಬರ್ 2022 ರ ಅಂತ್ಯಕ್ಕೆ</th></tr>
<tr><td>1</td><td>ಅಂತರ್ ಜಾತಿ</td><td>8951.74</td><td>9986.85</td><td>17169.22</td><td>3456.50</td></tr>
</table>
</td></tr>
</table>

ಸಕಇ 751 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	491
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್ ಜಾರಕಿಹೊಳಿ (ಯಮಕನಮರಡಿ)
ಉತ್ತರಿಸುವವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು
ಉತ್ತರಿಸಬೇಕಾದ ದಿನಾಂಕ	:	21.12.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮುಖ್ಯಮಂತ್ರಿ ಉದ್ಯೋಗ ಸೃಷ್ಟಿ ಯೋಜನೆಯಡಿ (CMEGP) ರಾಜ್ಯದಲ್ಲಿ ಎಷ್ಟು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ;	ರಾಜ್ಯದಲ್ಲಿ ಮುಖ್ಯಮಂತ್ರಿ ಉದ್ಯೋಗ ಸೃಜನ ಯೋಜನೆಯಡಿ (CMEGP) ಐದು ವರ್ಷಗಳಿಂದ ಇದುವರೆಗೂ 3427 ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಾಗಿದೆ. ಸದರಿ ಯೋಜನೆಯನ್ನು 2020-21ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿರುತ್ತದೆ.
ಆ)	ಯೋಜನೆಯಡಿ ಎಷ್ಟು ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ;	ಸಿ.ಎಂ.ಇ.ಜಿ.ಪಿ ಯೋಜನೆಯಡಿ ಐದು ವರ್ಷಗಳಿಂದ 13,708 ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ.
ಇ)	ಎಷ್ಟು ಜನರಿಗೆ ಸಹಾಯಧನ ಮಂಜೂರು ಮಾಡಲಾಗಿದೆ? (ಮತಕ್ಷೇತ್ರವಾರು ವಿವರ ನೀಡುವುದು)	ಸಿ.ಎಂ.ಇ.ಜಿ.ಪಿ ಯೋಜನೆಯಡಿ ಐದು ವರ್ಷಗಳಿಂದ ಇಲ್ಲಿಯವರೆಗೆ 3427 ಜನರಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ - 1** ರಲ್ಲಿ ಲಗತ್ತಿಸಿದೆ.

ಸಿಐ 185 ಎಸ್‌ಎಸ್‌ಐ 2022

(ಎನ್.ನಾಗರಾಜು (ಎಂ.ಟಿ.ಬಿ))

ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ

ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸತೀಶ್ ಎಲ್.ಜಾರಕಿಹೊಳಿ(ಯಮಕನಮರಡಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 491 ಕ್ಕೆ ಅನುಬಂದ-1

ಸಿ.ಎಂ.ಇ.ಜಿ.ಪಿ ಯೋಜನೆಯಡಿ ಕಳೆದ 5 ವರ್ಷಗಳಿಂದ ಸಹಾಯಧನವನ್ನು ಬಿಡುಗಡೆ ಮಾಡಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ

ಕ್ರ.ಸಂ	ಜಿಲ್ಲೆ	2018-19	2019-20	2020-21	2021-22	2022-23 (12/12/2022)
1	ಬಾಗಲಕೋಟೆ	54	53	98	20	4
2	ಬೆಂಗಳೂರು ಗ್ರಾಮಾಂತರ	31	13	6	9	13
3	ಬೆಂಗಳೂರು ನಗರ	2	12	0	0	4
4	ಬೆಳಗಾವಿ	72	53	131	0	6
5	ಬಳ್ಳಾರಿ	44	51	81	7	40
6	ಬೀದರ್	33	31	27	0	6
7	ಚಾಮರಾಜನಗರ	10	16	0	7	13
8	ಚಿಕ್ಕಬಳ್ಳಾಪುರ	12	29	37	11	6
9	ಚಿಕ್ಕಮಗಳೂರು	12	32	18	6	9
10	ಚಿತ್ರದುರ್ಗ	78	48	25	0	22
11	ದಕ್ಷಿಣ ಕನ್ನಡ	43	36	48	17	16
12	ದಾವಣಗೆರೆ	32	33	34	0	8
13	ಧಾರವಾಡ	6	29	34	15	8
14	ಗದಗ	9	7	41	0	8
15	ಹಾಸನ	19	23	18	0	18
16	ಹಾವೇರಿ	17	26	49	1	26
17	ಕಲ್ಬುರ್ಗಿ	5	12	3	0	13
18	ಕೊಡಗು	15	12	35	3	4
19	ಕೋಲಾರ	12	49	10	0	18
20	ಕೊಪ್ಪಳ	19	37	43	0	1
21	ಮಂಡ್ಯ	21	26	29	16	26
22	ಮೈಸೂರು	23	30	28	4	9
23	ರಾಯಚೂರು	9	3	6	0	7
24	ರಾಮನಗರ	3	2	10	12	6
25	ಶಿವಮೊಗ್ಗ	35	35	50	0	3
26	ತುಮಕೂರು	51	62	64	18	16
27	ಉಡುಪಿ	28	65	81	0	4
28	ಉತ್ತರ ಕನ್ನಡ	39	57	92	15	30
29	ವಿಜಯಪುರ	17	42	45	10	62
30	ಯಾದಗಿರಿ	14	14	4	0	0
	ಒಟ್ಟು	**765**	**938**	**1147**	**171**	**406**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 492
ಮಾನ್ಯ ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ
ಉತ್ತರಿಸುವ ದಿನಾಂಕ : 21-12-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಂಡೂರು ತಾಲ್ಲೂಕು ಡಾ.ನಂಜುಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕಾಗಿದ್ದು, ಸಂಡೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ನಿಲಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಸಂಡೂರು ತಾಲ್ಲೂಕಿನಲ್ಲಿ ಈಗಾಗಲೇ 02 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಹೊಸದಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಮಂಜೂರಾತಿ ಕೋರಿ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ.
ಆ)	ಬಂದಿದ್ದಲ್ಲಿ, ಮಂಜೂರಾತಿ ನೀಡಿ ಈ ಜಾತಿಯ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭ ಮಾಡಲಾಗುವುದು;	
ಇ)	ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ವಿವಿಧ ತಾಲ್ಲೂಕುಗಳ ಸುಮಾರು 120 ರಿಂದ 130 ಹಿಂದುಳಿದ ವರ್ಗಗಳು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯಲ್ಲಿ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳನ್ನು ಮಂಜೂರಾತಿ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಹೊಸ ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಮರು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದ್ದು, ಜಿಲ್ಲೆಯಿಂದ ಸೂಕ್ತ ಪ್ರಸ್ತಾವನೆಯನ್ನು ಪಡೆದು ಪರಿಶೀಲಿಸಲಾಗುವುದು. ಆದಾಗ್ಯೂ, ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನುಸಾರ ಕ್ರಮವಹಿಸಲಾಗುವುದು.
ಈ)	ಬಂದಿದ್ದಲ್ಲಿ, ಈ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವನ್ನು ಮಂಜೂರಾತಿ ನೀಡಿ, ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು?	

ಸಕಇ 752 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 493
ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಸಂಡೂರು ಮತಕ್ಷೇತ್ರವಾದ ಸಂಡೂರು ತಾಲ್ಲೂಕಿನ ಬಸ್ ಘಟಕದಲ್ಲಿ ಚಾಲಕ ಮತ್ತು ನಿರ್ವಾಹಕರ ಹುದ್ದೆಗಳು ಬಹಳಷ್ಟು ಖಾಲಿಯಿರುವುದರಿಂದ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳು ಮತ್ತು ಜನ ಸಾಮಾನ್ಯರಿಗೆ ಸಾರಿಗೆ ವ್ಯವಸ್ಥೆಯಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ, ಪ್ರಸ್ತುತ ಸಂಡೂರು ಘಟಕದಲ್ಲಿ ಒಟ್ಟು 61 ಅನುಸೂಚಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಚಾಲನಾ ಸಿಬ್ಬಂದಿಗಳ ಮಂಜೂರಾತಿ 176 ಇದ್ದು, ಪ್ರಸ್ತುತ 169 ಚಾಲನಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 07 ಚಾಲನಾ ಸಿಬ್ಬಂದಿಗಳ ಕೊರತೆ ಮಾತ್ರ ಇರುತ್ತದೆ. ಪ್ರಸ್ತುತ ದಿನಾಂಕ: 05.12.2022 ರಿಂದ ಚಾಲನಾ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ ಹಾಗೂ ಅಂತರ ನಿಗಮ ವರ್ಗಾವಣೆಯಾಗಿ ಬಂದಿರುವ ಚಾಲನಾ ಸಿಬ್ಬಂದಿಗಳ ನಿಯೋಜನೆ ಕಾರ್ಯ ಪ್ರಗತಿಯಲ್ಲಿದ್ದು, ಸಂಡೂರು ಘಟಕಕ್ಕೆ ಕೊರತೆ ಇರುವ ಚಾಲನಾ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು.
ಆ.	ಬಂದಿದ್ದಲ್ಲಿ, ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿ, ಜನರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು;	ಮುಂದುವರೆದು, ಸಂಡೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 117 ಗ್ರಾಮಗಳು ಇದ್ದು, ಇವುಗಳಲ್ಲಿ ಒಟ್ಟು 116 ಗ್ರಾಮಗಳಿಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗನುಗುಣವಾಗಿ ಸಮಯಕ್ಕೆ ಸರಿಯಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 01 ಗ್ರಾಮವಾದ ರಾಮಘಡ ಗ್ರಾಮವು ಸಂಡೂರು-ಹೊಸಪೇಟೆ ಮಾರ್ಗದಲ್ಲಿ ಬರುವ ಸಿದ್ದಾಪುರ ಗ್ರಾಮಕ್ಕೆ ಹೊಂದಿಕೊಂಡಿರುವ ಗುಡ್ಡದ ಮೇಲೆ ಇರುತ್ತದೆ. ಸಿದ್ದಾಪುರ ಗ್ರಾಮದಿಂದ ರಾಮಘಡ ಗ್ರಾಮವು 03 ಕಿ.ಮೀ. ಅಂತರದಲ್ಲಿರುತ್ತದೆ. ಸಂಡೂರು-ಹೊಸಪೇಟೆ ಮಾರ್ಗದಲ್ಲಿ 43 ಸರತಿಗಳನ್ನು ಸಿದ್ದಾಪುರ ಗ್ರಾಮಕ್ಕೆ ನಿಲುಗಡೆ ಕಲ್ಪಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ರಾಮಘಡ ಗ್ರಾಮಸ್ಥರು ಸದರಿ 43 ಸರತಿಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದು, ಜನಸಾಮಾನ್ಯರಿಗೆ ತೊಂದರೆಯಾಗದಂತೆ ಸಾರಿಗೆ ಸೌಲಭ್ಯ

		ಕಲ್ಪಿಸಲಾಗುತ್ತಿದೆ.
ಇ.	ಈ ತಾಲ್ಲೂಕಿನ ಸಾರಿಗೆ ಬಸ್ ಘಟಕದಲ್ಲಿ 68 ಬಸ್ಸುಗಳು, ಅವಶ್ಯವಿದ್ದು, ಅದರಲ್ಲಿ 28 ಬಸ್ಸುಗಳು ಸಾರಿಗೆಗೆ ಮಾನ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ 28 ಬಸ್ಸುಗಳನ್ನು ಯಾವಾಗ ಒದಗಿಸಲಾಗುವುದು?	ಸಂಡೂರ ಘಟಕದಲ್ಲಿ 68 ವಾಹನಗಳ ಪೈಕಿ 03 ವಾಹನಗಳನ್ನು ಈಗಾಗಲೇ ನಿಷ್ಕ್ರಿಯೆಗೊಳಿಸಲಾಗಿರುತ್ತದೆ. ಪ್ರಸ್ತುತ 65 ವಾಹನಗಳಿದ್ದು, ಅವುಗಳಲ್ಲಿ ಸಾರಿಗೆಗೆ ಮಾನ್ಯವಿಲ್ಲದ ಬಸ್ಸುಗಳು ಕಾರ್ಯಾಚರಣೆಯಲ್ಲಿರುವುದಿಲ್ಲ. ಸಂಸ್ಥೆಯಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಲೇಲ್ಯಾಂಡ್, ಟಾಟಾ ಮೋಟಾರ್ಸ್, ಐಶರ್ ಮತ್ತು ತತ್ಸಮಾನ ಮಾದರಿಯ ವಾಹನಗಳ ಜೀವಿತಾವಧಿಯನ್ನು 9.00 ಲಕ್ಷ ಹಾಗೂ ಹವಾನಿಯಂತ್ರಿತ ಕರೋನಾ ಸ್ಲೀಪರ್ ವಾಹನದ ಜೀವಿತಾವಧಿಯನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸಲಾಗಿರುತ್ತದೆ. ನಿಗದಿತ ಕಿ.ಮೀ. ಕ್ರಮಿಸಿದ ವಾಹನಗಳು ಸುಸ್ಥಿತಿಯಲ್ಲಿದ್ದಲ್ಲಿ, ಅವುಗಳನ್ನು ಸಾರಿಗೆ ಪ್ರಾಧಿಕಾರದಿಂದ ರಹದಾರಿ ನವೀಕರಣ ಕೈಗೊಂಡು ಕಾರ್ಯಾಚರಣೆಯನ್ನು ಮುಂದುವರೆಸಲಾಗುತ್ತದೆ. ಸರ್ಕಾರದ ಆದೇಶದಂತೆ 15 ವರ್ಷ ವಯೋಮಿತಿಯ ವಾಹನಗಳನ್ನು ಕಾರ್ಯಾಚರಣೆಯಿಂದ ಸ್ಥಗಿತಗೊಳಿಸಿ ನಿಷ್ಕ್ರಿಯೆಗೊಳಿಸಲಾಗುತ್ತಿದೆ. ಪ್ರಸ್ತುತ ಸಂಡೂರ ಘಟಕದಲ್ಲಿ 65 ವಾಹನಗಳು ಇದ್ದು, ಇವುಗಳ ಪೈಕಿ 31 ವಾಹನಗಳು ನಿಗದಿತ 9.00 ಲಕ್ಷ ಕಿ.ಮೀ. ಗಿಂತ ಹೆಚ್ಚಿನ ಕಿ.ಮೀ. ಕ್ರಮಿಸಿದ್ದು, 34 ವಾಹನಗಳು 9.00 ಲಕ್ಷಕ್ಕಿಂತ ಕಡಿಮೆ ಕಿ.ಮೀ. ಕ್ರಮಿಸಿರುವ ವಾಹನಗಳಿರುತ್ತವೆ. ನಿಗದಿತ 9.00 ಲಕ್ಷ ಕಿ.ಮೀ. ಕ್ರಮಿಸಿರುವ ವಾಹನಗಳ ಭೌತಿಕ ಮತ್ತು ತಾಂತ್ರಿಕ ಸ್ಥಿತಿಯನ್ನು ಪರಿಶೀಲನೆಗೆ ಒಳಪಡಿಸಿ, ಕಾರ್ಯಾಚರಣೆಗೆ ಯೋಗ್ಯವಿರುವ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಕಾರ್ಯಾಚರಣೆಗೆ ಯೋಗ್ಯವಿಲ್ಲದ ಮತ್ತು ದುರಸ್ಥಿಗೆ ಲಾಭದಾಯಕವಲ್ಲದ ವಾಹನಗಳನ್ನು ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 650 ಹೊಸ ವಾಹನಗಳ ಖರೀದಿ ಕುರಿತು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಹೊಸ ವಾಹನಗಳ ಸೇರ್ಪಡೆ ನಂತರ ನಿಗದಿತ ಕಿ.ಮೀ. ಗಳನ್ನು ಕ್ರಮಿಸಿರುವ ವಾಹನಗಳನ್ನು ಅವುಗಳ ಸ್ಥಿತಿಗನುಗುಣವಾಗಿ ಹಂತ ಹಂತವಾಗಿ ನಿಷ್ಕ್ರಿಯೆಗೊಳಿಸಲು ಮತ್ತು ಬಳ್ಳಾರಿ ವಿಭಾಗದ ಸಂಡೂರು ಘಟಕವನ್ನೊಳಗೊಂಡಂತೆ

DFA/391456

		ಸಂಸ್ಥೆಯ ವ್ಯಾಪ್ತಿಯ ವಿಭಾಗ/ ಘಟಕಗಳ ಅಗತ್ಯಕ್ಕೆ ತಕ್ಕಂತೆ ಹೊಸ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 263 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**494**
ಸದಸ್ಯರ ಹೆಸರು	:	**ಶ್ರೀ ತುಕಾರಾಮ್ ಈ. (ಸಂಡೂರ್)**
ಉತ್ತರಿಸುವ ದಿನಾಂಕ	:	**21-12-2022**
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 2018 ರಿಂದ 2020ರ ಅವಧಿಯಲ್ಲಿ ಅರಿವು ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಎಷ್ಟು ವಿದ್ಯಾರ್ಥಿಗಳನ್ನು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಳುಹಿಸಲಾಗಿದೆ; (ವಿವರಗಳನ್ನು ಒದಗಿಸುವುದು)</td><td>ಅರಿವು ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವುದಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ "ಅರಿವು ಯೋಜನೆ" ಅನುಷ್ಠಾನದಲ್ಲಿರುತ್ತದೆ.

ಆದರೆ, "ಪ್ರಬುದ್ಧ" ಎಂಬ ಯೋಜನೆಯ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸಲಾಗುತ್ತಿದ್ದು, ಈ ಯೋಜನೆಯ ಮೂಲಕ 2018 ರಿಂದ 2020ರ ವರೆಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಸಂಖ್ಯಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಪ.ಜಾತಿ</th><th>ಪ.ಪಂಗಡ</th><th>ಒಟ್ಟು</th></tr>
<tr><td>01</td><td>2018-19</td><td>62</td><td>6</td><td>68</td></tr>
<tr><td>02</td><td>2019-20</td><td>48</td><td>5</td><td>53</td></tr>
<tr><td>03</td><td>2020-21</td><td>45</td><td>7</td><td>52</td></tr>
<tr><td colspan="4" align="right">ಒಟ್ಟು</td><td>173</td></tr>
</table>
(ವಿವರಗಳನ್ನು ಅನುಬಂಧ-1 ರಿಂದ 6 ರಲ್ಲಿ ನೀಡಲಾಗಿದೆ).</td></tr>
<tr><td>ಆ)</td><td>2021 ರಿಂದ ಇಂದಿನವರೆಗೆ ಈ ಅರಿವು ಯೋಜನೆಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಮಾಹಿತಿ ನೀಡುವುದು).</td><td>ಸಮಾಜ ಕಲ್ಯಾಣ ಇಲಾಖೆಯ ಮೂಲಕ "ಅರಿವು" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.

ಮುಂದುವರೆದಂತೆ, ಅರಿವು ಯೋಜನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಗಳಿಂದ ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಅನುದಾನ</td></tr>
</table>

		ಮೀಸಲಿರಿಸಲಾಗಿದೆ. ಜಿಲ್ಲಾವಾರು ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ-7 ರಲ್ಲಿ ನೀಡಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಬುದ್ಧ ಯೋಜನೆಯನ್ನು ಸ್ಥಗಿತಗೊಳಿಸಲಾಗಿರುವುದಿಲ್ಲ.

ಸಕಇ 740 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಅನುಬಂಧ-01

ಪರಿಶಿಷ್ಟ ಜಾತಿ ಅಭ್ಯರ್ಥಿಗಳ ವಿವರ 2018-19

Sl.No	Applicant Name	Subject	Forign University	Country
1	2	3	4	5
1	PRAJWAL V	Master of Data Science	Monash University, Australia	AUSTRALIA
2	PRAMOD MB	PTA Physio Therapy	The Conestoga College Institute of Technology and Advanced Learning, Canada	CANADA
3	SRIDHAR NAICK M	MS IN dATA SCIENCE	MONASH UNIVERSITY, VIC 3800, AUSTRALIA	AUSTRALIA
4	LAKSHMIPATHI K N	HORTICULTURE	WAGENINGEN UNIVERSITY & RESEARCH	OTHERS
5	TILAK RAJ N	electrical and telecommunication engineering	UNIVERSITAT AUTONOMA DE BARCELONA (ELECTRICAL AND TELECOMMUNICATION ENGINEERING)	OTHERS
6	DHANUSH G	mobility systems engineering and management	KARLSRUHER INSTITUTE FOR TECHNOLOGY (KIT)	GERMANY
7	RAHUL S NAIK	MASTER OF BUSINESS	MONASH UNIVERSITY	AUSTRALIA
8	B U LOCHAN	Advanced computer science	Cardiff University, UK	U.K
9	ANUSHA V	Human cOMPUTER INTERACTION	Georgia Institute of Technology	U.S.A
10	KATYAYINI S	European & international business law	LEIDEN UNIVERSITY	OTHERS
11	AKASH KUBER	MSc. sustainable automotive engineering	[University of Warwick] QS university ranking : 57	U.K
12	LOKESH KUMAR S	Masters in Applied Cyber Security	Queens University Belfast, UK	U.K
13	SHIVA SAGAR B	COMPUTER SCIENCE	DEPARTMENT OF COMPUTER SCIENCE, STONY BROOK UNIVERSITY, NEW YORK 11794	U.S.A
14	SATHISH KUMAR A	Computer systems engineering with concentration in internet of things	Northeastern University , Boston	U.S.A

15	S SNEHA SHREE	INFORMATION SYSTEMS	NORTHEASTERN UNIVERSITY BOSTON MA USA	U.S.A
16	SANTOSH BHAJANTRI	Automotive Management	HTW, Berlin	GERMANY
17	S.B MAHARAJ	aPPLIED SCIENCES	HOCHSCHULE ROSENHEIM UNIVERSITY OF APPLIED SCIENCES	GERMANY
18	PRUTHVI KRISHNA	international logistics and supply chain management	INTERNATIONAL SCHOOL OF MANAGEMENT(ISM)	GERMANY
19	VIDYA B.M	Electrical engineering	SOUTHERN ILLINOIS UNIVERSITY EDWARDSVILLE	U.S.A
20	DIVAKAR R	Masters Embedded Systems	Technische Universitat Chemnitz, Germany	Germany
21	PRIYANKA GS	Master of Science in High Integrity Systems MA	Frankfurt University of Applied Sciences, Germany	Germany
22	NAGARAJ R	masters of enginee	masters of enginee swinburin university of technoloy australia	AUSTRALIA
23	RAKESHA S	Process, Energy, and Environmental Systems Engineering	Technical University Berlin	GERMANY
24	SANGAM K R	industrial design	Coventry University	U.K
25	REVATHIPRIYA V	psychology	UNIVERSITY OF ABERDEEN	U.K
26	DHEERAJ KURUGOD R	COMPUTER SCIENCE	LAKEHEAD UNIVERSITY, THUNDER BAY, ONTARIO, CANADA, P7B5E1	CANADA
27	VISHAL M SHARBIDAR	Commercial vehicle technology	University of Kaiserslautern	GERMANY
28	KOMAL	groundwater management	TECHNISCHE UNIVERSITAT BERGAKADEMIE FREIBERG	GERMANY
29	SUPRITH K.T	luxury & fashion management	Skema Business School	FRANCE

30	HARSHITHA S S	Management in information systems	Northeastern university	U.S.A
31	SAGAR R	MSc in Structural Engineering and Building Technology	CHALMERS UNIVERSITY SWEDEN	Sweeden
32	GAYATHRI A KUMAR	CONSTRUCTION ENGINEERING	UNIVERSITY OF TEXAS AT ARLINGTON	U.S.A
33	GOPIKA K	International Buisiness Sandwich Placement	University of Hertfordshite, UK	U.K
34	T S SHASHISHEKAR	SYSTEMS CONTROLS AND MECHATRONICS	CHALMERS UNIVERSITY SWEDEN	OTHERS
35	GANDHARVA APPAGERE	ELECTROMAGNETICS, FUSION AND SPACE ENGINEERING	KTH ROYAL INSTITUTE OF TECHNOLOGY, STOCKHOLM	OTHERS
36	AJITH C.S	NUCLEAR ENGINEERING	politecnico di milano pizza leonardo da vinci, 32 20133- milano, italy	OTHERS
37	NAVEEN B.S	master of engineering in civil engineering	ROYAL MELBOURNE INSTITUTE OF TECHNOLOGY(RMIT)	AUSTRALIA
38	PRAJWAL S	ADVANCED BIOCHEMISTRY	UNIVERSITY OF STRATHCLYDE	U.K
39	SAGARIKA N	SOFTWARE ENGINEERING	UNIVERSITY OF GREENWICH	U.K
40	NEETHA SAGAR J	computer science	Université Nice-Sophia Antipolis (INRIA)	FRANCE
41	VIJAYKUMAR P NAIK	MATERIALS ENGINEERING AND NANOTECHNOLOGY	POLITECNICO DI MILANO, ITALY	OTHERS
42	BASAVARAJ SHIVAPPA LAMANI	environmental and land planning engineering	POLITECNICO DI MILANO ITALY	OTHERS
43	AMIT KASANAPPA PAWAR	electrical engineering	POLITECNICO DI MILANO UNIVERSITY,MILAN,ITALY	OTHERS
44	C.N RAJEEV KUMAR	MECHANICAL ENGINEERING	UNIVERSITY COLLEGE LONDON UCL UK-ENGLAND	U.K

45	PAVANA K	PhD in Energy and Power	Cranfield University	U.K
46	JEEVAN S M	COMPUTER SCIENCE	SRH HOCHSCHULE HEIDELBERG	GERMANY
47	MALLIKARJUNA	IT INFORMATION TECHNOLOGY	GRIFFITH COLLEGE DUBLIN,IRELAND	OTHERS
48	NIKHIL C CHOWAN	Masters in Technology Management Programme	University of Illinois at Urbana-Champaign USA	USA
49	SOWMYA M	SOFTWARE ENGINEERING	Queens University Belfast, UK	U.K
50	K.PALLAVI	computer and information systems	Northwest missouri state university	U.S.A
51	SAVITHA R	Ph.D in Urban Education and Leadership	University of Massachusetts, Boston, USA	U.S.A
52	AYAPPA.K	computer science	University Of North Carolina	U.S.A
53	HARISH G	computer science	NORTHEASTERN UNIVERSITY	U.S.A
54	A AKSHAY	mechanical engineering	UNIVERSITY OF HOUSTON	U.S.A
55	KRISHISHVAR V	chemical engineering	ARIZONA STATE UNIVERSITY	U.S.A
56	P JAYASURYA	masters in industrial engineering	Rochester Institute of Technology	U.S.A
57	KUSHAL DEV S	aero spacing engineering	IOWA State University	U.S.A
58	NEERJA N	COMPUTER SCIENCE	UNIVERSITY OF TEXAS AT ARLINGTON	U.S.A
59	MANOJ V	data science	DREXEL UNIVERSITY	U.S.A

60	ROOPESH KUMAR R	DATA SCIENCE	MONASH UNIVERSITY	AUSTRALIA
61	MOHAN.M	master of engineering in interworking	DALHOUSIE UNIVERSITY	CANADA
62	VARNIKA V S	Information Systems	STEVENS INSTITUTE OF TECHNOLOGY	U.S.A

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ.
ಬೆಂಗಳೂರು

ಪರಿಶಿಷ್ಟ ಜಾತಿ ಅಭ್ಯರ್ಥಿಗಳ ವಿವರ 2019-20

Sl	Name	Course	University Name	Country
1	2	3	4	5
1	S SHREYAS	MASTER OF PROFESSIONAL ACCOUNTING	GRIFFITH UNIVERSITY	Australia
2	MANJUREKHAR G M	master of professional accounting	GRIFFITH UNIVERSITY	Australia
3	MADHUSUDHAN K V	ELECTRICAL ENGINEERING	DEAKIN UNIVERSITY	Australia
4	ABHISHEK R HOSAMANI	computer science	University of Texas at Dallas	USA
5	G D SUJAY	COMPUTER SCIENCE	ARIZONA STATE UNIVERSITY	USA
6	PRAJNA M K	COMPUTER SCIENCE	UNIVERSITY OF CENTRAL FLORIDA	USA
7	PAVAN KUMAR B S	Engineering Mangement	Northeastern University,	USA
8	SHRAVAN KOMARABATTINI	Computer science	Purdue University	USA
9	VISHAL ESHWAR DODDAMANI	INFORMATION SYSTEMS	UNIVERSITY OF MARYLAND	USA
10	TRISHA R	masters in information technology	university of technology sydney	Australia
11	DEEPTHI M	ELECTRICAL ENGINEERING AND RENEWABLE ENERGY SYSTEMS	UNIVERSITY OF LEEDS	UK
12	MADHURI V N	ELECTRICAL ENGINEERING	UNIVERSITY OF TEXAS	USA
13	H K PRAMOD	RENEWABLE ELECTRICITY PRODUCTION	UPPSALA UNIVERSITY	Sweden
14	SUMAN R THIMMAPUR	ma in fashion futures	university of the arts london	UK
15	G Anjupriya	Information technology	FLORIDA STATE UNIVERSITY	USA
16	ANIL KUMAR G K	MASTER OFSCIENCE AGRICULTURAL SCIENCESIN TROPHICS AND SUB TROPHICS	UNIVERSITY OF HOHENHEIM	Germany
17	Karthik K	Masters of science in electronics with professional internship	QUEENS UNIVERSITY BELFAST	UK

18	Sachin R C	MASTER OF ENGINEERING(MECHANICAL ENGINEERING)	RMIT UNIVERSITY AUSTRALIA MC258-MASTER OF ENGINEERING(MECHANICAL ENGINEERING)	Australia
19	Sushmitha D	MBA	University of Strathclyde,UK	UK
20	Manish Milinder	Master of business administration	Victoria University, Melbourne	Australia
21	SHIVRAJ H GONDE	Master of Science in Communications Engineering	Technical University of Munich	Germany
22	Prajval S Mylar	INFORMATION SYSTEMS	NORTHEASTERN UNIVERSITY	USA
23	Kushi Vikram	computer eng	university of toronto	Canada
24	Varnith D	INTERNATIONAL AUTOMOTIVE ENGINEERING	RMIT UNIVERSITY	Australia
25	Sachin S V	International business management	Griffith College	Ireland
26	Abhishek Vinayak Shreyakar	Engineering Management	RMIT University	Australia
27	AKASHDEEP G	computer science	New Jersey Institute of Technology	USA
28	Nithyashree V	information sysytem	northeastern univeristy	USA
29	Svarna Punith	MASTER OF COMPUTER SCIENCE	THE UNIVERSITY OF ADELAIDE	Australia
30	Kavya J	COMPUTER SOFTWARE ENGINEERING	SEVENS INSTITUTE OF TECHNOLOGY	USA
31	Vishalkumar	MASTERS IN ENERGY EFFICIENT AND SUSTAINABLE BUILDING	RMIT UNIVERSITY	Australia
32	Praveen Kumar M H	MASTER IN ENGG MANAGEMENT	UNIVERSITY OF SOUTH AUSTRALIA	Australia
33	Suhasini G	Master of advancede health services mangement	UNIVERSITY OF TECHNOLOGY SYDNEY	Australia
34	Sudarshan D S	master of advance engineering-additive manufacturing	MONASH UNIVERSITY	Australia
35	Rahul N	COMPUTER SCIENCE	University of Massachusetts Boston	USA

36	Jeevan Kumar N	management of technology	Delft University of Technology	Netherlands
37	Mahesh Babu V	construction project management	OXFORD BROOKES UNIVERSITY	UK
38	RAKSHITHA RAJ P	MASTER OF CONSTRUCTION MANAGEMENT	DEAKIN UNIVERSITY AUSTRALIA	Australia
39	Sahana S	Telecommunications and electronics	University Of Technology Sydney	UK
40	Nishanth Raj	masters of business information systems	MONASH UNIVERSITY	Australia
41	Shreedhar Ramesh Birdikar	supply chain management	Sheffield hallam university	UK
42	Archana G	International Business management with marketing	Kingston university London	UK
43	Abhiman S	MSc in Human Resource Organizations (IER & HRM)	"LONDON SCHOOL OF ECONOMICS AND POLITICAL SCIENCE HUGHTON STREET, LONDON, THE UNITED KINGDOM "	UK
44	Himanshu	computer science	University of Massuchusetts	USA
45	Sujeeth Kumar C R	MBA	Victoria University	Australia
46	Chaya L	MS IN CYBERSECURITY	NORTHEASTERN UNIVERSITY	USA
47	Shreekanth V	civil engineering	university of Illinois at chicago.	USA
48	Sandeep K	electrical and information technology	KARLSRUHE INSTITUTE OF TECHNOLOGY	Germany

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಬೆಂಗಳೂರು

ಪರಿಶಿಷ್ಟ ಜಾತಿ ಅಭ್ಯರ್ಥಿಗಳ ವಿವರ 2020-21

Sl.No	Name	COURSE	UNIVERSITY	Country
	2	3	4	5
1	Manoj M	Construction Management	DEAKIN UNIVERSITY	Australia
2	Shivashankar	Civil Engineering	University of East london	UK
3	Tejas K	LAW	UNIVERSITY OF MELBOURNE	UK
4	Manoghna K	Industrial engineering	UNIVERSITY AT BUFFALO	USA
5	Lohith M	HUMAN NUTRITION(MSC)	UNIVERSITY OF SURREY	UK
6	A B Rahul	additive manufacturing	UPPSALA UNIVERSITY	Sweden
7	Anusha N	masters of engineering in electrical engineering	Australian National University	Australia
8	Shwetha Srinivas	COMPUTER SCIENCE	CLEMSON UNIVERSITY,SOUTH CAROLINA	USA
9	Impana Bilagi	PUBLIC HEALTH	LONDON SCHOOL OF HYGIENE AND TROPICAL MEDICINE	UK
10	Kumaraswamy H N	Mechanical engineering and management	Hamburg University of Technology (TUHH)	Germany
11	Dheeraj A	data science and analytics	Brunel University London	UK
12	Sharath H N	business analytics	university of Texas at Dallas	USA
13	Neelakanth A Lamani	food science & AGRICULTURAL chemistry	McGILL UNIVERSITY	Canada
14	Chandrakiran A C	MASTERS OF INFORMATION SYSTEMS	DEAKIN UNIVERSITY	Australia
15	Mahima Moolabharathi	ENVIRONMENTAL STUDIES AND SUSTAINABILITY SCIENCE	LUND UNIVERSITY	Sweden
16	Swathi G	international finance, mfin	UNIVERSITY OF GLASGOW, SCOTLAND	UK

17	R Aruna	MS iN Analytics	Northeastern University College of Professional Studies	USA
18	Akash R Meghavath	joint master program in space science & technology - spacemaster	Lulea University of Technology	UK
19	Neha R	data science	University of Bath	UK
20	J Kavya	ENVIRONMENTAL MANAGEMENT FOR BUSINESS	CRANFIELD UNIVERSITY	UK
21	Sindhu C K	masters of applied computer science	Concordia University Received Offer Letter	Canada
22	Archana S R	MASTER OF SCIENCE IN INTERNATIONAL MANAGEMENT & GLOBAL BUSINESS	UNIVERSITY OF LIMERICK	Ireland
23	Vinutha C	Public health	University of dundee	UK
24	Naveen Kumar	supply chain management	UNIVERSITY COLLEGE DUBLIN	Ireland
25	Shashank S	Automotive mechatronics	cranfield university	UK
26	Jyothi C	Computer science	OREGON STATE UNIVERSITY	USA
27	Tejas K	master of electronic and sport engineering	Griffith University. Queensland Australia.	Australia
28	K B Harshitha	Master of science (criminology)	University of Stirling	UK
29	Charumathi M	MS in social and cultural psychology	london school of economics and political science	UK
30	Elangeshwaran	COMPUTATIONAL NEUROSCIENCE AND COGNITIVE ROBOTICS	UNIVERSITY OF BIRMINGHAM	UK
31	Arun R	MASTERS IN CIVIL ENGINEERING	MASSEY UNIVERSITY,	New Zealand
32	Chaya Kumari R	MASTERS IN CIVIL ENGINEERING	UNIVERSITY OF AUCKLAND	New Zealand
33	Velumurugan N J	Msc human nutrition	University of Glasgow	UK
34	K Anitha	human rights law	UNIVERSITY OF ESSEX	Italy

35	R Prem Kumar	master of science in business analytics	SOUTHERN METHODIST UNIVERSITY	USA
36	Chaitra C	Space Systems engineering	University of Southampton	UK
37	Sri Rajeev N	data analytics	Clark University	USA
38	Pavan M	Robotics	University of bridgeport	USA
39	Suhas G	industrial engineering	University of Haven Connecticut Boston	USA
40	Rachana R S	NETWORK ARCHITECTURE AND SECURITY ANALYTICS	Sault College Applied Arts and Technology	Canada
41	Koushik Mani M L	robotics engineering	UNIVERSITY OF GENOVA	Italy
42	Nagasen Sudhakar Joglekar	master of science	university of genova	Italy
43	Pallavi G K	Masters of public health	University of Leeds	UK
44	Himarshini Ganga	master of data analytics	queensland university of technology	Australia
45	Anil Kumar G	Masters in Technology management	University of Illinois Urbana Champaign	USA

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ.
ಬೆಂಗಳೂರು

ಅನುಬಂಧ-04

ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ವಿವರ 2018-19

Sl.No	Name	COURSE	UNIVERSITY	Country
1	2	3	4	5
1	Sharath D.S	MSc Adv Mech Eng Science	University of Southampton , United Kingdom	U.K
2	Akshay Kumar Mannoor	Masters in Management (International Masters in Management)	Audencia Business School, France	France
3	Arvinda S	MAST in Applied Mathematics	St. Catharin's College Cambridge, University of Cambridge,	U.K
4	Asha M B	Ph.D in Food Science	National Pingtung University of Science and Technology, Taiwan	Taiwan
5	Spoorthi M	Master of Information Technology,	Queensland University of Technology, Brisbane Australia	Australia
6	Vijayakumar R	Master of Engineering (Professional)	Australia Deakin University,	Australia

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ.
ಬೆಂಗಳೂರು

ಅನುಬಂಧ-05

ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ವಿವರ 2019-20

Sl.No	Name	COURSE	UNIVERSITY	Country
1	2	3	4	5
1	Sushmitha V	Master of Engineering	Queensland University of Technology, Brisbane Australia	Australia
2	Kesar T N	Master in computer and Information Science	University of Central Florida	USA
3	Gowtham K	Master of Information Science	UNSW Sydney Australia	Australia
4	Vishavaprasad C N	Master of Managment Science	University of Connecticut,	USA
5	Preethi K N	Master of Computer Engineering	Arizona State University,	USA

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಬೆಂಗಳೂರು

ಅನುಬಂಧ-06

ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ವಿವರ 2020-21

Sl.No	Name	COURSE	UNIVERSITY	Country
1	2	3	4	5
1	Nithin Nagendra	Master's programme in Additive Manufacturing.	Uppsal University	SWEDEN
2	Yashasvini S K	Management Information Systems	University of Houston Clear Lake, USA	USA
3	S Janakirama Nayaka	Master of Engineering (Mechanical Engineering)	RMIT(Royal Melbourne Institute of Technology)University	Australia
4	Sagar B	Master of Engineering	Deakin undersity	Australia
5	M Vasudha	Masters in Electrical and Computer Engieering,	University of Ottawa, Canada	Canada
6	Abhijith Ramappa	Master of Engineering (Meng) Program in Robotics and Control,	Western University, Ontario, Canada.	Canada
7	Abhishek Ramappa	Master of Engineering (Meng) Program in Robotics and Control,	Western University, Ontario, Canada.	Canada

ಮುಖ್ಯ ಆಡಳಿತಾಧಿಕಾರಿ
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ.
ಬೆಂಗಳೂರು

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ),
ಅನುಬಂಧ-7
ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ತುಕಾರಾಮ್ ಈ. (ಸಂಡೂರ್) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ- 494 ಕ್ಕೆ ನಿಗಮದ ಉತ್ತರ.

(ಲಕ್ಷ ರೂ.ಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಅರಿವು ಶೈಕ್ಷಣಿಕ (ಪ್ರಸಕ್ತ ಸಾಲಿನಲ್ಲಿ ಸಿ.ಇ.ಟಿ. ಮುಖಾಂತರ ಹೊಸದಾಗಿ ಆಯ್ಕೆಯಾದವರಿಗೆ)	
		ಭೌತಿಕ	ಆರ್ಥಿಕ
1	ಬೆಂಗಳೂರು ಉ.	39	39.00
2	ಬೆಂಗಳೂರು ದ.	45	45.00
3	ಬೆಂಗಳೂರು ಗ್ರಾ॥	12	12.00
4	ರಾಮನಗರ	12	12.00
5	ಶಿವಮೊಗ್ಗ	21	21.00
6	ತುಮಕೂರು	33	33.00
7	ಚಿತ್ರದುರ್ಗ	18	18.00
8	ಕೋಲಾರ	18	18.00
9	ಚಿಕ್ಕಬಳ್ಳಾಪುರ	15	15.00
10	ದಾವಣಗೆರೆ	21	21.00
11	ಮೈಸೂರು	34	34.00
12	ಮಂಡ್ಯ	21	21.00
13	ಚಾಮರಾಜನಗರ	12	12.00
14	ಉಡುಪಿ	16	16.00
15	ದಕ್ಷಿಣ ಕನ್ನಡ	25	25.00
16	ಹಾಸನ	21	21.00
17	ಚಿಕ್ಕಮಗಳೂರು	15	15.00
18	ಕೊಡಗು	6	6.00
19	ಬೆಳಗಾವಿ	54	54.00

20	ಬಾಗಲಕೋಟೆ	21	21.00
21	ವಿಜಯಪುರ	24	24.00
22	ಗದಗ	12	12.00
23	ಧಾರವಾಡ	21	21.00
24	ಉತ್ತರ ಕನ್ನಡ	18	18.00
25	ಹಾವೇರಿ	18	18.00
26	ಕಲಬುರಗಿ	27	27.00
27	ಯಾದಗಿರಿ	12	12.00
28	ಬಳ್ಳಾರಿ	15	15.00
29	ಬೀದರ್	18	18.00
30	ರಾಯಚೂರು	21	21.00
31	ಕೊಪ್ಪಳ	15	15.00
32	ವಿಜಯನಗರ	15	15.00
	ಒಟ್ಟು ಮೊತ್ತ	675	675.00

ವ್ಯವಸ್ಥಾಪಕ ನಿರ್ದೇಶಕರು.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ತುಕಾರಾಮ್ ಈ. (ಸಂಡೂರ್) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ- 494 ಕ್ಕೆ ನಿಗಮದ ಉತ್ತರ.

(ಲಕ್ಷ ರೂ.ಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಕರ್ನಾಟಕ ಮಡಿವಾಳ ಮಾಚೀದೇವ ಅಭಿವೃದ್ಧಿ ನಿಗಮ(ನಿ),		ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ(ನಿ),	
		ಅರಿವು ಶೈಕ್ಷಣಿಕ ಸಾಲ ಯೋಜನೆ		ಅರಿವು ಶೈಕ್ಷಣಿಕ ಸಾಲ ಯೋಜನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಂಗಳೂರು ಉ.	1	0.50	2	1.54
2	ಬೆಂಗಳೂರು ದ.	1	0.50	1	0.70
3	ಬೆಂಗಳೂರು ಗ್ರಾ||	1	0.50	1	0.70
4	ರಾಮನಗರ	2	1.00	1	0.70
5	ಶಿವಮೊಗ್ಗ	4	2.00	1	0.70
6	ತುಮಕೂರು	4	2.00	1	0.70
7	ಚಿತ್ರದುರ್ಗ	2	1.00	1	0.70
8	ಕೋಲಾರ	2	1.00	1	0.70
9	ಚಿಕ್ಕಬಳ್ಳಾಪುರ	2	1.00	1	0.70
10	ದಾವಣಗೆರೆ	2	1.00	1	0.70
11	ಮೈಸೂರು	2	1.00	2	1.52
12	ಮಂಡ್ಯ	2	1.00	1	0.70
13	ಚಾಮರಾಜನಗರ	2	1.00	1	0.70
14	ಉಡುಪಿ	1	0.50	1	0.70
15	ದಕ್ಷಿಣ ಕನ್ನಡ	2	1.00	1	0.70
16	ಹಾಸನ	3	1.50	1	0.70
17	ಚಿಕ್ಕಮಗಳೂರು	1	0.50	1	0.70
18	ಕೊಡಗು	1	0.50	1	0.70
19	ಬೆಳಗಾವಿ	1	0.50	2	1.52
20	ಬಾಗಲಕೋಟೆ	1	0.50	1	0.70
21	ವಿಜಯಪುರ	1	0.50	1	0.70

22	ಗದಗ	1	0.50	1	0.70
23	ಧಾರವಾಡ	1	0.50	1	0.70
24	ಉತ್ತರ ಕನ್ನಡ	2	1.00	1	0.70
25	ಹಾವೇರಿ	1	0.50	1	0.70
26	ಕಲಬುರಗಿ	1	0.50	1	0.76
27	ಯಾದಗಿರಿ	1	0.50	1	0.70
28	ಬಳ್ಳಾರಿ	1	0.50	1	0.76
29	ಬೀದರ್	1	0.50	1	0.70
30	ರಾಯಚೂರು	1	0.50	1	0.70
31	ಕೊಪ್ಪಳ	1	0.50	1	0.70
32	ವಿಜಯನಗರ	1	0.50	1	0.70
	ಒಟ್ಟು ಮೊತ್ತ	**50**	**25.00**	**35**	**25.00**

ವ್ಯವಸ್ಥಾಪಕ ನಿರ್ದೇಶಕರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 495

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ(ಹೊಳೆನರಸೀಪುರ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 21.12.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಸೋಮನಹಳ್ಳಿ ಕಾವಲ್ ತೋಟಗಾರಿಕೆ ಕ್ಷೇತ್ರದ ಸುಮಾರು 400 ಎಕರೆ ಪ್ರದೇಶದಲ್ಲಿ ಹೊಸದಾಗಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಸ್ಥಾಪನೆಗೆ ಸರ್ಕಾರದ ಆದೇಶ ಸಂಖ್ಯೆ ತೋಇ 240 ತೋಇವಿ 2018 ಬೆಂಗಳೂರು ದಿನಾಂಕ: 18.07.2019ರ ಆದೇಶಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು).	ನಿಜವಿರುತ್ತದೆ. ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿನ ರೈತ ಸಮುದಾಯದ ಹಾಗೂ ಸಾರ್ವಜನಿಕರ, ತೋಟಗಾರಿಕೆ ಸಂಶೋಧನಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ತೋಟಗಾರಿಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಉತ್ತೇಜನವನ್ನು ನೀಡುವ ಸಲುವಾಗಿ ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲ್ ತೋಟಗಾರಿಕೆ ಕ್ಷೇತ್ರದಲ್ಲಿ ಹಾಗೂ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಅಲಮೇಲದಲ್ಲಿ ತೋಟಗಾರಿಕೆ ಮಹಾ ವಿದ್ಯಾಲಯಗಳನ್ನು ಲಭ್ಯವಿರುವ ಸಿಬ್ಬಂದಿ ಹಾಗೂ ಮೂಲಭೂತ ಸೌಕರ್ಯಗಳೊಂದಿಗೆ ಸ್ಥಾಪಿಸಲು ಸರ್ಕಾರಿ ಆದೇಶ ಸಂಖ್ಯೆ: ತೋಇ 240 ತೋಇವಿ 2018, ಬೆಂಗಳೂರು, ದಿನಾಂಕ 18.07.2019 ರಲ್ಲಿ ಆದೇಶಿಸಿದೆ.
ಆ)	ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲು ಮತ್ತು ವಿಜಯಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಆಲಮೇಲದಲ್ಲಿ 2019-20ನೇ ಸಾಲಿನಿಂದಲೇ ಲಭ್ಯವಿರುವ ಸಿಬ್ಬಂದಿಗಳು ಹಾಗೂ ಮೂಲಭೂತ ಸೌಲಭ್ಯಗಳೊಂದಿಗೆ ತಲಾ ರೂ. 84.00 ಕೋಟಿಗಳಂತೆ ಒಟ್ಟು ರೂ.168.00 ಕೋಟಿಗಳ ಅನುದಾನದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶ ಹೊರಡಿಸಿರುವುದು ನಿಜವೇ;(ಸಂಪೂರ್ಣ ಮಾಹಿತಿ ನೀಡುವುದು)	
ಇ)	ಇದರಲ್ಲಿ 2019-20ನೇ ಸಾಲಿಗೆ ಅನುದಾನವಾಗಿ ರೂ. 63.00 ಕೋಟಿಗಳಷ್ಟು ಮೀಸಲಿಟ್ಟಿರುವುದು ನಿಜವೇ; ಈಗಾಗಲೇ ಹಾಸನದ ಲೋಕೋಪಯೋಗಿ ಇಲಾಖೆಯ ಅಂದಾಜು ತಯಾರು ಮಾಡಿ ರೂ. 63.00 ಕೋಟಿಗಳಿಗೆ ಅಂದಾಜು ಪಟ್ಟಿ ತಯಾರು ಮಾಡಿ ತಾಂತ್ರಿಕ ಮಂಡಳಿ ಅನಮೋದನೆಯೊಂದಿಗೆ ಆಡಳಿತಾತ್ಮಕ ಅನುಮೋದನೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರಿಗೆ ಕಳುಹಿಸಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಅನುಮೋದನೆಯನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು)	ನಿಜವಿರುತ್ತದೆ. ಕಳೆದ ವರ್ಷದಿಂದ ಕೋವೀಡ್-19 ಪ್ರಾರಂಭವಾದ ಹಿನ್ನೆಲೆಯಲ್ಲಿ ಸರ್ಕಾರವು ಪ್ರಸ್ತಾವನೆಯನ್ನು ಅನಿರ್ಧಿಷ್ಟ ಕಾಲಾವದಿಯವರಿಗೆ ಮುಂದೂಡಲು ತೀರ್ಮಾನಿಸಿದೆ.
ಈ)	ಉದ್ದೇಶಿತ ತೋಟಗಾರಿಕೆ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿ; (ಸಂಪೂರ್ಣ ವಿವರ ನೀಡುವುದು).	

<table>
<tr>
<td>ಉ</td>
<td>ಹಾಸನ ತಾ. ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಯಾವ ಯಾವ ಯೋಜನೆಯನ್ನು ಕೈಗೊಳ್ಳಲಾಗಿರುತ್ತದೆ; 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಭರಿಸಿರುವ ವೆಚ್ಚವೆಷ್ಟು;(ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td>ಹಾಸನ ತಾ. ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಕೈಗೊಂಡಿರುವ ಯೋಜನೆ ಹಾಗೂ ಭರಿಸಿರುವ ವರ್ಷವಾರು ವೆಚ್ಚಗಳು ಈ ಕೆಳಕಂಡಂತಿವೆ.
<table>
<tr><th rowspan="2">ಕ್ರ ಸಂ</th><th rowspan="2">ಯೋಜನೆಯ ವಿವರ</th><th colspan="3">ವರ್ಷವಾರು ಭರಿಸಿರುವ ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><th>2019-20</th><th>2020-21</th><th>2021-22</th></tr>
<tr><td>1</td><td>ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ</td><td>19.36</td><td>40.35</td><td>119.31</td></tr>
<tr><td>2</td><td>ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಯೋಜನೆ</td><td>2.73</td><td>4.18</td><td>31.39</td></tr>
<tr><td>3</td><td>ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ</td><td>-</td><td>-</td><td>3.60</td></tr>
<tr><td>4</td><td>ನಬಾರ್ಡ್ (RIDF) ಯೋಜನೆ</td><td>-</td><td>-</td><td>334.00</td></tr>
<tr><td></td><td>ಒಟ್ಟು</td><td>22.09</td><td>44.53</td><td>488.30</td></tr>
</table>
</td>
</tr>
<tr>
<td>ಊ</td>
<td>ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿ ಮಾದರಿ ತರಬೇತಿ ಕೇಂದ್ರ ಸ್ಥಾಪಿಸುವ ಕಾಮಗಾರಿಗೆ ರೂ. 11.30 ಕೋಟಿಗಳ ಅನುದಾನ ತೋಟಗಾರಿಕೆ ನಿರ್ದೇಶನಾಲಯದ ಪತ್ರ ಸಂಖ್ಯೆ: 10/2021-22/ದಿ. 15.02.2022ರಲ್ಲಿ ಬಿಡುಗಡೆಯಾಗಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;
(ಸಂಪೂರ್ಣ ಮಾಹಿತಿ ನೀಡುವುದು)</td>
<td>ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿ ಮಾದರಿ ತರಬೇತಿ ಕೇಂದ್ರ ಸ್ಥಾಪಿಸುವ ಕಾಮಗಾರಿಗೆ ರೂ. 11.30 ಕೋಟಿಗಳ ಪ್ರಸ್ತಾವನೆಯನ್ನು 2022-23 ನೇ ಸಾಲಿನಲ್ಲಿ ಸಲ್ಲಿಸಲಾಗಿರುತ್ತದೆ. ಅನುದಾನ ಲಭ್ಯತೆ ಇಲ್ಲದಿರುವುದರಿಂದ ಅನುಷ್ಠಾನಗೊಂಡರುವುದಿಲ್ಲ.</td>
</tr>
</table>

೧೮	ಹೊಳೆನರಸೀಪುರ ತಾಲ್ಲೂಕು ಗನ್ನಿಕಡ ತೋಟಗಾರಿಕಾ ಕ್ಷೇತ್ರದಲ್ಲಿ ಉದ್ಯಾನವನದ ನಿರ್ಮಾಣದ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ತಾಲ್ಲೂಕು ಗನ್ನಿಕಡ ಪ್ರದೇಶವು ಪುಲಿಪಾಲಕ್ಕೆ ಸಂಬಂಧಿಸಿದೆ, ಇಲ್ಲಿ ತೋಟಗಾರಿಕೆ ಚಟುವಟಿಕೆಗಳನ್ನು ಆರಂಭಿಸಲು ಸುತ್ತಲು ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗಿದೆ. ಕ್ಷೇತ್ರ ಚಟುವಟಿಕೆಗಳಿಗಾಗಿ ಒಂದು ಕಛೇರಿ ಕಟ್ಟಡವನ್ನು ನಿರ್ಮಿಸಲಾಗಿದೆ. ಸಿಬ್ಬಂದಿ ಮತ್ತು ಅನುದಾನ ಲಭ್ಯತೆಯನ್ನು ಆಧರಿಸಿ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು. ಕಾಲಮಿತಿ ಹಮ್ಮಿಕೊಳ್ಳಲಾಗಿರುವುದಿಲ್ಲ.

No.HORTI 609 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 495

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ(ಹೊಳೆನರಸೀಪುರ)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 21.12.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಸೋಮನಹಳ್ಳಿ ಕಾವಲ್ ತೋಟಗಾರಿಕೆ ಕ್ಷೇತ್ರದ ಸುಮಾರು 400 ಎಕರೆ ಪ್ರದೇಶದಲ್ಲಿ ಹೊಸದಾಗಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಸ್ಥಾಪನೆಗೆ ಸರ್ಕಾರದ ಆದೇಶ ಸಂಖ್ಯೆ ತೋಇ 240 ತೋಇಪಿ 2018 ಬೆಂಗಳೂರು ದಿನಾಂಕ: 18.07.2019ರ ಆದೇಶಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು).	ನಿಜವಿರುತ್ತದೆ. ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿನ ರೈತ ಸಮುದಾಯದ ಹಾಗೂ ಸಾರ್ವಜನಿಕರ, ತೋಟಗಾರಿಕೆ ಸಂಶೋಧನಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ತೋಟಗಾರಿಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಉತ್ತೇಜನವನ್ನು ನೀಡುವ ಸಲುವಾಗಿ ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲ್ ತೋಟಗಾರಿಕೆ ಕ್ಷೇತ್ರದಲ್ಲಿ ಹಾಗೂ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಆಲಮೇಲದಲ್ಲಿ ತೋಟಗಾರಿಕೆ ಮಹಾ ವಿದ್ಯಾಲಯಗಳನ್ನು ಲಭ್ಯವಿರುವ ಸಿಬ್ಬಂದಿ ಹಾಗೂ ಮೂಲಭೂತ ಸೌಕರ್ಯಗಳೊಂದಿಗೆ ಸ್ಥಾಪಿಸಲು ಸರ್ಕಾರಿ ಆದೇಶ ಸಂಖ್ಯೆ: ತೋಇ 240 ತೋಇಪಿ 2018, ಬೆಂಗಳೂರು, ದಿನಾಂಕ 18.07.2019 ರಲ್ಲಿ ಆದೇಶಿಸಿದೆ.
ಆ)	ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲು ಮತ್ತು ವಿಜಯಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಆಲಮೇಲದಲ್ಲಿ 2019-20ನೇ ಸಾಲಿನಿಂದಲೇ ಲಭ್ಯವಿರುವ ಸಿಬ್ಬಂದಿಗಳು ಹಾಗೂ ಮೂಲಭೂತ ಸೌಲಭ್ಯಗಳೊಂದಿಗೆ ತಲಾ ರೂ. 84.00 ಕೋಟಿಗಳಂತೆ ಒಟ್ಟು ರೂ.168.00 ಕೋಟಿಗಳ ಅನುದಾನದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶ ಹೊರಡಿಸಿರುವುದು ನಿಜವೇ;(ಸಂಪೂರ್ಣ ಮಾಹಿತಿ ನೀಡುವುದು)	
ಇ)	ಇದರಲ್ಲಿ 2019-20ನೇ ಸಾಲಿಗೆ ಅನುದಾನವಾಗಿ ರೂ. 63.00 ಕೋಟಿಗಳಷ್ಟು ಮೀಸಲಿಟ್ಟಿರುವುದು ನಿಜವೇ; ಈಗಾಗಲೇ ಹಾಸನದ ಲೋಕೋಪಯೋಗಿ ಇಲಾಖೆಯ ಅಂದಾಜು ತಯಾರು ಮಾಡಿ ರೂ. 63.00 ಕೋಟಿಗಳಿಗೆ ಅಂದಾಜು ಪಟ್ಟಿ ತಯಾರು ಮಾಡಿ ತಾಂತ್ರಿಕ ಮಂಡಳಿ ಅನಮೋದನೆಯೊಂದಿಗೆ ಆಡಳಿತಾತ್ಮಕ ಅನುಮೋದನೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರಿಗೆ ಕಳುಹಿಸಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಅನುಮೋದನೆಯನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು)	ನಿಜವಿರುತ್ತದೆ. ಕಳೆದ ವರ್ಷದಿಂದ ಕೋವಿಡ್-19 ಪ್ರಾರಂಭವಾದ ಹಿನ್ನೆಲೆಯಲ್ಲಿ ಸರ್ಕಾರವು ಪ್ರಸ್ತಾವನೆಯನ್ನು ಅನಿರ್ಧಿಷ್ಟ ಕಾಲಾವದಿಯವರಿಗೆ ಮುಂದೂಡಲು ತೀರ್ಮಾನಿಸಿದೆ.
ಈ)	ಉದ್ದೇಶಿತ ತೋಟಗಾರಿಕೆ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿ; (ಸಂಪೂರ್ಣ ವಿವರ ನೀಡುವುದು).	

ಉ

ಹಾಸನ ತಾ. ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಯಾವ ಯಾವ ಯೋಜನೆಯನ್ನು ಕೈಗೊಳ್ಳಲಾಗಿರುತ್ತದೆ; 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಭರಿಸಿರುವ ವೆಚ್ಚವೆಷ್ಟು;(ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

ಹಾಸನ ತಾ. ಸೋಮನಹಳ್ಳಿಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಕೈಗೊಂಡಿರುವ ಯೋಜನೆ ಹಾಗೂ ಭರಿಸಿರುವ ವರ್ಷವಾರು ವೆಚ್ಚಗಳು ಈ ಕೆಳಕಂಡಂತಿವೆ.

ಕ್ರ ಸಂ	ಯೋಜನೆಯ ವಿವರ	ವರ್ಷವಾರು ಭರಿಸಿರುವ ವೆಚ್ಚ (ರೂ. ಲಕ್ಷಗಳಲ್ಲಿ)		
		2019-20	2020-21	2021-22
1	ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ	19.36	40.35	119.31
2	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಯೋಜನೆ	2.73	4.18	31.39
3	ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ	-	-	3.60
4	ನಬಾರ್ಡ್ (RIDF) ಯೋಜನೆ	-	-	334.00
	ಒಟ್ಟು	22.09	44.53	488.30

ಊ

ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿ ಮಾದರಿ ತರಬೇತಿ ಕೇಂದ್ರ ಸ್ಥಾಪಿಸುವ ಕಾಮಗಾರಿಗೆ ರೂ. 11.30 ಕೋಟಿಗಳ ಅನುದಾನ ತೋಟಗಾರಿಕೆ ನಿರ್ದೇಶನಾಲಯದ ಪತ್ರ ಸಂಖ್ಯೆ: 10/2021-22/ದಿ. 15.02.2022ರಲ್ಲಿ ಬಿಡುಗಡೆಯಾಗಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;
(ಸಂಪೂರ್ಣ ಮಾಹಿತಿ ನೀಡುವುದು)

ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲು ತೋಟಗಾರಿಕೆ ಕ್ಷೇತ್ರದಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿ ಮಾದರಿ ತರಬೇತಿ ಕೇಂದ್ರ ಸ್ಥಾಪಿಸುವ ಕಾಮಗಾರಿಗೆ ರೂ. 11.30 ಕೋಟಿಗಳ ಪ್ರಸ್ತಾವನೆಯನ್ನು 2022-23 ನೇ ಸಾಲಿನಲ್ಲಿ ಸಲ್ಲಿಸಲಾಗಿರುತ್ತದೆ. ಅನುದಾನ ಲಭ್ಯತೆ ಇಲ್ಲದಿರುವುದರಿಂದ ಅನುಷ್ಠಾನಗೊಂಡಿರುವುದಿಲ್ಲ.

೨ಬ	ಹೊಳೆನರಸೀಪುರ ತಾಲ್ಲೂಕು ಗನ್ನಿಕಡ ತೋಟಗಾರಿಕಾ ಕ್ಷೇತ್ರದಲ್ಲಿ ಉದ್ಯಾನವನದ ನಿರ್ಮಾಣದ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ತಾಲ್ಲೂಕು ಗನ್ನಿಕಡ ಪ್ರದೇಶವು ಹುಲಿಪಾಲಕ್ಕೆ ಸಂಬಂಧಿಸಿದೆ, ಇಲ್ಲಿ ತೋಟಗಾರಿಕೆ ಚಟುವಟಿಕೆಗಳನ್ನು ಆರಂಭಿಸಲು ಸುತ್ತಲು ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗಿದೆ. ಕ್ಷೇತ್ರ ಚಟುವಟಿಕೆಗಳಿಗಾಗಿ ಒಂದು ಕಛೇರಿ ಕಟ್ಟಡವನ್ನು ನಿರ್ಮಿಸಲಾಗಿದೆ. ಸಿಬ್ಬಂದಿ ಮತ್ತು ಅನುದಾನ ಲಭ್ಯತೆಯನ್ನು ಆಧರಿಸಿ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು. ಕಾಲಮಿತಿ ಹಮ್ಮಿಕೊಳ್ಳಲಾಗಿರುವುದಿಲ್ಲ.

No.HORTI 609 HGM 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು

ಸಾಂಖ್ಯಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	496
ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
1	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿಯಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ಡಾ: ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯು ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಬೆಣಗಟ್ಟೆ ಗ್ರಾಮದ ಸರ್ವೆ ನಂಬರ್ 52 ರಲ್ಲಿರುವ ಸರ್ಕಾರಿ ಗೋಮಾಳದಲ್ಲಿ ಜಮೀನನ್ನು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಇವರು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು)	ಬಂದಿದೆ. ಡಾ: ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಬೆಣಗಟ್ಟೆ ಗ್ರಾಮದ ಸರ್ವೆ ನಂಬರ್ 52 ರಲ್ಲಿರುವ ಸರ್ಕಾರಿ ಗೋಮಾಳದಲ್ಲಿ 06 ಎಕರೆ 22 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ರವರ ಆದೇಶ ಸಂಖ್ಯೆ: ಎಲ್ ಎನ್.ಡಿ (01) 365/2022-23 ದಿ: 13.10.2022 ರಲ್ಲಿ ಮಂಜೂರು ಮಾಡಿರುತ್ತಾರೆ.
2	ಹಾಗಿದ್ದಲ್ಲಿ, ಡಾ: ಬಿ.ಆರ್ ಅಂಬೇಡ್ಕರ್ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಅವಶ್ಯಕ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು; ಕಟ್ಟಡ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿರುತ್ತದೆ; ಯಾವ ಕಾಲಮಿತಿಯೊಳಗೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಸಕಇ 456 ಎಂಡಿಎಸ್ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	497
ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ.
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಪಂಗಡದ ಸಮಾಜದವರ ಶುಭ ಸಮಾರಂಭಗಳ ಹಿತದೃಷ್ಟಿಯಿಂದ ಹೊಳೆನರಸೀಪುರ ಪಟ್ಟಣದಲ್ಲಿ ವಾಲ್ಮೀಕಿ ಭವನದ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಎಸ್‌ಟಿಪಿ 2021(7) ಬೆಂಗಳೂರು, ದಿನಾಂಕ:29.01.2022ರಲ್ಲಿ 200.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಇದರಲ್ಲಿ ಈಗಾಗಲೇ ರೂ.50.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದ್ದರೂ ಸಹ ಈ ಅನುದಾನ ಹಾಸನದ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಗೆ ಜಮೆಯಾಗದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	• ಸರ್ಕಾರದ ಆದೇಶ ಸಂಖ್ಯೆ: ಸಕ ಇ 55 ಎಸ್ ಟಿ ಪಿ 2021 (7) ಬೆಂಗಳೂರು, ದಿನಾಂಕ:29.01.2022ರಲ್ಲಿ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಕೇಂದ್ರದಲ್ಲಿ ರೂ.200.00 ಲಕ್ಷಗಳ ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿ ಶೇ.25%ರಷ್ಟು ರೂ.50.00 ಲಕ್ಷಗಳನ್ನು ಷರತ್ತುಗಳಿಗೊಳಪಡಿಸಿ ಬಿಡುಗಡೆ ಮಾಡಿ ಆದೇಶಿಸಿದೆ. • ಸರ್ಕಾರದ ಆದೇಶದನ್ವಯ ಸದರಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕಾಗಿ ನಿಗದಿಪಡಿಸಿದ ರೂ.200.00 ಲಕ್ಷಗಳಲ್ಲಿ, ಶೇ.25%ರಷ್ಟು ರೂ.50.00 ಲಕ್ಷಗಳ ಅನುದಾನವನ್ನು ಆದೇಶ ದಿನಾಂಕ:30.11.2022ರಂದು ಜಿಲ್ಲಾಧಿಕಾರಿಗಳು ಹಾಗೂ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ ರವರ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗಿದೆ.
ಆ)	ಈ ಹಿನ್ನಲೆಯಲ್ಲಿ ವಾಲ್ಮೀಕಿ ಕಟ್ಟಡ ಕಾಮಗಾರಿಯು ನೆನೆಗುದ್ದಿಗೆ ಬಿದ್ದು, ಪರಿಶಿಷ್ಟ ಪಂಗಡದ ಸಮಾಜದವರಿಗೆ ಅನಾನುಕೂಲವಾಗಿರುವುದರಿಂದ ಕೂಡಲೇ ಹಾಸನದ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಗೆ ಜಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕಾಗಿ ನಿಗದಿಪಡಿಸಿದ ರೂ.200.00 ಲಕ್ಷಗಳಲ್ಲಿ ಶೇ.25%ರಷ್ಟು ರೂ.50.00 ಲಕ್ಷಗಳ ಅನುದಾನವನ್ನು ಆದೇಶ ದಿನಾಂಕ:30.11.2022ರಂದು ಜಿಲ್ಲಾಧಿಕಾರಿಗಳು ಹಾಗೂ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ ರವರ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗಿದೆ.
ಇ)	ಹೊಳೆನರಸೀಪುರ ಪಟ್ಟಣದಲ್ಲಿ ಬಾಬು ಜಗಜೀವನರಾಂ ಭವನದ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ಆದೇಶ ಹೊರಡಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ಪಟ್ಟಣದಲ್ಲಿ ಡಾ|| ಬಾಬು ಜಗಜೀವನರಾಮ್ ಭವನ ನಿರ್ಮಾಣ ಮಾಡಲು ಸರ್ಕಾರದಿಂದ ಮಂಜೂರಾತಿ ನೀಡಿರುವುದಿಲ್ಲ.
ಈ)	ಹೊಳೆನರಸೀಪುರ ಪಟ್ಟಣದಲ್ಲಿ ಬಾಬು ಜಗಜೀವನರಾಂ ಭವನದ ಕಟ್ಟಡ ನಿರ್ಮಾಣಕ್ಕೆ ಅಗತ್ಯ ನಿವೇಶನ ಅಗತ್ಯ ನಿವೇಶನ ಲಭ್ಯವಿದ್ದರೂ ಸಹ ಅನುದಾನ ಬಿಡುಗಡೆಯಾಗದಿರುವುದರಿಂದ ಪರಿಶಿಷ್ಟ ಜಾತಿ ಸಮಾಜದವರಿಗೆ ಅನಾನುಕೂಲವಾಗಿರುವುದರಿಂದ ಕೂಡಲೇ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡವುದು)	ಹೊಳೆನರಸೀಪುರ ಪಟ್ಟಣದಲ್ಲಿ ಡಾ|| ಬಾಬು ಜಗಜೀವನರಾಮ್ ಭವನ ನಿರ್ಮಾಣ ಮಾಡಲು ಕೃಷಿ ಉತ್ಪನ್ನ ಮಾರುಕಟ್ಟೆ ಹತ್ತಿರ 100X150 ಅಳತೆಯ ಸರ್ಕಾರಿ ಜಾಗವನ್ನು ಗುರುತಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ಹೆಸರಿಗೆ ಹಸ್ತಾಂತರಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ನಿವೇಶನ ಹಸ್ತಾಂತರಗೊಂಡ ನಂತರ ಈ ಬಗ್ಗೆ ಕ್ರಮವಹಿಸಲಾಗುವುದು.

ಸಕಇ 497 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	498
ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
1	ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ, ಹಂಗರಹಳ್ಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಯಲ್ಲಿ ಬಡಕುಟುಂಬದಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಬಂದಂತಹ ನೂರಾರು ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿದ್ದು, ನೂತನವಾಗಿ ಸುಸಜ್ಜಿತ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ; ಈ ವಸತಿ ಶಾಲೆಗೆ ಆಟದ ಮೈದಾನದ ಕೊರತೆ ಇರುತ್ತದೆ, ಈ ವಸತಿ ಶಾಲೆಗೆ ಕಾಂಪೌಂಡ್ ಇಲ್ಲದಿರುವುದರಿಂದ ಈ ಭಾಗದಲ್ಲಿ ಚಿರತೆಯ ಹಾವಳಿ ಮತ್ತು ಹಾವುಗಳ ಓಡಾಟ ಹೆಚ್ಚಾಗಿರುವುದರಿಂದ ವಸತಿ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪ್ರಾಣಹಾನಿಯಾಗುವ ಸಂಭವವಿರುವುದರಿಂದ ಕಟ್ಟಡದ ಸುತ್ತಲೂ ಕಾಂಪೌಂಡುನ್ನು ನಿರ್ಮಾಣ ಮಾಡುವುದು ಹಾಗೂ ವಸತಿ ನಿಲಯದ ಕಟ್ಟಡದ ಮುಂಬಾಗ ಕಲ್ಲು ಬಂಡೆಯಿಂದ ಕೂಡಿರುವ ಮೈದಾನವನ್ನು ಸಮತಟ್ಟುಗೊಳಿಸಿ, ಮಕ್ಕಳಿಗೆ ಆಟದ ಮೈದಾನವನ್ನು ನಿರ್ಮಿಸುವುದು ಅತ್ಯವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
2	ಹಾಗಿದ್ದಲ್ಲಿ, ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಹಂಗರಹಳ್ಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ದುರಸ್ಥಿ ಕಾಮಗಾರಿಗಳಿಗೆ ಹಾಗೂ ಈ ವಸತಿ ಶಾಲೆಯ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ಹೋಬಳಿ, ಹಂಗರಹಳ್ಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ದುರಸ್ಥಿ ಹಾಗೂ ಹೆಚ್ಚುವರಿ ಕಾಮಗಾರಿಗೆ ರೂ. 144.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಸಕಇ 451 ಎಂಡಿಎಸ್ 2022

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	499
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿಯ ಗ್ರಾಮದಲ್ಲಿರುವ ಮಾದರಿ ವಸತಿಯುಕ್ತ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಉತ್ತಮ ವ್ಯಾಸಂಗದ ಹಿತದೃಷ್ಟಿಯಿಂದ ಹಾಗೂ ಮಾದರಿ ವಸತಿಯುಕ್ತ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ನೂತನ ಕಟ್ಟಡದ ಆವರಣದಲ್ಲಿ ವಸತಿನಿಲಯದ ನಿರ್ಮಾಣಕ್ಕೆ ಅವಶ್ಯಕ ಸ್ಥಳಾವಕಾಶವಿರುವುದರಿಂದ ಹರದನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಬಾಲಕಿಯರ ಮೆಟ್ರಿಕ್ ನಂತರ ವಸತಿನಿಲಯವನ್ನು ಮಂಜೂರು ಮಾಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸರ್ಕಾರವನ್ನು ದಿನಾಂಕ: 21.03.2022 ರಂದು ಪತ್ರ ಮುಖೇನ ಕೋರಿದ್ದು, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು ತಮ್ಮ ಟಿಪ್ಪಣಿ ಸಂಖ್ಯೆ: ಪಿ.ಎಸ್.ಸಿ.ಎಂ/ಟಿ/1746/2022 ದಿನಾಂಕ; 24.03.2022ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುವುದು ನಿಜವೇ;	ಹೌದು.
ಆ)	ಹಾಗಿದ್ದಲ್ಲಿ, ಹರದನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಬಾಲಕಿಯರ ಮೆಟ್ರಿಕ್ ನಂತರದ ವಸತಿನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಹರದನಹಳ್ಳಿ ಗ್ರಾಮಕ್ಕೆ ಹೊಸದಾಗಿ 100 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರಾದ ನಂತರದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಅನುದಾನದ ಲಭ್ಯತೆಯನುಸಾರ ಕೈಗೊಳ್ಳಲು ಕ್ರಮವಹಿಸಲಾಗುವುದು.
ಇ)	ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಮೊಸಳೆ ಹೊಸಹಳ್ಳಿ ಗ್ರಾಮದಲ್ಲಿ 2019-20ನೇ ಸಾಲಿನಿಂದ ನೂತನವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಗಳು ಆರಂಭವಾಗಿದ್ದು, ಅಲ್ಲದೇ ಮೊಸಳೆ ಹೊಸಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಐ.ಟಿ.ಐ. ಕಾಲೇಜುಗಳಿದ್ದು, ಸದರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೂರದ ಗ್ರಾಮೀಣ ಪ್ರದೇಶಗಳಿಂದ	ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 64 ಬಿಎಂಎಸ್ 2022 ದಿನಾಂಕ:31.03.2022 ರಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹಂಗರಳ್ಳಿ ಗ್ರಾಮದ 50 ಸಂಖ್ಯಾಬಲದ ಮೆಟ್ರಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು 50 ಸಂಖ್ಯಾಬಲದ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನಾಗಿ ಉನ್ನತೀರಿಸಿ ಹಾಸನ ತಾಲ್ಲೂಕಿನ ಮೊಸಳೆಹೊಸಹಳ್ಳಿ ಗ್ರಾಮಕ್ಕೆ ಸ್ಥಳಾಂತರಿಸಲಾಗಿದ್ದು, ಅದರಂತೆ ಪ್ರಸಕ್ತ ಸಾಲಿನಿಂದ ಅನ್ವಯಿಸುವಂತೆ ಪ್ರಾರಂಭಿಸಲಾಗಿರುತ್ತದೆ.

	ಬಂದಂತಹ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಮೊಸಳೆಹೊಸಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಹೊಸದಾಗಿ ಮಂಜೂರು ಮಾಡುವ ಬಗ್ಗೆ ಮಾನ್ಯ ದಿನಾಂಕ: 21.03.2022 ರಂದು ಪತ್ರ ಮುಖೇನ ಕೋರಿದ್ದು, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು ತಮ್ಮ ಟಿಪ್ಪಣಿ ಸಂಖ್ಯೆ: ಪಿ.ಎಸ್.ಸಿ.ಎಂ/ಟಿ/1743/2022 ಇಸಿಎಂ/3877215/202 ದಿನಾಂಕ; 24.03.2022ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುವುದು ನಿಜವೇ;	ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಇಲಾಖೆಯ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿನ ಮಂಜೂರಾತಿ ಸಂಖ್ಯಾಬಲದ ಶೇ.25ರಷ್ಟು ಸಂಖ್ಯಾಬಲ ಹೆಚ್ಚಳ ಮಾಡಲಾಗಿದ್ದು, ಅದರಂತೆ ಹಾಸನ ತಾಲ್ಲೂಕಿನ ಮೊಸಳೆಹೊಸಹಳ್ಳಿ ಗ್ರಾಮದ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲೂ ಸಹ ಸಂಖ್ಯಾಬಲವನ್ನು ಹೆಚ್ಚಿಸಲಾಗಿದೆ.
ಈ)	ಹಾಗಿದ್ದಲ್ಲಿ, ಮೊಸಳೆಹೊಸಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ಬಾಲಕಿಯರ ವಸತಿನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಮೊಸಳೆಹೊಸಹಳ್ಳಿ ಮತ್ತು ಇತರ ಮೂರು ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಅನುದಾನದ ಕೊರತೆಯಿರುವುದರಿಂದ, ಸದರಿ ಕಾಮಗಾರಿಗೆ 2023-24ನೇ ಸಾಲಿನಲ್ಲಿ ಅನುದಾನ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.
ಉ)	ಮೊಸಳೆಹೊಸಹಳ್ಳಿ ಹಾಗೂ ಹರದನಹಳ್ಳಿ ಗ್ರಾಮದಲ್ಲಿರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಬಡಕುಟುಂಬದ ಬಾಲಕಿಯರ ಉತ್ತಮ ವ್ಯಾಸಂಗದ ದೃಷ್ಟಿಯಿಂದ 2022-23ನೇ ಶೈಕ್ಷಣಿಕ ವರ್ಷದಿಂದಲೇ ಹಾಸನ ತಾ. ಶಾಂತಿಗ್ರಾಮ ಹೋಬಳಿ ಮೊಸಳೆಹೊಸಹಳ್ಳಿ ಮತ್ತು ಹೊಳೆನರಸೀಪುರ ತಾ. ಹಳೇಕೋಟೆ ಹೋಬಳಿ ಹರದನಹಳ್ಳಿ ಗ್ರಾಮಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆವತಿಯಿಂದ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಮಂಜೂರಾತಿ ಕಡತ ಸಂಖ್ಯೆ ಹಿಂವಕ/670/ಬಿಎಂಎಸ್ 2021ಕ್ಕೆ ಸರ್ಕಾರ ಅನುಮೋದನೆ ನೀಡುವುದೇ? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ:ಹಿಂವಕ 749 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 500

ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)

ಉತ್ತರಿಸಬೇಕಾದ ದಿನಾಂಕ : 21-12-2022

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಹಾಸನ ಜಿಲ್ಲೆಯಾದ್ಯಂತ ಕಳೆದ 2-3 ತಿಂಗಳುಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಸುಮಾರು 1.00 ಲಕ್ಷಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ಸುಮಾರು 500 ಕೋಟಿಗಳಷ್ಟು ಮೌಲ್ಯದ ಕಾಫಿ, ಮೆಣಸು, ಏಲಕ್ಕಿ, ರಾಗಿ, ಕಬ್ಬು, ಭತ್ತ, ಮುಸುಕಿನ ಜೋಳ ಇನ್ನಿತರ ಬೆಳೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಬೆಳೆ ಕಳೆದುಕೊಂಡು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಬೆಳೆ ಪರಿಹಾರ ನೀಡಲು ಹಾಗೂ ಬೆಳೆ ಸಮೀಕ್ಷೆ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಪ್ರಾಕೃತಿಕ ವಿಕೋಪಗಳಿಂದ ಉಂಟಾದ ಬೆಳೆಹಾನಿಯ ಕುರಿತು ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಂದ ನಡೆಸಲಾದ ಜಂಟಿ ಸರ್ವೆ ವರದಿಯನುಸಾರ ಬೆಳೆ ಹಾನಿಯಾದ ಸಂತ್ರಸ್ತ ರೈತರಿಗೆ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚುವರಿಯಾಗಿ ರಾಜ್ಯ ಸರ್ಕಾರವು ಪರಿಷ್ಕೃತ ದರದಲ್ಲಿ ಪರಿಹಾರವನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದಲ್ಲಿ ನೋಂದಾಯಿಸಲಾಗಿರುವಂತೆ, ರೈತರ ಖಾತೆ ನೇರವಾಗಿ ಪರಿಹಾರ ಮೊಬಲಗನ್ನು ಜಮೆಗೊಳಿಸಲಾಗುತ್ತಿದೆ.
(ಆ) ಹಾಸನ ಜಿಲ್ಲೆಯಾದ್ಯಂತ ಕಳೆದ 2-3 ತಿಂಗಳುಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಬೆಳೆಯನ್ನು ಕಳೆದುಕೊಂಡು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಕೇಂದ್ರ ಸರ್ಕಾರದ SDRF ಯೋಜನೆಯಡಿ ರಾಗಿ, ಮುಸುಕಿನ ಜೋಳ, ಭತ್ತ ಮತ್ತಿತರ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ಕೇವಲ ರೂ.5800 ನಿಗದಿಗೊಳಿಸಿದ್ದು, ಈ ಬೆಳೆಗಳನ್ನು ಬೆಳೆಯಲು ಪ್ರತಿ ಎಕರೆಗೆ ರೂ.20.000ಕ್ಕೂ ಅಧಿಕ ವೆಚ್ಚ ತಗುಲುತ್ತಿರುವುದರಿಂದ ಪರಿಹಾರ ಹಣವನ್ನು ಹೆಚ್ಚಳ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	

ಬೆಳೆ ವಿಧ	SDRF /NDRF ಮಾರ್ಗಸೂಚಿ ಅನ್ವಯ (ಪ್ರತಿ ಹೆ.ಗೆ)	ಹೆಚ್ಚುವರಿ (ಪ್ರತಿ ಹೆ.ಗೆ)	ಪರಿಷ್ಕೃತ ದರ (ಪ್ರತಿ ಹೆ.ಗೆ)
ಮಳೆಯಾಶ್ರಿತ	ರೂ.6,800/-	ರೂ.6,800/-	ರೂ.13,600/-
ನೀರಾವರಿ	ರೂ.13,500/-	ರೂ.11,500/-	ರೂ.25,000/-
ಬಹುವಾರ್ಷಿಕ	ರೂ.18,000/-	ರೂ.10,000/-	ರೂ.28,000/-

ಕಂಇ 500 ಟಿಪಿಎನ್‌ಆರ್ 2022.

(ಆರ್. ಅಶೋಕ)
ಕಂದಾಯ ಸಚಿವರು.

DFA/990051

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 501

ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ ಎಸ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 21.12.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಹಾಸನ ಜಿಲ್ಲೆಯ ತಾಲ್ಲೂಕುಗಳಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಪ್ರತಿದಿನ ಸಾವಿರಾರು ಹೆಣ್ಣುಮಕ್ಕಳು ಹಾಸನ ನಗರದಲ್ಲಿರುವ ಗಾರ್ಮೆಂಟ್ಸ್ ಹಾಗೂ ಇತರೆ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸಲು ಬಂದು ಹೋಗುತ್ತಿದ್ದು, ಅವರಿಗೆ ಸರ್ಕಾರದ ಸಾರಿಗೆ ಬಸ್ ವ್ಯವಸ್ಥೆ ಇಲ್ಲದ ಕಾರಣ ಖಾಸಗಿ ಟೆಂಪೋ, ಆಟೋರಿಕ್ಷಾ ಹಾಗೂ ಇತರೆ ವಾಹನಗಳಲ್ಲಿ ಸಂಚರಿಸುತ್ತಿದ್ದು ಸೂಕ್ತ ಸಂಚಾರ ಸುರಕ್ಷತೆ ಇಲ್ಲದ ಕಾರಣ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ನಗರವು ವಾಣಿಜ್ಯ ಕೇಂದ್ರವಾಗಿರುವುದರಿಂದ ಹಾಸನ ನಗರ ವ್ಯಾಪ್ತಿಯಲ್ಲಿ ಗಾರ್ಮೆಂಟ್ಸ್ ಮತ್ತು ಇತರೆ ಕಾರ್ಮಿಕರ ಅನುಕೂಲಕ್ಕಾಗಿ ಹಾಸನ ನಗರದ ದಾಸರಕೊಪ್ಪಲು-ಎಂ.ಸಿ.ಇ-ಸಾಲಗಾಮೆ ಗೇಟ್-ನಗರ ಸಾರಿಗೆ ಬಸ್ ನಿಲ್ದಾಣ ಎನ್.ಆರ್.ವೃತ್ತ-ಹೊಸ ಬಸ್ ನಿಲ್ದಾಣ-ಚನ್ನಪಟ್ಟಣ ಹೊಸಕೊಪ್ಪಲು-ಕೆಐಎಡಿಬಿ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಪ್ರಯಾಣಿಸುತ್ತಿರುವುದರಿಂದ 3 ಅನುಸೂಚಿಗಳಿಂದ 6 ಪ್ರತ್ಯೇಕ ಸುತ್ತುವಳಿಗಳು ಒಳಗೊಂಡಂತೆ ಹಾಸನ ನಗರದಲ್ಲಿ ಒಟ್ಟು 30 ಅನುಸೂಚಿಗಳಿಂದ 480 ಸುತ್ತುವಳಿಗಳ ನಗರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ ಅಲ್ಲದೆ ಹಾಸನ-ಹೊಳೆನರಸೀಪುರ ಮಾರ್ಗದಲ್ಲಿ ಕೆ.ಐ.ಎ.ಡಿ.ಬಿ. ವೃತ್ತದ ಮಾರ್ಗವಾಗಿ ಪ್ರತಿನಿತ್ಯ 68 ಸುತ್ತುವಳಿಗಳನ್ನು ಕಾರ್ಯಾಚರಿಸಲಾಗುತ್ತಿದೆ ಮುಂದುವರೆದು, ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ 1183 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳ ಅನುಕೂಲವನ್ನು ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಬರುವ ಸಾರ್ವಜನಿಕ ಪ್ರಯಾಣಿಕರು, ವಿದ್ಯಾರ್ಥಿಗಳು, ನೌಕರರು ಹಾಗೂ ರೈತರು ಪಡೆದುಕೊಳ್ಳುತ್ತಿದ್ದು, ಇದು ಅವಶ್ಯಕತೆಗೆ

		ಅನುಗುಣವಾಗಿದೆ
ಆ.	ಬಂದಿದ್ದಲ್ಲಿ, ಸೂಕ್ತ ಸಂಚಾರ ಸುರಕ್ಷತೆ ಇಲ್ಲದ ಕಾರಣ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತಿರುವುದರಿಂದ ಈಗಾಗಲೇ ತುಮಕೂರು ಜಿಲ್ಲಾ ಸಚಿವರು ಗಾರ್ಮೆಂಟ್ಸ್/ ಕಾರ್ಖಾನೆ ಮಾಲೀಕರು ಶೇಕಡಾ 50 ಹಾಗೂ ಸಾರಿಗೆ ಇಲಾಖೆ ರಿಯಾಯಿತಿ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ ಎಂದು ತಿಳಿದುಬಂದಿದ್ದು, ಅದೇ ರೀತಿ ಹಾಸನ ಜಿಲ್ಲೆಯ ತಾಲ್ಲೂಕುಗಳು ಹಾಗೂ ಗ್ರಾಮೀಣ ಪ್ರದೇಶದಿಂದ ಗಾರ್ಮೆಂಟ್ಸ್/ ಕಾರ್ಖಾನೆಗಳಿಗೆ ಬರುವಂತಹ ಹೆಣ್ಣುಮಕ್ಕಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ನೀಡಿ, ಸುಗಮವಾಗಿ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸುವ ಹಾಗೂ ಸರ್ಕಾರ ಗ್ರಾಮೀಣ ಪ್ರದೇಶದ ಬಡ ಹೆಣ್ಣಮಕ್ಕಳ ಹಿತದೃಷ್ಟಿಯಿಂದ ಅನುಕೂಲ ಮಾಡಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಕ.ರಾ.ರ.ಸಾ.ನಿಗಮವು ತುಮಕೂರು ಜಿಲ್ಲೆಯ ಖಾಸಗಿ ಗಾರ್ಮೆಂಟ್ಸ್/ ಕಾರ್ಖಾನೆಗಳಿಗೆ ಬರುವಂತಹ ಹೆಣ್ಣು ಮಕ್ಕಳಿಗೆ ರಿಯಾಯಿತಿ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡಿರುವುದಿಲ್ಲ.

ಸಂಖ್ಯೆ: ಟಿಡಿ 264 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 502

ವಿಧಾನ ಸಭೆಯ ಸದಸ್ಯರು ಹೆಸರು : ಶ್ರೀ ಲಿಂಗೇಶ್ ಕೆ.ಎಸ್ (ಬೇಲೂರು)

ಉತ್ತರಿಸುವ ಸಚಿವರು :ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 21.12.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಾದ್ಯಂತ ಪ್ರಸ್ತುತ ನವೆಂಬರ್ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹೂ, ತರಕಾರಿ, ಮತ್ತಿತರ ಬೆಳೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಬೆಳೆ ಕಳೆದುಕೊಂಡು ತೀವ್ರ ಆರ್ಥಿಕವಾಗಿ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ 2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಈವರೆಗೆ ಮಳೆಯಿಂದ ಹಾನಿಯಾದ ತೋಟಗಾರಿಕೆ ಬೆಳೆಗಳ ವಿವರ ಈ ಕೆಳಕಂಡಂತಿರುತ್ತದೆ. ಅಂದಾಜು ಹಾನಿಯಾದ ವಿಸ್ತೀರ್ಣ 10364.91 ಹೆಕ್ಟೇರ್ ಹೂ ಬೆಳೆಗಳು: 157.60 ಹೆ. ತರಕಾರಿ ಬೆಳೆಗಳು: 7485.31 ಹೆ. ಹಣ್ಣಿನ ಬೆಳೆಗಳು: 81.70 ಹೆ. ತೋಟದ ಬೆಳೆಗಳು ಮತ್ತು ಸಾಂಬಾರು ಬೆಳೆಗಳು: 2640.30 ಹೆ. ಬೆಳೆ ಕಳೆದುಕೊಂಡು ತೀವ್ರ ಆರ್ಥಿಕವಾಗಿ ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಹಾಗೂ NDRF / SDRF ಮಾರ್ಗಸೂಚಿಯನ್ವಯ ಪರಿಷ್ಕೃತ ಪರಿಹಾರ ವನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದ ಮುಖಾಂತರ ಈ ಕೆಳಗಿನಂತೆ ನೀಡಲಾಗುತ್ತದೆ.

ಬೆಳೆ ವಿಧ	NDRF / SDRF ಮಾರ್ಗಸೂಚಿಯನ್ವಯ (ಪ್ರತಿ ಹೆಕ್ಟೇರ್ ಗೆ)	ಹೆಚ್ಚುವರಿ ದರ (ಪ್ರತಿ ಹೆಕ್ಟೇರ್ ಗೆ)	ಪರಿಷ್ಕೃತ ದರ (ಪ್ರತಿ ಹೆಕ್ಟೇರ್ ಗೆ)
ಮಳೆಯಾಶ್ರಿತ	ರೂ.6800/-	ರೂ.6800/-	ರೂ. 13600/-
ನೀರಾವರಿ	ರೂ.13500/-	ರೂ.11500/-	ರೂ.25000/-
ಬಹುವಾರ್ಷಿಕ	ರೂ.18000/-	ರೂ.10000/-	ರೂ.28000/-

ಆ)	ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಪ್ರಮುಖ ಬೆಳೆಯಾಗಿದ್ದು, ಹಿಂದಿನ ದಿನಗಳಲ್ಲಿ ಸುಮಾರು ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಕಳೆದ 8-10 ವರ್ಷಗಳಿಂದ ಬೆಳೆಗೆ ಅಂಗಮಾರಿ ರೋಗಕ್ಕೆ ಬೆಳೆಯು ತುತ್ತಾಗಿ, ರೈತರು ಸಂಕಷ್ಟಕ್ಕೀಡಾಗಿದ್ದರಿಂದ ರಾಜ್ಯದಲ್ಲಿ ಆಲೂಗಡ್ಡೆ ಬೆಳೆಗಾರರ ಹಿತದೃಷ್ಟಿಯಿಂದ ಹಿಂದಿನ ಸರ್ಕಾರದಲ್ಲಿ 2019-20 ನೇ ಸಾಲಿನಲ್ಲಿ ಆಲೂಗಡ್ಡೆ ಬೆಳೆ ಪ್ರೋತ್ಸಾಹ ಧನ ಯೋಜನೆಯನ್ನು ಜಾರಿಗೆ ತಂದು ಬೆಳೆಯುವ ರೈತರಿಗೆ ಶೇ. 50 ರ ಸಹಾಯ ಧನ ಸೌಲಭ್ಯ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿದೆ.
ಇ)	ಹಾಸನ ಜಿಲ್ಲೆಯಲ್ಲಿ ಈ ಯೋಜನೆಯಿಂದ ಎಷ್ಟು ಆಲೂಗಡ್ಡೆ ಬೆಳೆಗಾರರಿಗೆ ಸಹಾಯ ಧನ ಶೇ. 50 ಸೌಲಭ್ಯವನ್ನು ನೀಡಲಾಗಿದೆ; (ಹಾಸನ ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಆಲೂಗಡ್ಡೆ ಬೆಳೆಗಾರರಿಗೆ ಬಿತ್ತನೆ ಆಲೂಗಡ್ಡೆ ಖರೀದಿಸಲು ಶೇ.50ರ ಸಹಾಯಧನ ಹಾಗೂ ಸಸ್ಯ ಸಂರಕ್ಷಣೆ ಔಷಧಗಳ ಖರೀದಿಗಾಗಿ ಸಹಾಯಧನ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿರುತ್ತದೆ. ವಿಧಾನಸಭಾಕ್ಷೇತ್ರವಾರು ವಿವರ ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ವಿಧಾನ ಸಭಾಕ್ಷೇತ್ರ	ರೈತರ ಸಂಖ್ಯೆ
1	ಸಕಲೇಶಪುರ	1201
2	ಅರಕಲಗೂಡು	2245
3	ಅರಸೀಕೆರೆ	1057
4	ಬೇಲೂರು	1586
5	ಶ್ರವಣಬೆಳಗೊಳ	1015
6	ಹಾಸನ	1536
7	ಹೊಳೆನರಸೀಪುರ	6142
ಒಟ್ಟು		14782

ಈ)	ಈ ಯೋಜನೆಯನ್ನು 2022-23 ನೇ ಸಾಲಿನಲ್ಲಿ ರಾಜ್ಯದ ಆಲೂಗಡ್ಡೆ ಬೆಳೆಗಾರರ ಹಿತದೃಷ್ಟಿಯಿಂದ ಶೇ.50 ಸಹಾಯ ಧನ ಸೌಲಭ್ಯವನ್ನು ಮುಂದುವರೆಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಆಲೂಗಡ್ಡೆ ಉತ್ತಮ ಗುಣಮಟ್ಟದ ರೋಗರಹಿತ ಬೀಜಗಳನ್ನು/ಸಸಿಗಳನ್ನು ರೈತರಿಗೆ ಒದಗಿಸಲು ಅಂಗಾಶ ಕೃಷಿ ಪದ್ಧತಿಯಿಂದ Apical Rooted Cutting (ARC) ಗಳ ಮೂಲಕ ಆಲೂಗಡ್ಡೆ ಬೆಳೆ ಬೆಳೆಯುವ ಹಾಗೂ ಬೀಜೋತ್ಪಾದನೆ ಮಾಡುವ ನೂತನ ತಾಂತ್ರಿಕತೆಯನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. ಈ ಕುರಿತಂತೆ 2022-23 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ, ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಮೂಂಚೂಣಿ ಪ್ರಾತ್ಯಕ್ಷಿತೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಆಲೂಗಡ್ಡೆ ಸರ್ಟಿಫೈಡ್ ಸೀಡ್ಸ್ ವಿತರಿಸಿ ರಿಯಾಯಿತಿ ದರದಲ್ಲಿ ಆಲೂಗಡ್ಡೆ ಬೆಳೆಗಾರರಿಗೆ ಔಷಧಿ ವಿತರಿಸುವ ಯೋಜನೆಯನ್ನು ಕೈಬಿಡಲಾಗಿದೆ.

No. HORTI 575 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು.

Click here for Annexures

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**503**
ಸದಸ್ಯರ ಹೆಸರು	:	**ಡಾ. ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)**
ಉತ್ತರಿಸಬೇಕಾದ ದಿನಾಂಕ	:	**21-12-2022**
ಉತ್ತರಿಸುವ ಸಚಿವರು	:	**ಮಾನ್ಯ ಕಂದಾಯ ಸಚಿವರು**

ಪ್ರಶ್ನೆ	ಉತ್ತರ
(ಅ) ಕಳೆದ 3 ವರ್ಷದಲ್ಲಿ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಆಗಿರುವ ಅತಿವೃಷ್ಟಿಯಿಂದ ಹಾನಿ ಅನುಭವಿಸಿರುವ ಕೃಷಿ ಜಮೀನುಗಳ ಭೂ ಮಾಲೀಕರುಗಳಿಗೆ ಪರಿಹಾರ ಧನ ವಿತರಿಸಲಾಗಿದೆಯೇ; (ವರ್ಷವಾರು ಗ್ರಾಮಗಳ ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿನ ವಿಜಯಪುರ ಹಾಗೂ ಚಡಚಣ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅತೀವೃಷ್ಟಿಯಿಂದ ಹಾನಿ ಅನುಭವಿಸಿರುವ ಕೃಷಿ ಜಮೀನುಗಳ ಭೂ ಮಾಲೀಕರುಗಳಿಗೆ ಬೆಳೆಹಾನಿಗೆ ಪರಿಹಾರಧನವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ;

ರೂ. ಲಕ್ಷಗಳಲ್ಲಿ

ತಾಲ್ಲೂಕು	2020		2021		2022	
	ಬೆಳೆಹಾನಿ ಕ್ಷೇತ್ರ(ಹೆ)	ಪರಿಹಾರ ಮೊತ್ತ	ಬೆಳೆಹಾನಿ ಕ್ಷೇತ್ರ(ಹೆ)	ಪರಿಹಾರ ಮೊತ್ತ	ಬೆಳೆಹಾನಿ ಕ್ಷೇತ್ರ(ಹೆ)	ಪರಿಹಾರ ಮೊತ್ತ
ಚಡಚಣ	12162.75	1139.35	0.00	0.00	2.50	0.31
ವಿಜಯಪುರ	6289.33	512.42	0.00	0.00	803.54	100.08
ಒಟ್ಟು	18452.08	1651.77	0.00	0.00	806.04	100.39

ಪ್ರಶ್ನೆ	ಉತ್ತರ
(ಆ) ಕಳೆದ 3 ವರ್ಷದಿಂದ ಇಲ್ಲಿಯವರೆಗೆ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹಾವು ಕಡಿದು, ವಿದ್ಯುತ್ ಅಪಘಾತ ಮುಂತಾದ ವಿವಿಧ ರೀತಿಯಲ್ಲಿ ನಿಧನರಾಗಿರುವ ರೈತರಿಗೆ ಪರಿಹಾರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವಾಗ ಮೃತ ಕುಟುಂಬಕ್ಕೆ ಪರಿಹಾರ ನೀಡಲಾಗುವುದು; (ವಿವರ ನೀಡುವುದು)	ಕಳೆದ 03ವರ್ಷದಲ್ಲಿ ಹಾವು ಕಡಿತ ಇತರೆ ಕಾರಣಗಳಿಂದ ಮರಣ ಹೊಂದಿದ ರೈತರ ವಿವರಗಳು ಈ ಕೆಳಕಂಡಂತಿದೆ;

ವರ್ಷ	ವರದಿಯಾದ ಪ್ರಕರಣ	ಅರ್ಹ ಪ್ರಕರಣ	ಪರಿಹಾರ ನೀಡಿದ ಪ್ರಕರಣಗಳು
2019-202	3	3	3
2020-21	2	2	2
2021-2022	2+5 (ಇತರೆ ಕಾರಣ)	7	7
2022-23	2	2	0

ಪ್ರಶ್ನೆ	ಉತ್ತರ
(ಇ) ಪ್ರಧಾನಮಂತ್ರಿ ಕಿಸಾನ ಸಮ್ಮಾನ್ "ಪ್ರಧಾನಮಂತ್ರಿ ಫಸಲ್ ಭೀಮಾ" ಮತ್ತು "ಪ್ರಧಾನಮಂತ್ರಿ ಕೃಷಿ ಸಿಂಚಾಯಿ" ಯೋಜನೆಯಲ್ಲಿ ರಾಜ್ಯ	ಕೃಷಿ ಇಲಾಖೆಯು ನೀಡಿರುವ ಮಾಹಿತಿಯನುಸಾರ, ವಿಜಯಪುರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಲ್ಲಿ ರಾಜ್ಯ ಸರ್ಕಾರವು **2,38,225** ಫಲಾನುಭವಿಗಳು ಹೆಚ್ಚುವರಿ ಸಹಾಯಧನ ಪಡೆದಿರುತ್ತಾರೆ (ಗ್ರಾಮವಾರು ಹೆಸರು ಮತ್ತು ವಿಳಾಸ ಮಾಹಿತಿಯನ್ನು **soft copy** ಯಲ್ಲಿ ಗಣಕೀಕರಿಸಿ **CD** ಯಲ್ಲಿ ವಿವರಿಸಿದೆ).

<table>
<tr>
<td>ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ನೀಡಿರುವ / ಹೆಚ್ಚುವರಿ ಸಹಾಯಧನ ಪಡೆದ ಫಲಾನುಭವಿಗಳಾರು; (ಮತಕ್ಷೇತ್ರವಾರು / ಗ್ರಾಮವಾರು ಹೆಸರು ಮತ್ತು ವಿಳಾಸಗಳ ಮಾಹಿತಿ ನೀಡುವುದು)</td>
<td>
2019-20 ರಿಂದ 2021-22 ನೇ ಸಾಲಿನವರೆಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ರಾಜ್ಯ ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ಬೆಳೆ ವಿಮಾ ಪರಿಹಾರ ನೀಡಿರುವ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>2019-20</td><td>55183</td></tr>
<tr><td>2020-21</td><td>66924</td></tr>
<tr><td>2021-22</td><td>48648</td></tr>
<tr><td>ಒಟ್ಟು</td><td>170755</td></tr>
</table>
ಬೆಳೆ ವಿಮಾ ಪರಿಹಾರ ನೀಡಲಾದ ವರ್ಷಾವಾರು, ಮತಕ್ಷೇತ್ರವಾರು, ಗ್ರಾಮಾವಾರು ಫಲಾನುಭವಿಗಳ ಮಾಹಿತಿಯನ್ನು ಅನುಬಂಧ-1,2 ಮತ್ತು 3 ನ್ನು CD ಯಲ್ಲಿ ವಿವರಿಸಿದೆ.
ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ನೀಡಿರುವ/ಹೆಚ್ಚುವರಿ ಸಹಾಯಧನ ಪಡೆದ ಫಲಾನುಭವಿಗಳ ವಿವರಗಳನ್ನು CD ಯಲ್ಲಿ ವಿವರಿಸಿದೆ.
</td>
</tr>
<tr>
<td>(ಈ) ವಿಜಯಪುರ ಜಿಲ್ಲೆಯಲ್ಲಿ "ಆತ್ಮನಿರ್ಭರ ಭಾರತ ಅಭಿಯಾನ" ಯೋಜನೆಯಡಿಯಲ್ಲಿ ಆಹಾರ ಪಾರ್ಕನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಹೊಂದಿದ್ದಲ್ಲಿ ಯಾವಾಗ ಮಾಡಲಾಗುವುದು; ಇಲ್ಲವಾದಲ್ಲಿ ಎಲ್ಲಿ ಮಾಡಲಾಗುವುದು; ಅದರ ವೈಶಿಷ್ಟತೆಗಳೇನು;</td>
<td>
ಕೃಷಿ ಇಲಾಖೆಯು ನೀಡಿರುವ ಮಾಹಿತಿಯನುಸಾರ, 2021-22ರ ಆಯವ್ಯಯದ ಘೋಷಣೆಯಂತೆ ವಿಜಯಪುರ ಜಿಲ್ಲೆಯಲ್ಲಿ "ಆತ್ಮನಿರ್ಭರ ಭಾರತ ಅಭಿಯಾನ" ಯೋಜನೆಯಡಿಯಲ್ಲಿ ಆಹಾರ ಪಾರ್ಕನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಸಂಬಂಧ ಈಗಾಗಲೆ ರೂ.4.21 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಭೂಮಿ ಅಭಿವೃದ್ಧಿ ಹಾಗೂ ಕಾಂಪೌಂಡ್ ಗೋಡೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಧ್ಯದಲ್ಲಿ ಕೈಗಾರಿಕೆ ಲೇಔಟ್ ಅಭಿವೃದ್ಧಿ ಕಾರ್ಯ ಸಹ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.
ವೈಶಿಷ್ಟ್ಯತೆಗಳು:
ಉದ್ದೇಶಿತ ಆಹಾರ ಪಾರ್ಕಿನ 75 ಎಕರೆ ವಿಸ್ತೀರ್ಣದಲ್ಲಿ, ಈ ಭಾಗದ ರೈತರಿಗೆ ಹಾಗೂ ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಸಾಮಾನ್ಯ ಮೂಲಸೌಕರ್ಯಗಳಾದ (Common Infrastructure), ಪ್ರಾಥಮಿಕ ಸಂಸ್ಕರಣೆಯ ಸೌಲಭ್ಯ, ಶೀತಲ ಘಟಕ, ಅಳತೆ ಮಾಪಕಗಳ ಸೌಲಭ್ಯ, ಶೇಖರಣಾ ಗೃಹಗಳು(Primary Processing Facilities, Cold Storage, Weigh Bridge, warehouse etc) ಇತ್ಯಾದಿಗಳನ್ನು ಒದಗಿಸಲಾಗುವುದು ಮತ್ತು ಕೈಗಾರಿಕಾ ಪ್ರದೇಶಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ (ರಸ್ತೆ, ನೀರು, ವಿದ್ಯುತ್ ಇತ್ಯಾದಿ) ಆಹಾರ ಸಂಸ್ಕರಣ ಉದ್ದಿಮೆದಾರರಿಗೆ ಘಟಕಗಳನ್ನು ಸ್ಥಾಪಿಸಲು ನಿವೇಶನಗಳನ್ನು Lease cum sale ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ.
</td>
</tr>
</table>

(ಉ) ಕೃಷಿ ಇಲಾಖೆಯಿಂದ ದೊರೆಯುವ ಇತರ ಸೌಲಭ್ಯಗಳು ಯಾವುವು; ಅವುಗಳನ್ನು ಪಡೆಯಲು ಇರಬೇಕಾದ ಅರ್ಹತೆಗಳೇನು? (ವಿವರ ನೀಡುವುದು)	ಕೃಷಿ ಇಲಾಖೆಯಿಂದ ದೊರೆಯುವ ವಿವಿಧ ಯೋಜನೆಗಳ ಸೌಲಭ್ಯಗಳ ವಿವರವನ್ನು ಕೃಷಿ ಇಲಾಖೆಯಿಂದ ಪಡೆದು ಅನುಬಂಧ-**1** ಮತ್ತು ಅವುಗಳನ್ನು ಪಡೆಯಲು ಇರಬೇಕಾದ ಅರ್ಹತೆಗಳ ವಿವರಗಳನ್ನು ಅನುಬಂಧ-**2** ರಲ್ಲಿ ಒದಗಿಸಿದೆ.

ಕಂಇ 503 ಟಿಎನ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೦೩ ರ ಅನುಬಂಧ-1

ಅನುಬಂಧ-1

2022-23ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಇರುವ ಯೋಜನೆಗಳ ವಿವರಗಳು

ರಾಜ್ಯ ವಲಯ ಯೋಜನೆಗಳು:

1.ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ (2202-80-107-0-06): ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ/ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದು.

2. ಅನುಸೂಚಿತ ಜಾತಿಗಳ ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75): **ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾದ ಅನುದಾನವನ್ನು** 2022-23ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕಾಗಿ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ಹಾಗೂ ರಾಜ್ಯದ ನೀತಿಯನ್ವಯ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನವನ್ನು ಭರಿಸಲು ವಿನಿಯೋಗಿಸಲಾಗುವುದು.

3. ರೈತರ ಪ್ರೋತ್ಸಾಹ ಮತ್ತು ಬೆಂಬಲ ಯೋಜನೆಗಳು(2401-00-102-0-28)

ಅ) ಬೆಳೆ ಸಾಲಕ್ಕೆ ಸಹಾಯಧನ: ರಾಜ್ಯದ ರೈತರು ಬೆಳೆ ಸಾಲ/ ಅಲ್ಪಾವಧಿ ಸಾಲ ಪಡೆದು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದರೆ ಅಂತಹ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿಯನ್ನು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಠ 1.00 ಲಕ್ಷ ಮಿತಿಯೊಳಗೆ ನೀಡಲಾಗುವುದು.

4. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15):

ಅ) ಬೀಜಗಳ ಪೂರೈಕೆ: ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ **ವಿತರಣೆ ಮಾಡಲಾಗುವುದು.**

ಆ) ಸಸ್ಯ ಸಂರಕ್ಷಣೆ: ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಗುಣ ನಿಯಂತ್ರಣ, ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು.

ಇ) ಮಣ್ಣಿನ ಸತ್ವ ಹೆಚ್ಚಿಸುವಿಕೆ: ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ರಿಯಾಯಿತಿ ದರದಲ್ಲಿ ಸಾವಯವ ಗೊಬ್ಬರಗಳು ಇತ್ಯಾದಿಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುವುದು.

ಈ) ಸಾವಯವ ಇಂಗಾಲ ಅಭಿಯಾನ : ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು ಹಾಗೂ ಹಸಿರೆಲೆ ಗೊಬ್ಬರ ಬೀಜ ಮತ್ತು ಸಾವಯವ ಗೊಬ್ಬರಗಳ ಬಳಕೆಯಿಂದ ಸಾವಯವ ಇಂಗಾಲ ಹೆಚ್ಚಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುವುದು.

ಉ) ಕೃಷಿ ಯಾಂತ್ರೀಕರಣ: ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆಯಿಂದ ಕೊಯ್ಲಿನವರೆಗೆ ಅವಶ್ಯವಿರುವ ವಿವಿಧ ಕೃಷಿ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ಒಂದು ಲಕ್ಷ ರೂ.ವರೆಗೆ ನೀಡಲಾಗುತ್ತದೆ. ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ.

ಊ) ಕೃಷಿ ಯಂತ್ರಧಾರೆ: ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

ಋ) ಕೃಷಿ ಸಂಸ್ಕರಣೆ: ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣಗಳು ಮತ್ತು ಟಾರ್ಪಾಲಿನ್ ಗಳನ್ನು ಖರೀದಿಸಲು ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುವುದು.

ಎ) ರೈತ ಶಕ್ತಿ: 2022-23 ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250.0ರಂತೆ ಗರಿಷ್ಠ 5 ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲಾಗುವುದು.

5. ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮ (2401-00-104-0-12):

ಅ) ರೈತ ಸಿರಿ: ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಟೆಫ್, ಚಿಯಾ, ಕ್ವಿನೋವಾ ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.6000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹ ಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು ಹಾಗೂ ಸಾವಯವ ಮತ್ತು ಸಿರಿಧಾನ್ಯಗಳ ಉತ್ತೇಜನ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

ಆ) ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ: 2022-23ರ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಘೋಷಣೆಯಂತೆ ನೈಸರ್ಗಿಕ ಕೃಷಿ ಕೈಗೊಳ್ಳಲು ರೈತರನ್ನು ಪ್ರೇರೆಪಿಸುವ ಉದ್ದೇಶದಿಂದ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮೂಲಕ ತಲಾ 1000 ಎಕರೆ ಪ್ರದೇಶದಲ್ಲಿ ಅಧ್ಯಯನಗಳನ್ನು ಕೈಗೊಳ್ಳಲು ಅನುದಾನವನ್ನು ಕಲ್ಪಿಸಲಾಗಿದೆ.

6. ಹೊಸ ಬೆಳೆ ವಿಮಾ ಯೋಜನೆ(2401-00-110-0-07): ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು ಹಾಗೂ ಬೆಳೆ ಸಮೀಕ್ಷೆ ಕಾರ್ಯಕ್ಕೆ ಮತ್ತು ಬೆಳೆ ವಿಮೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯ ವೆಚ್ಚ ಭರಿಸಲಾಗುವುದು.

7. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (2401-00-800-1-05): ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನು ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆಯಡಿ ನೀಡಲಾಗುತ್ತದೆ.

ಕೇಂದ್ರ ಪುರಸ್ಕೃತ ಯೋಜನೆಗಳು

8. ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ(2401-00-102-0-08): ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು, ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಲ್ಲಿ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತದೆ.

9.ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ(2401-00-108-1-15): ನೀರನ್ನು ಸಮರ್ಥ ಮತ್ತು ಸಮರ್ಪಕ ಬಳಕೆಗೆ ಪ್ರೋತ್ಸಾಹಿಸಲು ಹಾಗೂ ಮಿತ ಬಳಕೆಯಿಂದ ಅಧಿಕ ಇಳುವರಿ ಪಡೆಯಲು ಹಾಗೂ ಸೂಕ್ಷ್ಮ (ಹನಿ/ತುಂತುರು) ನೀರಾವರಿ ಪದ್ಧತಿಯ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ 2.00 ಹೆಕ್ಟೇರ್ ಪ್ರದೇಶದವರೆಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಅವರು ಹೊಂದಿರುವ ಪ್ರದೇಶಕ್ಕೆ ಶೇ.90 ರಷ್ಟು ಹಾಗೂ 2.0ಹೆಕ್ಟೇರಿಗಿಂತ ಮೇಲ್ಪಟ್ಟು 5.0ಹೆಕ್ಟೇರ್ ಪ್ರದೇಶದವರೆಗೆ ಶೇ.45ರ ಸಹಾಯಧನವನ್ನು ನೀಡಲಾಗುತ್ತಿದೆ.

10. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)-2401-00-113-0-02: ಈ ಯೋಜನೆಯ ಉದ್ದೇಶ ಕೃಷಿ ಯಂತ್ರೋಪಕರಣಗಳ ಬಳಕೆಯಿಂದ ಸಾಗುವಳಿ ವಿಸ್ತೀರ್ಣದಲ್ಲಿ ಯಾಂತ್ರೀಕೃತ ಶಕ್ತಿಯನ್ನು ಪ್ರತಿ ಹೆಕ್ಟೇರಿಗೆ 2.0ಕಿಲೋ ವ್ಯಾಟ್ ಗಳಷ್ಟು ಹೆಚ್ಚಿಸುವುದಾಗಿದೆ. ಇದರಡಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ರೈತರಿಗೆ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ ನಾಟಿ ಮಾಡುವ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಶುಗರ್ ಕೇನ್ ಹಾರ್ವೆಸ್ಟರ್, ಕಂಬೈನ್ಡ್ ಹಾರ್ವೆಸ್ಟರ್, ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗಿರುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ರೈತರಿಗೆ ಹಣಕಾಸಿನ ನೆರವು ಮತ್ತು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ, ಗ್ರಾಮ ಮಟ್ಟದ ಯಂತ್ರೋಪಕರಣಗಳ ಬ್ಯಾಂಕ್/ ಹೈಟೆಕ್ ಉಪಕರಣಗಳ ಹಬ್ ಗಾಗಿ ಹಣಕಾಸಿನ ನೆರವು ನೀಡಲಾಗುವುದು.

11. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57): ಈ ಯೋಜನೆಯಡಿ ಕೃಷಿ ಮತ್ತು ಸಂಬಂಧಿಸಿದ ವಲಯಗಳಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆಗಾಗಿ ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಜಿಲ್ಲಾ ಕೃಷಿ ಯೋಜನೆಗಳಲ್ಲಿ ಸ್ಥಳೀಯ ಆದ್ಯತೆಗಳು / ಅವಶ್ಯಕತೆಗಳು/ ಬೆಳೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲು, ಹೊಸ ತಾಂತ್ರಿಕತೆಗಳನ್ನು ಅಳವಡಿಸಿ, ಮುಖ್ಯ ಬೆಳೆಗಳ ಉತ್ಪಾದಕತೆಯಲ್ಲಿ ಇರುವ ವ್ಯತ್ಯಯದ ಪ್ರಮಾಣವನ್ನು ಕಡಿತಗೊಳಿಸಲು, ಕೃಷಿ ಮತ್ತು ಸಂಬಂಧಿತ ವಲಯಗಳ ಎಲ್ಲಾ ಅವಶ್ಯಕತೆಗಳನ್ನು ತೆಗೆದುಕೊಂಡು ಉತ್ಪಾದನೆ/

ಉತ್ಪಾದಕತೆಯ ವಿವಿಧ ಘಟಕಗಳಲ್ಲಿ ಬದಲಾವಣೆ ತರಲು ಮತ್ತು ರೈತರಿಗೆ ಹೆಚ್ಚಿನ ಲಾಭಾಂಶ ದೊರಕಿಸಿಕೊಡಲು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

12. ಮಣ್ಣಿನ ಫಲವತ್ತತೆಯ ಯೋಜನೆ (2402-00-101-0-03): ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಗರಿಷ್ಟ ರೂ.2500/-(ಒಂದು ಹೇಕ್ಟೇರಿಗೆ) ಸಹಾಯಧನ ನೀಡಲಾಗುತ್ತದೆ. ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮೊದಲು ಮಾದರಿ ಗ್ರಾಮಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ, ಗ್ರಾಮ ಮಟ್ಟದ ಮಣ್ಣು ಪರೀಕ್ಷಾ ಘಟಕಗಳನ್ನು ಸ್ಥಾಪಿಸಲು ಶೇ.75ರ ಸಹಾಯಧನ (ರೂ.3.75ಲಕ್ಷ) ನೀಡಲಾಗುತ್ತದೆ.

13. ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (2408-01-103-0-01): ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಸಂಸ್ಥೆಯಾಗಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೫೦೩೮

ಅನುಬಂಧ-2

ಕೃಷಿ ಇಲಾಖೆಯ ಯೋಜನೆಗಳಡಿ ಸೌಲಭ್ಯಗಳನ್ನು ಪಡೆಯಲು ಇರುವ ಮಾನದಂಡಗಳ ವಿವರ

ಕ್ರ. ಸಂ	ಫಲಾನುಭವಿ ಆಧಾರಿತ ಯೋಜನೆಕಾರ್ಯಕ್ರಮ /	ಮಾನದಂಡಗಳ ವಿವರ
1	ಬಿತ್ತನೆ ಬೀಜಗಳ ಪೂರೈಕೆ	ಕೃಷಿ ಇಲಾಖೆಯ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ಸಾಮಾನ್ಯ ರೈತರಿಗೆ ಶೇ)50ರ ವರೆಗೆ ಹಾಗು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.75 ರ ವರೆಗೆ ಒಟ್ಟಾರೆ ಗರಿಷ್ಟ (2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ)Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ರಿಯಾಯಿತಿಯಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆಬಿತ್ತನೆ ಬೀಜ ವಿತರಣೆಯಲ್ಲಿ . ಪರಿಶಿಷ್ಟ ವರ್ಗ .ರೈತರ ಪಹಣಿಯಲ್ಲಿನ ವಿವರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ .ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number(FID) ಪಡೆದಿರಬೇಕು.
2	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ	ಈ ಯೋಜನೆಯಡಿ ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಪ್ರಥಮವಾಗಿ ಅಧಿಸೂಚಿಸಲಾಗುತ್ತದೆ. ಅಂತಿಮ ದಿನಾಂಕದೊಳಗೆ ರೈತರಿಂದ ಪ್ರೀಮಿಯಂ ಪಡೆದು ಬ್ಯಾಂಕ್ / ಸಹಕಾರ ಸಂಸ್ಥೆ / ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆ ನೋಂದಣಿ ಕಾರ್ಯ ಕೈಗೊಳ್ಳಲಾಗುತ್ತದೆ ದಾಖಲೆಗಳನ್ನು ಪರಿಶೀಲಿಸಿ ಅರ್ಹ ರೈತರ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿಮಾ ಸಂಸ್ಥೆಗಳಿಗೆ ಅಂಗೀಕರಿಸಲು ರವಾನಿಸಲಾಗುತ್ತದೆ. ಈ ಯೋಜನೆಯು ಸಾಲ ಪಡೆದಂತಹ ರೈತರಿಗೆ ಕಡ್ಡಾಯವಾಗಿದ್ದು, ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ / ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ ಗ್ರಾಮ ಪಂಚಾಯಿತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. ಅರ್ಹ ರೈತರಿಗೆ ವಿಮೆ ಪರಿಹಾರ ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವಿಮಾ ಸಂಸ್ಥೆಯವರು ವರ್ಗಾಯಿಸುತ್ತಾರೆ.

3	ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN)	ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಸದರಿ ಸಹಾಯವನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಇದರ ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ರೂ.4000/-ಗಳನ್ನು ಎರಡು ಕಂತುಗಳಲ್ಲಿ ನೀಡಲಾಗುವುದು. ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಘೋಷಣೆಯ ಆಧಾರದಲ್ಲಿ ಕೆಳಕಂಡ ಮಾನದಂಡಗಳನ್ನು ಹೊಂದಿರುವ ರೈತ ಕುಟುಂಬವು ಯೋಜನೆಯ ಫಲಾನುಭವಿಯಾಗಲು ಅರ್ಹರಿರುವುದಿಲ್ಲ i. ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು. ii. ಕೆಳಕಾಣಿಸಿದ ವರ್ಗಗಳಲ್ಲಿ ಕುಟುಂಬ ಸದಸ್ಯರು ಇದ್ದಲ್ಲಿ. a) ಮಾಜಿ ಮತ್ತು ಹಾಲಿ ಸಾಂವಿಧಾನಿಕ ಹುದ್ದೆಗಳು b) ಮಾಜಿ ಮತ್ತು ಹಾಲಿ ಸಚಿವರು/ರಾಜ್ಯ ಸಚಿವರು / ರಾಜ್ಯ ವಿಧಾನ ಸಭೆ / ವಿಧಾನ ಪರಿಷತ್ತಿನ ಸದಸ್ಯರು / ನಗರ ಸಭೆ ಅಧ್ಯಕ್ಷರು/ ಪುರ ಸಭೆ ಅಧ್ಯಕ್ಷರು /ಜಿಲ್ಲಾ ಪಂಚಾಯಿತಿ ಅಧ್ಯಕ್ಷರು c) ನಿವೃತ್ತ / ಹಾಲಿ ಸೇವೆಯಲ್ಲಿರುವ ಕೇಂದ್ರ / ರಾಜ್ಯ ಸರ್ಕಾರಗಳ /ಸಚಿವಾಲಯ ಕಛೇರಿ/ಇಲಾಖೆ, ಕ್ಷೇತ್ರ ಕಛೇರಿಗಳು/ ಕೇಂದ್ರ / ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಅಂಗ ಸಂಸ್ಥೆಗಳು / ಸ್ವಾಯತ್ತ ಸಂಸ್ಥೆಗಳು ಅಧಿಕಾರಿಗಳು ಹಾಗೂ ನೌಕರರು/ ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್-ಡಿ / 4ನೇ ವರ್ಗ / Multi Tasking Staff ಹೊರತುಪಡಿಸಿ) d) ರೂ.10,000/- ಅಥವಾ ಹೆಚ್ಚಿನ ಮೊತ್ತ ಪಡೆಯುತ್ತಿರುವ ವಯೋ ನಿವೃತ್ತ / ನಿವೃತ್ತ ಪಿಂಚಣಿದಾರರು. (ಗ್ರೂಪ್-ಡಿ / 4ನೇ ವರ್ಗ / Multi Tasking Staff ಹೊರತುಪಡಿಸಿ) e) ಕಳೆದ ಸಾಲಿನ ಆದಾಯ ತೆರಿಗೆ ಪಾವತಿದಾರರು. ವೈದ್ಯ, ಅಭಿಯಂತರ, ವಕೀಲ, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿ ಪರರು ಮತ್ತು ವೃತ್ತಿ ಪರ ಸಂಸ್ಥೆಯಲ್ಲಿ ನೊಂದಾಯಿತ ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು.
4	ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಕಾರ್ಯಕ್ರಮ	ಅ) 8, 9 ಮತ್ತು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳು ಮತ್ತು ಎಸ್.ಎಸ್.ಎಲ್.ಸಿ / 10 ನೇ ತರಗತಿಯನ್ನು ಪೂರೈಸಿರುವ ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್-ಗಳ ವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ. ಆ) ವಿದ್ಯಾರ್ಥಿಯು ಇತರೆ ಯಾವುದೇ ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೂ

		'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.
5	ಸಾವಯವ ಕೃಷಿ	ಸಾವಯವ ಕೃಷಿ ಅಳವಡಿಕೆ ಮತ್ತು ದೃಡೀಕರಣ ಕಾರ್ಯಕ್ರಮದಡಿ ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು ವಿಸ್ತರಿಸುವ ನಿಟ್ಟಿನಲ್ಲಿ ಆಸಕ್ತ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳ ಪ್ರಮಾಣೀಕರಣಕ್ಕಾಗಿ ಅನುದಾನ ಬಳಕೆ ಮಾಡಲಾಗುತ್ತಿದೆ.
6	ರೈತ ಸಿರಿ	ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10,000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು. ಸಿರಿಧಾನ್ಯಗಳನ್ನು ಬೆಳೆದ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ವಿತರಿಸಲಾಗುತ್ತಿದೆ.
7	ಸೂಕ್ಷ್ಮ ನೀರಾವರಿ	ಹನಿ / ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ (2.00 ಹೆಕ್ಟೇರ್ ವರೆಗೆ) ಒದಗಿಸಲಾಗುತ್ತಿದೆ. ಇದಕ್ಕಾಗಿ Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ನೀರಾವರಿ ಸೌಲಭ್ಯ ಹೊಂದಿರುವ ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. (ಪಹಣಿ) ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಕೆ-ಕಿಸಾನ್‌ನಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡಬೇಕು. ರೈತರು ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿದ ರೈತರಿಗೆ ವಿತರಿಸಿದ / ರೈತರ ಹೊಲದಲ್ಲಿ ಅನುಷ್ಠಾನ ಮಾಡಿದ ಲಘು ನೀರಾವರಿ ಸಲಕರಣೆಗಳಿಗೆ ಸಹಾಯಧನ ಒದಗಿಸಲಾಗುವುದು.
8	ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ	ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ದತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್ / ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷ ಹಾಗು ಸಾಮಾನ್ಯ ರೈತರಿಗೆ ರೂ.1.0ಲಕ್ಷಗಳಂತೆ ಗರಿಷ್ಠ ಸಹಾಯಧನವನ್ನು ನೀಡಲಾಗುತ್ತದೆ. ಇದಕ್ಕಾಗಿ Farmer Registration and Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ

		Farmers Identification number (FID) ಪಡೆಯಬೇಕು. ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಕೆ-ಕಿಸಾನ್ ನಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿದ ರೈತರು, ಪಡೆದ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುವುದು.
9	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ	ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು, ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತಿದೆ.
10	ಸಸ್ಯ ಸಂರಕ್ಷಣೆ	ಶೇ.50ರ ರಿಯಾಯಿತಿಯಲ್ಲಿ ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು ವಿತರಣೆ ಮಾಡಲಾಗುತ್ತಿದೆ. ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್‌ಸಿ .ಟಿ. ಸಲ್ಲಿಸಿ ಸವಲತ್ತು ಪಡೆಯಬಹುದು.
11	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ	ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್ ರಿಯಾಯತಿ ದರದಲ್ಲಿ ವಿತರಣೆ ಮಾಡುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತದೆ.
12	ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ	ವಿವಿಧ ದ್ವಿದಳ ಧಾನ್ಯ ಬೀಜಗಳು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತದೆ.
13	ಮಣ್ಣಿನ ಫಲವತ್ತತೆ ಯೋಜನೆ	**ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಪ್ರತಿ ಹೆಕ್ಟೇರಿಗೆ ಗರಿಷ್ಟ ರೂ.2500/- ಸಹಾಯಧನ ನೀಡಲಾಗುತ್ತಿದೆ.**

14	ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ	ಅಸಂಘಟಿತ ವಲಯದಲ್ಲಿರುವ ಸೂಕ್ಷ್ಮ/ ಕಿರು ಆಹಾರ ಸಂಸ್ಕರಣ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಸಂಘಟಿತ ವಲಯಕ್ಕೆ ತರುವುದು ಹಾಗೂ ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ಹಾಗೂ ಉತ್ಪಾದಕ ಸಹಕಾರಿ ಸಂಘಗಳಿಗೆ ಅವುಗಳ ಸರಪಳಿಕೊಂಡಿಯೊಂದಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ನೀಡಲಾಗುವುದು.
15.	ರೈತ ಶಕ್ತಿ	ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250.00 ರಂತೆ ಗರಿಷ್ಠ 5 ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲಾಗುವುದು. Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೊಂದಣಿಗೊಂಡ ರಾಜ್ಯದ ಎಲ್ಲಾ ರೈತರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ ಹಾಗೂ ಈ ಯೋಜನೆಯು ಅರ್ಹತಾಧಾರಿತ ಯೋಜನೆಯಾಗಿರುವುದರಿಂದ ಯಾವುದೇ ರೈತರು ಪ್ರತ್ಯೇಕವಾಗಿ ವೈಯಕ್ತಿಕ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ ದಾಖಲೆಗಳ ಪರಿಶೀಲನೆಯನ್ನು ಸರ್ಕಾರದ . FRUITS ಪೋರ್ಟಲ್ ನಲ್ಲಿ ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ಮಾಡಲಾಗುವುದು. FRUITS ಪೋರ್ಟಲ್‌ನಲ್ಲಿ ನಮೂದಿಸಲಾದ ಹಿಡುವಳಿಯ ವಿಸ್ತೀರ್ಣದ ಆಧಾರದ ಮೇಲೆ ರೈತರಿಗೆ ಡೀಸೆಲ್ ಸಹಾಯಧನವನ್ನು ನೇರ ನಗದು ವರ್ಗಾವಣೆ ((DBTಮೂಲಕ ರೈತರ ಖಾತೆಗೆ ವರ್ಗಾಯಿಸಲಾಗುವುದು. ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ಅವರು ಹೊಂದಿರುವ ಜಮೀನಿನ ಆಧಾರದ ಮೇಲೆ ಸಹಾಯಧನವನ್ನು ನೀಡಲಾಗುವುದು

Click here for Annexures

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	504
ಮಾನ್ಯ ಸದಸ್ಯರ ಹೆಸರು	:	ಡಾ|| ದೇವಾನಂದ್ ಫುಲಸಿಂಗ್ ಚವಾಣ್
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರದಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳ ಅನುಷ್ಠಾನಕ್ಕೆ ಅನುದಾನದ ಕೊರತೆ ಇದೆಯೆ; ಪ್ರಸ್ತುತ ಸರ್ಕಾರ ಸಂಕಷ್ಟವೇನಾದರೂ ಎದುರಿಸುತ್ತಿದೆಯೇ; (ವಿವರವಾದ ಮಾಹಿತಿ ನೀಡುವುದು)	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಅಭಿವೃದ್ಧಿ ಆಯವ್ಯಯದಲ್ಲಿ 24.10% ಅಂದರೆ 29,165.81 ಕೋಟಿಗಳ ಅನುದಾನವನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿಯ ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಾವುವು; (ವಿವರ ನೀಡುವುದು)	ವಿವಿಧ ಇಲಾಖೆಗಳಿಂದ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅಡಿ ಪರಿಶಿಷ್ಟ ಜಾತಿಯ ಮೀಸಲು ವಿಧಾನ ಸಭಾ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರವನ್ನು ಅನುಬಂಧ-1 ರಲ್ಲಿ ಡಿ.ವಿ.ಡಿ ಯಲ್ಲಿ ನೀಡಿದೆ. ಮುಂದುವರೆದು, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಕಾಲೋನಿ ಯೋಜನೆ ಹಾಗೂ ಭವನಗಳ ನಿರ್ಮಾಣ ಕಾರ್ಯಕ್ರಮದಡಿ ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿಯ ಮೀಸಲು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾತಿ ನೀಡಿ, ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಅನುಬಂಧ-3 ಮತ್ತು 4 ರಲ್ಲಿ ನೀಡಿದೆ.
ಇ)	ಪರಿಶಿಷ್ಟ ಜಾತಿಯ ಮೀಸಲು ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ 2016-17ನೇ ಸಾಲಿನಲ್ಲಿ 04 ಡಾ: ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ಹಾಗೂ 02 ಬಾಬು ಜಗಜೀವನರಾಂ ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಭವನಗಳ ನಿರ್ಮಾಣಕ್ಕೆ ಇಲ್ಲಿಯವರೆಗೆ ಶೇ.50 ರಷ್ಟು ಅನುದಾನ ಮಾತ್ರ ಬಿಡುಗಡೆ ಮಾಡಿ ಉಳಿದ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಕಾಮಗಾರಿಗಳು ಅಪೂರ್ಣಗೊಂಡು ಅರ್ಧಕ್ಕೆ ನಿಂತಿರುವುದರಿಂದ ಸಾರ್ವಜನಿಕರ ನಿಂದನೆಗೊಳಗಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	2016-17 ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆ, ನಾಗಠಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ|| ಬಿ.ಆರ್.ಅಂಬೇಡ್ಕರ್/ ಡಾ|| ಬಾಬು ಜಗಜೀವನ ರಾಂ ಭವನಗಳ ನಿರ್ಮಾಣ ಸಂಬಂಧವಾಗಿ ಮಂಜೂರಾತಿ ನೀಡಿ, ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ. (ರೂ.ಲಕ್ಷಗಳಲ್ಲಿ)

ಭವನದ ವಿವರ	ಭವನಗಳ ಸಂಖ್ಯೆ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಬಾಕಿ ಬಿಡುಗಡೆ ಮಾಡಬೇಕಾದ ಮೊತ್ತ
ಡಾ|| ಬಿ.ಆರ್ ಅಂಬೇಡ್ಕರ್ ಭವನ	09	121.00	87.40	33.60
ಡಾ|| ಬಾಬು ಜಗಜೀವನ ರಾಂ ಭವನ	09	108.00	82.80	25.20
ಒಟ್ಟು	**18**	**229.00**	**170.20**	**58.80**

ಈ)	ಉಳಿದ ಶೇ.50 ರಷ್ಟು ಅನುದಾನ ಬಿಡುಗಡೆ ವಿಳಂಬಕ್ಕೆ ಕಾರಣಗಳೇನು;	ಮೇಲ್ಕಂಡ ಭವನಗಳ ನಿರ್ಮಾಣ ಸಂಬಂಧ ಬಾಕಿ ಅನುದಾನ ಬಿಡುಗಡೆ ಕೋರಿ ಜಿಲ್ಲೆಯಿಂದ ಪಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಆಧರಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.
ಉ)	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ 2019-20ನೇ ಸಾಲಿನ ಅನುದಾನದಲ್ಲಿ ವಿಜಯಪುರ ತಾಲ್ಲೂಕಿನ ಅಂಕಲಗಿ ತಾಂಡಾದ ಶ್ರೀ ಚಂದಾನಾಯಕನ ದೇವಸ್ಥಾನ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದರೂ ಅನುದಾನ ಬಿಡುಗಡೆ ವಿಳಂಬಕ್ಕೆ ಕಾರಣಗಳೇನು; (ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆಗೊಳಿಸಲಾಗುವುದು)	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ 2019-20ನೇ ಸಾಲಿನ ಅನುದಾನದಲ್ಲಿ ವಿಜಯಪುರ ತಾಲ್ಲೂಕಿನ ಅಂಕಲಗಿ ತಾಂಡಾದ ಶ್ರೀ ಚಂದಾನಾಯಕನ ದೇವಸ್ಥಾನ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಅನುದಾನವನ್ನು ಅನುದಾನ ಲಭ್ಯತೆಯನುಸಾರ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.
1	ಕುರ್ವಕಲುಂ	ಅತ್ಕೂರ ಗ್ರಾಮದಿಂದ ಕುರ್ವಕಲುಂ ಗ್ರಾಮವು 02 ಕಿ.ಮೀ ಅಂತರದಲ್ಲಿದ್ದು, ಸದರಿ ಗ್ರಾಮಕ್ಕೆ ಕೃಷ್ಣ ನದಿ ಅಡ್ಡ ಇರುವ ಪ್ರಯುಕ್ತ, ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.	ಅತ್ಕೂರ ಗ್ರಾಮದವರೆಗೆ 08 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
2	ಕುರ್ವಕುರ್ದಾ	ಬುರ್ದಿಪಾಡ ಗ್ರಾಮದಿಂದ ಕುರ್ವಕುರ್ದಾ ಗ್ರಾಮವು 02 ಕಿ.ಮೀ ಅಂತರದಲ್ಲಿದ್ದು, ಸದರಿ ಗ್ರಾಮಕ್ಕೆ ಕೃಷ್ಣ ನದಿ ಅಡ್ಡ ಇರುವ ಪ್ರಯುಕ್ತ, ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.	ಬುರ್ದಿಪಾಡ ಗ್ರಾಮದವರೆಗೆ 08 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
3	ಆಗ್ರಹಾರ	ಬುರ್ದಿಪಾಡ ಗ್ರಾಮದಿಂದ ಆಗ್ರಹಾರ ಗ್ರಾಮವು 1.5 ಕಿ.ಮೀ ಅಂತರದಲ್ಲಿದ್ದು, ಸದರಿ ಗ್ರಾಮಕ್ಕೆ ಕೃಷ್ಣ ನದಿ ಅಡ್ಡ ಇರುವ ಪ್ರಯುಕ್ತ, ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.	ಬುರ್ದಿಪಾಡ ಗ್ರಾಮದವರೆಗೆ 08 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
4	ಅರಳಪ್ಪನ ಹುಡಾ	ಸದರಿ ಗ್ರಾಮವು ರಾಯಚೂರು-ಸುಲ್ತಾನಪುರ ಮಾರ್ಗದಲ್ಲಿ ಬರುತ್ತಿದ್ದು, ರಘುನಾಥಹಳ್ಳಿಯಿಂದ 04 ಕಿ.ಮೀ ಅಂತರದಲ್ಲಿದ್ದು, ಬಂಡಿ ರಸ್ತೆ ಇರುವ ಪ್ರಯುಕ್ತ, ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.	ರಘುನಾಥಹಳ್ಳಿವರೆಗೆ 04 ಸರತಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು,
ಕ.ಕ.ರ.ಸಾ.ನಿ., ಕೇ.ಕ., ಕಲಬುರಗಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	561
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ</th><th>ವಿಷಯ</th><th>ಉತ್ತರ</th></tr>
<tr><td>(ಅ)</td><td>ರಾಯಚೂರು ಜಿಲ್ಲೆಗೆ 2020-21, 2021-22 ಮತ್ತು 2022-23ನೇ ಸಾಲಿನಲ್ಲಿ ಎಷ್ಟು ಡಾ. ಬಿ. ಆರ್. ಅಂಬೇಡ್ಕರ್ ಭವನಗಳನ್ನು ಮಂಜೂರು ಮಾಡಲಾಗಿದೆ. (ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು)</td><td>2021-22 ನೇ ಸಾಲಿಗೆ ಸಂಬಂಧಿಸಿದಂತೆ ಮಂಜೂರು ಮಾಡಿರುವ ಭವನಗಳ ವಿವರ ಈ ಕೆಳಕಂಡಂತಿರುತ್ತದೆ.
ರೂ. ಲಕ್ಷಗಳಲ್ಲಿ
<table>
<tr><th>ವರ್ಷ</th><th>ವಿಧಾನಸಭಾ ಕ್ಷೇತ್ರ</th><th>ಭವನದ ವಿವರ</th><th>ಮಂಜೂರಾದ ಸ್ಥಳ</th><th>ಮೊತ್ತ</th></tr>
<tr><td rowspan="2">2021-22</td><td rowspan="2">ಮಾನ್ವಿ</td><td>ಅಂಬೇಡ್ಕರ್ ಭವನ</td><td>ಮಾನ್ವಿ ತಾಲ್ಲೂಕು ಕೇಂದ್ರ</td><td>200.00</td></tr>
<tr><td>ಅಂಬೇಡ್ಕರ್ ಭವನ</td><td>ಸಿರವಾರ ತಾಲ್ಲೂಕು ಕೇಂದ್ರ</td><td>200.00</td></tr>
</table>
2020-21 ಮತ್ತು 2022-23 ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಡಾ|| ಬಿ.ಆರ್. ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಿರುವುದಿಲ್ಲ.

ಮುಂದುವರೆದಂತೆ, ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟಾರೆ 89 ಸ್ಥಳಗಳಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ / ಡಾ|| ಬಾಬು ಜಗಜೀವನ ರಾಮ್ ಸಮುದಾಯ ಭವನಗಳನ್ನು ರೂ.2508.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ಭಾಗಶಃ ಅನುದಾನ ರೂ.1316.42 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.</td></tr>
<tr><td>(ಆ)</td><td>ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾಗಿದ್ದು, ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಜನಾಂಗವು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಡಾ. ಬಿ.ಆರ್.</td><td>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇದುವರೆವಿಗೂ 08 ಡಾ||ಬಿ.ಆರ್.ಅಂಬೇಡ್ಕರ್ ಭವನಗಳನ್ನು ರೂ.86.00 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಮಂಜೂರಾತಿ ನೀಡಿ ರೂ.34.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.52.00 ಲಕ್ಷಗಳನ್ನು ಬಿಡುಗಡೆ</td></tr>
</table>

--2

	ಅಂಬೇಡ್ಕರ್ ಭವನ ಮಂಜೂರು ಮಾಡುವಂತೆ ಅನೇಕ ಬಾರಿ ಮನವಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಡುವುದು ಬಾಕಿ ಇರುತ್ತದೆ. ಈ ಪೈಕಿ 01 ಭವನದ ಕಾಮಗಾರಿ ಪೂರ್ಣಗೊಂಡಿದ್ದು, 02 ಭವನಗಳ ಕಾಮಗಾರಿ ಪ್ರಾರಂಭಿಸುವುದು ಬಾಕಿ ಇರುತ್ತದೆ. 2022-23 ನೇ ಸಾಲಿನಲ್ಲಿ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ಮಂಜೂರಾತಿ ಕೋರಿ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ.
(ಇ)	ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಭವನಗಳನ್ನು ಮಂಜೂರು ಮಾಡಲಾಗುವುದು?	

ಸಕಇ 741 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಮಾನ್ಯ ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 562
ಉತ್ತರಿಸಬೇಕಾದ ಸಚಿವರು : ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ : 21-12-2022

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಹಾಲಿ ಮಂಜೂರಾಗಿರುವ ಹುದ್ದೆಗಳು ಎಷ್ಟು; (ವೃಂದವಾರು ವಿವರ ನೀಡುವುದು)</td><td rowspan="2">ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಎಲ್ಲಾ ವೃಂದದ ಹುದ್ದೆಗಳು ಸೇರಿ 8980 ಹುದ್ದೆಗಳು ಮಂಜೂರಾಗಿರುತ್ತವೆ. ವೃಂದವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ಈ ಪೈಕಿ ಖಾಲಿ ಇರುವ ಹುದ್ದೆಗಳು ಎಷ್ಟು; (ವೃಂದವಾರು ವಿವರ ನೀಡುವುದು)</td></tr>
<tr><td>ಇ)</td><td>ಕೃಷಿ ಇಲಾಖೆಯ ನೌಕರರು ಬೇರೆ ಇಲಾಖೆಗೆ ಅನ್ಯ ಕರ್ತವ್ಯದ ಮೇಲೆ ನಿಯೋಜನೆಗೊಂಡಿರುವ ನೌಕರರ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ, ಯಾವ ಯಾವ ಇಲಾಖೆಗಳಿಗೆ ನಿಯೋಜನೆಗೊಂಡಿರುತ್ತಾರೆ; (ಇಲಾಖಾವಾರು ನಿಯೋಜನೆಗೊಂಡ ನೌಕರರ ಮಾಹಿತಿ ನೀಡುವುದು)</td><td>
<table>
<tr><th></th><th>ಕೃಷಿ ಇಲಾಖೆ ವ್ಯಾಪ್ತಿಯ ಒಳಗಿನ ನಿಗಮ/ಮಂಡಳಿಗಳಲ್ಲಿ</th><th>ಅನ್ಯ ಇಲಾಖೆ</th><th>ಒಟ್ಟು</th></tr>
<tr><td>ಎ</td><td>24</td><td>11</td><td>35</td></tr>
<tr><td>ಬಿ</td><td>06</td><td>04</td><td>10</td></tr>
<tr><td>ಸಿ</td><td>00</td><td>15</td><td>15</td></tr>
<tr><td>ಒಟ್ಟು</td><td>30</td><td>30</td><td>60</td></tr>
</table>
ಇಲಾಖಾವಾರು ನಿಯೋಜನೆಗೊಂಡಿರುವ ನೌಕರರ ಹುದ್ದೆವಾರು ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.</td></tr>
<tr><td>ಈ</td><td>ಕೃಷಿ ಇಲಾಖೆಯಲ್ಲಿಯೇ ಸಿಬ್ಬಂದಿ ಕೊರತೆ ಇದ್ದರೂ ಬೇರೆ ಇಲಾಖೆಗೆ ನಿಯೋಜನೆ ಮಾಡಲು ಕಾರಣಗಳೇನು?</td><td>ಕೃಷಿ ಇಲಾಖೆಯಲ್ಲಿ ಕೆಲವು ಹುದ್ದೆಗಳನ್ನು ಕೆಲವು ಇಲಾಖೆಗಳಲ್ಲಿ ಮಂಜೂರು ಮಾಡಿದ್ದು (ಉದಾ: ಕಾಡಾ/ಕೆ.ಎಸ್.ಎಸ್.ಸಿ/ಅಂತರ್ ಗಂಗೆ ಇನ್ನಿತರ) ಸದರಿ ಹುದ್ದೆಗಳನ್ನು ಎಕ್ಸ್‌ಕೇಡರ್ ಹುದ್ದೆಗಳೆಂದು ಇಲಾಖಾ ವೃಂದ ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ. ಇಲಾಖೆಯ ಅಧಿಕಾರಿ/ನೌಕರರುಗಳು ವರ್ಗಾವಣೆ ಅಥವಾ ನಿಯೋಜನೆ ಮೇರೆಗೆ ತೆರಳಬೇಕಿರುತ್ತದೆ. ಆದ್ದರಿಂದ ಲಭ್ಯವಿರುವ ಸದರಿ ಎಕ್ಸ್ ಕೇಡರ್ ಹುದ್ದೆಗಳಿಗೆ ಸುಮಾರು ಅಧಿಕಾರಿಗಳನ್ನು ನಿಯೋಜನೆ ಮೇಲೆ ನೇಮಿಸಲಾಗಿದೆ.</td></tr>
</table>

ಇ-ಸಂಖ್ಯೆ:AGRI-83/ANE/2022

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	563
ಮಾನ್ಯ ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯಾ ಬಲ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪ್ರಸ್ತುತ ಹಿಂದುಳಿದ ವರ್ಗಗಳ ಒಟ್ಟು 14 (ಮೆಟ್ರಿಕ್-ಪೂರ್ವ-6, ಮೆಟ್ರಿಕ್-ನಂತರದ-8) ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಪ್ರಸಕ್ತ ಸಾಲಿನಲ್ಲಿ ಇಲಾಖಾ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ದೃಷ್ಟಿಯಿಂದ ಮಂಜೂರಾತಿ ಸಂಖ್ಯೆಯ ಶೇ.25 ರಷ್ಟು ಸಂಖ್ಯಾಬಲ ಹೆಚ್ಚಳ ಮಾಡಲಾಗಿದ್ದು, ಬಾಗೇಪಲ್ಲಿ ತಾಲ್ಲೂಕಿನ 8 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ 231 ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಲಾಗಿದ್ದು, ಒಟ್ಟಾರೆ 1461 (ಮೆಟ್ರಿಕ್-ಪೂರ್ವ-305 ವಿದ್ಯಾರ್ಥಿಗಳು ಮತ್ತು ಮೆಟ್ರಿಕ್-ನಂತರ-1156 ವಿದ್ಯಾರ್ಥಿಗಳು) ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.
ಆ)	ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	

ಸಂಖ್ಯೆ:ಹಿಂವಕ 745 ಬಿಂಎಂಎಸ್ 2022

(**ಕೋಟ ಶ್ರೀನಿವಾಸ ಪೂಜಾರಿ**)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	564
ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ	21.12.2022
ಉತ್ತರಿಸಬೇಕಾದ ಸಚಿವರು	ಮಾನ್ಯಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ತಾಲ್ಲೂಕಿನ ಕೃಷಿ ಇಲಾಖೆಯಲ್ಲಿ ಮಂಜೂರಾಗಿರುವ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ವೃಂದದ ಎಲ್ಲಾ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;	ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ಪಕ್ಕದ ಚಿಂತಾಮಣಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬ ಸಹಾಯಕ ಕೃಷಿ ನಿರ್ದೇಶಕರನ್ನು ಹಾಗೂ ಮೂವರು ಕೃಷಿ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ನಿಯೋಜಿಸಲಾಗಿರುತ್ತದೆ. ಮುಂದುವರೆದು, 300 ಸಹಾಯಕ ಕೃಷಿ ಅಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆದ್ಯತೆಯ ಮೇರೆಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. Yes it has come to the notice of Government that all posts are vacant in Bagepally Taluk. In order to manage with the existing situation one Assistant Director of Agriculture and three Agriculture Officers from neighboring Chinthamani taluk are deputed to work on additional charge. Further, the process of filling up 300 Assistant Agricultural Officers through Direct Recruitment is in progress. Action will be taken to fill up the vacant posts on priority.
ಆ)	ಈ ಎಲ್ಲಾ ಹುದ್ದೆಗಳು ಖಾಲಿ ಇರುವುದರಿಂದ ಕೃಷಿ ಇಲಾಖೆಯ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಸಾಧ್ಯವಾಗದೇ ಇರುವುದು ನಿಜವೇ? (ವಿವರ ನೀಡುವುದು).	ಕೃಷಿ ಇಲಾಖೆಯ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ ಪಕ್ಕದ ಚಿಂತಾಮಣಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬರು ಸಹಾಯಕ ಕೃಷಿ ನಿರ್ದೇಶಕರನ್ನು ಹಾಗೂ 03 ಕೃಷಿ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ ನಿಯೋಜಿಸಲಾಗಿರುತ್ತದೆ. ಮುಂದುವರೆದು, ಆತ್ಮ ಯೋಜನೆಯಡಿ ನೇರ ಗುತ್ತಿಗೆಯಡಿ ನೇಮಕಗೊಂಡಿರುವ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು (BTM-01) ಸಹಾಯಕ ತಾಂತ್ರಿಕ ವ್ಯವಸ್ಥಾಪಕರು (ATM-04) ಹಾಗೂ ರೈತ

		ಸಂಪರ್ಕ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 05 ದಾಸ್ತಾನು ಮತ್ತು ದಾಖಲಾತಿ ನಿರ್ವಹಣಾ ಸಿಬ್ಬಂದಿ ಸಹಕಾರದೊಂದಿಗೆ ಕೃಷಿ ಇಲಾಖೆಯ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿರುತ್ತದೆ. One Assistant Director of Agriculture and Three Agriculture Officers working in Chintamani Taluk are deputed to work in Bagepally Taluk as additional Charge. Further Block Technical Manager (BTM-01), Assistant Technical Manager (ATM-04), appointed on direct contract under ATMA Yojane and with the cooperation of 05-Stock & document maintenance staff working on outsourced basis at the Raita Samparka Kendra. Sincere efforts are being made to deliver the facilities of the Agriculture Department to the farmers.

AGRI-AGS/336/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	565
ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸುವ ದಿನಾಂಕ	:	21-12-2022
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ.ಸಂ	ವಿಷಯ	ಉತ್ತರ
(ಅ)	ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಲ್ಲಿ ತಾಲ್ಲೂಕು ಮಟ್ಟದ ಡಾ. ಬಿ. ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಾಗೇಪಲ್ಲಿ ತಾಲ್ಲೂಕು ಕೇಂದ್ರದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಮಂಜೂರಾತಿ ಕೋರಿ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ. ಗುಡಿಬಂಡೆ ತಾಲ್ಲೂಕು ಕೇಂದ್ರದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಸಕನಿ/ಶಿ-2/ಸಿಆರ್-13/2013-14 ದಿನಾಂಕ:04-03-2014 ರನ್ವಯ ರೂ.50.00 ಲಕ್ಷಗಳಿಗೆ ಮಂಜೂರಾತಿ ನೀಡಿ, ಮೊದಲ ಕಂತಿನಲ್ಲಿ ರೂ.15.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಆದರೆ, ಸದರಿ ಭವನ ನಿರ್ಮಾಣ ಸಂಬಂಧವಾಗಿ, 2022-23 ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ನಿವೇಶನವನ್ನು ಮಂಜೂರು ಮಾಡಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ ಪರಿಷ್ಕೃತ ಮಾರ್ಗಸೂಚಿಗಳನ್ವಯ ಗುಡಿಬಂಡೆ ತಾಲ್ಲೂಕು ಕೇಂದ್ರದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಈಗಾಗಲೇ ಮಂಜೂರು ಮಾಡಿರುವ ರೂ.50.00 ಲಕ್ಷಗಳನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ರೂ.150.00 ಲಕ್ಷಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
(ಆ)	ಡಾ. ಬಿ. ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮವೇನು?	

ಸಕಇ 729 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 566
ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಗುಡಿಬಂಡೆ ತಾಲ್ಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಘಟಕ ಸ್ಥಾಪನೆಯ ಬಗ್ಗೆ ಅನೇಕ ವರ್ಷಗಳಿಂದ ಬೇಡಿಕೆ ಇರುವುದು ನಿಜವೇ;	ಹೌದು ಗುಡಿಬಂಡೆ ತಾಲ್ಲೂಕಿನಲ್ಲಿ ಬಸ್ ಘಟಕ ಸ್ಥಾಪಿಸಲು ಕೋವಿಡ್-19 ರಿಂದಾಗಿ ಹಾಗೂ ಡೀಸೆಲ್ ಬೆಲೆಯು ಹೆಚ್ಚಳದಿಂದಾಗಿ, ನಿಗಮವು ಆರ್ಥಿಕ ಸಂಕಷ್ಟದಲ್ಲಿರುತ್ತದೆ. ನಿಗಮದ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ, ಆರ್ಥಿಕ ಲಭ್ಯತೆಯನ್ನು ಆಧರಿಸಿ, ಸಾರಿಗೆ ಅವಶ್ಯಕತೆಗೆ ಅನುಗುಣವಾಗಿ, ಕ.ರಾ.ರ.ಸಾ. ನಿಗಮದಲ್ಲಿ ಬಸ್ ಘಟಕಗಳು ಹಾಗೂ ಬಸ್ ನಿಲ್ದಾಣವನ್ನು ನಿರ್ಮಿಸಲು ಅನುಸರಿಸಬೇಕಾದ ಸುತ್ತೋಲೆ ಸಂಖ್ಯೆ: 01/2015-16ರಲ್ಲಿ ಮಾನದಂಡಗಳನ್ವಯ ಬಸ್ ಘಟಕ ಸ್ಥಾಪನೆ ಬಗ್ಗೆ ಪರಿಶೀಲಿಸಲಾಗುವುದು.
ಆ	ಹಾಗಿದ್ದಲ್ಲಿ, ಸರ್ಕಾರ ಬಸ್ ಘಟಕ ನಿರ್ಮಾಣ ಮಾಡಲು ಯಾವ ಕ್ರಮ ಕೈಗೊಂಡಿದೆ;	
ಇ	ಬಸ್ ಘಟಕ ಸ್ಥಾಪನೆಗೆ ಇರುವ ಮಾನದಂಡಗಳೇನು?	ಬಸ್ ಘಟಕ ಸ್ಥಾಪನೆ ಕುರಿತು ಸುತ್ತೋಲೆ ಸಂಖ್ಯೆ 01/2015-16 ರಲ್ಲಿ ಮಾನದಂಡಗಳನ್ನು ತಿಳಿಸಲಾಗಿರುತ್ತದೆ. ಸದರಿ ಸುತ್ತೋಲೆ ಪ್ರಕಾರ ಬಸ್ ಘಟಕಗಳನ್ನು ತಾಲ್ಲೂಕು ಮಟ್ಟದಲ್ಲಿ ಕನಿಷ್ಠ 75 ಅನುಸೂಚಿಗಳಿದ್ದಲ್ಲಿ ಮಾತ್ರ ನಿರ್ಮಿಸುವುದು. ಆದಾಗ್ಯೂ, ಒಂದು ವೇಳೆ ಹತ್ತಿರದ ಘಟಕ ಅಂದರೆ 40 ರಿಂದ 50 ಕಿ.ಮೀಗಳ ಅಂತರದಲ್ಲಿದ್ದು, ಆ ಘಟಕವು 125 ರಿಂದ 150 ಅನುಸೂಚಿಗಳನ್ನು ಹೊಂದಿದ್ದಲ್ಲಿ ಅಂತಹ ತಾಲ್ಲೂಕು ಕೇಂದ್ರಗಳನ್ನು ಕನಿಷ್ಠ 50 ಅನುಸೂಚಿಗಳನ್ನು ಹೊಂದಿರಬೇಕು. ಘಟಕ ನಿರ್ಮಿಸಲು ಗುರುತಿಸಿರುವ ನಿವೇಶನವು ಕನಿಷ್ಟ 3 ಎಕರೆ ವಿಸ್ತೀರ್ಣ ಹೊಂದಿರಬೇಕು.

ಸಂಖ್ಯೆ: ಟಿಡಿ 273 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	568
ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಟ್ಟಡ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದ ಕಾರ್ಮಿಕರುಗಳಿಗೆ ಸರ್ಕಾರ ಒದಗಿಸಿಕೊಡುತ್ತಿರುವ ಯೋಜನಾನುಷ್ಠಾನಗಳಾವುವು; (ವಿವರ ನೀಡುವುದು)	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಕಾರ್ಮಿಕರಿಗೆ ಒದಗಿಸುತ್ತಿರುವ ಯೋಜನೆಗಳ ವಿವರ ಈ ಕೆಳಕಂಡಂತಿವೆ: <u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u> ಈ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗಾಗಿ ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u> ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ (ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಹೊರತುಪಡಿಸಿ) ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. (1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅ) **ಅಪಘಾತ ಪರಿಹಾರ ಸೌಲಭ್ಯ : ಈ** ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ಫಲಾನುಭವಿಗೆ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

		(ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. 2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-** ಈ ಯೋಜನೆಯಡಿ, 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಗೃಹ ಕಾರ್ಮಿಕರು, ಟೈಲರ್ಸ್, ಚಿಂದಿ ಆಯುವವರು, ಮೆಕ್ಯಾನಿಕ್ಸ್, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕ ನೋಂದಾಯಿಸಿ ಗುರುತಿನ ಚೀಟಿ ವಿತರಿಸಲಾಗುತ್ತಿದ್ದು, ಯಾವುದೇ ಆರ್ಥಿಕ ಸೌಲಭ್ಯ ನೀಡುತ್ತಿಲ್ಲ. (3) **ಇ-ಶ್ರಮ್ ಕಾರ್ಯಕ್ರಮ (ಅಸಂಘಟಿತ ಕಾರ್ಮಿಕರ ನೋಂದಣಿ)** :-ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಇ-ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, ಯೋಜನೆಯಡಿ 16-59 ವಯೋಮಾನದ ಇ.ಎಸ್.ಐ ಹಾಗೂ ಇ.ಪಿ.ಎಫ್ ಸೌಲಭ್ಯವನ್ನು ಹೊಂದಿರದ ಹಾಗೂ ಆದಾಯ ತೆರಿಗೆ ಪಾವತಿ ಮಾಡದ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸುತ್ತಿದ್ದು, ಅವರು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಅಥವಾ ಸ್ವಯಂ ಆಗಿ ಇ-ಶ್ರಮ್ ಪೋರ್ಟಲ್‌ನಲ್ಲಿ (eshram.gov.in) ಉಚಿತವಾಗಿ ನೋಂದಾಯಿಸಬಹುದಾಗಿದ್ದು, ಗುರುತಿನ ಚೀಟಿಯನ್ನು ನೋಂದಾಯಿತ ಸ್ಥಳದಲ್ಲೆ ವಿತರಿಸಲಾಗುತ್ತದೆ. ಸದರಿ ಕಾರ್ಮಿಕರು ಒಂದು ವರ್ಷಕ್ಕೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PM-SBY) ಪ್ರಯೋಜನ ಪಡೆಯಬಹುದು (ಅಪಘಾತ ವಿಮೆಯಾಗಿದ್ದು, ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2 ಲಕ್ಷ ಹಾಗೂ ಭಾಗಶಃ ಅಂಗವೈಕಲ್ಯಕ್ಕೆ ರೂ.1 ಲಕ್ಷ ಪರಿಹಾರ). **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಈ ಮಂಡಳಿಗೆ 20:40 ರ ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40/- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಕೆಳಕಂಡ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. 1) **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ** 2) **ಕಾರ್ಮಿಕರಿಗೆ ವೈದ್ಯಕೀಯ ನೆರವು** 3) **ಕಾರ್ಮಿಕರಿಗೆ ಅಪಘಾತ ಧನ ಸಹಾಯ**

		4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ 5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ 6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ 7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ
ಆ)	ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುವ ಸಲುವಾಗಿ ನೀಡಲಾಗುವ ಗುರುತಿನ ಕಾರ್ಡ್‌ಗಳನ್ನು ಎಷ್ಟು ಕಾರ್ಮಿಕರಿಗೆ ಒದಗಿಸಿಕೊಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಕಾರ್ಮಿಕರಿಗೆ ಒದಗಿಸುತ್ತಿರುವ ಗುರುತಿನ ಕಾರ್ಡ್‌ಗಳ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ: **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಪ್ರಾರಂಭದಿಂದ ಅಕ್ಟೋಬರ್, 2022 ರವರೆಗೆ 30,43,980 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗಿದ್ದು, ನೋಂದಾಯಿತ ಎಲ್ಲಾ ಫಲಾನುಭವಿಗಳಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-02** ರಲ್ಲಿ ಸಲ್ಲಿಸಿದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೋಂದಾಯಿಸಿ ಗುರುತಿನ ಚೀಟಿ ವಿತರಿಸಿದ ಅಸಂಘಟಿತ ಕಾರ್ಮಿಕರ ಸಂಖ್ಯೆ ಈ ಕೆಳಗಿನಂತಿದೆ. 1. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಈ ಯೋಜನೆಯಡಿ ಖಾಸಗಿ ವಾಣಿಜ್ಯ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ಚಾಲನಾ ಪತ್ರ ಹೊಂದಿದ ಎಲ್ಲಾ ಚಾಲಕರು ಫಲಾನುಭವಿಗಳಾಗಿದ್ದು, ಪ್ರತ್ಯೇಕ ನೋಂದಣಿಯ ಅವಶ್ಯಕತೆ ಇರುವುದಿಲ್ಲ. ಸದರಿ ಇಲಾಖೆಯ ದತ್ತಾಂಶದ ಪ್ರಕಾರ ಒಟ್ಟು 8,40,561 ಖಾಸಗಿ ವಾಣಿಜ್ಯ ಚಾಲಕರು ಇರುವುದಾಗಿ ತಿಳಿದು ಬಂದಿದೆ. 2. **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ :-** ಈ ಯೋಜನೆಯಡಿ ಒಟ್ಟು 2,72,152 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಗುರುತಿನ ಚೀಟಿ ವಿತರಿಸಲಾಗಿದೆ. 3. **ಇ-ಶ್ರಮ್ ಕಾರ್ಯಕ್ರಮದ ಅಸಂಘಟಿತ ಕಾರ್ಮಿಕರ ನೋಂದಣಿ:-** ಈ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 72,55,219 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಥಳದಲ್ಲಿಯೇ ಗುರುತಿನ ಚೀಟಿಯನ್ನು ವಿತರಿಸಲಾಗಿದೆ. ಮೇಲ್ಕಂಡ ಯೋಜನೆಗಳಡಿ ನೋಂದಾಯಿತ ಅಸಂಘಟಿತ ಕಾರ್ಮಿಕರ ಜಿಲ್ಲಾವಾರು ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.

		<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ</u> ಈ ಮಂಡಳಿಯಿಂದ ಗುರುತಿನ ಕಾರ್ಡ್‌ಗಳನ್ನು ಒದಗಿಸುವ ವ್ಯವಸ್ಥೆ ಇರುವುದಿಲ್ಲ.
ಇ)	ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರುಗಳಿಗೆ ಗುರುತಿನ ಕಾರ್ಡ್ ನೀಡಿಕೆಯಲ್ಲಿ ಅನುಸರಿಸಲಾಗುತ್ತಿರುವ ನೀತಿ–ನಿಯಮಗಳು ಯಾವುವು; ಸಂಘಟಿತ ಮತ್ತು ಅಸಂಘಟಿತ ವಲಯಕ್ಕೆ ಬರುವ ಕಾರ್ಮಿಕರುಗಳಿಗೆ ನಿಗದಿಪಡಿಸಲಾಗುವ ಅರ್ಹತಾ ನಿಯಮಗಳೇನು?	ಕಾರ್ಮಿಕ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಸಂಘಟಿತ ಹಾಗೂ ಅಸಂಘಟಿತ ವಲಯದ ವಿವಿಧ ವರ್ಗಗಳ ಕಾರ್ಮಿಕರು ಅರ್ಹರಿದ್ದು, ಸದರಿ ಕಾರ್ಮಿಕರು ನೊಂದಣಿಯಾಗಲು ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿರುತ್ತದೆ. ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಜಾರಿಗೊಳಿಸಲಾಗುತ್ತಿರುವ ಯೋಜನೆಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳ ಕುರಿತ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ: **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>** ಅಸಂಘಟಿತ ವಲಯಕ್ಕೆ ಸೇರಿದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಯ ಕಲಂ 12 ರ ಪ್ರಾವದಾನಗಳನ್ವಯ ನೋಂದಣಿ ಪೂರ್ವದಲ್ಲಿ 12 ತಿಂಗಳ ಅವಧಿಯಲ್ಲಿ (ಒಂದು ವರ್ಷದಲ್ಲಿ) 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಮತ್ತು 18–60ರ ವಯೋಮಾನದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಾಣಿಯಾಗಲು ಅರ್ಹರಿರುತ್ತಾರೆ. **ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:** ಎ) ನಮೂನೆ–5ರಲ್ಲಿ ಅರ್ಜಿ ಬಿ)ಮಾಲೀಕರ ಪ್ರಮಾಣ ಪತ್ರ: ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ನವರು ನಮೂನೆ–V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ–V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ನಮೂನೆ–V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'.

		ಸಿ) ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ಇಎಸ್‌ಐಆಸ್ಪತ್ರೆ/ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿಧೆದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ. **ನೋಂದಣಿ ಮಾಡುವ ಕಛೇರಿಗಳು:** ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆ ಈ ಮೇಲೆ ನಿಗಧಿಪಡಿಸಿದ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಸಂಬಂಧಪಟ್ಟ ವ್ಯಾಪ್ತಿಯ ಕಛೇರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಮಂಡಳಿಯ ನೋಂದಾಯಿತ ಫಲಾನುಭವಿಗಳು ಮಂಡಳಿಯು ರೂಪಿಸಿರುವ ವಿವಿಧ ಸೌಲಭ್ಯಗಳನ್ನು ಪಡೆಯಲು ಅನುಸರಿಸಬೇಕಾದ ಅರ್ಹತಾ ನಿಯಮಗಳನ್ನು **ಅನುಬಂಧ-04**ರಲ್ಲಿ ಲಗತ್ತಿಸಿದೆ. **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>** ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿಸಿ ಗುರುತಿನ ಚೀಟಿ ನೀಡಲು ಅನುಸರಿಸುತ್ತಿರುವ ನೀತಿ-ನಿಯಮಗಳು ಈ ಕೆಳಗಿನಂತಿವೆ. **<u>(1) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-</u>** ಈ ಯೋಜನೆಯಡಿ ಸಾರಿಗೆ ಇಲಾಖೆಯಿಂದ ಕರ್ನಾಟಕ ರಾಜ್ಯದಲ್ಲಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿ ಪಡೆದ ಎಲ್ಲಾ ಚಾಲಕರು ತಕ್ಷಣದಿಂದ ಫಲಾನುಭವಿಯೆಂದು ಪರಿಗಣಿಸುತ್ತಿದ್ದು, ಯೋಜನೆಯಡಿ ಪ್ರತ್ಯೇಕ ನೋಂದಣಿಯ ಅವಶ್ಯಕತೆಯಿರುವುದಿಲ್ಲ. ಸದರಿ ವಾಹನಗಳ ನಿರ್ವಾಹಕರು ಹಾಗೂ ಕ್ಲೀನರ್‌ಗಳು ಯೋಜನೆಯಡಿ ನೋಂದಣಾಧಿಕಾರಿಗಳಲ್ಲಿ ನೋಂದಾಯಿಸಬೇಕಾಗುತ್ತಿದ್ದು, ನೀತಿ-ನಿಯಮಗಳು ಹೀಗಿವೆ: • ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ. • ಯೋಜನೆಯು ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅನ್ವಯಿಸುತ್ತದೆ. • ವಯೋಮಿತಿ 20 ರಿಂದ 70 ವರ್ಷಗಳು.

- ನಿರ್ವಾಹಕರು ಸಾರಿಗೆ ಇಲಾಖೆಯಿಂದ ನೀಡಲ್ಪಟ್ಟ ಊರ್ಜಿತ ನಿರ್ವಾಹಕ ಪತ್ರ ಹೊಂದಿರಬೇಕು. ಹಾಗೂ ಸಾರಿಗೆ ವಾಹನದ ಮಾಲೀಕರಿಂದ ಊರ್ಜಿತ ಉದ್ಯೋಗ ಪ್ರಮಾಣ ಪತ್ರವನ್ನು ಹೊಂದಿರಬೇಕು.
- ಕ್ಲೀನರ್‌ಗಳು ಸಾರಿಗೆ ವಾಹನದ ಮಾಲೀಕರಿಂದ ಊರ್ಜಿತ ಉದ್ಯೋಗ ಪ್ರಮಾಣ ಪತ್ರವನ್ನು ಹೊಂದಿರಬೇಕು.

(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-

ಈ ಯೋಜನೆಯಡಿ 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ಕಾರ್ಮಿಕರನ್ನು ನೋಂದಾಯಿಸುತ್ತಿದ್ದು, ನೀತಿ-ನಿಯಮಗಳು ಈ ಕೆಳಗಿನಂತಿದೆ.

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 60 ವರ್ಷಗಳು..
- ಮೇಲಿನ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ.
- ಯೋಜನೆಯಡಿ ನೋಂದಣಿಯಾಗಲು ಅರ್ಜಿದಾರರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಅನುಸೂಚಿ II ರಲ್ಲಿ ನಮೂದಿಸಿರುವ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿರಬಾರದು.

(3) ಕೇಂದ್ರ ಸರ್ಕಾರದ ಇ-ಶ್ರಮ್ ಯೋಜನೆಯಡಿ ನೋಂದಣಿ:-

ಈ ಯೋಜನೆಯಡಿ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಇ-ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, 379 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಗುರುತಿಸಿದ್ದು, ನೋಂದಣಿಗಾಗಿ ನಿಗದಿ ಪಡಿಸಿರುವ ನೀತಿ-ನಿಯಮಗಳು ಈ ಕೆಳಗಿನಂತಿವೆ.

- ಪಟ್ಟಿಯಲ್ಲಿ ನಮೂದಿಸಿದ ಅಸಂಘಟಿತ ವರ್ಗದ ಕಾರ್ಮಿಕನಾಗಿರಬೇಕು.
- 16 ರಿಂದ 59 ವರ್ಷ ವಯೋಮಾನ.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು.

ಅಸಂಘಟಿತ ವಲಯಕ್ಕೆ ಬರುವ ಕಾರ್ಮಿಕರುಗಳಿಗೆ ನಿಗದಿಪಡಿಸಲಾಗುವ ಅರ್ಹತಾ ನಿಯಮಗಳು ಈ ಕೆಳಗಿನಂತಿವೆ:-

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ,2008ರ ಕಲಂ2(ಎಂ)ರನ್ವಯ "ಅಸಂಘಟಿತ ಕೆಲಸಗಾರ" ಎಂದರೆ, ಗೃಹ

		ಆಧಾರಿತ ಕೆಲಸಗಾರ, ಸ್ವಯಂ ನಿಯೋಜಿತ ಕೆಲಸಗಾರ ಅಥವಾ ಅಸಂಘಟಿತ ವಲಯದ ಒಬ್ಬ ಮಜೂರಿ ಕೆಲಸಗಾರ ಮತ್ತು ಈ ಅಧಿನಿಯಮದ ಅನುಸೂಚಿ- IIರಲ್ಲಿ ನಮೂದಿಸಿದ ಅಧಿನಿಯಮಗಳಾದ, ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮ, 1923 (1923ರ 8),ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14), ನಿಯೋಜಿತರ ರಾಜ್ಯ ವಿಮಾ ಅಧಿನಿಯಮ, 1948 (1948ರ 34), ನೌಕರರ ಭವಿಷ್ಯ ನಿಧಿಗಳ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19), ಪ್ರಸೂತಿ ಸೌಕರ್ಯ ಅಧಿನಿಯಮ, 1961 (1961ರ 53), ಉಪದಾನ ಸಂದಾಯ ಅಧಿನಿಯಮ, 1972 (1972ರ 39), ಇವುಗಳ ವ್ಯಾಪ್ತಿಗೆ ಒಳಪಟ್ಟಿರದ ಎಲ್ಲಾ ಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿರುತ್ತಾರೆ. **<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ</u>** ಈ ಮಂಡಳಿಯಿಂದ ಸಂಘಟಿತ ವಲಯಕ್ಕೆ ಬರುವ ಕಾರ್ಮಿಕರುಗಳಿಗೆ ಇರುವ ಮಾನದಂಡಗಳನ್ನು **ಅನುಬಂಧ-5 ರಲ್ಲಿ** ಒದಗಿಸಲಾಗಿದೆ.

ಕಾಇ 678 ಎಲ್ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-01

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 568

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಸಹಾಯಧನ ನೀಡಲು ಈ ಕೆಳಕಂಡ 25 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ:

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ **60** ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ **ರೂ.3,000/-**
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆ ಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ
5. **ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.20,000/- ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ **ರೂ.50,000/-**
9. **ಶಿಶು ಪಾಲನಾ ಸೌಲಭ್ಯ: ಕಟ್ಟಡ ಕಾರ್ಮಿಕರ ಮಕ್ಕಳ ಪಾಲನೆಗಾಗಿ ರಾಜ್ಯದಾದ್ಯಂತ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶು ಪಾಲನಾ ಕೇಂದ್ರಗಳ ಸ್ಥಾಪನೆ.**
10. **ಅಂತ್ಯಕ್ರಿಯೆ ವೆಚ್ಚ : ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.71,000/-**ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

ಕ್ರಸಂ	ತರಗತಿ (ಉತ್ತೀರ್ಣಕ್ಕೆ)	
1	ಕೆಜಿ/ ಪೂರ್ವ ಶಾಲೆ /ನರ್ಸರಿ (ವರ್ಷ 3 ರಿಂದ 5)	5,000
2	1 ರಿಂದ 4ನೇ ತರಗತಿ	5,000
3	5 ರಿಂದ 8ನೇ ತರಗತಿ	8,000
4	9 ಹಾಗೂ 10ನೇ ತರಗತಿ	12,000
	ಪದವಿ ಪೂರ್ವ	
5	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	15,000
6	ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ	20,000
7	ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್	40,000
8	ಡಿ.ಎಡ್	25,000
	ಬಿ.ಎಡ್	35,000

9	ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ)	25,000
10	ಎಲ್‌ಎಲ್‌ಬಿ / ಎಲ್‌ಎಲ್‌ಎಮ್	30,000
11	ಸ್ನಾತಕೋತ್ತರ ಪದವಿ ಸೇರ್ಪಡೆಗೆ	35,000 ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು
ತಾಂತ್ರೀಕ/ ವೈದ್ಯಕೀಯ ಎನ್‌ಇಇಟಿ ಅಥವಾ ಕೆಸಿಇಟಿ		
12	ಬಿಇ / ಬಿ.ಟೆಕ್‌ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್	ಸದರಿ ಕೋರ್ಸ್‌ನ ಗರಿಷ್ಠ 2 ವರ್ಷ ಅವಧಿಗೆ ಒಳಪಟ್ಟು ವಾರ್ಷಿಕ ರೂ.50,000
13	ಎಮ್.ಟೆಕ್/ ಎಮ್ ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್)	ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು ವಾರ್ಷಿಕ ರೂ. 60,000
14	ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್‌ಎಸ್ / ಬಿಡಿಎಸ್ /ಬಿಹೆಚ್‌ಎಮ್‌ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್	ರೂ.60,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು)
	ಎಮ್‌ಡಿ	ರೂ. 75,000 (ಸದರಿ ಕೋರ್ಸ್‌ನ ಗರಿಷ್ಠ ಅವಧಿಗೆ ಒಳಪಟ್ಟು
15	ಪಿಹೆಚ್‌ಡಿ / ಎಮ್. ಫಿಲ್ (ಯಾವುದೇ ವಿಷಯ)	ಪಿಹೆಚ್‌ಡಿಗೆ ಗರಿಷ್ಠ ಮೂರು ವರ್ಷಗಳಿಗೆ ಹಾಗೂ ಎಮ್‌ಫಿಲ್‌ಗೆ 1 ವರ್ಷಕ್ಕೆ ಪ್ರತಿ ವರ್ಷ ರೂ. 25,000 (ಯೂಜಿಸಿಯ ಜೂನಿಯರ್ ರಿರ್ಸಚ್ ಪೆಲೋಶಿಫ್‌ಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಮತ್ತು ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ ಯೂಜಿಸಿ ನಿಯಮಗಳನ್ವಯ ವೇತನ ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ ಅನುದಾನಿತ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಆಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
16	ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು	ಪಾವತಿಸಿದ ಬೋದನಾ ಶುಲ್ಕ

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ.300/-** ರಿಂದ **ರೂ.20,000/-**ವರೆಗೆ

13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ **ರೂ.5,00,000/-,** ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/- ಮತ್ತು** ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ರ್ತಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.60,000/-**

16. **ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಮತ್ತು ಅವರ ಮಕ್ಕಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ತಗಲುವ ವೆಚ್ಚವನ್ನು ಮಂಡಳಿ ವತಿಯಿಂದ ಭರಿಸಲಾಗುವುದು.**

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ನೋಂದಾಯಿತ ಫಲಾನುಭವಿಗಳಿಗೆ **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ವಿತರಣೆ**

19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.

20. ಇಮ್ಯೆನಿಟಿ ಬೂಸ್ಟರ್‌ಕಿಟ್ ವಿತರಣೆ
21. ಪ್ರಿವೆಂಟಿವ್ ಹೆಲ್ತ್‌ಕೇರ್ ಯೋಜನೆ
22. ಮೋಬೈಲ್ ಮೆಡಿಕಲ್‌ಕೇರ್ ಯೂನಿಟ್
23. ಪೈಲಟ್ ಟ್ರೈನಿಂಗ್: ಫಲಾನುಭವಿಯ ಆಯ್ಕೆಯಾದ ಮಕ್ಕಳಿಗೆ
24. ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಸೌಲಭ್ಯ
25. ನ್ಯೂಟ್ರೀಶನ್‌ಕಿಟ್ಸ್:

ಅನುಬಂಧ-02

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 568

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿ ಗುರುತಿನ ಚೀಟಿ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ

SL.no	District	Total numbers
1	BAGALKOT	110813
2	BANGALORE RURAL	17379
3	BANGALORE URBAN	306889
4	BELGAUM	166316
5	BELLARY	81689
6	BIDAR	187950
7	BIJAPUR	96543
8	CHAMARAJA NAGAR	43622
9	CHIKBALLAPUR	38769
10	CHIKMAGALUR	80894
11	CHITRADURGA	98880
12	DAKSHINA KANNADA	68069
13	DAVANAGERE	113448
14	DHARWAD	118837
15	GADAG	72724
16	GULBARGA	259796
17	HASSAN	66722
18	HAVERI	196288
19	KODAGU	6143
20	KOLAR	79434
21	KOPPAL	156987
22	MANDYA	26910
23	MYSORE	106640
24	RAICHUR	56716
25	RAMANAGARAM	40067
26	SHIMOGA	91424
27	TUMKUR	81223
28	UDUPI	51355
29	UTTARA KANNADA	114693
30	Yadgiri	106641
	TOTAL	**30,43,861**

ಅನುಬಂಧ-3

ವಿಧಾನ ಸಭೆಯ ಸದಸ್ಯರಾದ ಶ್ರೀ ಉಮಾನಾಥ .ಎ. (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ

ಪ್ರಶ್ನೆ ಸಂಖ್ಯೆ: 568

ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿದ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ

ಕ್ರ.ಸಂ	ಜಿಲ್ಲೆಗಳು	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ (ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ	ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ	ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ಕಾರ್ಮಿಕರು ದಿನಾಂಕ:06-12-22)ವರೆಗೆ
1	ಬಾಗಲಕೋಟೆ	19015	11415	223258
2	ಬಳ್ಳಾರಿ	25273	18617	385747
3	ಬೆಂಗಳೂರು	302810	33201	465295
4	ಬೆಳಗಾವಿ	46747	15276	654655
5	ಬೀದರ್	25332	4271	261694
6	ಚಾಮರಾಜನಗರ	9743	4378	184020
7	ಚಿಕ್ಕಬಳ್ಳಾಪುರ	15610	3864	187447
8	ಚಿಕ್ಕಮಗಳೂರು	10711	4116	151301
9	ಚಿತ್ರದುರ್ಗ	13457	8048	234601
10	ದಕ್ಷಿಣಕನ್ನಡ	50475	9421	218619
11	ದಾವಣಗೆರೆ	20553	12819	241343
12	ಧಾರವಾಡ	14199	6737	249692
13	ಗದಗ	13822	5303	151455
14	ಗುಲ್ಬರ್ಗಾ	27470	4912	355555
15	ಹಾಸನ	34001	5590	231480
16	ಹಾವೇರಿ	10681	6255	291954
17	ಕೋಲಾರ	28757	2153	206474
18	ಕೊಪ್ಪಳ	8488	6282	179740
19	ಮಂಡ್ಯ	27992	6542	252830
20	ಮೈಸೂರು	39460	11803	359780
21	ರಾಮನಗರ	15903	3104	138971
22	ರಾಯಚೂರು	15343	8691	205521
23	ಶಿವಮೊಗ್ಗ	22213	8248	269240
24	ತುಮಕೂರು	27383	13639	325506
25	ಉಡುಪಿ	22323	5596	181968
26	ಉತ್ತರಕನ್ನಡ	15714	40396	236583
27	ಕೊಡಗು	7326	3729	45972
28	ವಿಜಯಪುರ	34008	4465	203527
29	ಯಾದಗಿರಿ	7291	3281	139516
30	ವಿಜಯನಗರ	-	-	21475
	ಒಟ್ಟು	**912100**		
	ಸರ್ಕಾರದ ವಾಹನಗಳನ್ನು ಹೊರತು ಪಡಿಸಿ	**-71539**		
	ಒಟ್ಟು	**8,40,561**	**272152**	**7255219**

ಅನುಬಂಧ-04

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 568

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವಿಧ ಸೌಲಭ್ಯಗಳನ್ನು ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:

ನಿಯಮ 39: ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಣಿಯಾಗಿ ಕನಿಷ್ಠ 3 ವರ್ಷ ಸದಸ್ಯತ್ವವನ್ನು ಪೂರ್ಣಗೊಳಿಸಿದ ನಂತರ 60 ವರ್ಷ ವಯಸ್ಸಾಗಿರಬೇಕು.
- ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಈ ಸೌಲಭ್ಯ ಪಡೆಯುತ್ತಿರಬಾರದು.
- ಜೀವಿತ ಪ್ರಮಾಣ ಪತ್ರ ಸಲ್ಲಿಸುವುದು.
- ಫಲಾನುಭವಿಯ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 40: ದುರ್ಬಲತೆ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಶಾಶ್ವತ ದುರ್ಬಲತೆಯಾಗಿರುವುದಕ್ಕೆ ಕಟ್ಟಡ ಕಾರ್ಮಿಕನ ಭಾವಚಿತ್ರ (ಫೋಟೋ).
- ದುರ್ಬಲತೆ ಗುರುತಿನ ಚೀಟಿ ಪಡೆದ ನಂತರ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
- ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಪಘಾತ ಉಂಟಾಗಿ ಅದರಿಂದ ದುರ್ಬಲತೆಯಾಗಿರಬೇಕು.
- ಫಲಾನುಭವಿಗೆ ದುರ್ಬಲತೆಯಾಗಿರುವುದಕ್ಕೆ ಹಿರಿಯ ನಾಗರಿಕರ ಹಾಗೂ ಅಂಗವಿಕಲ ಸಬಲೀಕರಣ ಇಲಾಖೆ ಇವರಿಂದ ಪಡೆದ ಅಂಗವಿಕಲ ಗುರುತಿನಚೀಟಿಯ ಪ್ರತಿಯನ್ನು ಲಗತ್ತಿಸಬೇಕು.
- ಫಲಾನುಭವಿಯ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 39(ಎ): ಕುಟುಂಬ ಪಿಂಚಣಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–12(ಎ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಅರ್ಜಿದಾರರ ಕೋರಿಕೆ ಪತ್ರ.
- ಮೃತ ಪಿಂಚಣಿದಾರರ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
- ನಾಮನಿರ್ದೇಶಿತರು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಪಿಂಚಣಿದಾರರು ಮಂಡಳಿಯಿಂದ ಪಿಂಚಣಿ ಪಡೆಯುತ್ತಿರುವ ಅವಧಿಯಲ್ಲಿ ಮರಣ ಹೊಂದಿದರೆ ಮಾತ್ರ ಕುಟುಂಬ ಪಿಂಚಣಿ ಪಡೆಯಲು ಅವಕಾಶವಿರುತ್ತದೆ.
- ನಾಮ ನಿರ್ದೇಶಿತರ ಆಧಾರ್‌ಕಾರ್ಡ್/ರೇಷನ್‌ಕಾರ್ಡ್ ಸಲ್ಲಿಸುವುದು.

ನಿಯಮ 41: ಶ್ರಮ ಸಾಮರ್ಥ್ಯಟೂಲ್‌ಕಿಟ್ ವಿತ್‌ಟ್ರೈನಿಂಗ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ–15ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯ ಸದಸ್ಯತ್ವ ಅವಧಿಯಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.
- ಫಲಾನುಭವಿಯುತರಬೇತಿ ಪಡೆಯಲು 55 ವರ್ಷ ವಯಸ್ಸಿನ ಒಳಗಿರಬೇಕು

ನಿಯಮ 42: ಮನೆ ಖರೀದಿ ಅಥವಾ ನಿರ್ಮಾಣಕ್ಕಾಗಿ (ಕಾರ್ಮಿಕ ಗೃಹ ಭಾಗ್ಯ) ನೀಡುವ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ–16 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವಗುರುತಿನಚೀಟಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.
- ಅರ್ಜಿ ಸಲ್ಲಿಸುವ ಫಲಾನುಭವಿಗೆ ಕನಿಷ್ಠ 45 ವರ್ಷ ವಯಸ್ಸಾಗಿರಬೇಕು
- ಸರ್ಕಾರದಿಂದ ಯಾವುದಾದರೂ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಸಾಲ ಮಂಜೂರಾಗಿರಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 43: ಹೆರಿಗೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-17ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯು ತನ್ನ ಮೊದಲ 2 ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ. (ಕೇವಲ ಎರಡುಜೀವಂತ ಮಕ್ಕಳಿದ್ದಾರೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.)
- ಇದು ಎರಡನೇ ಹೆರಿಗೆ ಎಂದು ಅಫಿಡೆವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ನೊಂದಣಾಧಿಕಾರಿಗಳಿಂದ ಪಡೆದಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 43-ಎ: ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕಾಂಶಗಳನ್ನು ಮಹಿಳಾ ಫಲಾನುಭವಿಯು ಮೊದಲ ಎರಡು ಮಕ್ಕಳಿಗಾಗಿ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್. (ತಾಯಿ ಮಗು ಸಹಾಯ ಹಸ್ತ)

- ನಮೂನೆ-17-ಎ ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ನೋಂದಾಯಿತ ಮಹಿಳಾ ಫಲಾನುಭವಿಯು ತನ್ನ ಮೊದಲ ಎರಡು ಹೆರಿಗೆಗಳಿಗೆ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾಳೆ.
- ಎರಡನೇ ಹೆರಿಗೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಫಿಡೆವಿಟ್ ಸಲ್ಲಿಸಬೇಕು.
- ಜನನ ಮತ್ತು ಮರಣ ಪ್ರಮಾಣ ಅಧಿಕಾರಿಗಳಿಂದ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.
- ಹೆರಿಗೆಯಾದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 44:ಅಂತ್ಯಕ್ರಿಯೆ ಸಂಸ್ಕಾರ ಮತ್ತು ಅನುಗ್ರಹರಾಶಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-18ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಮೃತ ಫಲಾನುಭವಿಯ ಮೂಲ / ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
- ಮೃತ ಫಲಾನುಭವಿಯ ವಯಸ್ಸು 60 ವರ್ಷ ಮೀರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
- ಅರ್ಜಿದಾರನನ್ನು ಮೃತ ಫಲಾನುಭವಿಯ ನಾಮನಿರ್ದೇಶಿತನಾಗಿ ನೋಂದಾಯಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಬೇಕು.
- ಫಲಾನುಭವಿಯು ಮೃತನಾದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 45: ಶೈಕ್ಷಣಿಕ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-19 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ
- ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾಭವಿಯ ಮಗ / ಮಗಳು ಉತ್ತೀರ್ಣ ಆಗಿರುವ ಕುರಿತು ಅಂಕಪಟ್ಟಿ ಹಾಗೂ ವ್ಯಾಸಂಗ ಮಾಡುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ವ್ಯಾಸಂಗ ಮೂಲ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಫಲಾನುಭವಿಯ ಪ್ರಸ್ತುತ ಅರ್ಜಿಯು ಈ ಹಿಂದೆ ಶೈಕ್ಷಣಿಕ ಸಹಾಯಧನ ಪಡೆದ ಇಬ್ಬರು ಮಕ್ಕಳಿಗೆ ಅನ್ವಯಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಶೈಕಣಿಕ ಸಹಾಯಧನ ಅರ್ಜಿಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾದ ದಿನದಿಂದ 6 ತಿಂಗಳ ಒಳಗೆ ಸಲ್ಲಿಸಬೇಕು.

ನಿಯಮ 46: ಒಳರೋಗಿ ವೈದ್ಯಕೀಯ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-20 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.

- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಫಲಾನುಭವಿಯು ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಹಾಗೂ ಬಿಡುಗಡೆಯಾದ ದಿನಾಂಕ ವಿವರಗಳನ್ನು ನಮೂದಿಸಬೇಕು.
- ಫಲಾನುಭವಿಯು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ (ಶೆಡ್ಯೂಲ್ 1ಗೆ ಸೇರಿದ) ಖಾಸಗಿ ಆಸ್ಪತ್ರೆಗಳಲ್ಲಿ ಕನಿಷ್ಠ ಎರಡು ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಗೆದಾಖಲಾದ ದಿನಾಂಕದಿಂದ 6 ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕು

ನಿಯಮ 47: ಅಪಘಾತ ಮರಣ, ಶಾಶ್ವತ ಸಂಪೂರ್ಣ / ಭಾಗಶಃ ದುರ್ಬಲತೆ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್.

- ನಮೂನೆ-21ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ.
- ಮಂಡಳಿಯಿಂದ ನೀಡಿರುವ ಮೂಲ ಗುರುತಿನಚೀಟಿ / ಸ್ಮಾರ್ಟ್‌ಕಾರ್ಡ್ ಸಲ್ಲಿಸುವುದು.
- ಫಲಾನುಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ.
- ಫಲಾನುಭವಿ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ದೃಢೀಕೃತ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಅಪಘಾತದ ಸ್ವರೂಪವನ್ನು ನಮೂದಿಸಬೇಕು.
- ದುರ್ಬಲತೆ ಪ್ರಕರಣವಿದ್ದಲ್ಲಿ, ಅಪಘಾತದ ಪರಿಣಾಮವಾಗಿರುವ ಶಾಶ್ವತ-ಸಂಪೂರ್ಣ (ಪ್ರತಿ ಶತಃ 100ರಷ್ಟು) ಅಥವಾ ಶಾಶ್ವತ-ಭಾಗಶಃ (ಪ್ರತಿ ಶತಃ 100ಕ್ಕಿಂತ ಕಡಿಮೆ) ದುರ್ಬಲತೆಯಾದ ಬಗ್ಗೆ ಹಾಗೂ ದುರ್ಬಲತೆಯ ಶೇಕಡವಾರು ಪ್ರಮಾಣ ನಮೂದಿಸಬೇಕು.
- ಫಲಾನುಭವಿಗೆ ದುರ್ಬಲತೆಯಾದ ನಂತರ ತಪಾಸಣೆ ಮಾಡಿದ ಸರ್ಕಾರಿ / ಸರ್ಕಾರದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ ವೈದ್ಯರಿಂದ ಶೇಕಡವಾರು ದುರ್ಬಲತೆ ಖಚಿತ ಪಡಿಸಿರುವ ವೈಧ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸುವುದು.
- ನಮೂನೆ 21ಎ ನಲ್ಲಿ ನಿಯೋಜಕರಿಂದ ಪಡೆದ ವರದಿಯನ್ನು ಸಲ್ಲಿಸಬೇಕು.
- ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ನಿಯಮ 48: ಪ್ರಮುಖ ವೈದ್ಯಕೀಯ ವೆಚ್ಚ (ಕಾರ್ಮಿಕ ಚಿಕಿತ್ಸಾ ವೆಚ್ಚ) ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-22 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ನಮೂನೆ-22 (ಎ) ರಲ್ಲಿ ಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸುವುದು
- ಮಂಡಳಿಯಿಂದ ನೀಡಿರುವ ಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು

- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆ/ಆರ್.ಎಸ್.ಬಿ.ವೈ. ಯೋಜನೆಯಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ 6 ತಿಂಗಳೊಳಗಾಗಿ ಅರ್ಜಿ ಸಲ್ಲಿಸಬೇಕು
- ಚಿಕಿತ್ಸೆ ಪಡೆದ ಮೂಲ ವೈದ್ಯಕೀಯ ದಾಖಲೆಗಳನ್ನು ಮತ್ತು ಬಿಲ್ಲುಗಳನ್ನು ಸಲ್ಲಿಸುವುದು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49: ಮದುವೆ ಸಹಾಯಧನ (ಗೃಹಲಕ್ಷ್ಮೀ ಬಾಂಡ್) ಸೌಲಭ್ಯಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ನೋಂದಣಿಯಾಗಿಒಂದು ವರ್ಷ ಪೂರ್ಯೆಯಿಸಿದ ನಂತರ ಫಲಾನುಭವಿ/ಮಕ್ಕಳಿಗೆ ಮದುವೆಯಾಗಿರಬೇಕು
- ಮದುವೆಯಾದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು
- ಫಲಾನುಭವಿಯು ಹೊಂದಿರುವ ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ ಸಲ್ಲಿಸುವುದು

ನಿಯಮ 49(ಇ): ಬಿ.ಎಂ.ಟಿ.ಸಿ. ಬಸ್ ಪಾಸ್ ಸೌಲಭ್ಯ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ಚೆಕ್ ಲಿಸ್ಟ್:

- ನಮೂನೆ-23 (ಬಿ) ರಲ್ಲಿ ಪೂರ್ಣವಾದ ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ
- ಮಂಡಳಿಯಿಂದ ನೀಡಿರುವ ಗುರುತಿನ ಚೀಟಿ/ಸ್ಮಾರ್ಟ್‌ಕಾರ್ಡ್ ಪ್ರತಿ ಸಲ್ಲಿಸುವುದು
- ಫಲಾಭವಿಯು ವಂತಿಕೆ ಹಣ ಪೂರ್ಣವಾಗಿ ಪಾವತಿಸಿರುವ ಬಗ್ಗೆ ನೋಂದಣಿ ಅಧಿಕಾರಿಗಳಿಂದ ದೃಢೀಕರಣ ಪತ್ರ
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಯಂ ವಿಳಾಸ ಹೊಂದಿರುವ ಫಲಾನುಭವಿಯಾಗಿರಬೇಕು
- ಆಧಾರ್‌ಕಾರ್ಡ್ ಮತ್ತು ಪಡಿತರಚೀಟಿ ಪ್ರತಿ ಸಲ್ಲಿಸುವುದು.
- ಬಿಎಂಟಿಸಿ ಸಂಸ್ಥೆ ನೀಡುವ ಬಸ್ ಪಾಸ್‌ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.

ಅನುಬಂಧ–5

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 568

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು

ಕಾರ್ಮಿಕ ಕಲ್ಯಾಣ ಯೋಜನೆಗಳ ವಿವರ

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಾದ ಕಾರ್ಖಾನೆಗಳು/ಸಂಸ್ಥೆಗಳು/ಪ್ಲಾಂಟೇಶನ್/ಸಾರಿಗೆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ.

ಸೂಚನೆ :

1. ಯೋಜನೆಯ ಸೌಲಭ್ಯ ಪಡೆಯಲು ಪ್ರತಿ ವರ್ಷ ಜನವರಿ 15 ರೊಳಗೆ ಕಾರ್ಮಿಕರು, ಮಾಲೀಕರು ರೂ. 20 : 40 ಅನುಪಾತದಲ್ಲಿ ಒಬ್ಬ ಕಾರ್ಮಿಕನಿಗೆ ಒಟ್ಟು ರೂ. 60/- ಗಳಂತೆ ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸತಕ್ಕದ್ದು.
2. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಪಡೆಯಲು ವಿದ್ಯಾರ್ಥಿಗಳು, ಶೈಕ್ಷಣಿಕ ಸಂಸ್ಥೆಗಳು, ಕಾರ್ಖಾನೆಗಳು/ಸಂಸ್ಥೆಗಳು klwb.karnataka.gov.in ಇಲ್ಲಿ ನೊಂದಾಯಿಸಿ ಅನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ವಂತಿಕೆ ಪಾವತಿ ಮಾಡುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳು klwb.karnataka.gov.in ಇಲ್ಲಿ ತಮ್ಮ ಸಂಸ್ಥೆಗಳನ್ನು ನೊಂದಾಯಿಸಿ ವಂತಿಕೆ ಪಾವತಿ ಮಾಡಬೇಕಾಗಿರುತ್ತದೆ.

ಈ ಕೆಳಗಿನ ಯೋಜನೆಗೆ ಮಾಸಿಕ ವೇತನ ರೂ. 35,000/- ಗಿಂತ ಮೀರಿರಬಾರದು.

1. **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ:** ಪ್ರೌಢಶಾಲೆ, (8 ರಿಂದ 10ನೇ ತರಗತಿವರೆಗೆ) ರೂ.6,000/ ಪಿಯುಸಿ/ಡಿಪ್ಲೊಮಾ/ಐಟಿಐ/ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.8,000/- ಪದವಿ ಶಿಕ್ಷಣಕ್ಕಾಗಿ ರೂ.10,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.12,000/- ಇಂಜಿನೀಯರಿಂಗ್/ವೈದ್ಯಕೀಯ ಶಿಕ್ಷಣಕ್ಕಾಗಿ ರೂ.20,000/-ಗಳ ಪ್ರೋತ್ಸಾಹ ಧನ ನೀಡಲಾಗುವುದು. **(ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50 ಹಾಗೂ ಪ.ಜಾ / ಪ. ಪಂಗಡದ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು)**

ಈ ಕೆಳಗಿನ ಯೋಜನೆಗಳಿಗೆ ಮಾಸಿಕ ಸಂಬಳದ ಮಿತಿಯಿರುವುದಿಲ್ಲ. ವಯೋಮಿತಿ 18- 60 ವರ್ಷ

2. **ಕಾರ್ಮಿಕರಿಗೆ ವೈದ್ಯಕೀಯ ನೆರವು :** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್, ಆಂಜಿಯೋಪ್ಲಾಸ್ಟಿ, ಕಣ್ಣು, ಅರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ,

ಮೆದುಳಿನ ರಕ್ತಸ್ರಾವ ಚಿಕಿತ್ಸೆಗೆ ಕನಿಷ್ಠ **ರೂ. 1,000/-**ದಿಂದ ಗರಿಷ್ಠ **ರೂ.25,000/-**ವರೆಗೆ ಮತ್ತು ಆರೋಗ್ಯ ತಪಾಸಣೆಗೆ **ರೂ. 500/-ರಿಂದ ರೂ, 1000/-**ವರೆಗೆ ಧನ ಸಹಾಯ ನೀಡಲಾಗುವುದು.

3. **ಕಾರ್ಮಿಕರಿಗೆ ಅಪಘಾತ ಧನ ಸಹಾಯ** : ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಅಪಘಾತವಾದಲ್ಲಿ ಕನಿಷ್ಠ **ರೂ. 1,000/-** ಗರಿಷ್ಠ **ರೂ. 10,000/-** ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

4. **ಹೆರಿಗೆ ಭತ್ಯೆ ಸೌಲಭ್ಯ** : ಮಹಿಳಾ ಕಾರ್ಮಿಕರಿಗೆ ಮೊದಲ 2 ಮಕ್ಕಳಿಗೆ ಮಾತ್ರ ಹೆರಿಗೆ ಭತ್ಯೆ ಸೌಲಭ್ಯವನ್ನು ತಲಾ **ರೂ. 10,000/-** ಧನ ಸಹಾಯ ನೀಡಲಾಗುವುದು. ಮಗು ಜನಿಸಿದ 6 ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.

5. **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ:** ಈ ಯೋಜನೆಯ ಸೌಲಭ್ಯ ಪಡೆಯಲು ಮೃತರ ಕುಟುಂಬದ ಅವಲಂಬಿತರು ಕಾರ್ಮಿಕ ಮೃತಪಟ್ಟ 6 ತಿಂಗಳೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, **ರೂ. 10,000/-** ಧನ ಸಹಾಯ ನೀಡಲಾಗುವುದು.

6. **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ಹಮ್ಮಿಕೊಳ್ಳುವ ವಾರ್ಷಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ **ರೂ. 1,00,000/-** ಧನ ಸಹಾಯ ನೀಡಲಾಗುವುದು.

7. **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** : ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಂಡಲ್ಲಿ **ರೂ. 1,00,000/-** ಧನ ಸಹಾಯ ನೀಡಲಾಗುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	569
ಸದಸ್ಯರ ಹೆಸರು	:	ಶ್ರೀ ಉಮಾನಾಥ .ಎ ಕೋಟ್ಯಾನ್
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೂಡಬಿದರೆ/ಮೂಲ್ಕಿ ಕ್ಷೇತ್ರದಲ್ಲಿರುವ ಪೆರ್ಮುದೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಕೊರಗ ಸಮಾಜ ಭವನ ನಿರ್ಮಾಣ ಕಾರ್ಯ ಮುಗಿದು ದೀರ್ಘಕಾಲವಾಗಿದ್ದರೂ ಸಮಾಜಸ್ಥರಿಗೆ ಇದುವರೆವಿಗೂ ಹಸ್ತಾಂತರ ಮಾಡಿಲ್ಲದಿರುವುದಕ್ಕೆ ಕಾರಣಗಳೇನು;</td><td>ಮಂಗಳೂರು ತಾಲ್ಲೂಕಿನ ಪೆರ್ಮುದೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುತ್ತೆತ್ತೂರು ಗ್ರಾಮದ ಸರ್ವೆ ನಂ.62/5 ರಲ್ಲಿ 6.90 ಎಕರೆ ಜಮೀನಿನಲ್ಲಿ 6.00 ಎಕರೆ ಜಮೀನನ್ನು ಕೊರಗ ಜನಾಂಗದವರಿಗೆ ಕೃಷಿ ಉದ್ದೇಶಕ್ಕೆ ಜಮೀನನ್ನು ಹಂಚಲು ಊರ್ಜಿತವಿಟ್ಟು ಉಳಿಕೆ 0.90 ಎಕರೆ ಜಮೀನಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರು ರೂ.300.00 ಲಕ್ಷ ಅನುದಾನದಲ್ಲಿ ಆದಿವಾಸಿ ಸಮುದಾಯ ಭವನ ನಿರ್ಮಾಣ ಮಾಡಿ, ಸಹಾಯಕ ನಿರ್ದೇಶಕರು (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ, ಮಂಗಳೂರು ಇವರಿಗೆ ಅಕ್ಟೋಬರ್-2022 ರಲ್ಲಿ ಹಸ್ತಾಂತರ ಮಾಡಿರುತ್ತಾರೆ.</td></tr>
<tr><td>ಆ)</td><td>ಪರಿಶಿಷ್ಟ ಪಂಗಡಗಳ ಕೊರಗ ಸಮಾಜಸ್ಥರು ಹೆಚ್ಚಿನ ಸಂಖ್ಯೆಯಲ್ಲಿರುವ ಸ್ಥಳದಲ್ಲಿ ವ್ಯವಸ್ಥಿತ ಸಮಾಜ ಭವನ ನಿರ್ಮಾಣ ಸೌಲಭ್ಯವನ್ನು ಸಮಾಜಸ್ಥರು ಪಡೆದುಕೊಳ್ಳಬೇಕಾಗಿರುವುದರಿಂದ ಹಸ್ತಾಂತರ ಪ್ರಕ್ರಿಯೆಗೆ ಇರುವ ಅಡೆತಡೆಗಳನ್ನು ಸರಿಪಡಿಸಿ ಸಂಬಂಧಪಟ್ಟವರಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಗ್ರಾಮಾಂತರ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡ ಸಮುದಾಯ ಭವನಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಕಇ 338 ಪಕವಿ 2018, ದಿನಾಂಕ:25.03.2019 ರಂತೆ ಈ ಕೆಳಗಿನ ಸಮಿತಿಯ ಮೂಲಕ ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ.
<table>
<tr><td>1</td><td>ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ)</td><td>ಅಧ್ಯಕ್ಷರು</td></tr>
<tr><td>2</td><td>ಸಹಾಯಕ ಅಭಿಯಂತರರು ಪಿಡಬ್ಲ್ಯೂಡಿ</td><td>ಸದಸ್ಯರು</td></tr>
<tr><td>3</td><td>ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ</td><td>ಸದಸ್ಯರು</td></tr>
<tr><td>4</td><td>ಕಾರ್ಯದರ್ಶಿ, ಗ್ರಾಮ ಪಂಚಾಯತ್</td><td>ಸದಸ್ಯರು</td></tr>
<tr><td>5</td><td>ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ</td><td>ಸದಸ್ಯರು</td></tr>
<tr><td>6</td><td>ತಹಶೀಲ್ದಾರ್‌ರವರಿಂದ ನಾಮ ನಿರ್ದೇಶಿತ 3 ವ್ಯಕ್ತಿಗಳು</td><td>ಸದಸ್ಯರು</td></tr>
</table>
ಅದರಂತೆ, ದಿನಾಂಕ:16.11.2022 ರಂದು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಗಳೂರು ಇವರು ತಹಶೀಲ್ದಾರ್, ಮಂಗಳೂರು ಇವರಿಗೆ ಪತ್ರ ಬರೆದು ನಾಮನಿರ್ದೇಶಿತ 3 ವ್ಯಕ್ತಿಗಳನ್ನು ಆಯ್ಕೆಗೊಳಿಸಿ ನೀಡುವಂತೆ ಕೋರಿರುತ್ತಾರೆ. ಮೇಲ್ವಿಚಾರಣೆ ಸಮಿತಿ ರಚನೆಯಾದ ನಂತರ ಸಮುದಾಯದವರ ಉಪಯೋಗಕ್ಕೆ ಅನುವು ಮಾಡಿಕೊಡಲಾಗುವುದು.</td></tr>
<tr><td>ಇ)</td><td>ಕೊರಗ ಸಮಾಜ ಭವನ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿದ ಅನುದಾನವೆಷ್ಟು; ಸಮಾಜಸ್ಥರಿಗೆ ಯಾವುದೇ ವಿಳಂಬವಿಲ್ಲದೆ ಹಸ್ತಾಂತರ ಪ್ರಕ್ರಿಯೆ ನಿಗದಿತ ಸಮಯದಲ್ಲಿ ಜರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?</td><td>ಸದರಿ ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.300.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. ವಿಳಂಬವಿಲ್ಲದೆ ಹಸ್ತಾಂತರ ಪ್ರಕ್ರಿಯೆ ನಿಗದಿತ ಸಮಯದಲ್ಲಿ ಜರುಗಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
</table>

ಸಕಇ 499 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 570

ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)

ಉತ್ತರಿಸುವ ದಿನಾಂಕ : 21-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆಯು ಅತಿ ಹಿಂದುಳಿದ ಜಿಲ್ಲೆಯಾಗಿರುವುದರಿಂದ, ಇಂತಹ ಜಿಲ್ಲೆಗೆ ರೈತರ ಹಿತದೃಷ್ಟಿಯಿಂದ ಅಭಿವೃದ್ಧಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ? ವಿವರ ನೀಡುವುದು;	ಯಾದಗಿರಿ ಜಿಲ್ಲೆಯನ್ನು ಮಹತ್ವಾಕಾಂಕ್ಷಿ ಜಿಲ್ಲೆಗಳಲ್ಲಿ ಪರಿಗಣಿಸಲಾಗಿದ್ದು, ರೈತರ ಹಿತದೃಷ್ಟಿಯಿಂದ ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದಲ್ಲಿ ಈ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಒದಗಿಸಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಜಲಾನಯನ ಅಭಿವೃದ್ಧಿ ಇಲಾಖಾ ವತಿಯಿಂದ ಪ್ರಸ್ತುತ ವರ್ಷ ಯಾದಗಿರಿ ಜಿಲ್ಲೆಯಲ್ಲಿ ರೈತರ ಹಿತದೃಷ್ಟಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು ಹಾಗೂ ಸದರಿ ಯೋಜನೆಗಳಡಿಯಲ್ಲಿನ ಭೌತಿಕ ಮತ್ತು ಆರ್ಥಿಕ ಗುರಿ ಮತ್ತು ಸಾಧನೆಯ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: AGRI-AML/266/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

2022-23ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು

ರಾಜ್ಯ ವಲಯ ಯೋಜನೆಗಳು:

1.ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ (2202-80-107-0-06): ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೊಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ / ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ರೈತ ಕುಟುಂಬದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದು.

2. ಅನುಸೂಚಿತ ಜಾತಿಗಳ ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75): ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾದ ಅನುದಾನವನ್ನು 2022-23ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕಾಗಿ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ಹಾಗೂ ರಾಜ್ಯದ ನೀತಿಯನ್ವಯ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ರಾಜ್ಯದ ಪಾಲಿನ ಹೆಚ್ಚುವರಿ ಅನುದಾನವನ್ನು ಭರಿಸಲು ವಿನಿಯೋಗಿಸಲಾಗುವುದು.

3. ರೈತರ ಪ್ರೋತ್ಸಾಹ ಮತ್ತು ಬೆಂಬಲ ಯೋಜನೆಗಳು(2401-00-102-0-28)

ಅ) ಬೆಳೆ ಸಾಲಕ್ಕೆ ಸಹಾಯಧನ: ರಾಜ್ಯದ ರೈತರು ಬೆಳೆ ಸಾಲ/ ಅಲ್ಪಾವಧಿ ಸಾಲ ಪಡೆದು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದಲ್ಲಿ ಅಂತಹ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿಯನ್ನು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಠ 1.00 ಲಕ್ಷ ಮಿತಿಯೊಳಗೆ ನೀಡಲಾಗುವುದು.

4. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15):

ಅ) ಬೀಜಗಳ ಪೂರೈಕೆ: ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುವುದು.

ಆ) ಸಸ್ಯ ಸಂರಕ್ಷಣೆ: ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ, ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಗುಣ ನಿಯಂತ್ರಣ, ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು.

ಇ) ಮಣ್ಣಿನ ಸತ್ವ ಹೆಚ್ಚಿಸುವಿಕೆ: ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ರಿಯಾಯಿತಿ ದರದಲ್ಲಿ ಸಾವಯವ ಗೊಬ್ಬರಗಳು ಇತ್ಯಾದಿಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುವುದು.

ಈ) ಸಾವಯವ ಇಂಗಾಲ ಅಭಿಯಾನ : ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು ಹಾಗೂ ಹಸಿರೆಲೆ ಗೊಬ್ಬರ ಬೀಜ ಮತ್ತು ಸಾವಯವ ಗೊಬ್ಬರಗಳ ಬಳಕೆಯಿಂದ ಸಾವಯವ ಇಂಗಾಲ ಹೆಚ್ಚಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುವುದು.

ಉ) ಕೃಷಿ ಯಾಂತ್ರೀಕರಣ: ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆಯಿಂದ ಕೊಯ್ಲಿನವರೆಗೆ ಅವಶ್ಯವಿರುವ ವಿವಿಧ ಕೃಷಿ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ಒಂದು ಲಕ್ಷ ರೂ.ವರೆಗೆ ನೀಡಲಾಗುತ್ತದೆ. ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ.

ಊ) ಕೃಷಿ ಯಂತ್ರಧಾರೆ: ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

ಋ) ಕೃಷಿ ಸಂಸ್ಕರಣೆ: ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣಗಳು ಮತ್ತು ಟಾರ್ಪಾಲಿನ್ ಗಳನ್ನು ಖರೀದಿಸಲು ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುವುದು.

ಎ) ರೈತ ಶಕ್ತಿ: 2022-23 ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250/- ರಂತೆ ಗರಿಷ್ಠ 5 ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲಾಗುವುದು.

5. ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮ (2401-00-104-0-12):

ಅ) ರೈತ ಸಿರಿ: ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಟೆಫ್, ಚಿಯಾ, ಕ್ವಿನೋವಾ ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ರಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹ ಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು ಹಾಗೂ ಸಾವಯವ ಮತ್ತು ಸಿರಿಧಾನ್ಯಗಳ ಉತ್ತೇಜನ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

ಆ) ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ: 2022-23ರ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಘೋಷಣೆಯಂತೆ ನೈಸರ್ಗಿಕ ಕೃಷಿ ಕೈಗೊಳ್ಳಲು ರೈತರನ್ನು ಪ್ರೇರೆಪಿಸುವ ಉದ್ದೇಶದಿಂದ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮೂಲಕ ತಲಾ 1000 ಎಕರೆ ಪ್ರದೇಶದಲ್ಲಿ ಅಧ್ಯಯನಗಳನ್ನು ಕೈಗೊಳ್ಳಲು ಅನುದಾನವನ್ನು ಕಲ್ಪಿಸಲಾಗಿದೆ.

6. ಹೊಸ ಬೆಳೆ ವಿಮಾ ಯೋಜನೆ(2401-00-110-0-07): ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು ಹಾಗೂ ಬೆಳೆ ಸಮೀಕ್ಷೆ ಕಾರ್ಯಕ್ಕೆ ಮತ್ತು ಬೆಳೆ ವಿಮೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯ ವೆಚ್ಚ ಭರಿಸಲಾಗುವುದು.

7. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (2401-00-800-1-05): ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನು ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆಯಡಿ ನೀಡಲಾಗುತ್ತದೆ.

ಕೇಂದ್ರ ಪುರಸ್ಕೃತ ಯೋಜನೆಗಳು

8. ಆಹಾರ ಮತ್ತು ಪೌಷ್ಟಿಕ ಭದ್ರತೆ (2401-00-102-0-08): ಈ ಯೋಜನೆಯಡಿ ಭತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಭತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳಿಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಲ್ಲಿ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ನ್ಯೂಟ್ರಿ ಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತದೆ.

6185	UW92838	ಸಾಕಮ್ಮ	Domestic Workers/ಗೃಹಕಾರ್ಮಿಕರು
6186	UW9287	RATHNAMMA	Domestic Workers/ಗೃಹಕಾರ್ಮಿಕರು
6187	UW92887	B N Roopa	Tailors/ಟೈಲರ್‌ಗಳು
6188	UW92909	ಕೋಮಲ	Tailors/ಟೈಲರ್‌ಗಳು
6189	UW93026	ಚಂದ್ರಕಲ	Tailors/ಟೈಲರ್‌ಗಳು
6190	UW93060	ಯಲ್ಲಮ್ಮ	Rag Pickers/ಚಿಂದಿ ಆಯುವವರು
6191	UW93077	MAHANTHAMMA	Tailors/ಟೈಲರ್‌ಗಳು
6192	UW93759	ಗೀತ	Tailors/ಟೈಲರ್‌ಗಳು
6193	UW94215	ಸುಧಾ	Tailors/ಟೈಲರ್‌ಗಳು
6194	UW94248	MADEVI	Tailors/ಟೈಲರ್‌ಗಳು
6195	UW94251	MADAPURA KAVITHA	Tailors/ಟೈಲರ್‌ಗಳು
6196	UW94301	ಲಲಿತಮ್ಮ	Tailors/ಟೈಲರ್‌ಗಳು
6197	UW94322	MANJULA.P.S	Tailors/ಟೈಲರ್‌ಗಳು
6198	UW94424	VIJAYA LAKSHMI M M	Tailors/ಟೈಲರ್‌ಗಳು
6199	UW94649	ಕಮಲಮ್ಮ ಎಮ್ ಹೊಸಮನಿ	Tailors/ಟೈಲರ್‌ಗಳು
6200	UW94650	MANJULA.Y	Domestic Workers/ಗೃಹಕಾರ್ಮಿಕರು
6201	UW94726	SHANKARAMMA	Tailors/ಟೈಲರ್‌ಗಳು
6202	UW94814	PARVATHI	Tailors/ಟೈಲರ್‌ಗಳು
6203	UW94871	ರೇಖಾ	Tailors/ಟೈಲರ್‌ಗಳು
6204	UW95169	K P ABHISHEKA	Barbers/ಕ್ಷೌರಿಕರು
6205	UW95849	ಟಿ. ಸಾವಿತ್ರಮ್ಮ	Domestic Workers/ಗೃಹಕಾರ್ಮಿಕರು
6206	UW95923	SHOBHA .V.BADI	Tailors/ಟೈಲರ್‌ಗಳು
6207	UW9609	ಬಿ.ವಿ ಕವಿತಾ	Tailors/ಟೈಲರ್‌ಗಳು
6208	UW96137	ರಹಮತ ಉಲ್ಲಾ ಬಾಬು	Mechanics/ಮೆಕ್ಯಾನಿಕ್
6209	UW96248	ಶಮಿವುಲ್ಲಾ	Mechanics/ಮೆಕ್ಯಾನಿಕ್
6210	UW9657	ಬಿ.ಟಿ ಚನ್ನಮ್ಮ	Tailors/ಟೈಲರ್‌ಗಳು
6211	UW96675	DEEEPA T	Tailors/ಟೈಲರ್‌ಗಳು
6212	UW96721	ಕಮಲಮ್ಮ	Domestic Workers/ಗೃಹಕಾರ್ಮಿಕರು
6213	UW97096	RANGA VENKAPPA	Tailors/ಟೈಲರ್‌ಗಳು
6214	UW97117	ಸುನೀಲ್ ಕುಮಾರ್. ಎ. ಎಂ.	Tailors/ಟೈಲರ್‌ಗಳು

6215	UW97141	ಕರಿಬಸಮ್ಮ	Tailors/ಟೈಲರ್‌ಗಳು
6216	UW97367	PUNDALIKA	Tailors/ಟೈಲರ್‌ಗಳು
6217	UW9748	ಶ್ರೀ ಮಮತಾ .ಜಿ	Rag Pickers/ಚಿಂದಿ ಆಯುವವರು
6218	UW97612	Lalirhamma	Domestic Workers/ಗೃಹಕಾರ್ಮಿಕರು
6219	UW97646	ಎಮ್.ಪಿ ಮಾಲಾ	Tailors/ಟೈಲರ್‌ಗಳು
6220	UW97655	ನೇತ್ರಮ್ಮ	Tailors/ಟೈಲರ್‌ಗಳು
6221	UW97674	ಹೆಚ್. ಸಾಕಮ್ಮ	Domestic Workers/ಗೃಹಕಾರ್ಮಿಕರು
6222	UW97741	ನಿರ್ಮಲ	Tailors/ಟೈಲರ್‌ಗಳು
6223	UW97795	BASHEERA BANU M	Tailors/ಟೈಲರ್‌ಗಳು
6224	UW97836	ಎ.ಬಿ ದಿವ್ಯ	Tailors/ಟೈಲರ್‌ಗಳು
6225	UW97905	VISHALAKSHI.B.S	Tailors/ಟೈಲರ್‌ಗಳು
6226	UW97907	ರತ್ನಮ್ಮ	Rag Pickers/ಚಿಂದಿ ಆಯುವವರು
6227	UW97933	ಲಕ್ಷ್ಮಮ್ಮ	Rag Pickers/ಚಿಂದಿ ಆಯುವವರು
6228	UW97991	ಅಂಜುಮ್ ಬಾನು	Tailors/ಟೈಲರ್‌ಗಳು
6229	UW9831	POOJA	Tailors/ಟೈಲರ್‌ಗಳು
6230	UW98322	ದಶರಥರಾವ್ ಟಿ	Potters/ಕುಂಬಾರರು
6231	UW98365	ಆರ್.ಬಿ. ಶೋಭಾ	Rag Pickers/ಚಿಂದಿ ಆಯುವವರು
6232	UW98408	ಆರ್.ಹೆಚ್ ಮಂಜುಳ	Tailors/ಟೈಲರ್‌ಗಳು
6233	UW98425	ರತ್ನಮ್ಮ	Domestic Workers/ಗೃಹಕಾರ್ಮಿಕರು
6234	UW98740	Rangavva	Domestic Workers/ಗೃಹಕಾರ್ಮಿಕರು
6235	UW99387	UMA	Tailors/ಟೈಲರ್‌ಗಳು
6236	UW99580	ಚಂದ್ರಿಕ	Tailors/ಟೈಲರ್‌ಗಳು
6237	UW99938	ಹೆಚ್.ಎಮ್ ರೇಖಾ	Tailors/ಟೈಲರ್‌ಗಳು
6238	UW99976	RUKSANA PARVEEN	Tailors/ಟೈಲರ್‌ಗಳು
6239	LD0023200038355	LAKSHMAMMA KARIBASAPPA MADIVALARA	Washer men/ಅಗಸರು
6240	LD0023200038409	NINGAMMA	Washer men/ಅಗಸರು
6241	LD0023200038462	Nagamma	Washer men/ಅಗಸರು
6242	LD0023200039116	Hanumanthappa	Washer men/ಅಗಸರು
6243	LD0023200040244	M SHEKHRAPPA	Washer men/ಅಗಸರು
6244	LD0023200041054	UMESHA L	Washer men/ಅಗಸರು
6245	LD0023200041203	B CHANDRAPPA	Washer men/ಅಗಸರು
6246	LD0023200042710	Basawaraj K M	Barbers/ಕ್ಷೌರಿಕರು
6247	LD0023200042882	BASAVARAJA KAYAKADA	Barbers/ಕ್ಷೌರಿಕರು
6248	LD0023200065252	NEELAMMA	Washer men/ಅಗಸರು
6249	LD0023200065562	nagaraja k k	Barbers/ಕ್ಷೌರಿಕರು
6250	LD0023200087274	REVANASIDDAPPA	Barbers/ಕ್ಷೌರಿಕರು
6251	LD0023200096352	SUSHEELAMMA M O	Washer men/ಅಗಸರು
6252	LD0023200118002	HANUMAMMA	Washer men/ಅಗಸರು
6253	LD0023200134606	MALIKARJUNA K	Washer men/ಅಗಸರು
6254	KSUWSSB03549	SYEDA AMEENA BANU	Tailors/ಟೈಲರ್‌ಗಳು
6255	KSUWSSB09375	SAHADEVAPPA	Tailors/ಟೈಲರ್‌ಗಳು
6256	KSUWSSB09757	VEERESH MUDAGAL	Tailors/ಟೈಲರ್‌ಗಳು
6257	KSUWSSB09897	SHASHIKALA	Tailors/ಟೈಲರ್‌ಗಳು
6258	KSUWSSB10299	SHAHIRA BANU	Tailors/ಟೈಲರ್‌ಗಳು
6259	KSUWSSB10337	KAVYA BAYI	Tailors/ಟೈಲರ್‌ಗಳು
6260	KSUWSSB10659	MOHAMMED ASLAM	Mechanics/ಮೆಕ್ಯಾನಿಕ್
6261	KSUWSSB10989	ARSHAD AHAMED	Mechanics/ಮೆಕ್ಯಾನಿಕ್
6262	KSUWSSB11412	Vasantha K	Tailors/ಟೈಲರ್‌ಗಳು
6263	KSUWSSB11781	SUSHEELAMMA M	Tailors/ಟೈಲರ್‌ಗಳು
6264	KSUWSSB11807	TASINA BANU	Tailors/ಟೈಲರ್‌ಗಳು
6265	KSUWSSB11937	GOWRAMMA	Tailors/ಟೈಲರ್‌ಗಳು
6266	KSUWSSB12021	S Mala	Tailors/ಟೈಲರ್‌ಗಳು
6267	KSUWSSB12102	RUKHAIYA BANU	Tailors/ಟೈಲರ್‌ಗಳು

6268	KSUWSSB12278	SUMA BAYANNANAVAR	Tailors/ಟೈಲರ್‌ಗಳು
6269	KSUWSSB12378	MEENAKSHAMMA	Tailors/ಟೈಲರ್‌ಗಳು
6270	KSUWSSB12467	S Geetha	Tailors/ಟೈಲರ್‌ಗಳು
6271	KSUWSSB12523	RUKSANA BANU	Tailors/ಟೈಲರ್‌ಗಳು
6272	KSUWSSB12695	K GEETHA	Tailors/ಟೈಲರ್‌ಗಳು
6273	KSUWSSB12826	SHEELAMMA	Tailors/ಟೈಲರ್‌ಗಳು
6274	KSUWSSB12881	BHAGYA	Tailors/ಟೈಲರ್‌ಗಳು
6275	KSUWSSB12956	ASMA BANU	Tailors/ಟೈಲರ್‌ಗಳು
6276	KSUWSSB13069	GAAYITRA H	Tailors/ಟೈಲರ್‌ಗಳು
6277	KSUWSSB13180	SHEELA GUTTALAMATADA	Tailors/ಟೈಲರ್‌ಗಳು
6278	KSUWSSB13211	JABEENA BANU	Tailors/ಟೈಲರ್‌ಗಳು
6279	KSUWSSB13540	JYOTHI B T	Tailors/ಟೈಲರ್‌ಗಳು
6280	KSUWSSB13606	SUMITRA J BADIGER	Tailors/ಟೈಲರ್‌ಗಳು
6281	KSUWSSB13613	SAVITHRAMMA K K	Tailors/ಟೈಲರ್‌ಗಳು
6282	KSUWSSB13624	ROJA D M	Tailors/ಟೈಲರ್‌ಗಳು
6283	KSUWSSB13677	LAKSHMIBAI	Tailors/ಟೈಲರ್‌ಗಳು
6284	KSUWSSB13870	PRAMILAMMA P H	Tailors/ಟೈಲರ್‌ಗಳು
6285	KSUWSSB14094	KUSUMA B	Tailors/ಟೈಲರ್‌ಗಳು
6286	KSUWSSB14410	Haseena banu	Tailors/ಟೈಲರ್‌ಗಳು
6287	KSUWSSB14494	SUNANDAMMA	Tailors/ಟೈಲರ್‌ಗಳು
6288	KSUWSSB14795	SHANTHAMMA	Tailors/ಟೈಲರ್‌ಗಳು
6289	KSUWSSB14826	GANGAMMA	Tailors/ಟೈಲರ್‌ಗಳು
6290	KSUWSSB14830	AKKAMMA YADALLI	Tailors/ಟೈಲರ್‌ಗಳು
6291	KSUWSSB15020	NETRAVATHI	Tailors/ಟೈಲರ್‌ಗಳು
6292	KSUWSSB15085	Shamshad Banu	Tailors/ಟೈಲರ್‌ಗಳು
6293	KSUWSSB15154	NAGAMMA	Tailors/ಟೈಲರ್‌ಗಳು
6294	KSUWSSB15179	ROOPA O N	Tailors/ಟೈಲರ್‌ಗಳು
6295	KSUWSSB15286	RATHNAMMA	Tailors/ಟೈಲರ್‌ಗಳು
6296	KSUWSSB15576	NETRAVATHI	Tailors/ಟೈಲರ್‌ಗಳು
6297	KSUWSSB15616	G M KAVYA	Tailors/ಟೈಲರ್‌ಗಳು
6298	KSUWSSB15638	SANJEEDA BANU	Tailors/ಟೈಲರ್‌ಗಳು
6299	KSUWSSB16050	SUDHA	Tailors/ಟೈಲರ್‌ಗಳು
6300	KSUWSSB16226	POOJA N N	Tailors/ಟೈಲರ್‌ಗಳು
6301	KSUWSSB16245	FARJANA BANU	Tailors/ಟೈಲರ್‌ಗಳು
6302	KSUWSSB16261	GANGAMMA D	Tailors/ಟೈಲರ್‌ಗಳು
6303	KSUWSSB16422	SUMA	Tailors/ಟೈಲರ್‌ಗಳು
6304	KSUWSSB16491	SHANTHAMMA	Tailors/ಟೈಲರ್‌ಗಳು
6305	KSUWSSB16746	SAKAMMA	Tailors/ಟೈಲರ್‌ಗಳು
6306	KSUWSSB16817	TULASA D	Tailors/ಟೈಲರ್‌ಗಳು
6307	KSUWSSB16962	MUMTHAJ	Domestic Workers/ಗೃಹಕಾರ್ಮಿಕರು
6308	KSUWSSB18278	MANJAMMA	Domestic Workers/ಗೃಹಕಾರ್ಮಿಕರು
6309	LD0023200004879	B S Basamma	Washer men/ಅಗಸರು
6310	LD0023200010422	GIRIJAMMA M N	Washer men/ಅಗಸರು
6311	LD0023200010750	RAJAPPA	Washer men/ಅಗಸರು
6312	LD0023200013422	K S ANANDAPPA	Barbers/ಕ್ಷೌರಿಕರು
6313	LD0023200021334	Madivalara Basappa	Washer men/ಅಗಸರು
6314	LD0023200047232	MADIVALARA GUDDAPPA	Washer men/ಅಗಸರು
6315	LD0023200048483	CHETHANA KUMAR K S	Barbers/ಕ್ಷೌರಿಕರು
6316	LD0023200080258	S BABU	Barbers/ಕ್ಷೌರಿಕರು
6317	LD0023200082843	M R LAKSHMIDEVI	Washer men/ಅಗಸರು
6318	LD0023200083320	DEVARAJ D	Barbers/ಕ್ಷೌರಿಕರು
6319	LD0023200086445	VENKATESH S	Barbers/ಕ್ಷೌರಿಕರು
6320	LD0023200086551	SHESHAPPA	Barbers/ಕ್ಷೌರಿಕರು

6321	LD0023200103588	SHANTHAMMA N	Washer men/ಅಗಸರು
6322	LD0023200105324	SHANMUKHAMMA D	Washer men/ಅಗಸರು
6323	LD0023200115510	KAYAKADA CHANDRAPPA	Barbers/ಕ್ಷೌರಿಕರು
6324	UW100329	ಲಕ್ಷ್ಮಣ್	Tailors/ಟೈಲರ್‌ಗಳು
6325	UW116681	ಮಂಜುಳ	Rag Pickers/ಚಿಂದಿ ಆಯುವವರು
6326	UW118540	NARENDRA CHANDRAKANTH REVANKAR	Tailors/ಟೈಲರ್‌ಗಳು
6327	UW13052	ಮಾಳಪ್ಪ	Tailors/ಟೈಲರ್‌ಗಳು
6328	UW133360	ಸಂದೀಪ್ ಆರ್	Tailors/ಟೈಲರ್‌ಗಳು
6329	UW1710	ಇಂದ್ರಾಣಿ	Tailors/ಟೈಲರ್‌ಗಳು
6330	UW19339	ಮಮತಾ ಗಾಮನಗಟ್ಟಿ	Tailors/ಟೈಲರ್‌ಗಳು
6331	UW19630	ಮೋಹಮದ್ ರಫೀಕ್	Gold Smith/ಅಕ್ಕಸಾಲಿಗರು
6332	UW41180	ರಾಮಪ್ಪ ಕೆ	Tailors/ಟೈಲರ್‌ಗಳು
6333	UW45707	ಜಯಲಕ್ಷ್ಮಿ	Domestic Workers/ಗೃಹಕಾರ್ಮಿಕರು
6334	UW47219	Nagamma Someshwara Devadiga	Domestic Workers/ಗೃಹಕಾರ್ಮಿಕರು
6335	UW50791	ಪಿ ಶಂಕರ್	Tailors/ಟೈಲರ್‌ಗಳು
6336	UW59684	SUSHMITHA M	Tailors/ಟೈಲರ್‌ಗಳು
6337	UW66176	KASTURI MAYACHARI	Gold Smith/ಅಕ್ಕಸಾಲಿಗರು
6338	UW71364	ಮೋಹಿನಿ ಶೆಟ್ಟಿ	Tailors/ಟೈಲರ್‌ಗಳು
6339	UW77057	ಶ್ರೀಕಂಠ	Domestic Workers/ಗೃಹಕಾರ್ಮಿಕರು
6340	UW81299	ಗಾಯಿತ್ರಿ	Tailors/ಟೈಲರ್‌ಗಳು
6341	UW87005	ಕಸ್ತೂರಿ	Tailors/ಟೈಲರ್‌ಗಳು
6342	UW9053	ಸುಗುಣ ಎಂ	Tailors/ಟೈಲರ್‌ಗಳು
6343	UW99075	ನರಸಿಂಹ ಮೂರ್ತಿ	Tailors/ಟೈಲರ್‌ಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 578

ಸದಸ್ಯರ ಹೆಸರು : ಶ್ರೀ ರಾಮಪ್ಪ ಎಸ್. (ಹರಿಹರ)

ಉತ್ತರಿಸುವ ದಿನಾಂಕ : 21-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಇಲಾಖೆಯಿಂದ ರೈತಾಪಿ ವರ್ಗದವರಿಗೆ ಸಬ್ಸಿಡಿಯಾಗಿ ನೀಡುತ್ತಿರುವ ಯೋಜನೆಗಳಾವುವು; ಎಸ್.ಸಿ., ಎಸ್.ಟಿ., ಓ.ಬಿ.ಸಿ., ಪ್ರವರ್ಗ, ಇತರೆ ವರ್ಗದ ರೈತರ ಪ್ರತ್ಯೇಕ ಸಬ್ಸಿಡಿ ಯೋಜನೆಗಳಾವುವು; (ಸಂಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಒದಗಿಸುವುದು)	ಕೃಷಿ ಇಲಾಖೆಯಿಂದ ರೈತಾಪಿ ವರ್ಗದವರಿಗೆ ಸಬ್ಸಿಡಿಯಾಗಿ ನೀಡುತ್ತಿರುವ ಯೋಜನೆಗಳು ಹಾಗೂ ಎಸ್.ಸಿ., ಎಸ್.ಟಿ., ಓ.ಬಿ.ಸಿ., ಪ್ರವರ್ಗ, ಇತರೆ ವರ್ಗದ ರೈತರ ಪ್ರತ್ಯೇಕ ಸಬ್ಸಿಡಿ ಯೋಜನೆಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಕೃಷಿ ಇಲಾಖೆಯ ಜಲಾನಯನ ಅಭಿವೃದ್ಧಿ ವಿಭಾಗದಡಿಯಲ್ಲಿ ರೈತಾಪಿ ವರ್ಗದವರಿಗೆ ಸಬ್ಸಿಡಿಯಾಗಿ ನೀಡಲಾಗುತ್ತಿರುವ ಯೋಜನೆಯಾದ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರೈತರಿಗೆ ಸಮಗ್ರ ಕೃಷಿ ಪದ್ಧತಿಗಳಾದ ಬಹುಬೆಳೆ ಪದ್ಧತಿ, ಮಿಶ್ರಬೆಳೆ, ಅಂತರಬೆಳೆ, ಬೆಳೆ ಪರಿವರ್ತನೆ, ಅದರಲ್ಲೂ ತೋಟಗಾರಿಕೆ, ಕೃಷಿ ಅರಣ್ಯ, ಪಶುಸಂಗೋಪನೆ ಮತ್ತು ಹುಲ್ಲುಗಾವಲು ಘಟಕಗಳನ್ನೊಳಗೊಂಡಂತೆ ಮೌಲ್ಯವರ್ಧನೆ ಚಟುವಟಿಕೆಗಳಾದ ಜೇನುಸಾಕಣೆ, ರಸಮೇವು ಘಟಕ, ಎರೆಹುಳು ಉತ್ಪಾದನಾ ಘಟಕಗಳನ್ನು ಅನುಷ್ಠಾನಗೊಳಿಸಲು ಉಲ್ಲೇಜಿಸುವ ಸಲುವಾಗಿ ಸಹಾಯಧನವನ್ನು ನೀಡಲಾಗುತ್ತಿದೆ. ಎಸ್.ಸಿ, ಎಸ್.ಟಿ, ಒಬಿಸಿ, ಪ್ರವರ್ಗ, ಇತರೆ ವರ್ಗದ ರೈತರುಗಳಿಗೆ ಜಲಾನಯನ ಅಭಿವೃದ್ಧಿ ವಿಭಾಗದಲ್ಲಿ ಪ್ರತ್ಯೇಕ ಸಬ್ಸಿಡಿ ಯೋಜನೆಗಳಿರುವುದಿಲ್ಲ. ಆದಾಗ್ಯೂ ಸದರಿ ಯೋಜನೆಯಡಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ಶೇ. 16 ರಷ್ಟು ಹಾಗೂ ಗಿರಿಜನ ಉಪಯೋಜನೆಯಡಿ ಶೇ. 8 ರಷ್ಟು ಅನುದಾನವನ್ನು ಒದಗಿಸಲಾಗಿದೆ.
ಆ)	ಕಳೆದ 3 ವರ್ಷಗಳಿಂದ ಈ ಸಬ್ಸಿಡಿ ಯೋಜನೆಯಲ್ಲಿ ಹರಿಹರ ತಾಲ್ಲೂಕಿನ ರೈತರಿಗೆ ನೀಡಿರುವ ಯೋಜನೆಗಳಾವುವು; ಸಂಪೂರ್ಣ ಯಾವ ಯಾವ ಯೋಜನೆಗಳು, ಎಸ್.ಸಿ, ಎಸ್.ಟಿ, ಒಬಿಸಿ, ಪ್ರವರ್ಗ ಹಾಗೂ ಇತರೆ ವರ್ಗದ ರೈತರ ಪ್ರತ್ಯೇಕ ಸಬ್ಸಿಡಿ ಯೋಜನೆಗಳಾವುವು; (ರೈತರ	ಕಳೆದ 3 ವರ್ಷಗಳಿಂದ ಈ ಸಬ್ಸಿಡಿ ಯೋಜನೆಯಲ್ಲಿ ಹರಿಹರ ತಾಲ್ಲೂಕಿನ ಎಸ್.ಸಿ, ಎಸ್.ಟಿ, ಒಬಿಸಿ, ಪ್ರವರ್ಗ ಹಾಗೂ ಇತರೆ ವರ್ಗದ ರೈತರಿಗೆ ಇಲಾಖೆಯಿಂದ ನೀಡಿರುವ ಯೋಜನೆಗಳಡಿ ರೈತರ ಹೆಸರು, ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ಸಿ.ಡಿ ರೂಪದಲ್ಲಿ ಒದಗಿಸಲಾಗಿದೆ..

	ಹೆಸರು, ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಒದಗಿಸುವುದು)	
ಇ)	ಇತ್ತೀಚಿಗೆ ಅಡಿಕೆ ಬೆಳೆಗಳಿಗೆ ನುಸಿ ರೋಗ, ಕೋಳೆ ರೋಗ ಹಾಗೂ ಇನ್ನಿತರೆ ರೋಗಗಳು ಬಂದಿದ್ದು, ರೈತರಿಗೆ ತೀವ್ರವಾಗಿ ಸಂಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರೋಗಗಳ ನಿವಾರಣೆಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಸರ್ಕಾರದ ಗಮನಕ್ಕೆ ಬಂದಿದೆ. ರೋಗಗಳ ನಿಯಂತ್ರಣಕ್ಕೆ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ. 1. ರಾಜ್ಯವಲಯ ಯೋಜನೆಯಾದ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಕಾರ್ಯಕ್ರಮದಡಿ ಸಸ್ಯ ಸಂರಕ್ಷಣಾ ಔಷಧಿ ಖರೀಧಿಗೆ ಸಾಮಾನ್ಯ ವರ್ಗದವರಿಗೆ ಶೇ.75 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಶೇ.90 ರಷ್ಟು ಸಹಾಯಧವನ್ನು ನೀಡಲಾಗುತ್ತಿದೆ. 2. ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳುಮೆಣಸು, ಜಾಯಿ ಕಾಯಿ, ಬೆಣ್ಣೆಹಣ್ಣು ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. 3. ಅಡಿಕೆ ಬೆಳೆಗಾರರಿಗೆ 4 ಹೆಕ್ಟೇರ್‌ವರೆಗೆ ಪರ್ಯಾಯ ಬೆಳೆ ಉತ್ತೇಜಿಸಲು ಹೆಕ್ಟೇರ್ ಒಂದಕ್ಕೆ ರೂ.15000/-ಗಳ ಸಹಾಯಧನ ನೀಡಲಾಗುತ್ತಿದೆ. 4. ಅಡಿಕೆ ಎಲೆ ಚುಕ್ಕೆ ರೋಗದ ನಿಯಂತ್ರಣಕ್ಕೆ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.4000/-ಗಳಂತೆ ಮೊದಲನೇ ಸಿಂಪರಣೆಗೆ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. 5. ಕೇಂದ್ರ ವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿಯಂತ್ರಣ ಕೈಗೊಳ್ಳಲು ಶೇ.30ರಷ್ಟು ಸಹಾಯಧನ ಒದಗಿಸಲಾಗುತ್ತಿದೆ. ಅಡಿಕೆ ಬೆಳೆಯ ರೋಗಗಳ ಸಂಶೋಧನೆಗೆ ಒತ್ತು ನೀಡಲು ಮತ್ತು ರೋಗ ನಿಯಂತ್ರಣ ಹಾಗೂ ನಿರ್ವಹಣೆ ಕ್ರಮಗಳಿಗೆ ಕಾರ್ಯಕ್ರಮ ರೂಪಿಸಲಾಗುತ್ತಿದೆ.
ಈ)	ಕೃಷಿ ಇಲಾಖೆಯಿಂದ, ರೈತರ ಬೆಳೆಗಳನ್ನು ಉತ್ತಮಗೊಳಿಸಲು ಹಾಗೂ ಬೆಳೆಗಳಿಗೆ ಬೀಳುತ್ತಿರುವ ರೋಗಗಳನ್ನು ನಿವಾರಣೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ರೈತರಿಗೆ ಅನುಕೂಲವಾಗುವ ಯಾವ	ಬೆಳೆಗಳಲ್ಲಿ ಕಂಡುಬರುವ ಅಥವಾ ಕಂಡುಬರಬಹುದಾದ ಕೀಟ/ರೋಗ/ಕಳೆಗಳ ನಿರ್ಹಣೆಗೆ ಕೆಳಕಂಡಂತೆ ಇಲಾಖಾ ವತಿಯಿಂದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ➢ ಇಲಾಖಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳ ತಂಡ ನಿಯಮಿತವಾಗಿ ಪೀಡೆ ಸರ್ವೇಕ್ಷಣೆಯನ್ನು ಕೈಗೊಂಡು ಬೆಳೆಗಳಲ್ಲಿ

	ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಕೀಟ/ರೋಗಗಳ ಬಾಧೆ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಮಾಹಿತಿಯನ್ನು ರೈತರಿಗೆ ಒದಗಿಸಲಾಗಿರುತ್ತದೆ. ➢ ಬೀಜ ಮತ್ತು ಮಣ್ಣಿನಿಂದ ಹರಡುವ ರೋಗಗಳಿಂದ ಬೆಳೆಗಳನ್ನು ಸಂರಕ್ಷಿಸಲು ಹೋಬಳಿ ಮಟ್ಟದಲ್ಲಿ ಬೀಜೋಪಚಾರ ಆಂದೋಲವನ್ನು ಕೈಗೊಂಡು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. ➢ ಇಲಾಖೆಯ ಹೋಬಳಿ ಮಟ್ಟದಲ್ಲಿ ಈಗಾಗಲೇ ಸ್ಥಾಪಿಸಲಾಗಿರುವ 160 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಮೂಲಕ ಕ್ಷೇತ್ರ ಭೇಟಿಗಳನ್ನು ಕೈಗೊಂಡು ಕೀಟ/ರೋಗ ಬಾಧೆಗೆ ಕೈಗೊಳ್ಳಬೇಕಾದ ನಿರ್ವಹಣಾ ಕ್ರಮಗಳ ಮಾಹಿತಿಯನ್ನು ರೈತರಿಗೆ ಒದಗಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಇನ್ನೂ 64 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆ ಕಾರ್ಯ ಅಂತಿಮ ಹಂತದಲ್ಲಿರುತ್ತದೆ. ➢ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ತಾಂತ್ರಿಕ ಸಿಬ್ಬಂದಿ ಇ-ಸ್ಯಾಪ್ ತಂತ್ರಜ್ಞಾನವನ್ನು ಬಳಸಿ 598 ಗ್ರಾಮಗಳ 1268 ರೈತರ ತಾಕುಗಳಿಗೆ ಬೇಟಿ ನೀಡಿ 34 ಬೆಳೆಗಳಲ್ಲಿ 2109 ಕೀಟ/ರೋಗ ಬಾಧೆಗಳನ್ನು ಗುರುತಿಸಿ ರೈತರಿಗೆ ಕೈಗೊಳ್ಳಬೇಕಾದ ಅಗತ್ಯ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ➢ ಕೀಟ/ರೋಗಗಳ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ರೈತ ಗುಂಪುಗಳ ಮೂಲಕ ಚರ್ಚಿಸಲಾಗುತ್ತಿದೆ ಹಾಗು ದಿನಪತ್ರಿಕೆ ಮತ್ತು ಸಮೂಹ ಮಾದ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ. ➢ ಇಲಾಖೆಯ ವತಿಯಿಂದ ಯೋಜಿಸಲಾಗುವ ಸಭೆ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಕೀಟ ರೋಗಗಳ ಬಗ್ಗೆ ರೈತರಿಗೆ ಅರಿವು ಮೂಡಿಸಲಾಗುತ್ತಿದೆ. ➢ ಕೀಟರೋಗ ಬಾಧೆಯನ್ನು ನಿಯಂತ್ರಣ ಮಾಡಲು ತರಬೇತಿಗಳನ್ನು ನೀಡಲಾಗಿರುತ್ತದೆ ಹಾಗೂ ಇಲಾಖೆಯ ವಿವಿಧ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ಪೀಡೆನಾಶಕಗಳನ್ನು ದಾಸ್ತಾನೀಕರಿಸಿ ಸಹಾಯಧನದಲ್ಲಿ ವಿತರಿಸಲಾಗುತ್ತಿದೆ.

ಸಂಖ್ಯೆ: AGRI-AML/269 /2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	579
ಮಾನ್ಯ ಸದಸ್ಯರ ಹೆಸರು	ಶ್ರೀ ಸೋಮಶೇಖರ ರೆಡ್ಡಿ ಜಿ. (ಬಳ್ಳಾರಿ ನಗರ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಗಮ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆಯೇ.	ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು, 2008 ರಲ್ಲಿ ಜಾರಿಗೆ ತಂದಿರುತ್ತದೆ ಇದಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳು, 2009ಅನ್ನು ರೂಪಿಸಿರುತ್ತದೆ. ಸದರಿ ಕಾಯ್ದೆಯ ಉದ್ದೇಶದಂತೆ ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತೆಗಾಗಿ ಮತ್ತು ಕಲ್ಯಾಣಕ್ಕಾಗಿ ಸೂಕ್ತ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ಸದರಿ ಕಾಯ್ದೆಯ ಕಲಂ 6(1)ರನ್ವಯ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಈಗಾಗಲೇ 2009ನೇ ಸಾಲಿನಲ್ಲಿ ರಚಿಸಲಾಗಿರುತ್ತದೆ. ಆದ್ದರಿಂದ ಪುನಃ ಪ್ರತ್ಯೇಕವಾಗಿ ಕಾರ್ಮಿಕರ ಕಲ್ಯಾಣ ನಿಗಮ ಸ್ಥಾಪಿಸುವ ಅಗತ್ಯತೆ ಇರುವುದಿಲ್ಲ.
ಆ)	ಇಲ್ಲದಿದ್ದಲ್ಲಿ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.	

ಕಾಇ 680 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	580
ಮಾನ್ಯ ಸದಸ್ಯರ ಹೆಸರು	ಶ್ರೀ ಸೋಮಶೇಖರ ರೆಡ್ಡಿ ಜಿ. (ಬಳ್ಳಾರಿ ನಗರ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಮಿಕ ಇಲಾಖೆಯಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು;	ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ, ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ, ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಕಾರ್ಮಿಕರಿಗೆ ಒದಗಿಸುತ್ತಿರುವ ಯೋಜನೆಗಳಡಿ ನೊಂದಣಿಯಾಗಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ: **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>** ವಿಧಾನಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ. ಈ ಮಂಡಳಿಯ ಫಲಾನುಭವಿಗಳಾಗಿ ಬಳ್ಳಾರಿ ನಗರ ವ್ಯಾಪ್ತಿಯಲ್ಲಿ 29,617 ಅಸಂಘಟಿತ ವಲಯಕ್ಕೆ ಸೇರಿದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ. **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>** ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು" ಹಾಗೂ ಭಟ್ಟಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ವಿಧಾನಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಬಳ್ಳಾರಿ ತಾಲ್ಲೂಕಿನಲ್ಲಿ ಒಟ್ಟು 18,617 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗಿದೆ. ಮುಂದುವರೆದು, ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿಯಾದ ಕಾರ್ಮಿಕರ ದತ್ತಾಂಶವು ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಬಳ್ಳಾರಿ ಜಿಲ್ಲೆಯಾದ್ಯಂತ 3,85,747 ಅಸಂಘಟಿತ ಕಾರ್ಮಿಕರು ನೋಂದಣಿಯಾಗಿರುತ್ತಾರೆ.

ಆ)	ಈ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಅಸಂಘಟಿತ ಕಾರ್ಮಿಕರಿಗೆ ಲೇಬರ್ ಕಾರ್ಡ್ ನೀಡಲಾಗಿದೆ;	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳು ಅಸಂಘಟಿತ ಕಾರ್ಮಿಕರಿಗೆ ಒದಗಿಸುತ್ತಿರುವ ಯೋಜನೆಗಳಡಿ ನೊಂದಣಿಯಾಗಿರುವ ಅಸಂಘಟಿತ ಕಾರ್ಮಿಕರಿಗೆ ವಿತರಿಸಲಾಗಿರುವ ಗುರುತಿನ ಚೀಟಿಯ ವಿವರಗಳು ಈ ಕೆಳಕಂಡಂತಿದೆ: **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>** ಈ ವ್ಯಾಪ್ತಿಯಲ್ಲಿ ನೋಂದಣಿಯಾದ 29,617 ಎಲ್ಲಾ ಅರ್ಹ ಫಲಾನುಭವಿಗಳಿಗೆ ಆನ್‌ಲೈನ್ ಮೂಲಕ ಗುರುತಿನ ಚೀಟಿಯನ್ನು ವಿತರಿಸಲಾಗಿದೆ. **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>** ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು" ಹಾಗೂ ಭಟ್ಟಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ವಿಧಾನಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಬಳ್ಳಾರಿ ತಾಲ್ಲೂಕಿನಲ್ಲಿ ಒಟ್ಟು 18,617 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗಿದೆ. ಮುಂದುವರೆದು, ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿಯಾದ ಕಾರ್ಮಿಕರ ದತ್ತಾಂಶವು ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಬಳ್ಳಾರಿ ಜಿಲ್ಲೆಯಾದ್ಯಂತ 3,85,747 ಅಸಂಘಟಿತ ಕಾರ್ಮಿಕರು ನೋಂದಣಿಯಾಗಿದ್ದು, ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ.
ಇ)	ಇನ್ನೂ ಬಾಕಿ ಉಳಿದ ಅಸಂಘಟಿತ ಕಾರ್ಮಿಕರಿಗೆ ತ್ವರಿತಗತಿಯಲ್ಲಿ ಲೇಬರ್ ಕಾರ್ಡ್ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳ ಮೂಲಕ ಗುರುತಿನ ಚೀಟಿಯನ್ನು ವಿತರಿಸಲು ಕೈಗೊಳ್ಳುತ್ತಿರುವ ಕ್ರಮಗಳ ಕುರಿತ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ: **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u>** ಅಸಂಘಟಿತ ವಲಯಕ್ಕೆ ಸೇರಿದ ವಿವಿಧ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೋಂದಣಿಯಾಗದೇಇರುವ ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:- 1. ನೋಂದಣಿ ಮತ್ತು ನವೀಕರಣಕ್ಕಾಗಿ ಪಾವತಿಸಬೇಕಾಗಿದ್ದ ಶುಲ್ಕವನ್ನು ಕೈಬಿಡಲಾಗಿದೆ. 2. ಸ್ವತಃ ಅರ್ಜಿದಾರರೇ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

		3. ಮಂಡಳಿಯ ನೋಂದಣಿ ಹಾಗೂ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಈ ಕೆಳಕಂಡಂತ ಮಾಹಿತಿ ಶಿಕ್ಷಣ ಸಂವಹನ (ಐಇಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ: ಪೋಸ್ಟರ್ಸ್, ಬ್ರೋಚರ್ಸ್, ಬ್ಯಾನರ್, ಹೋರ್ಡಿಂಗ್ಸ್, ಕಿರುಹೊತ್ತಿಗೆ, ಕ್ಯಾಲೆಂಡರ್ ಮತ್ತು ಲೀಫ್ಲೆಟ್ಸ್/ಪಾಂಪ್ಲೆಟ್ಸ್ ಮುಂತಾದ ಮುದ್ರಣ ಚಟುವಟಿಕೆಗಳು, ಶ್ರಾವ್ಯ ಮಾಧ್ಯಮದ ಮೂಲಕ ಪ್ರಚಾರ, ಆಟೋ ಬ್ರ್ಯಾಂಡಿಂಗ್, ಕಿರುಚಿತ್ರ/ ಸಾಕ್ಷ್ಯಚಿತ್ರಗಳು, ವಾಹನ ಬ್ರ್ಯಾಂಡಿಂಗ್ ಚಟುವಟಿಕೆಗಳು, ರೇಡಿಯೋ ಪ್ರಚಾರ, ಎಲ್.ಇ.ಡಿ ಹೋರ್ಡಿಂಗ್, ಆಟೋಮೇಟೆಡ್ ಕಾಲ್ಸ್, ಆಟೋಮೇಟೆಡ್ ಮೆಸೇಜಸ್ (ವಾಟ್ಸಾಪ್/ಟೆಕ್ಸ್ಟ್), ಟಿನ್‌ಪ್ಲೇಟ್ಸ್/ಸನ್ ಬೋರ್ಡ್/ಬಿಲ್ ಬೋರ್ಡ್ ಮುಂತಾದ ಬೋರ್ಡ್‌ಗಳ ಮುದ್ರಣ, ಬಸ್ ಬ್ರ್ಯಾಂಡಿಂಗ್ ಚಟುವಟಿಕೆ, ಬಸ್ ನಿಲ್ದಾಣ, ರೈಲು ನಿಲ್ದಾಣ ಮುಂತಾದ ಕಡೆಗಳಲ್ಲಿ ಶ್ರಾವ್ಯ ಮಾಧ್ಯಮಗಳ ಮೂಲಕ ಪ್ರಚಾರ, ರೈಲು ಬ್ರ್ಯಾಂಡಿಂಗ್, ರೈಲು ನಿಲ್ದಾಣಗಳಲ್ಲಿ ವೀಡಿಯೋ/ಆಡಿಯೋ ಪ್ರಚಾರ, ಬಸ್ ನಿಲ್ದಾಣ ಬ್ರ್ಯಾಂಡಿಂಗ್ ಮೂಲಕ ಪ್ರಚಾರ, ಎಲ್.ಇ.ಡಿ ವಾಹನ ಬ್ರ್ಯಾಂಡಿಂಗ್ ಚಟುವಟಿಕೆ, ಕಿಯೋಸ್ಕ್‌ನಂತಹ ವಿದ್ಯುನ್ಮಾನ ಇಂಟರಾಕ್ಟೀವ್ ಯಂತ್ರಗಳ ಮೂಲಕ ಪ್ರಚಾರ ಹಾಗೂ ಮಾಹಿತಿ ಬಿತ್ತರಿಕೆ, ಬಸ್ ನಿಲ್ದಾಣ/ರೈಲು ನಿಲ್ದಾಣ ಮುಂತಾದ ಕಡೆಗಳಲ್ಲಿ ಎಲ್.ಇ.ಡಿ ಡಿಸ್ಪ್ಲೇಗಳ ಮೂಲಕ ಪ್ರಚಾರ, ಗೋಡೆ ಬರಹ, ಸಾಮಾಜಿಕ ಮಾಧ್ಯಮ ಚಟುವಟಿಕೆಗಳು, ಟಿ.ವಿ ಜಾಹೀರಾತು, ದಿನ ಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸಿಕ ಪತ್ರಿಕೆಗಳು, ವಿಶೇಷ ಸಂಚಿಕೆಗಳು ಮುಂತಾದವುಗಳಲ್ಲಿ ಪ್ರಕಟಣೆ, ಜಾಹೀರಾತು ಮೂಲಕ ಪ್ರಚಾರ, ವೀಡಿಯೋ ಡಿಸ್‌ಪ್ಲೇಗಳ ಅಳವಡಿಕೆ ಮತ್ತು ಜಾಹೀರಾತು, ಹೋರ್ಡಿಂಗ್ ಪ್ಯಾನೆಲ್‌ಗಳ ಅಳವಡಿಕೆ ಮತ್ತು ಜಾಹೀರಾತು, ಬೀದಿ ನಾಟಕ ಮತ್ತು ಆಟೋ ಮುಂತಾದ ವಾಹನಗಳ ಮೂಲಕ ಪ್ರಚಾರ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳ ಕುರಿತು ಅಸಂಘಟಿತ ಕಾರ್ಮಿಕರಲ್ಲಿ ಅರಿವು ಮೂಡಿಸಲು ಈ ಕೆಳಕಂಡ ಸಂವಹನ ಚಟುವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ➢ ಕರಪತ್ರ, ದಿನ ಪತ್ರಿಕೆ, ಬ್ಯಾನರ್ಸ್, ಹಾಗೂ ಹೋರ್ಡಿಂಗ್ಸ್‌ಗಳ ಮೂಲಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ➢ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಮಟ್ಟದಲ್ಲಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ➢ ಕಾರ್ಮಿಕ **ಸಹಾಯವಾಣಿ 155214** ಮೂಲಕ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ➢ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗಿದ್ದು, ಸದರಿ ಕೇಂದ್ರಗಳ ಮೂಲಕ ಕಾರ್ಮಿಕರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

		➢ ಯೋಜನೆಗಳ ಕುರಿತಂತೆ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ತ್ವರಿತಗತಿಯಲ್ಲಿ ಗುರುತಿನ ಚೀಟಿ ನೀಡಲು ನೋಂದಣಿಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದ್ದು, ಸ್ಥಳದಲ್ಲಿಯೇ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ.

ಕಾಇ 681 ಎಲ್‌ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**581**
ಸದಸ್ಯರ ಹೆಸರು	:	**ಶ್ರೀ ಸೋಮಶೇಖರ ರೆಡ್ಡಿ. ಜಿ. (ಬಳ್ಳಾರಿ ನಗರ)**
ಉತ್ತರಿಸುವ ದಿನಾಂಕ	:	**21-12-2022**
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**

ಕ್ರ.ಸಂ	ವಿಷಯ	ಉತ್ತರ
(ಅ)	ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಭವನಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ;	2022-23ನೇ ಸಾಲಿನಲ್ಲಿ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ 08 ಸ್ಥಳಗಳಲ್ಲಿ ಡಾ|| ಬಿ.ಆರ್ ಅಂಬೇಡ್ಕರ್ / ಡಾ|| ಬಾಬು ಜಗಜೀವನರಾಮ್ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ. ಮುಂದುವರೆದು, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ (ವಿಜಯ ನಗರ ಜಿಲ್ಲೆಯನ್ನು ಒಳಗೊಂಡಂತೆ) 214 ಸ್ಥಳಗಳಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ / ಡಾ|| ಬಾಬು ಜಗಜೀವನ ರಾಮ್ ಸಮುದಾಯ ಭವನಗಳನ್ನು ರೂ.5519.31 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ.
(ಆ)	ಪ್ರಸ್ತುತ, ನಿರ್ಮಾಣ ಮಾಡುತ್ತಿರುವ ಭವನಗಳೆಷ್ಟು; (ಮಾಹಿತಿ ನೀಡುವುದು)	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 05 ಡಾ|| ಬಿ.ಆರ್ ಅಂಬೇಡ್ಕರ್ / ಡಾ|| ಬಾಬು ಜಗಜೀವನರಾಮ್ ಸಮುದಾಯ ಭವನ ನಿರ್ಮಾಣ ಮಾಡಲು ಒಟ್ಟು ರೂ.250.00 ಲಕ್ಷಗಳಿಗೆ ಮಂಜೂರಾತಿ ನೀಡಿ, ಇದುವರೆವಿಗೂ ರೂ.95.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿದ್ದು, ರೂ.155.00 ಲಕ್ಷಗಳನ್ನು ಬಿಡುಗಡೆ ಮಾಡುವುದು ಬಾಕಿ ಇರುತ್ತದೆ. 05 ಭವನಗಳ ಪೈಕಿ 01 ಭವನದ ಕಾಮಗಾರಿಯು ಪೂರ್ಣಗೊಂಡಿದ್ದು, 01 ಭವನಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು ಬಾಕಿ ಇರುತ್ತದೆ.
(ಇ)	ಭವನಗಳ ನಿರ್ಮಾಣದ ಕಾಮಗಾರಿಗಳು ಯಾವ ಹಂತದಲ್ಲಿದೆ;	
(ಉ)	ಭವನಗಳ ನಿರ್ಮಾಣದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?	

--2

		ಮುಂದುವರೆದು, 03 ಭವನಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದ್ದು, ಅಂದಾಜು ಪಟ್ಟಿಗಳನ್ನು ಸಲ್ಲಿಸುವುದು ಬಾಕಿ ಇರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಆಧರಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡುವ ಮೂಲಕ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಕಇ 733 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ಶಾಸಕರು, ಬಳ್ಳಾರಿ ನಗರ ವಿಧಾನ ಸಭಾ ಕ್ಷೇತ್ರ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂ:-581ಕ್ಕೆ ಅನುಬಂಧ

ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮಂಜೂರಾತಿ ನೀಡಲಾದ ಡಾ|| ಬಿ.ಆರ್ ಅಂಬೇಡ್ಕರ್ / ಡಾ|| ಬಾಬು ಜಗಜೀವನರಾಮ್ ಸಮುದಾಯ ಭವನಗಳ ಪ್ರಗತಿ ವಿವರ

ರೂ ಲಕ್ಷಗಳಲ್ಲಿ

ಕ್ರ. ಸಂ	ಮಂಜೂರಾದ ವರ್ಷ	ಭವನದ ವಿವರ	ಮಂಜೂರಾದ ಸ್ಥಳ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಬಾಕಿ ಬಿಡುಗಡೆ ಮೊತ್ತ	ಕಾಮಗಾರಿ ಹಂತ
1	2017-18	ಅಂಬೇಡ್ಕರ್ ಭವನ	ಬಳ್ಳಾರಿ ನಗರದ ಬಾಪೂಜಿ ನಗರದ 7ನೇ ವಾರ್ಡ	100.00	50.00	50.00	ಪೂರ್ಣಗೊಂಡಿದೆ
2	2020-21	ಸಮುದಾಯ ಭವನ	ಬಾಪೂಜಿನಗರ, ಏಳು ಮಕ್ಕಳ ದೇವಸ್ಥಾನದ ಹತ್ತಿರ	25.00	7.50	17.50	ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು ಬಾಕಿ ಇರುತ್ತದೆ.
3	2020-21	ಸಮುದಾಯ ಭವನ	ಎಸ್.ಆರ್.ಪಿ ಕಾಲೋನಿಯ ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ	25.00	7.50	17.50	ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಪತ್ರ ಬರೆಯಲಾಗಿದ್ದು, ಅಂದಾಜು ಪಟ್ಟಿಗಳನ್ನು ಸಲ್ಲಿಸುವುದು ಬಾಕಿ ಇರುತ್ತದೆ.
4	2020-21	ಸಮುದಾಯ ಭವನ	ಎಸ್.ಆರ್.ಪಿ ಕಾಲೋನಿಯ ಶ್ರೀರಾಮ ದೇವಸ್ಥಾನದ ಹತ್ತಿರ	50.00	15.00	35.00	
5	2020-21	ಸಮುದಾಯ ಭವನ	ಮಹಾನಂದಿಕೊಟ್ಟಂ ಎಸ್.ಸಿ.ಕಾಲೋನಿ	50.00	15.00	35.00	
ಒಟ್ಟು				250.00	95.00	155.00	

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	582
ಸದಸ್ಯರ ಹೆಸರು	:	ಶ್ರೀ ಅನಿಲ್ ಚಿಕ್ಕಮಾದು
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ಹುಣಸೂರು, ಸರಗೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ವಾಸಿಸುತ್ತಿರುವ ಜೇನುಕುರುಬ ಸಮುದಾಯದವರನ್ನು ಹೊರತುಪಡಿಸಿ ಉಳಿದ ಮೂಲ ನಿವಾಸಿಗಳು ಬುಡಕಟ್ಟು ಸಮುದಾಯದವರಾದ ಸೋಲಿಗ, ಬೆಟ್ಟಕುರುಬ, ಎರವ, ಕಾಡುಕುರುಬ, ಬೇಡ ಮುಂತಾದ ಗಿರಿಜನರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)	ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು, ಸರಗೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ವಾಸಿಸುತ್ತಿರುವ ಜೇನುಕುರುಬ ಸಮುದಾಯದವರನ್ನು ಹೊರತುಪಡಿಸಿ ಉಳಿದ ಮೂಲ ನಿವಾಸಿಗಳು ಬುಡಕಟ್ಟು ಸಮುದಾಯದವರಾದ ಸೋಲಿಗ, ಬೆಟ್ಟಕುರುಬ, ಯರವ, ಕಾಡುಕುರುಬ, ಬೇಡ ಮುಂತಾದ ಗಿರಿಜನರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ತಾಲ್ಲೂಕು	ಸೋಲಿಗ	ಬೆಟ್ಟಕುರುಬ/ ಕಾಡುಕುರುಬ	ಯರವ	ಬೇಡ	ಡೊಂಗ್ರಿ ಗೆರಾಸಿಯಾ	ಹಕ್ಕಿ-ಪಿಕ್ಕಿ	ಮೇದ
1.	ಹೆಚ್.ಡಿ. ಕೋಟೆ	397	1193	1980	4852	0	1034	0
2.	ಸರಗೂರು	572	673	111	0	0	0	825
3.	ಹುಣಸೂರು	2864	75	252	0	198	1450	0
4.	ಪಿರಿಯಾಪಟ್ಟಣ	317	105	04	0	68	0	125
	ಒಟ್ಟು	4150	2046	2347	4852	266	2484	950

ಆ)	ಮೇಲ್ಕಂಡ ಕುಟುಂಬಗಳಲ್ಲಿ ವಸತಿ ರಹಿತ ಕುಟುಂಬಗಳ ಸಂಖ್ಯೆ ಎಷ್ಟು;	ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ಹುಣಸೂರು, ಸರಗೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ವಾಸಿಸುತ್ತಿರುವ ಜೇನುಕುರುಬ ಸಮುದಾಯದವರನ್ನು ಹೊರತುಪಡಿಸಿ ಉಳಿದ ಮೂಲ ನಿವಾಸಿಗಳು ಬುಡಕಟ್ಟು ಸಮುದಾಯದವರಾದ ಸೋಲಿಗ, ಬೆಟ್ಟಕುರುಬ, ಎರವ, ಕಾಡುಕುರುಬ, ಬೇಡ ಮುಂತಾದ ಬುಡಕಟ್ಟು ವಸತಿ ರಹಿತ ಕುಟುಂಬಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ತಾಲ್ಲೂಕು	ಸೋಲಿಗ	ಬೆಟ್ಟಕುರುಬ/ ಕಾಡುಕುರುಬ	ಯರವ	ಬೇಡ	ಡೊಂಗ್ರಿ ಗೆರಾಸಿಯಾ	ಹಕ್ಕಿ-ಪಿಕ್ಕಿ	ಮೇದ	ಒಟ್ಟು
1.	ಹೆಚ್.ಡಿ. ಕೋಟೆ	103	263	383	321	0	50	0	1120
2.	ಸರಗೂರು	157	112	31	0	0	0	50	350
3.	ಹುಣಸೂರು	211	10	15	0	12	26	0	274
4.	ಪಿರಿಯಾಪಟ್ಟಣ	350	45	05	0	52	0	98	550
	ಒಟ್ಟು	821	430	434	321	64	76	148	2294

ಇ)	ಜೇನುಕುರುಬ ಸಮುದಾಯದವರಿಗೆ ನೀಡಿರುವ ವಸತಿ ಯೋಜನೆಯಂತೆ ಇತರ ಮೂಲ ನಿವಾಸಿ ಬುಡಕಟ್ಟು ಸಮುದಾಯದವರಿಗೂ ಯೋಜನೆಯನ್ನು ವಿಸ್ತರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	1. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆವತಿಯಿಂದ ನೈಜ ದುರ್ಬಲ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯದವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ರೂ.3.75 ಲಕ್ಷಗಳ ಘಟಕ ವೆಚ್ಚದಲ್ಲಿ 2732 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. 2. 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ (163)ರಲ್ಲಿ ವಸತಿ ರಹಿತ ಪರಿಶಿಷ್ಟ ಪಂಗಡದ ಅಲೆಮಾರಿ/ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಬುಡಕಟ್ಟುಗಳ 23 ಸಮುದಾಯಗಳಿಗೆ ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಆದ್ಯತೆ ಮೇಲೆ ಮನೆ ನಿರ್ಮಾಣ ಮಾಡಲು ಕಾರ್ಯಕ್ರಮ ರೂಪಿಸಲಾಗುವುದು ಎಂದು ಘೋಷಿಸಲಾಗಿದೆ. ಈ ಸಂಬಂಧ ರೂ.100.00 ಕೋಟಿಗಳ ವೆಚ್ಚದಲ್ಲಿ ಸದರಿ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಅಗತ್ಯ ಕ್ರಮಕೈಗೊಳ್ಳಲಾಗಿದೆ. ರಾಜೀವ್ ಗಾಂಧಿ ವಸತಿ ನಿಗಮವು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆಯಡಿ ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚ ರೂ.2.00 ಲಕ್ಷಗಳಂತೆ ಮನೆ ನಿರ್ಮಾಣಕ್ಕೆ ಸಹಾಯಧನ ಬಿಡುಗಡೆ ಮಾಡಲಾಗುತ್ತಿದೆ.

ಸಕಇ 494 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	583
ಸದಸ್ಯರ ಹೆಸರು	:	ಶ್ರೀ ಅನಿಲ್ ಚಿಕ್ಕಮಾದು
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ವರ್ಗಗಳ ಸಮುದಾಯದವರ ಕಲ್ಯಾಣಕ್ಕಾಗಿ ಇಲಾಖೆಯಿಂದ ಕೇಂದ್ರ ಪುರಸ್ಕೃತ ಯೋಜನೆಗಳಡಿ ಹಾಗೂ ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನವೆಷ್ಟು; (ಯೋಜನೆವಾರು/ ಲೆಕ್ಕಶೀರ್ಷಿಕೆವಾರು ವಿವರ ನೀಡುವುದು)	ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ವರ್ಗಗಳ ಸಮುದಾಯದವರ ಕಲ್ಯಾಣಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಕೇಂದ್ರ ಪುರಸ್ಕೃತ ಯೋಜನೆಗಳಡಿ ಹಾಗೂ ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ರಾಜ್ಯ/ಕೇಂದ್ರ ವಲಯ	2019-20		2020-21		2021-22	
		ಮಂಜೂರಾತಿ	**ಬಿಡುಗಡೆ**	**ಮಂಜೂರಾತಿ**	**ಬಿಡುಗಡೆ**	**ಮಂಜೂರಾತಿ**	**ಬಿಡುಗಡೆ**
1	ರಾಜ್ಯವಲಯ	811.06	811.06	834.50	735.50	866.72	806.72
2	ಕೇಂದ್ರ ಪುರಸ್ಕೃತ	140.00	140.00	39.60	39.60	200.00	100.00
ಒಟ್ಟು		**951.06**	**951.06**	**874.1**	**775.1**	**1066.72**	**906.72**

ಯೋಜನಾವಾರು ಹಾಗೂ ಲೆಕ್ಕಶೀರ್ಷಿಕೆವಾರು ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.

ಆ)	ಬಿಡುಗಡೆಗೊಂಡ ಅನುದಾನಕ್ಕೆ ಯಾವ ಕಾರ್ಯಕ್ರಮಗಳನ್ನು ಮತ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಆದೇಶದ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)	ಬಿಡುಗಡೆಗೊಂಡ ಅನುದಾನಕ್ಕೆ ಕೈಗೊಂಡ ಕಾಮಗಾರಿಗಳ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.

ಸಕಇ 498 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-1

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:583ಕ್ಕೆ ಉತ್ತರ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮ	ಲೆಕ್ಕಶೀರ್ಷಿಕೆ	2019-20		2020-21		2021-22		ಒಟ್ಟಾರೆ	
			ಮಂಜೂರಾತಿ	ಬಿಡುಗಡೆ	ಮಂಜೂರಾತಿ	ಬಿಡುಗಡೆ	ಮಂಜೂರಾತಿ	ಬಿಡುಗಡೆ	ಮಂಜೂರಾತಿ	ಬಿಡುಗಡೆ
ರಾಜ್ಯವಲಯ ಕಾರ್ಯಕ್ರಮಗಳು										
1	ಪೌಷ್ಠಿಕ ಆಹಾರ ಯೋಜನೆ	2225-02-794-0-05 (059)	636.81	636.81	584.5	584.5	746.72	746.72	1968.03	1968.03
2	ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ	4225-02-794-0-01(059)	0.00	0.00	0.00	0.00	0.00	0.00	0	0
3	ವಾಲ್ಮೀಕಿ/ಸಮುದಾಯ ಭವನ		0.00	0.00	250.00	150.00	0.00	0.00	250	150
4	ಆಶ್ರಮಶಾಲೆ/ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿ	2225-02-794-0-05 (059)	174.25	174.25	0.00	0.00	0.00	0.00	174.25	174.25
5	ಅಂಗನವಾಡಿ ಕಟ್ಟಡ	2225-02-794-0-05 (059)	0.00	0.00	0.00	0.00	40.00	20.00	40	20
6	ಆಶ್ರಮಶಾಲೆಗಳಿಗೆ ಗ್ರಂಥಾಲಯ ಪುಸ್ತಕಗಳು, ಬುಕ್‌ಕೇಸ್, ರೀಡಿಂಗ್ ಟೇಬಲ್. ಚೇರ್ & ರಾಕ್‌ಗಳ ಪೂರೈಕೆಗಾಗಿ	2225-02-794-0-05 (059)	0.00	0.00	0.00	0.00	80.00	40.00	80	40
	ಒಟ್ಟು		**811.06**	**811.06**	**834.50**	**734.50**	**866.72**	**806.72**	**2512.28**	**2352.28**
ಕೇಂದ್ರವಲಯ ಕಾರ್ಯಕ್ರಮಗಳು										
7	ಜೇನುಕುರುಬ ಜನಾಂಗದವರಿಗೆ ಮನೆಗಳ ನಿರ್ಮಾಣ	2225-02-794-0-01(059)	140.00	140.00	0.00	0.00	200.00	100.00	340.00	240.00
8	ಭಾರತ ಸಂವಿಧಾನ ಅನುಚ್ಛೇದ 275(1)ರಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ (ಕುರಿಸಾಕಾಣಿಕೆ)	2225-02-794-0-03 (059)	0.00	0.00	39.60	39.60	0.00	0.00	39.60	39.60
	ಒಟ್ಟು		**140.00**	**140.00**	**39.60**	**39.60**	**200.00**	**100.00**	**379.60**	**279.60**

ಅನುಬಂಧ-2

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:583ಕ್ಕೆ ಉತ್ತರ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮ/ಕಾಮಗಾರಿಗಳ ವಿವರ	ಮಂಜೂರಾತಿ ನೀಡಿದಅನುದಾನ	ಬಿಡುಗಡೆಮಾಡಿದ ಅನುದಾನ
2019-20			
1	ಪೌಷ್ಠಿಕ ಆಹಾರ ಯೋಜನೆ	636.81	636.81
2	ಆಶ್ರಮಶಾಲೆ/ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿ		
	a) ವಾಲ್ಮೀಕಿ ಆಶ್ರಮಶಾಲೆ ಭೀನಹಳ್ಳಿ- Construction of Dormitory	33.70	33.70
	b) ವಾಲ್ಮೀಕಿ ಆಶ್ರಮಶಾಲೆ ಬಸವನಗಿರಿ ಹಾಡಿಯ ಆವರಣಗೋಡೆ ನಿರ್ಮಾಣ ಕಾಮಗಾರಿ	17.65	17.65
	c) ವಾಲ್ಮೀಕಿ ಆಶ್ರಮಶಾಲೆ ಬಿ. ಮಟಿಕೆರೆ- ಆವರಣಗೋಡೆ ನಿರ್ಮಾಣ ಕಾಮಗಾರಿ	35.30	35.30
	d) ವಾಲ್ಮೀಕಿ ಆಶ್ರಮಶಾಲೆ ಚನ್ನಗುಂಡಿ- ಆವರಣಗೋಡೆ, ಶೌಚಾಲಯ ನಿರ್ಮಾಣ ಕಾಮಗಾರಿ ಹಾಗೂ Construction of Dormitory	63.60	63.60
	e) ವಾಲ್ಮೀಕಿ ಆಶ್ರಮಶಾಲೆ ಮೇಟಿಕುಪ್ಪೆ- ಆವರಣಗೋಡೆ ನಿರ್ಮಾಣ ಕಾಮಗಾರಿ	24.00	24.00
	ಒಟ್ಟು	**174.25**	**174.25**
3	ಜೇನುಕುರುಬ ಜನಾಂಗದವರಿಗೆ ಮನೆಗಳ ನಿರ್ಮಾಣ	140.00	140.00
	ಒಟ್ಟಾರೆ	**951.06**	**951.06**
2020-21			
1	ಪೌಷ್ಠಿಕ ಆಹಾರ ಯೋಜನೆ	584.5	584.5
2	ವಾಲ್ಮೀಕಿ/ಸಮುದಾಯ ಭವನ		
	a) ಹೆಚ್.ಡಿ ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಕಾಮಗಾರಿ	200.00	100.00
	b) ಹೆಚ್.ಡಿ ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ ಕಾಮಗಾರಿ	50.00	50.00
	ಒಟ್ಟು	**250.00**	**150.00**
3	ಭಾರತ ಸಂವಿಧಾನ ಅನುಚ್ಛೇದ 275(1)ರಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ a) ಕುರಿ ಸಾಕಾಣಿಕೆ	39.60	39.60
	ಒಟ್ಟಾರೆ	874.10	774.10

ಕ್ರ. ಸಂ	ಕಾರ್ಯಕ್ರಮ/ಕಾಮಗಾರಿಗಳ ವಿವರ	ಮಂಜೂರಾತಿ ನೀಡಿದಅನುದಾನ	ಬಿಡುಗಡೆಮಾಡಿದ ಅನುದಾನ
2021-22			
1	ಪೌಷ್ಠಿಕ ಆಹಾರ ಯೋಜನೆ	746.72	746.72
2	ಜೇನುಕುರುಬ ಜನಾಂಗದವರಿಗೆ ಮನೆಗಳ ನಿರ್ಮಾಣ	200.00	100.00
3	ಅಂಗನವಾಡಿ ಕಟ್ಟಡ	40.00	20.00
4	ಆಶ್ರಮಶಾಲೆಗಳಿಗೆ ಗ್ರಂಥಾಲಯ ಪುಸ್ತಕಗಳು, ಬುಕ್‌ಕೇಸ್, ರೀಡಿಂಗ್ ಟೇಬಲ್. ಚೇರ್ & ರಾಕ್‌ಗಳ ಪೂರೈಕೆಗಾಗಿ	80.00	40.00
ಒಟ್ಟು		**1066.72**	**906.72**

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು, ಇವರ ನಡವಳಿಗಳು

ವಿಷಯ: ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1 ಸರ್ಕಾರದ ಆದೇಶ ಸಂಖ್ಯೆ: ಸಕಇ 357 ಎಸ್‌ಟಿಇಪಿ 2020, ದಿನಾಂಕ: 23.03.2021

2 ಸರ್ಕಾರದ ಆದೇಶ ಸಂಖ್ಯೆ:ಸಕಇ 220 ಎಸ್.ಟಿ.ಪಿ 2020 ದಿ:18.08.2020 ಹಾಗೂ ತಿದ್ದುಪಡಿ ಆದೇಶ ದಿನಾಂಕ:24.08.2020 ಮತ್ತು 05.09.2020 ಮತ್ತು 15.12.2020

<><><>

ಪ್ರಸ್ತಾವನೆ:

ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆ/ತಾಲ್ಲೂಕು/ಹೋಬಳಿ/ಗ್ರಾಮ ಮಟ್ಟಗಳಲ್ಲಿ ಅನುಬಂಧದಲ್ಲಿರುವಂತೆ ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟಾರೆ ರೂ. 3360.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಅನುಮತಿಸಿದೆ. ಅದರಲ್ಲಿ ಮೊದಲ ಕಂತಿನಲ್ಲಿ ರೂ. 858.75 ಲಕ್ಷಗಳ ಅನುದಾನವನ್ನು (ಶೇಕಡ 25ರಷ್ಟು) ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಿದೆ. ಅನುಬಂಧದಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ: 2ರಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ರೂ. 200.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಮೊದಲನೇ ಕಂತಿನಲ್ಲಿ ಶೇಕಡ 25ರಷ್ಟು ಮೊತ್ತ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಿದೆ.

ಸದರಿ ಕಾರ್ಯಕ್ರಮಕ್ಕೆ ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ವೆಚ್ಚವಾಗದೇ ಇರುವ ಅನುದಾನ ಲೆಕ್ಕಶೀರ್ಷಿಕೆ 4225-02-190-0-02 (059)ರಡಿ ವಾಲ್ಮೀಕಿ / ಸಮುದಾಯ ಭವನಗಳ ನಿರ್ಮಾಣಕ್ಕಾಗಿ ನಿಗಧಿಪಡಿಸಿದ ರೂ. 20.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ.

ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಮಂಜೂರಾದ ಹೆಚ್ಚುವರಿ ಅನುದಾನ ರೂ. 200.00 ಲಕ್ಷಗಳಲ್ಲಿ ಶೇಕಡ 25ರಷ್ಟು ಅನುದಾನ ರೂ. 50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಬಿಡುಗಡೆ ಮಾಡಲು ಈ ಕೆಳಕಂಡ ಆದೇಶ.

ಆದೇಶ

ಸಂಖ್ಯೆ:ಪವಕನಿ/ಸಂವಿ/ಸಿಆರ್.96/2011-12 ದಿನಾಂಕ:20.04.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸಿ, 2020-21ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ವೆಚ್ಚವಾಗದೇ ಇರುವ ಅನುದಾನ ಲೆಕ್ಕಶೀರ್ಷಿಕೆ 4225-02-190-0-02 (059)ರಡಿ ವಾಲ್ಮೀಕಿ / ಸಮುದಾಯ ಭವನಗಳ ನಿರ್ಮಾಣಕ್ಕಾಗಿ ನಿಗಧಿಪಡಿಸಿದ ರೂ. 20.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮು.ತಿ.ನೋ

ಸದರಿ ಅನುದಾನವನ್ನು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಮಂಜೂರಾದ ಹೆಚ್ಚುವರಿ ಮೊತ್ತ ರೂ.200.00 ಲಕ್ಷಗಳ ಅನುದಾನದಲ್ಲಿ ಮೊದಲನೇ ಕಂತಿನ ಅನುದಾನ ರೂ. 50.00 (ಶೇಕಡ 25ರಷ್ಟು) ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮೂಲಕ ಬಿಡುಗಡೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

ಅಧಿಕಾರಿಗಳ ಹೆಸರು	ಬ್ಯಾಂಕ್ ಹೆಸರು ಮತ್ತು ವಿಳಾಸ	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ ಕೋಡ್	ವಿವರ	ನಿಗಧಿಪಡಿಸಿದ ಮೊತ್ತ (ಹೆಚ್ಚುವರಿ)	ಮೊದಲನೇ ಕಂತಿನಲ್ಲಿ ಬಿಡುಗಡೆ ಮಾಡಿದ ಮೊತ್ತ (ಶೇಕಡ 25)
DC & PCO, ITDP, Mysore	HDFC Bank, Vijayanagara Branch, Mysore,	50100189877987	HDFC0003668	ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನ ನಿರ್ಮಾಣ	200.00	50.00

ಸದರಿ ವೆಚ್ಚವನ್ನು ಸರ್ಕಾರದ ಆದೇಶ ಸರ್ಕಾರದ ಆದೇಶ ಸಂ:ಸಕಇ 220 ಎಸ್‌ಟಿಪಿ 2020 ಬೆಂಗಳೂರು ದಿನಾಂಕ:18.08.2020 ರಂತೆ 2020-21ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ವೆಚ್ಚವಾಗದೆ ಇರುವ ಅನುದಾನ ಲೆಕ್ಕಶೀರ್ಷಿಕೆ:4225-02-190-0-02 (059) ರಡಿ ಗ್ರಾಮ/ಹೋಬಳಿ/ ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನ ನಿರ್ಮಾಣಕ್ಕಾಗಿ ಒಟ್ಟಾರೆ ರೂ.20.00 ಕೋಟಿಗಳ ಅನುದಾನವನ್ನು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುವ ಸದರಿ ಅನುದಾನದಲ್ಲಿ ವೆಚ್ಚ ಭರಿಸತಕ್ಕದ್ದು.

ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ,
ಬೆಂಗಳೂರು.

ಷರತ್ತುಗಳು:

1. ಸರ್ಕಾರದ ಆದೇಶ ಸಂ:ಸಕಇ 338 ಪಕವಿ 2018 ದಿ:25.03.2019 ರಲ್ಲಿನ ವಾಲ್ಮೀಕಿ ಭವನ/ ಸಮುದಾಯ ಭವನಗಳ ನಿರ್ಮಾಣದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನ ಅನುಸರಿಸತಕ್ಕದ್ದು.
3. ಜಿಲ್ಲಾಧಿಕಾರಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಮಿತಿಯಲ್ಲಿ ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.
4. ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಲ್ಲದೆ ಬೇರೆ ಕಾರ್ಯಕ್ರಮಕ್ಕೆ ಉಪಯೋಗಿಸತಕ್ಕದ್ದಲ್ಲ ಹಾಗೂ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ.
5. ನಿಯಮಾನುಸಾರ ಜಿ.ಎಸ್.ಟಿ, ಟಿ.ಡಿ.ಎಸ್ ಗಳನ್ನೊಳಗೊಂಡಂತೆ ಪ್ರಸ್ತುತ ಜಾರಿಯಲ್ಲಿರುವ ಎಲ್ಲಾ ವಿಧವಾದ ಶಾಸನಬದ್ಧ ಮೊತ್ತಗಳನ್ನು ಕಟಾವಣೆ ಮಾಡಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಿ ನಿಗಧಿತ ನಮೂನೆಯಲ್ಲಿ ರಿಟರ್ನ್ ಪೈಲ್ (Return File) ಕಡ್ಡಾಯವಾಗಿ ಮಾಡತಕ್ಕದ್ದು ಹಾಗೂ ಕಟಾಯಿಸಿದ ಬಗ್ಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು.

6. ಕಾಮಗಾರಿಗಳ ಮೊತ್ತವನ್ನು ಪಾವತಿಸುವ ಮುನ್ನ ಶೇ.5% ರಷ್ಟು Fixed Security Deposit ಕಡ್ಡಾಯವಾಗಿ ಕಟಾಯಿಸತಕದ್ದು.
7. ಕಾಮಗಾರಿಯ ಮೊತ್ತದಲ್ಲಿ ಶೇ.2% ರಷ್ಟು ಆದಾಯ ತೆರಿಗೆಯನ್ನು ಕಟಾಯಿಸಿ ಸಂಬಂಧಿಸಿದ ಇಲಾಖೆಗೆ ಪಾವತಿಸಕ್ಕದ್ದು.
8. ಕಾಮಗಾರಿಯನ್ನು ಅನುಷ್ಠಾನಗೊಳಿಸಿದ ನಂತರ Geo tagged ಛಾಯಾ ಚಿತ್ರಗಳನ್ನು ತೆಗೆದು, ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ಜಿಲ್ಲಾಧಿಕಾರಿಗಳ ದೃಢೀಕರಣದೊಂದಿಗೆ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.
9. ಸದರಿ ಭವನಗಳ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯೊಂದಿಗೆ ದೃಢೀಕೃತಗೊಂಡ ಅಂದಾಜು ಪಟ್ಟಿ ಮತ್ತು ನಕ್ಷೆಯಂತೆಯೇ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ದೃಢೀಕರಿಸಿಕೊಳ್ಳತಕ್ಕದ್ದು.
10. ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸತಕ್ಕದಲ್ಲ.
11. ಈ ಭವನಕ್ಕೆ ಅನುದಾನ ಬಿಡುಗಡೆಯಾದ 12 ತಿಂಗಳೊಳಗೆ ಭವನ ನಿರ್ಮಾಣ ಕಾರ್ಯ ಪೂರ್ಣಗೊಳಿಸಿ ತ್ರೈಮಾಸಿಕವಾಗಿ ಪ್ರಗತಿ ವರದಿ ಮತ್ತು ಹಣಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು.
12. ಭವನದ ಕಾಮಗಾರಿಯನ್ನು ಪೂರ್ಣಗೊಳಿಸಿ, ಇಲಾಖಾ ವಶಕ್ಕೆ ನೀಡಿದ ದಿನಾಂಕದಿಂದಲೇ ನಿರ್ವಹಣೆಗೆ ನಿಗದಿಪಡಿಸಿದ ಕಾಲಾವಧಿಯವರೆಗೆ ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಕಾಮಗಾರಿ ನಿರ್ವಹಿಸಿದ ಏಜೆನ್ಸಿಯು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ಥಿಗೊಳಸತಕ್ಕದ್ದು ಅಲ್ಲಿಯವರೆಗೆ Fixed Security Deposit ನ್ನು ಪಾವತಿಸತಕ್ಕದ್ದಲ್ಲ ಸದರಿ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸತಕ್ಕದ್ದು.
13. ಭವನದ ಕಾಮಗಾರಿ ಪ್ರಾರಂಭಿಸುವ ಮೊದಲು ಮತ್ತು ಪೂರ್ಣಗೊಂಡ ನಂತರ ಕಟ್ಟಡದ ಫೋಟೋವನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
14. ಭವನದ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿ (3rd party Inspection) ತಪಾಸಣೆ ನಡೆಸಿ ನೀಡಿರುವ ವರದಿ ಬಗ್ಗೆ ಜಿಲ್ಲಾಧಿಕಾರಿಗಳಿಂದ ದೃಢೀಕರಿಸಿಕೊಂಡ ನಂತರ ನಿರ್ಮಾಣ ಏಜೆನ್ಸಿಗೆ ಹಣ ಬಿಡುಗಡೆ ಮಾಡತಕ್ಕದ್ದು.
15. ಮೂರನೇ ವ್ಯಕ್ತಿಯ ತಪಾಸಣೆಗೆ ತಗಲುವ ವೆಚ್ಚವನ್ನು ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಭರಿಸತಕ್ಕದ್ದು.
16. ಭವನದ ನಿರ್ವಹಣೆಯನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ಉಸ್ತುವಾರಿಯನ್ನು ವಹಿಸತಕ್ಕದ್ದು.
17. ನಿಯಮಾನುಸಾರ 3ನೇ ವ್ಯಕ್ತಿಯ ಪರಿವೀಕ್ಷಣೆಯ ಏಜೆನ್ಸಿ ನೇಮಿಸುವುದು ಹಾಗೂ ಸದರಿ ವೆಚ್ಚವನ್ನು ಈ ಅಂದಾಜು ವೆಚ್ಚದಲ್ಲೇ ಭರಿಸಿಕೊಳ್ಳತಕ್ಕದ್ದು.
18. ಮೇಲ್ಕಂಡ ಷರತ್ತುಗಳಲ್ಲಿ ಏನಾದರೂ ಉಲ್ಲಂಘನೆಯಾದರೆ ಸಂಬಂದಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯವರೇ ಜವಾಬ್ದಾರಿಯಾಗಿರುತ್ತಾರೆ,

26/4/21

ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2) ಜಿಲ್ಲಾಧಿಕಾರಿಗಳು. ಮೈಸೂರು ಜಿಲ್ಲೆ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3) ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರು ಆದೇಶದಲ್ಲಿರುವ ಮೊತ್ತವನ್ನು ಅನುಷ್ಠಾನಾಧಿಕಾರಿಗಳ ಬ್ಯಾಂಕ್ ಖಾತೆಗೆ RTGS/NEFT ಮೂಲಕ ಬಿಡುಗಡೆ ಮಾಡಲು ಕೋರಿದೆ.
4) ಲೆಕ್ಕಾಧಿಕಾರಿಗಳು. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರ ಮುಂದಿನ ಕ್ರಮಕ್ಕಾಗಿ.
5) ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ

3/6/21

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

ವಿಷಯ: ಮೈಸೂರು ಜಿಲ್ಲೆಯ, ಹೆಚ್.ಡಿ.ಕೋಟೆ ತಾಲ್ಲೂಕಿನ, ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಮಂಜೂರಾದ ಹೆಚ್ಚುವರಿ ಅನುದಾನದಲ್ಲಿ ಬಾಕಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1 ಸರ್ಕಾರದ ಆದೇಶ ಸಂಖ್ಯೆ: ಸಕ ಇ 382 ಎಸ್.ಟಿ.ಪಿ. 2020, ದಿನಾಂಕ:23.03.2021.
2 ಈ ಕಛೇರಿ ಆದೇಶ ಸಂಖ್ಯೆ: ಪವಕನಿ/ಸಂಪಿ.ಸಿ.ಆರ್2/2020-21 ದಿನಾಂಕ:14.12.2021.
3 ಸರ್ಕಾರದ ಆದೇಶ ಸಂಖ್ಯೆ: ಸಕ ಇ 327 ಎಸ್ ಟಿ ಸಿ 2022, ದಿನಾಂಕ:30.05.2022. ಮತ್ತು 01.07.2022

<<*>>

ಪ್ರಸ್ತಾವನೆ:

ಉಲ್ಲೇಖ(1) ರ ಸರ್ಕಾರದ ಆದೇಶದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಆದೇಶಿಸಿದೆ. ಸದರಿ ಅನುದಾನದಲ್ಲಿ ಮೊದಲನೇ ಕಂತಿನಲ್ಲಿ ರೂ.12.50 ಲಕ್ಷಗಳನ್ನು ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಿದೆ. ಸರ್ಕಾರದ ಆದೇಶದನ್ವಯ ಸದರಿ ವಾಲ್ಮೀಕಿ ಸಮುದಾಯ ಭವನ ಕಟ್ಟಡ ಕಾಮಗಾರಿಗಾಗಿ ಮಂಜೂರಾದ ಹೆಚ್ಚುವರಿ ಮೊತ್ತದಲ್ಲಿ ಮೊದಲನೆ ಕಂತಿನ ಅನುದಾನ ರೂ.12.50 ಲಕ್ಷಗಳನ್ನು ಉಲ್ಲೇಖ(2)ರ ಆದೇಶದಲ್ಲಿ ಅನುಷ್ಠಾನಾಧಿಕಾರಿಗಳ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನಲ್ಲಿ ಪರಿಶಷ್ಟ ಪಂಗಡದ ಉಪಯೋಜನೆಯಡಿ ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಅನುದಾನದಲ್ಲಿ ಬಂಡವಾಳ ಲೆಕ್ಕ ಶೀರ್ಷಿಕೆ:4225-02-794-0-01 (059) ರಡಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ.20.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ರೂ.1000.00 ಲಕ್ಷಗಳನ್ನು ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮ ಮಾಡಲಾಗಿರುತ್ತದೆ.

ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ಮಂಜೂರಾದ ರೂ.50.00 ಲಕ್ಷಗಳಲ್ಲಿ ಬಾಕಿ ರೂ.37.50 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು,ಜಿಲ್ಲೆ ರವರ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಬಿಡುಗಡೆ ಮಾಡಲು ಈ ಕೆಳಕಂಡ ಆದೇಶ.

ಆದೇಶ

ಸಂಖ್ಯೆ: ಪವಕನಿ/ಸಂಪಿ /ಸಿಆರ್- 02 /2020-21 **ದಿನಾಂಕ:15.07.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸಿ, 2022-23ನೇ ಸಾಲಿನಲ್ಲಿ ಪರಿಶಷ್ಟ ಪಂಗಡದ ಉಪಯೋಜನೆಯಡಿ ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಅನುದಾನದಲ್ಲಿ ಬಂಡವಾಳ ಲೆಕ್ಕ ಶೀರ್ಷಿಕೆ:4225-02-794-0-01 (059) ರಡಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ.20.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ರೂ.1000.00 ಲಕ್ಷಗಳನ್ನು ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮ ಮಾಡಲಾಗಿರುತ್ತದೆ.

ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ಮಂಜೂರಾದ ರೂ.50.00 ಲಕ್ಷಗಳಲ್ಲಿ ಬಿಡುಗಡೆ ಮಾಡಬೇಕಾದ ಬಾಕಿ ಮೊತ್ತ ರೂ.37.50 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು, ರವರ ಜಂಟಿ ಖಾತೆಗೆ RTGS/NEFT ಮೂಲಕ ಬಿಡುಗಡೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರಿಗೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

ಜಿಲ್ಲೆ	ಬ್ಯಾಂಕ್ ವಿವರ	ಅನುಷ್ಠಾನಾಧಿಕಾರಿಗಳ ಹೆಸರು	ವಿವರ	ನಿಗಧಿ (ಹೆಚ್ಚುವರಿ)	ಅಂತಿಮ ಕಂತಿನ ಬಿಡುಗಡೆ
ಮೈಸೂರು	Bank Name: HDFC Branch: Vijayanagara, Mysore. Account No: 50100189877987 IFSC CODE: HDFC0003668	DC & PCO, Mysore	ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಮಂಜೂರಾದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ	50.00	37.50

15/7/22
ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಷರತ್ತುಗಳು:

1. ಸರ್ಕಾರದ ಆದೇಶ ಸಂಖ್ಯೆ: ಸಕ ಇ 338 ಪಕವಿ 2018, ದಿನಾಂಕ:25.03.2019 ರಲ್ಲಿನ ವಾಲ್ಮೀಕಿ ಭವನ/ ಸಮುದಾಯ ಭವನಗಳ ನಿರ್ಮಾಣದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನ ಪಾಲಿಸತಕ್ಕದ್ದು.
3. ಜಿಲ್ಲಾಧಿಕಾರಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಮಿತಿಯಲ್ಲಿ ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.
4. ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಲ್ಲದೆ ಬೇರೆ ಕಾರ್ಯಕ್ರಮಕ್ಕೆ ಉಪಯೋಗಿಸ ತಕ್ಕದ್ದಲ್ಲ ಹಾಗೂ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ.
5. ನಿಯಮಾನುಸಾರ ಜಿ.ಎಸ್.ಟಿ, ಟಿ.ಡಿ.ಎಸ್ ಒಳಗೊಂಡಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ವಿಧವಾದ ಶಾಸನಬದ್ಧ ಮೊತ್ತಗಳನ್ನು ಕಟಾವಣೆ ಮಾಡಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಿ ನಿಗಧಿತ ನಮೂನೆಯಲ್ಲಿ ರಿಟರ್ನ್ಸ್ ಫೈಲ್ (Return File) ಕಡ್ಡಾಯವಾಗಿ ಮಾಡತಕ್ಕದ್ದು ಹಾಗೂ ಕಟಾಯಿಸಿದ ಬಗ್ಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು.
6. ಕಾಮಗಾರಿಗಳ ಮೊತ್ತವನ್ನು ಪಾವತಿಸುವ ಮುನ್ನ ಶೇ.5% ರಷ್ಟು Fixed Security Deposit ಕಡ್ಡಾಯವಾಗಿ ಕಟಾಯಿಸತಕದ್ದು.
7. ಕಾಮಗಾರಿಯ ಮೊತ್ತದಲ್ಲಿ ಶೇ.2% ರಷ್ಟು ಆದಾಯ ತೆರಿಗೆಯನ್ನು ಕಟಾಯಿಸಿ ಸಂಬAಧಿಸಿದ ಇಲಾಖೆಗೆ ಪಾವತಿಸಕ್ಕದ್ದು.
8. ಕಾಮಗಾರಿಯನ್ನು ಅನುಷ್ಠಾನಗೊಳಿಸಿದ ನಂತರ Geo tagged ಛಾಯಾ ಚಿತ್ರಗಳನ್ನು ತೆಗೆದು, ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ಜಿಲ್ಲಾಧಿಕಾರಿಗಳ ದೃಢೀಕರಣದೊಂದಿಗೆ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.
9. ಸದರಿ ಭವನಗಳ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯೊಂದಿಗೆ ದೃಢೀಕೃತಗೊಂಡ ಅಂದಾಜು ಪಟ್ಟಿ ಮತ್ತು ನಕ್ಷೆಯಂತೆಯೇ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ರವರು ದೃಢೀಕರಿಸಿಕೊಳ್ಳತಕ್ಕದ್ದು.
10. ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸತಕ್ಕದಲ್ಲ.
11. ಈ ಭವನಕ್ಕೆ ಅನುದಾನ ಬಿಡುಗಡೆಯಾದ 12 ತಿಂಗಳೊಳಗೆ ಭವನ ನಿರ್ಮಾಣ ಕಾರ್ಯ ಪೂರ್ಣಗೊಳಿಸಿ ತ್ರೈಮಾಸಿಕವಾಗಿ ಪ್ರಗತಿ ವರದಿ ಮತ್ತು ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ರವರು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು.

...3

12. ಭವನದ ಕಾಮಗಾರಿಯನ್ನು ಪೂರ್ಣಗೊಳಿಸಿ, ಇಲಾಖಾ ವಶಕ್ಕೆ ನೀಡಿದ ದಿನಾಂಕದಿಂದಲೇ ನಿರ್ವಹಣೆಗೆ ನಿಗಧಿಪಡಿಸಿದ ಕಾಲಾವಧಿಯವರೆಗೆ ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಕಾಮಗಾರಿ ನಿರ್ವಹಿಸಿದ ಏಜೆನ್ಸಿಯು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ಥಿಗೊಳಿಸತಕ್ಕದ್ದು. ಅಲ್ಲಿಯವರೆಗೆ Fixed Security Deposit ನ್ನು ಪಾವತಿಸತಕ್ಕದ್ದಲ್ಲ. ಸದರಿ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸತಕ್ಕದ್ದು.
13. ಭವನದ ಕಾಮಗಾರಿ ಪ್ರಾರಂಭಿಸುವ ಮೊದಲು ಮತ್ತು ಪೂರ್ಣಗೊಂಡ ನಂತರ ಕಟ್ಟಡದ ಫೋಟೋವನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
14. ಭವನದ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿ (3rd party Inspection) ತಪಾಸಣೆ ನಡೆಸಿ ನೀಡಿರುವ ವರದಿ ಬಗ್ಗೆ ಜಿಲ್ಲಾಧಿಕಾರಿಗಳಿಂದ ದೃಢೀಕರಿಸಿಕೊಂಡ ನಂತರ ನಿರ್ಮಾಣ ಏಜೆನ್ಸಿಗೆ ಹಣ ಬಿಡುಗಡೆ ಮಾಡತಕ್ಕದ್ದು.
15. ಮೂರನೇ ವ್ಯಕ್ತಿಯ ತಪಾಸಣೆಗೆ ತಗಲುವ ವೆಚ್ಚವನ್ನು ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಭರಿಸತಕ್ಕದ್ದು.
16. ಭವನದ ನಿರ್ವಹಣೆಯನ್ನು ಸಂಬಂಧಪಟ್ಟ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಜಿಲ್ಲೆ ರವರು ಉಸ್ತುವಾರಿಯನ್ನು ವಹಿಸತಕ್ಕದ್ದು.
17. ನಿಯಮಾನುಸಾರ 3ನೇ ವ್ಯಕ್ತಿಯ ಪರಿವೀಕ್ಷಣೆಯ ಏಜೆನ್ಸಿ ನೇಮಿಸುವುದು ಹಾಗೂ ಸದರಿ ವೆಚ್ಚವನ್ನು ಈ ಅಂದಾಜು ವೆಚ್ಚದಲ್ಲೇ ಭರಿಸಿಕೊಳ್ಳತಕ್ಕದ್ದು.
18. ಮೇಲ್ಕಂಡ ಷರತ್ತುಗಳಲ್ಲಿ ಏನಾದರೂ ಉಲ್ಲಂಘನೆಯಾದರೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯವರೇ ಜವಾಬ್ದಾರಿಯಾಗಿರುತ್ತಾರೆ.

ಸದರಿ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ:ಸಕಇ 327 ಎಸ್ ಟಿ ಸಿ 2022, ದಿನಾಂಕ:30.05.2022. ಮತ್ತು01.07.2022 ರಂತೆ 2022-23ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಅನುದಾನದಲ್ಲಿ ಬಂಡವಾಳ ಲೆಕ್ಕ ಶೀರ್ಷಿಕೆ:4225-02-794-0-01 (059)ರಡಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ.20.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ರೂ.1000.00 ಲಕ್ಷಗಳನ್ನು ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದ ವಾಲ್ಮೀಕಿ /ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮ ಮಾಡಲಾಗಿರುವ ಸದರಿ ವೆಚ್ಚದಲ್ಲಿ ಭರಿಸತಕ್ಕದ್ದು.

15/7/22

ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ.ಬೆಂಗಳೂರು ರವರು ಆದೇಶದಲ್ಲಿರುವ ಮೊತ್ತವನ್ನು ಅನುಷ್ಠಾನಾಧಿಕಾರಿಗಳ ಬ್ಯಾಂಕ್ ಖಾತೆಗೆ RTGS/NEFT ಮೂಲಕ ಬಿಡುಗಡೆ ಮಾಡಲು ಕೋರಿದೆ.
4. ಲೆಕ್ಕಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರ ಮುಂದಿನ ಕ್ರಮಕ್ಕಾಗಿ.
5. ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಕಛೇರಿ ಪ್ರತಿ.

5

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ಇವರ ನಡವಳಿಗಳು

ವಿಷಯ: ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

1 ಸರ್ಕಾರದ ಆದೇಶ ಸಂಖ್ಯೆ:ಸಕಇ 382 ಎಸ್‌ಟಿಪಿ 2020 ದಿನಾಂಕ:23.03.2021.

2 ಸರ್ಕಾರದ ಆದೇಶ ಸಂಖ್ಯೆ:ಸಕಇ 203 ಎಸ್.ಟಿ.ಪಿ 2021 ದಿ:19.07.2021 ಮತ್ತು 12.10.2021

<><><>

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಆದೇಶಿಸಿದೆ. ಸದರಿ ಅನುದಾನದಲ್ಲಿ ಮೊದಲ ಕಂತಿನಲ್ಲಿ ರೂ.12.50 ಲಕ್ಷಗಳನ್ನು ಬಿಡುಗಡೆ ಮಾಡಲು ಆದೇಶಿಸಿದೆ.

ಸದರಿ ಕಾರ್ಯಕ್ರಮಕ್ಕೆ ಉಲ್ಲೇಖ (2)ರ 2021-22ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ವೆಚ್ಚವಾಗದೇ ಇರುವ ಅನುದಾನ ಲೆಕ್ಕಶೀರ್ಷಿಕೆ 4225-02-190-0-02 (059)ರಡಿ ಗ್ರಾಮ/ಹೋಬಳಿ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ. 25.00 ಕೋಟಿಗಳ ಅನುದಾನವನ್ನು ನಿಗದಿಪಡಿಸಿ ಮೊದಲನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆಯಾದ ರೂ. 18.50 ಕೋಟಿಗಳನ್ನು ಗ್ರಾಮ/ಹೋಬಳಿ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ.

ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳಲ್ಲಿ ಮೊದಲ ಕಂತಿನಲ್ಲಿ ರೂ.12.50 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಬಿಡುಗಡೆ ಮಾಡಲು ಈ ಕೆಳಕಂಡ ಆದೇಶ.

ಆದೇಶ

ಸಂಖ್ಯೆ:ಪವಕನಿ/ಸಂವಿ/ಸಿಆರ್.02/2020-21 ದಿನಾಂಕ:14.12.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸಿ, 2021-22ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ವೆಚ್ಚವಾಗದೇ ಇರುವ ಅನುದಾನ ಲೆಕ್ಕಶೀರ್ಷಿಕೆ 4225-02-190-0-02 (059)ರಡಿ ಗ್ರಾಮ/ಹೋಬಳಿ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ. 25.00 ಕೋಟಿಗಳ ಅನುದಾನವನ್ನು ನಿಗದಿಪಡಿಸಿ ಮೊದಲನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆಯಾದ ರೂ. 18.50 ಕೋಟಿಗಳನ್ನು ಗ್ರಾಮ/ಹೋಬಳಿ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ.

---2

ಸದರಿ ಅನುದಾನದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳಲ್ಲಿ ಮೊದಲ ಕಂತಿನಲ್ಲಿ ರೂ.12.50 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಹಾಗೂ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಬಿಡುಗಡೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಆದೇಶಿಸಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆ	ಬ್ಯಾಂಕ್ ವಿವರ	ಅನುಷ್ಠಾನಾಧಿಕರಗಳ ಹೆಸರು	ವಿವರ	ಹೆಚ್ಚುವರಿ ಅನುದಾನ	ಬಿಡುಗಡೆ
1	ಮೈಸೂರು	HDFC Bank, Vijayanagara Branch, Mysore, Account No: 50100189877987 IFSC:- HDFC0003668	DC & PCO, ITDP, Mysore	ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ರಾಮೇನಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಭವನ ನಿರ್ಮಾಣ	50.00	12.50

ಸದರಿ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ:ಸಕಇ 203 ಎಸ್.ಟಿ.ಪಿ 2021 ದಿ:19.07.2021 ಮತ್ತು 12.10.2021 ರಂತೆ 2021-22ನೇ ಸಾಲಿನ ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ವೆಚ್ಚವಾಗದೇ ಇರುವ ಅನುದಾನ ಲೆಕ್ಕಶೀರ್ಷಿಕೆ 4225-02-190-0-02 (059)ರಡಿ ಗ್ರಾಮ/ಹೋಬಳ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ರೂ. 25.00 ಕೋಟಿಗಳ ಅನುದಾನವನ್ನು ನಿಗದಿಪಡಿಸಿ ಮೊದಲನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆಯಾದ ರೂ. 18.50 ಕೋಟಿಗಳನ್ನು ಗ್ರಾಮ/ಹೋಬಳ/ತಾಲ್ಲೂಕು/ ಜಿಲ್ಲಾ ಮಟ್ಟದ ವಾಲ್ಮೀಕಿ/ ಸಮುದಾಯ ಭವನಗಳ ನಿರ್ಮಾಣ ಮಾಡಲು ಖಜಾನೆಯಿಂದ ಸೆಳೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿರುವ ಸದರಿ ಅನುದಾನದಲ್ಲಿ ವೆಚ್ಚ ಭರಿಸತಕ್ಕದ್ದು.

14/12/21

ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಷರತ್ತುಗಳು:

1. ಸರ್ಕಾರದ ಆದೇಶ ಸಂ:ಸಕಇ 338 ಪಕವಿ 2018 ದಿ:25.03.2019 ರಲ್ಲಿನ ವಾಲ್ಮೀಕಿ ಭವನ/ ಸಮುದಾಯ ಭವನಗಳ ನಿರ್ಮಾಣದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನ ಪಾಲಿಸತಕ್ಕದ್ದು.
3. ಜಿಲ್ಲಾಧಿಕಾರಿಗಳಿಗೆ ನೀಡಿರುವ ಆರ್ಥಿಕ ಅಧಿಕಾರದ ಮಿತಿಯಲ್ಲಿ ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.
4. ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಲ್ಲದೆ ಬೇರೆ ಕಾರ್ಯಕ್ರಮಕ್ಕೆ ಉಪಯೋಗಿಸತಕ್ಕದ್ದಲ್ಲ ಹಾಗೂ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ.
5. ನಿಯಮಾನುಸಾರ ಜಿ.ಎಸ್.ಟಿ, ಟಿ.ಡಿ.ಎಸ್ ಒಳಗೊಂಡಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ವಿಧವಾದ ಶಾಸನಬದ್ಧ ಮೊತ್ತಗಳನ್ನು ಕಟಾವಣೆ ಮಾಡಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಿ ನಿಗಧಿತ ನಮೂನೆಯಲ್ಲಿ ರಿಟರ್ನ್ ಫೈಲ್ (Return File) ಕಡ್ಡಾಯವಾಗಿ ಮಾಡತಕ್ಕದ್ದು ಹಾಗೂ ಕಟಾಯಿಸಿದ ಬಗ್ಗೆ ಈ ಕಛೇರಿಗೆ ವರದಿ ಮಾಡತಕ್ಕದ್ದು.
6. ಕಾಮಗಾರಿಗಳ ಮೊತ್ತವನ್ನು ಪಾವತಿಸುವ ಮುನ್ನ ಶೇ.5% ರಷ್ಟು Fixed Security Deposit ಕಡ್ಡಾಯವಾಗಿ ಕಟಾಯಿಸತಕದ್ದು.
7. ಕಾಮಗಾರಿಯ ಮೊತ್ತದಲ್ಲಿ ಶೇ.2% ರಷ್ಟು ಆದಾಯ ತೆರಿಗೆಯನ್ನು ಕಟಾಯಿಸಿ ಸಂಬಂಧಿಸಿದ ಇಲಾಖೆಗೆ ಪಾವತಿಸಕ್ಕದ್ದು.

8. ಕಾಮಗಾರಿಯನ್ನು ಅನುಷ್ಠಾನಗೊಳಸಿದ ನಂತರ Geo tagged ಛಾಯಾ ಚಿತ್ರಗಳನ್ನು ತೆಗೆದು, ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ಜಿಲ್ಲಾಧಿಕಾರಿಗಳ ದೃಢೀಕರಣದೊಂದಿಗೆ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.
9. ಸದರಿ ಭವನಗಳ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯೊಂದಿಗೆ ದೃಢೀಕೃತಗೊಂಡ ಅಂದಾಜು ಪಟ್ಟಿ ಮತ್ತು ನಕ್ಷೆಯಂತೆಯೇ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ರವರು ದೃಢೀಕರಿಸಿಕೊಳ್ಳತಕ್ಕದ್ದು.
10. ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸತಕ್ಕದಲ್ಲ.
11. ಈ ಭವನಕ್ಕೆ ಅನುದಾನ ಬಿಡುಗಡೆಯಾದ 12 ತಿಂಗಳೊಳಗೆ ಭವನ ನಿರ್ಮಾಣ ಕಾರ್ಯ ಪೂರ್ಣಗೊಳಿಸಿ ತ್ರೈಮಾಸಿಕವಾಗಿ ಪ್ರಗತಿ ವರದಿ ಮತ್ತು ಹಣಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ ರವರು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು.
12. ಭವನದ ಕಾಮಗಾರಿಯನ್ನು ಪೂರ್ಣಗೊಳಿಸಿ, ಇಲಾಖಾ ವಶಕ್ಕೆ ನೀಡಿದ ದಿನಾಂಕದಿಂದಲೇ ನಿರ್ವಹಣೆಗೆ ನಿಗಧಿಪಡಿಸಿದ ಕಾಲಾವಧಿಯವರೆಗೆ ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಕಾಮಗಾರಿ ನಿರ್ವಹಿಸಿದ ಏಜೆನ್ಸಿಯು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ಥಿಗೊಳಿಸತಕ್ಕದ್ದು ಅಲ್ಲಿಯವರೆಗೆ Fixed Security Deposit ನ್ನು ಪಾವತಿಸತಕ್ಕದ್ದಲ್ಲ ಸದರಿ ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸತಕ್ಕದ್ದು.
13. ಭವನದ ಕಾಮಗಾರಿ ಪ್ರಾರಂಭಿಸುವ ಮೊದಲು ಮತ್ತು ಪೂರ್ಣಗೊಂಡ ನಂತರ ಕಟ್ಟಡದ ಫೋಟೋವನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
14. ಭವನದ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿ (3rd party Inspection) ತಪಾಸಣೆ ನಡೆಸಿ ನೀಡಿರುವ ವರದಿ ಬಗ್ಗೆ ಜಿಲ್ಲಾಧಿಕಾರಿಗಳಿಂದ ದೃಢೀಕರಿಸಿಕೊಂಡ ನಂತರ ನಿರ್ಮಾಣ ಏಜೆನ್ಸಿಗೆ ಹಣ ಬಿಡುಗಡೆ ಮಾಡತಕ್ಕದ್ದು.
ಒಟ್ಟು			2	200.00	57.50	142.50
13	ಹಾಸನ	ಬೇಲೂರು	1	200.00	100.00	100.00
		ಸಕಲೇಶಪುರ	1	75.00	18.75	56.25
		ಶ್ರವಣಬೆಳಗೊಳ	0	0.00	0.00	0.00
		ಅರಸೀಕೆರೆ	0	0.00	0.00	0.00
		ಅರಕಲಗೂಡು	2	100.00	30.00	70.00
	ಹಾಸನ	ಆಲೂರು	0	0.00	0.00	0.00
		ಹಾಸನ	5	130.00	53.00	77.00
		ಹೊಳೇನರ ಸೀಪುರ	0	0.00	0.00	0.00

ಒಟ್ಟು			9	505.00	201.75	303.25
14	ಚಿಕ್ಕಮಗಳೂರು	ಶೃಂಗೇರಿ	1	10.00	2.50	7.50
		ಮೂಡಿಗೆರೆ	3	60.00	32.00	28.00
		ಚಿಕ್ಕಮಗಳೂರು	4	135.00	54.50	80.50
		ಕಡೂರು	4	80.00	24.00	56.00
		ತರೀಕೆರೆ	0	0.00	0.00	0.00
ಒಟ್ಟು			12	285.00	113.00	172.00
15	ಕೊಡಗು	ವಿರಾಜಪೇಟೆ	0	0.00	0.00	0.00
		ಮಡಿಕೇರಿ	2	100.00	27.50	72.50
ಒಟ್ಟು			2	100.00	27.50	72.50
16	ದಕ್ಷಿಣಕನ್ನಡ	ಬೆಳ್ತಂಗಡಿ	4	80.00	24.00	56.00
		ಸುಳ್ಯ	0	0.00	0.00	0.00
		ಪುತ್ತೂರು	4	80.00	24.00	56.00
		ಬಂಟ್ವಾಳ	4	80.00	24.00	56.00
		ಮುಲ್ಕಿ/ಮೂಡಬಿದ್ರೆ	4	80.00	24.00	56.00
		ಮಂಗಳೂರು	0	0.00	0.00	0.00
		ಮಂಗಳೂರು ಉತ್ತರ	4	80.00	24.00	56.00
		ಮಂಗಳೂರು ದಕ್ಷಿಣ	4	80.00	24.00	56.00
ಒಟ್ಟು			24	480.00	144.00	336.00
17	ಉಡುಪಿ	ಬೈಂದೂರು	4	80.00	24.00	56.00
		ಉಡುಪಿ	0	0.00	0.00	0.00
		ಕಾಪು	4	80.00	28.00	52.00
	ಉಡುಪಿ	ಕುಂದಾಪುರ	1	20.00	10.00	10.00
		ಕಾರ್ಕಳ	6	120.00	36.00	84.00
ಒಟ್ಟು			15	300.00	98.00	202.00
18	ಬೆಳಗಾವಿ	ಬೆಳಗಾವಿ(ಗ್ರಾ)	0	0.00	0.00	0.00
		ಬೆಳಗಾವಿ (ದಕ್ಷಿಣ)	3	60.00	18.00	42.00
		ಬೆಳಗಾವಿ ಉತ್ತರ	4	80.00	24.00	56.00
		ಬೈಲಹೊಂಗಲ	0	0.00	0.00	0.00
		ಸವದತ್ತಿ-ಯಲ್ಲಮ್ಮಾ	0	0.00	0.00	0.00
		ನಿಪ್ಪಾಣಿ	0	0.00	0.00	0.00
		ಯಮಕನಮರಡಿ	0	0.00	0.00	0.00
		ಚಿಕ್ಕೋಡಿ-ಸದಲಗಾ	1	200.00	50.00	150.00
		ಅರಭಾವಿ	3	60.00	18.00	42.00
		ಅಥಣಿ	4	80.00	24.00	56.00
		ರಾಮದುರ್ಗ	3	60.00	18.00	42.00
	ಬೆಳಗಾವಿ	ರಾಯಬಾಗ	3	60.00	18.00	42.00
		ಹುಕ್ಕೇರಿ	0	0.00	0.00	0.00
		ಕುಡಚಿ	3	60.00	18.00	42.00
		ಕಾಗವಾಡ	4	80.00	24.00	56.00

		ಕಿತ್ತೂರು	4	80.00	24.00	56.00
		ಖಾನಾಪುರ	0	0.00	0.00	0.00
		ಗೋಕಾಕ	0	0.00	0.00	0.00
ಒಟ್ಟು			32	820.00	236.00	584.00
19	ವಿಜಯಪುರ	ಬಸವನಬಾಗೇವಾಡಿ	0	0.00	0.00	0.00
		ನಾಗಠಾಣ	0	0.00	0.00	0.00
		ವಿಜಯಪುರ	4	760.00	228.00	532.00
		ಬಬಲೇಶ್ವರ	1	20.00	10.00	10.00
		ಸಿಂಧಗಿ	0	0.00	0.00	0.00
		ಮುದ್ದೇಬಿಹಾಳ	3	60.00	18.00	42.00
		ಇಂಡಿ	0	0.00	0.00	0.00
		ದೇವರಹಿಪ್ಪರಗಿ	4	80.00	24.00	56.00
ಒಟ್ಟು			12	920.00	280.00	640.00
20	ಬಾಗಲಕೋಟೆ	ಬಾಗಲಕೋಟೆ	0	0.00	0.00	0.00
		ಬೀಳಗಿ	3	60.00	18.00	42.00
		ಬದಾಮಿ	1	25.00	7.50	17.50
		ಹುನಗುಂದ	3	60.00	46.00	14.00
		ಜಮಖಂಡಿ	1	25.00	6.25	18.75
		ಮುಧೋಳ	3	107.00	91.00	16.00
		ತೇರದಾಳ	2	125.00	36.25	88.75
ಒಟ್ಟು			13	402.00	205.00	197.00
21	ಧಾರವಾಡ	ನವಲಗುಂದ	0	0.00	0.00	0.00
		ಹುಬ್ಬಳ್ಳಿ	0	0.00	0.00	0.00
		ಹುಬ್ಬಳ್ಳಿ-ಧಾರವಾಡ	0	0.00	0.00	0.00
		ಹುಬ್ಬಳ್ಳಿ-ಧಾರವಾಡ (ಪ)	3	60.00	18.00	42.00
		ಹುಬ್ಬಳ್ಳಿ-ಧಾರವಾಡ (ಪೂ)	0	0.00	0.00	0.00
		ಕಲಘಟಗಿ	4	80.00	52.00	28.00
		ಕುಂದಗೋಳ	0	0.00	0.00	0.00
		ಧಾರವಾಡ	4	80.00	52.00	28.00
		ಧಾರವಾಡ (ಗ್ರಾ)	0	0.00	0.00	0.00
ಒಟ್ಟು			11	220.00	122.00	98.00
22	ಗದಗ	ನರಗುಂದ	3	60.00	18.00	42.00
		ಶಿರಹಟ್ಟಿ	0	0.00	0.00	0.00
		ರೋಣ	3	60.00	18.00	42.00
		ಗದಗ	0	0.00	0.00	0.00
ಒಟ್ಟು			6	120.00	36.00	84.00
23	ಹಾವೇರಿ	ಬ್ಯಾಡಗಿ	4	80.00	24.00	56.00
		ಹಿರೇಕೆರೂರು	0	0.00	0.00	0.00

		ಶಿಗ್ಗಾಂವ	4	135.00	40.50	94.50
		ರಾಣಿಬೆನ್ನೂರು	4	80.00	52.00	28.00
		ಹಾನಗಲ್ಲ	0	0.00	0.00	0.00
		ಹಾವೇರಿ	3	60.00	18.00	42.00
ಒಟ್ಟು			15	355.00	134.50	220.50
24	ಉತ್ತರಕನ್ನಡ	ಶಿರಸಿ-ಸಿದ್ಧಾಪುರ	0	0.00	0.00	0.00
		ಯಲ್ಲಾಪುರ-ಮುಂಡಗೋಡ	0	0.00	0.00	0.00
		ಹಳಿಯಾಳ-ಜೋಯಿಡಾ	0	0.00	0.00	0.00
		ಹೊನ್ನಾವರ-ಭಟ್ಕಳ	4	80.00	24.00	56.00
		ಕುಮಟಾ-ಹೊನ್ನಾವರ	3	60.00	18.00	42.00
		ಕಾರವಾರ ಅಂಕೋಲಾ	4	80.00	24.00	56.00
ಒಟ್ಟು			11	220.00	66.00	154.00
25	ಕಲಬುರಗಿ	ಸೇಡಂ	4	80.00	24.00	56.00
		ಚಿಂಚೋಳಿ	4	80.00	24.00	56.00
		ಚಿತ್ತಾಪುರ	0	0.00	0.00	0.00
		ಅಫಜಲಪುರ	1	20.00	10.00	10.00
		ಆಳಂದ	3	60.00	18.00	42.00
		ಜೇವರ್ಗಿ	0	0.00	0.00	0.00
	ಕಲಬುರಗಿ	ಕಲಬುರಗಿ ಉತ್ತರ	0	0.00	0.00	0.00
		ಕಲಬುರಗಿ ಗ್ರಾಮೀಣ	4	80.00	24.00	56.00
		ಕಲಬುರಗಿ ದಕ್ಷಿಣ	0	0.00	0.00	0.00
ಒಟ್ಟು			16	320.00	100.00	220.00
26	ರಾಯಚೂರು	ರಾಯಚೂರು (ಗ್ರಾ)	0	0.00	0.00	0.00
		ಲಿಂಗಸುಗೂರು	0	0.00	0.00	0.00
		ಸಿಂಧನೂರು	0	0.00	0.00	0.00
		ಮಸ್ಕಿ	0	0.00	0.00	0.00
		ರಾಯಚೂರು ನಗರ	0	0.00	0.00	0.00
		ಮಾನ್ವಿ	0	0.00	0.00	0.00
		ದೇವದುರ್ಗ	3	60.00	60.00	0.00
ಒಟ್ಟು			3	60.00	60.00	0.00
27	ಕೊಪ್ಪಳ	ಯಲುಬುರ್ಗಾ	4	80.00	24.00	56.00
		ಕನಕಗಿರಿ	4	80.00	24.00	56.00
		ಕುಷ್ಟಗಿ	0	0.00	0.00	0.00
		ಕೊಪ್ಪಳ	0	0.00	0.00	0.00
		ಗಂಗಾವತಿ	1	200.00	60.00	140.00
ಒಟ್ಟು			9	360.00	108.00	252.00
28	ಬಳ್ಳಾರಿ	ಸಂಡೂರು	0	0.00	0.00	0.00
		ವಿಜಯನಗರ (ಹೊಸಪೇಟೆ)	0	0.00	0.00	0.00

		ಬಳ್ಳಾರಿ	5	350.00	105.00	245.00
		ಬಳ್ಳಾರಿ (ಗ್ರಾ)	0	0.00	0.00	0.00
		ಸಿರುಗುಪ್ಪ	3	60.00	18.00	42.00
		ಹರಪನಹಳ್ಳಿ	0	0.00	0.00	0.00
	ಬಳ್ಳಾರಿ	ಹಡಗಲಿ	0	0.00	0.00	0.00
		ಹಗರಿಬೊಮ್ಮನಹಳ್ಳಿ	0	0.00	0.00	0.00
		ಹೊಸಪೇಟೆ	0	0.00	0.00	0.00
		ಕಂಪ್ಲಿ	0	0.00	0.00	0.00
		ಕೂಡ್ಲಿಗಿ	2	24.00	15.60	8.40
ಒಟ್ಟು			10	434.00	138.60	295.40
29	ಬೀದರ್	ಭಾಲ್ಕಿ	0	0.00	0.00	0.00
		ಬಸವಕಲ್ಯಾಣ	0	0.00	0.00	0.00
		ಬೀದರ್	0	0.00	0.00	0.00
		ಬೀದರ್ (ದಕ್ಷಿಣ)	0	0.00	0.00	0.00
		ಹುಮ್ನಾಬಾದ್	0	0.00	0.00	0.00
		ಔರಾದ್	0	0.00	0.00	0.00
ಒಟ್ಟು			0	0.00	0.00	0.00
30	ಯಾದಗಿರಿ	ಸುರಪೂರ	1	20.00	5.00	15.00
		ಶಹಾಪೂರ	0	0.00	0.00	0.00
		ಶೋರಾಪುರ	3	60.00	18.00	42.00
		ಯಾದಗಿರಿ	4	80.00	52.00	28.00
		ಗುರುಮಿಠಕಲ್	0	0.00	0.00	0.00
ಒಟ್ಟು			8	160.00	75.00	85.00
ಸಮಗ್ರ ಒಟ್ಟು			538	13891.03	5078.13	8812.90

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 646

ಸದಸ್ಯರ ಹೆಸರು : ಶ್ರೀ ಈಶ್ವರ್ ಬಿ. ಖಂಡ್ರೆ (ಭಾಲ್ಕಿ)

ಉತ್ತರಿಸುವ ದಿನಾಂಕ : 21-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೃಷಿಗೆ ಸಂಬಂಧಿಸಿರುವ ಯಾವ ಯಾವ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿರುತ್ತದೆ; (ಸಂಪೂರ್ಣ ವಿವರ ಒದಗಿಸುವುದು)	ಕೃಷಿ ಇಲಾಖೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಜಾರಿಗೊಳಿಸಿರುವ ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಜಲಾನಯನ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಾರಿಗೊಳಿಸಿರುವ ಯೋಜನೆಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಆ)	ಬೀದರ್ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾದ ಯೋಜನೆಗಳು ಯಾವ ಹಂತದಲ್ಲಿವೆ; ಘೋಷಣೆ ಮಾಡಿದಂತಹ ಯೋಜನೆಗಳು ಎಷ್ಟರ ಮಟ್ಟಿಗೆ ಅನುಷ್ಠಾನಗೊಳಿಸಲಾಗಿದೆ; (ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವತಿಯಿಂದ ನೀಡಲಾಗಿರುವ ಯೋಜನೆ/ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿರುತ್ತದೆ. 2022-23ನೇ ಸಾಲಿನಲ್ಲಿ ಘೋಷಣೆ ಮಾಡಿರುವ ರೈತಶಕ್ತಿ ಯೋಜನೆ ಹೊರತುಪಡಿಸಿ ಉಳಿದ ಎಲ್ಲಾ ಯೋಜನೆಗಳ ಅನುಷ್ಠಾನ ಪ್ರಗತಿಯಲ್ಲಿರುತ್ತದೆ. ರೈತಶಕ್ತಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರ್ಯಕ್ರಮ ಚಾಲನೆ ನೀರಿಕ್ಷಿಸಲಾಗಿರುತ್ತದೆ. ಚಾಲನೆ ನಂತರ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗೆ ಸಹಾಯಧನವನ್ನು ವರ್ಗಾವಣೆ ಮಾಡಲಾಗುವುದು. ಬೀದರ್ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾದ ಯೋಜನೆಗಳ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. 2022-23ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆಯನ್ನು ರಾಜ್ಯದ ಆಯ್ದ 57 ತಾಲ್ಲೂಕುಗಳಲ್ಲಿ ರೂ.642.26 ಕೋಟಿ ಅನುದಾನದಲ್ಲಿ ಒಟ್ಟಾರೆ 2.75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಘೋಷಿಸಲಾಗಿದೆ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಇದರಲ್ಲಿ ಬೀದರ್ ಜಿಲ್ಲೆಯ ಔರದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳಿಗೆ ಒಟ್ಟಾರೆ ರೂ.2225.81 ಲಕ್ಷಗಳ ಅನುದಾನದಲ್ಲಿ 10117 ಹೆಕ್ಟೇರ್ ಪ್ರದೇಶವನ್ನು ಅನುಷ್ಠಾನ ಮಾಡಲು ಮಂಜೂರಾಗಿರುತ್ತದೆ. ಇಲ್ಲಿಯವರೆಗೆ ರೂ.515.21 ಲಕ್ಷಗಳು ಬಿಡುಗಡೆಯಾಗಿದ್ದು, ಇದರಲ್ಲಿ ರೂ.412.75

		ಲಕ್ಷಗಳ ವೆಚ್ಚ ಭರಿಸಿ ಮಣ್ಣು ಮತ್ತು ನೀರು ಸಂರಕ್ಷಣೆ, ಖುಷ್ಕಿ ತೋಟಗಾರಿಕೆ, ಕೃಷಿ ಅರಣ್ಯ ಮತ್ತು ಇತರೆ ಜಲಾನಯನ ಚಟುವಟಿಕೆಗಳು ಸೇರಿದಂತೆ ಒಟ್ಟಾರೆ 1876 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲಾಗಿದ್ದು, ಯೋಜನೆ ಪ್ರಗತಿಯಲ್ಲಿದೆ.
ಇ)	ಬೀದರ್ ಜಿಲ್ಲೆಗೆ ಅವಶ್ಯಕತೆಗೂ ಮೀರಿ ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್, ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಎಷ್ಟು ವರ್ಷದಿಂದ ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಬೇಡಿಕೆ ಇದೆ; ಹಾಗೂ ಬೇಡಿಕೆ ಇದ್ದಷ್ಟು ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು? (ಸಂಪೂರ್ಣ ವಿವರ ನೀಡುವುದು)	ಬೀದರ್ ಜಿಲ್ಲೆಗೆ ಅವಶ್ಯಕತೆಗೂ ಮೀರಿ ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಪ್ರತಿ ವರ್ಷ ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಗೆ ಬೇಡಿಕೆ ಇರುತ್ತದೆ. ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಒದಗಿಸಲು ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ಪಡೆಯಲು ಕ್ರಮ ಕೈಗೊಳ್ಳಲಾಗಿರುತ್ತದೆ. ಅನುದಾನ ಪಡೆದಂತೆ ಸ್ಪ್ರಿಂಕ್ಲರ್ ಮತ್ತು ಟಾರ್ಪಾಲಿನ್ ಗಳನ್ನು ಒದಗಿಸಲಾಗಿರುತ್ತದೆ. ಕಳೆದ ಏಳು ವರ್ಷಗಳಿಂದ ಸೂಕ್ಷ್ಮ ನೀರಾವರಿ ಘಟಕಗಳ (ತುಂತುರು & ಹನಿ ನೀರಾವರಿ) ಅಳವಡಿಕೆಗಾಗಿ ಮತ್ತು ಟಾರ್ಪಾಲಿನ್ ವಿತರಣೆಗಾಗಿ ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನ, ವೆಚ್ಚ ಮತ್ತು ಫಲಾನುಭವಿಗಳ ಸಂಖ್ಯೆಯ ವಿವರಗಳನ್ನು ಅನುಕ್ರಮವಾಗಿ ಅನುಬಂಧ-4 ಮತ್ತು ಅನುಬಂಧ-5ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: AGRI-AML/271/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1(LAQ 646)
2022-23ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ವಿವರಗಳು

ರಾಜ್ಯ ವಲಯ ಯೋಜನೆಗಳು:

1.ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ (2202-80-107-0-06): ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಭೂ ರಹಿತ ಕೃಷಿ ಕಾರ್ಮಿಕರು/ ರೈತರ ಮಕ್ಕಳಿಗೆ ಉನ್ನತ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ರೈತ/ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದು.

2. ಕೃಷಿ ಆಯುಕ್ತಾಲಯ(2401-00-001-1-01):

ಅ) ವೇತನ ಮತ್ತು ಇತರೆ ವೆಚ್ಚಗಳು: ಅಧಿಕಾರಿ/ ಸಿಬ್ಬಂದಿಗಳ/ ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ, ಕಚೇರಿ ವೆಚ್ಚಗಳು, ಬಾಡಿಗೆ ಆಧಾರದ ಮೇಲೆ ವಾಹನಗಳ ಬಳಕೆ, ಗಣಕ ಯಂತ್ರಗಳು, ಬಿಡಿಭಾಗಗಳು, ಕೆ-ಕಿಸಾನ್ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು, ಇಲಾಖೆಯ ಅಧಿಕಾರಿಗಳಿಗೆ Close User Group (CUG) mobile connectivity ಒದಗಿಸುವುದು, ದೂರವಾಣಿ ವೆಚ್ಚ, ಕಟ್ಟಡಗಳ ದುರಸ್ತಿ ಹಾಗೂ ಅತ್ಯಗತ್ಯ ಕಾಮಗಾರಿಗಳ ನಿರ್ವಹಣೆ.

ಆ) ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ: ಅಧಿಕಾರಿ/ ಸಿಬ್ಬಂದಿಗಳ/ ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ, ಕಚೇರಿ ವೆಚ್ಚಗಳು.

ಇ) ರೈತ ಸಂಪರ್ಕ ಕೇಂದ್ರಗಳಿಗೆ ವಿದ್ಯಾರ್ಥಿಗಳ ನಿಯೋಜನೆ: ಕೃಷಿ, ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಕನಿಷ್ಠ ಪ್ರಾಯೋಗಿಕ ಕೌಶಲ್ಯ, ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜಿಸಲಾಗುವುದು. ಇವರಿಗೆ ವಿದ್ಯಾರ್ಥಿ ವೇತನವನ್ನು ನೀಡಲು ಅನುದಾನವನ್ನು ವಿಶ್ವವಿದ್ಯಾಲಯಗಳಿಗೆ ನೀಡಲಾಗುವುದು.

ಈ) ಕೃಷಿ ವಾರ್ತಾ ಘಟಕ: ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೃಷಿಗೆ ಸಂಬಂಧಿಸಿದ ವಿಸ್ತರಣಾ ಸಾಹಿತ್ಯಗಳು/ ಕೃಷಿ ಸಂಬಂಧಿತ ತಾಂತ್ರಿಕ ಪುಸ್ತಕ ಮುದ್ರಣ, ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಮೂಲಕ ನೇರ ಫೋನ್-ಇನ್ ಕಾರ್ಯಕ್ರಮಗಳು, ವಿವಿಧ ಸಮೂಹ ಮಾಧ್ಯಮಗಳ ಮೂಲಕ ಜಾಹೀರಾತು/ ಪ್ರಕಟಣೆ ಮತ್ತು ಇನ್ನಿತರೆ ಪ್ರಚಾರ ಕಾರ್ಯಕ್ರಮಗಳನ್ನು ಸದರಿ ಯೋಜನೆಯಡಿ ಕೈಗೊಳ್ಳಲಾಗುವುದು.

3. ಸೆಕಂಡರಿ ಕೃಷಿ ನಿರ್ದೇಶನಾಲಯ (2401-00-001-1-14):

ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಹೆಚ್ಚಿನ ಆದಾಯ ತರಲು ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಪೂರಕವಾಗಿ, ಕೃಷಿ ಉತ್ಪನ್ನಗಳಿಂದ ಉಪ ಉತ್ಪನ್ನಗಳ ತಯಾರಿಕೆ ಮತ್ತು

ಮಾರುಕಟ್ಟೆ ಸಂಪರ್ಕಕ್ಕೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಲು ಸುಸ್ಥಿರ ಹಾಗೂ ಕೇಂದ್ರೀಕೃತ ವ್ಯವಸ್ಥೆಗಾಗಿ ರಾಜ್ಯ ಸೆಕೆಂಡರಿ ಕೃಷಿ ನಿರ್ದೇಶನಾಲಯವನ್ನು ಅಧಿಸೂಚಿಸಲಾಗಿದ್ದು, ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಸಂಯೋಜಿಸಿ ಅನುಷ್ಠಾನಗೊಳಿಸಲಾಗುವುದು.

4. ಅನುಸೂಚಿತ ಜಾತಿಗಳ ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75): ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾದ ಅನುದಾನವನ್ನು 2022-23ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕಾಗಿ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ಹಾಗೂ ರಾಜ್ಯದ ನೀತಿಯನ್ವಯ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ರಾಜ್ಯದ ಪಾಲಿನ [illegible] ಅನುದಾನವನ್ನು ಭರಿಸಲು ವಿನಿಯೋಗಿಸಲಾಗುವುದು.

5. ರೈತರ ಪ್ರೋತ್ಸಾಹ ಮತ್ತು ಬೆಂಬಲ ಯೋಜನೆಗಳು(2401-00-102-0-28)

ಅ) ಸಮಿತಿ ಮತ್ತು ಸಲಹೆಗಳು:ಕೃಷಿ ಇಲಾಖೆಯು ಏರ್ಪಡಿಸುವ ಕಾರ್ಯಾಗಾರಗಳು, ಆಂದೋಲನಗಳು, ಸಮಿತಿಗಳ ಸಭೆಗಳು, ಇತ್ಯಾದಿಗಳ ಕಾರ್ಯ ನಿರ್ವಹಣೆಯು ಸುಲಲಿತವಾಗುವ ಸಲುವಾಗಿ ಅವುಗಳ ವೆಚ್ಚಗಳನ್ನು ಭರಿಸುವುದು ಹಾಗೂ ಸಭೆಗಳಿಗೆ ಕಾಫಿ/ಟೀ/ ಲಘು ಉಪಹಾರ ವೆಚ್ಚಗಳನ್ನು ಭರಿಸುವುದು.

ಆ) ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ: ರೈತರಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಮನೋಭಾವ ಉಂಟು ಮಾಡಲು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಬೆಳೆ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಲಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಅಮೂಲ್ಯ ಅನ್ವೇಷಣೆ ಹಾಗೂ ಸೃಜನಾತ್ಮಕ ಕಾರ್ಯಗಳನ್ನು ಕೈಗೊಂಡ ರೈತರನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ರಾಜ್ಯ ಮಟ್ಟದ ವಿಜೇತರನ್ನು ಸನ್ಮಾನಿಸುವ ಸಂಬಂಧ ತಗಲುವ ಎಲ್ಲಾ ವೆಚ್ಚಗಳನ್ನು ಭರಿಸಲಾಗುತ್ತದೆ (ಸಮಾರಂಭ ಯೋಜನೆ ಇತ್ಯಾದಿ,)

ಇ) ಬೆಳೆ ಸಾಲಕ್ಕೆ ಸಹಾಯಧನ: ರಾಜ್ಯದ ರೈತರು ಬೆಳೆ ಸಾಲ/ ಅಲ್ಪಾವಧಿ ಸಾಲ ಪಡೆದು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದರೆ ಅಂತಹ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿಯನ್ನು, ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಠ 1.00 ಲಕ್ಷ ಮಿತಿಯೊಳಗೆ ನೀಡಲಾಗುವುದು.

ಈ) ಕೃಷಿ ಬಂಡವಾಳ ಹೂಡಿಕೆ ನಿಧಿ: ಆಹಾರ ಸಂಸ್ಕರಣಾ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಆಹಾರ ಸಂಸ್ಕರಣಾ ತಾಂತ್ರಿಕತೆಗಳ ತರಬೇತಿ ಕಾರ್ಯಾಗಾರ, ವಿಚಾರ ಸಂಕಿರಣ, ವಾಣಿಜ್ಯ ಮಳಿಗೆಯಲ್ಲಿ ಭಾಗವಹಿಸುವುದು, ರೋಡ್ ಶೋ [illegible] ಕಾರ್ಯಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ಕೃಷಿ ವಾಣಿಜ್ಯ ನಿಗಮದ ಆಡಳಿತಾತ್ಮಕ ವೆಚ್ಚ ಭರಿಸಲಾಗುವುದು.

ಉ) ಮಿನಿ ಆಹಾರ ಪಾರ್ಕುಗಳ ಸ್ಥಾಪನೆ: [illegible] ಮೌಲ್ಯವರ್ಧನೆಯನ್ನು ಉತ್ತೇಜಿಸಲು ಫುಡ್ ಕರ್ನಾಟಕ ಲಿಮಿಟೆಡ್ ಮೂಲಕ ಮಿನಿ ಆಹಾರ ಪಾರ್ಕುಗಳನ್ನು ಸ್ಥಾಪಿಸಲು ಅನುದಾನವನ್ನು ಗ್ರ್ಯಾಂಟ್ ಇನ್ ಏಯ್ಡ್ ಮೂಲಕ ನೀಡಲಾಗುವುದು.

ಊ) ಕೃಷಿ ಬೆಲೆ ಆಯೋಗ:

ಕೃಷಿ ಬೆಲೆ ಆಯೋಗದ ಅಧ್ಯಕ್ಷರ ಮತ್ತು ಇತರೆ ಸಿಬ್ಬಂದಿಯವರ ವೇತನ, ಇಂಧನ ಮತ್ತಿತರೆ ನಿರ್ವಹಣಾ ವೆಚ್ಚಗಳು, ರಾಜ್ಯದ 5 ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಬೆಳೆ ಉತ್ಪಾದನೆ ಮತ್ತು ಮಾರುಕಟ್ಟೆ ಮಾಹಿತಿ ಅಧ್ಯಯನ, ನೈಸರ್ಗಿಕ ಸಂಪನ್ಮೂಲಗಳ ಬಳಕೆಗಾಗಿ ಕೃಷಿ ವಲಯವಾರು ಬೆಳೆ ಯೋಜನೆ ರೂಪಿಸುವ ನಿಟ್ಟಿನಲ್ಲಿ ಅಧ್ಯಯನ, ಎಣ್ಣೆಕಾಳು ಉತ್ಪಾದನೆಯಲ್ಲಿ ಸುಸ್ಥಿರತೆ ಸಾಧಿಸುವ ಬಗ್ಗೆ ಅಧ್ಯಯನ, ಕೃಷಿ ಉತ್ಪನ್ನಗಳ ರಫ್ತು ಮತ್ತು ಆಮದು ನೀತಿ ಅಧ್ಯಯನ, ಬೆಳೆ ಉತ್ಪಾದನೆ ಮತ್ತು ಮುನ್ಸೂಚನೆ ತಂತ್ರಾಂಶ ಅಭಿವೃದ್ಧಿ, ಕೃಷಿ ಉತ್ಪನ್ನಗಳ ಮಾರಾಟ ಮತ್ತು ಮಾರುಕಟ್ಟೆಗಳ ಬಗ್ಗೆ ಸಮಗ್ರ ಚಿತ್ರಣ ಸಿದ್ಧಪಡಿಸುವ ಸಲುವಾಗಿ ಅಧ್ಯಯನಗಳನ್ನು ಕೈಗೊಳ್ಳಲಾಗುವುದು.

6. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15):

ಅ)ವೇತನ ಹಾಗೂ ಪ್ರಯೋಗಶಾಲೆ ವೆಚ್ಚಗಳು: ವಿವಿಧ ಪ್ರಯೋಗಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ವೇತನ ಮತ್ತು ಇತರೆ ವೆಚ್ಚಗಳು, ಪರಿಕರಗಳ ಮಾದರಿಗಳ ವಿಶ್ಲೇಷಣೆಗೆ ತಗಲುವ ವೆಚ್ಚ ಹಾಗೂ ಇತರೆ ಖರ್ಚುಗಳ ಪಾವತಿ, ರಸಗೊಬ್ಬರ, ಪೀಡೆನಾಶಕಗಳು, ಜೈವಿಕ ಗೊಬ್ಬರಗಳು, ಜೈವಿಕ ಪೀಡೆನಾಶಕಗಳ ಗುಣನಿಯಂತ್ರಣಕ್ಕಾಗಿ ಅನುದಾನವನ್ನು ವಿನಿಯೋಗಿಸಲಾಗುವುದು.

ಆ) ಮಣ್ಣು ಆರೋಗ್ಯ ಅಭಿಯಾನ: ಮಣ್ಣು ಮಾದರಿಗಳ ವಿಶ್ಲೇಷಣೆಗಾಗಿ ಮಣ್ಣು ಆರೋಗ್ಯ ಚೀಟಿ ಯೋಜನೆಯ ಘಟಕಗಳ ಅನುಷ್ಠಾನ, ಹೊರಗುತ್ತಿಗೆ ಆಧಾರದಲ್ಲಿ ತಗೆದುಕೊಂಡಿರುವ ಸಿಬ್ಬಂದಿಗಳಿಗೆ ವೇತನ ಪಾವತಿಗಾಗಿ ಮತ್ತು GIS-GPS ಸೇವೆಗಳನ್ನು ಪಡೆಯಲು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಅನುದಾನ, ಕೇಂದ್ರಗಳ ವಿದ್ಯುತ್, ನೀರು ಬಾಡಿಗೆ ವೆಚ್ಚ, ತೆರಿಗೆ ಪರಿಕರಗಳ ಖರೀದಿ, ಸ್ಥಾನಿಕ ಮಣ್ಣು ಆರೋಗ್ಯ ಕೇಂದ್ರಗಳ ಕಾಮಗಾರಿ, ರಿಪೇರಿ ಮತ್ತು ನವೀಕರಣಕ್ಕಾಗಿ ಉಪಯೋಗಿಸಿಕೊಳ್ಳಲಾಗುವುದು.

ಇ) ಬೀಜಗಳ ಪೂರೈಕೆ: ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, **ಕಡಲೆ**, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುವುದು.

ಈ) ಬೀಜ ಹಾನಿ ನಿಧಿ ಮತ್ತು KSSC/ KSSOCA/ ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿಗೆ ಸಹಾಯಾನುದಾನ: ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ವಿತರಣೆಯಾಗಿ ಉಳಿದ ಬಿತ್ತನೆ ಬೀಜಗಳನ್ನು ಬೀಜೇತರವಾಗಿ ವಿಲೇವಾರಿ ಮಾಡಿ ವ್ಯತ್ಯಾಸದ ಹಣದ ಪಾವತಿ ಹಾಗೂ KSSC/ KSSOCA/ ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿಗಳಿಗೆ ಕಾರ್ಯ ಚಟುವಟಿಕೆಗಳಿಗೆ ಸಹಾಯಾನುದಾನ ನೀಡಲಾಗುವುದು.

ಉ) **ಸಸ್ಯ ಸಂರಕ್ಷಣೆ:** ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಗುಣ ನಿಯಂತ್ರಣ, ಬೀಜೋಪಚಾರ ಆಂದೋಲನ ಹಾಗೂ ಸಂರಕ್ಷಿತ [illegible] ಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು.

ಊ) **ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ:** ರಸಗೊಬ್ಬರಗಳ ಕಾಪು ದಾಸ್ತಾನಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಮುಂಗಡ ಹಣ ನೀಡಲು ಮತ್ತು ರಸಗೊಬ್ಬರ ಖರೀದಿಯ ಸಾಲಕ್ಕೆ ಬಡ್ಡಿ, ಸಂಗ್ರಹಣಾ ವೆಚ್ಚ ಹಾಗೂ ರಸಗೊಬ್ಬರ ಸಾಗಾಣಿಕಾ ವೆಚ್ಚವನ್ನು ಭರಿಸಲಾಗುವುದು

ಋ) **ಮಣ್ಣಿನ ಸತ್ವ ಹೆಚ್ಚಿಸುವಿಕೆ:** ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ರಿಯಾಯಿತಿ ದರದಲ್ಲಿ ಸಾವಯವ ಗೊಬ್ಬರಗಳು ಇತ್ಯಾದಿಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುವುದು.

ಎ) **ಸಾವಯವ ಇಂಗಾಲ ಅಭಿಯಾನ :** ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು ಹಾಗೂ ಹಸಿರೆಲೆ ಗೊಬ್ಬರ ಬೀಜ ಮತ್ತು ಸಾವಯವ ಗೊಬ್ಬರಗಳ ಬಳಕೆಯಿಂದ ಸಾವಯವ ಇಂಗಾಲ ಹೆಚ್ಚಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುವುದು.

ಏ) **ಕೃಷಿ ಯಾಂತ್ರೀಕರಣ:** ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆಯಿಂದ ಕೊಯ್ಲಿನವರೆಗೆ ಅವಶ್ಯವಿರುವ ವಿವಿಧ ಕೃಷಿ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ಒಂದು ಲಕ್ಷ ರೂ.ವರೆಗೆ ನೀಡಲಾಗುತ್ತದೆ. ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ.

ಐ) **ಕೃಷಿ ಯಂತ್ರಧಾರೆ:** ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ತೆರೆಯಲಾಗುತ್ತದೆ.

ಒ) ಕೃಷಿ ಸಂಸ್ಕರಣೆ: ಕೃಷಿ [illegible] ಘಟಕಗಳು [illegible] ಮತ್ತು ಟಾರ್ಪಾಲಿನ್ ಗಳನ್ನು ಖರೀದಿಸಲು ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುವುದು.

ಓ) ತೊಗರಿ ಬೇಳೆಯನ್ನು 'ಭೀಮಾ ಪಲ್ಸ್' ನಡಿ ಮಾರಾಟ ಮಾಡುವ ಯೋಜನೆ: [illegible] ಯಾದಗಿರಿ ಜಿಲ್ಲೆಗಳಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚ್ಯಂಕ [illegible] ತೊಗರಿ [illegible] 'ಭೀಮಾ ಪಲ್ಸ್' [illegible] ಮಾರಾಟ ಮಾಡಲು ಕರ್ನಾಟಕ ರಾಜ್ಯ [illegible] ಮಂಡಳಿ ನಿಯಮಿತಕ್ಕೆ ಸಹಾಯಾನುದಾನವನ್ನಾಗಿ ನೀಡಲಾಗುವುದು.

ಔ) ರೈತ ಶಕ್ತಿ: 2022-23 ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250.00 [illegible] ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ [illegible] ಸಹಾಯಧನವನ್ನು ನೀಡಲಾಗುವುದು.

7. ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮ (2401-00-104-0-12):

ಅ) ರೈತ ಸಿರಿ: ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, [illegible] ಊದಲು, ಟೆಫ್, ಚಿಯಾ, ಕ್ವಿನೋವಾ ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹ ಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು ಹಾಗೂ ಸಾವಯವ ಮತ್ತು ಸಿರಿಧಾನ್ಯಗಳ ಉತ್ತೇಜನ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

ಆ) ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ: 2022-23ರ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಘೋಷಣೆಯಂತೆ ನೈಸರ್ಗಿಕ ಕೃಷಿ ಕೈಗೊಳ್ಳಲು ರೈತರನ್ನು ಪ್ರೇರೆಪಿಸುವ ಉದ್ದೇಶದಿಂದ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮೂಲಕ ತಲಾ 1000 ಎಕರೆ ಪ್ರದೇಶದಲ್ಲಿ ಅಧ್ಯಯನಗಳನ್ನು ಕೈಗೊಳ್ಳಲು ಅನುದಾನವನ್ನು ಕಲ್ಪಿಸಲಾಗಿದೆ.

ಇ) ಸಾವಯವ ಕೃಷಿ ಪ್ರಚಾರ ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು: ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಸಮಿತಿಯ ಆಡಳಿತಾತ್ಮಕ ಮತ್ತು ಸಾವಯವ ಸಿರಿ ಯೋಜನೆ ಮತ್ತು ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳಿಗೆ ಅನುದಾನ ವಿನಿಯೋಗಿಸಲಾಗುವುದು.

8.ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21):

ಅ) ಕೃಷಿ ಅಭಿಯಾನ, ಮೇಳಗಳು ಮತ್ತು ವಸ್ತು ಪ್ರದರ್ಶನ: ಕೃಷಿ ಅಭಿಯಾನದಡಿ ಹೋಬಳಿ ಮಟ್ಟದಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿಯನ್ನು ಏಕ ಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಪ್ರಚಾರ, ಕೃಷಿ ಜಾತ್ರೆ, ವಸ್ತು ಪ್ರದರ್ಶನಗಳ ಆಯೋಜನೆ ಮಾಡಲಾಗುವುದು.

ಆ) ತರಬೇತಿ ಕಾರ್ಯಕ್ರಮಗಳು: ಈ ಯೋಜನೆಯಡಿ ಕೃಷಿ ವಿಸ್ತರಣಾ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ವಿವಿಧ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗುವುದು.

ಇ) ಕೃಷಿಕ ಸಮಾಜ: ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ವತಿಯಿಂದ ಕೈಗೊಳ್ಳುವ ತರಬೇತಿ, ವಿಚಾರ ಸಂಕಿರಣ, ರೈತರ ಅಧ್ಯಯನ ಪ್ರವಾಸ, [illegible] ಇತರೆ ವಿಚಾರ ಚಟುವಟಿಕೆಗಳಿಗೆ ಅನುದಾನ ಬಳಕೆ ಮಾಡಲಾಗುವುದು.

9. ಹೊಸ ಬೆಳೆ ವಿಮಾ ಯೋಜನೆ(2401-00-110-0-07): ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ

ನಿಯಮಾವಳಿಯನ್ವಯ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು ಹಾಗೂ ಬೆಳೆ ಸಮೀಕ್ಷೆ, ಕಾರ್ಯಕ್ಕೆ ಮತ್ತು ಬೆಳೆ ವಿಮೆ ಯೋಜನೆಗಳಿಗೆ ಸಂಬಂಧಿಸಿದ ಇತರೆ ವೆಚ್ಚ ಭರಿಸಲಾಗುವುದು.

10. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (2401-00-800-1-05): ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೆ ಒಮ್ಮೆ ನೀಡಲಾಗುವುದು. ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ.4000/ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನು ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆಯಡಿ ನೀಡಲಾಗುತ್ತದೆ.

11. ಖಾಲಿ ಹುದ್ದೆಗಳಿಗೆ ಅನುದಾನ (2401-00-800-1-70): ಖಾಲಿ ಹುದ್ದೆಗಳು ಭರ್ತಿಯಾದಲ್ಲಿ ವೇತನ ನೀಡಲು ಅನುದಾನ ನಿಗದಿಪಡಿಸಲಾಗಿರುತ್ತದೆ.

12.ಕೃಷಿ ಮೂಲಭೂತ ಸೌಕರ್ಯ (4401-00-001-1-01)

ಅ. ಬಂಡವಾಳ ವೆಚ್ಚಗಳು(ಪ್ರಮುಖ ಕಾಮಗಾರಿಗಳು): ಲಭ್ಯವಿರುವ ನಿವೇಶನಗಳಲ್ಲಿ ಜಂಟಿ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳ ನೂತನ ಕಟ್ಟಡಗಳನ್ನು ನಿರ್ಮಿಸುವುದು, ಸ್ವಂತ ಕಟ್ಟಡ ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಆವರಣದಲ್ಲಿ ಗೋದಾಮು ನಿರ್ಮಾಣ ಹಾಗೂ ಉಚಿತ ನಿವೇಶನಗಳು ಲಭ್ಯವಿಲ್ಲದ ಕಡೆ ಇಲಾಖೆಯ ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ನಿವೇಶನಗಳ ಖರೀದಿಗೆ ಅನುದಾನವನ್ನು ಬಳಸಲಾಗುವುದು.

ಆ. ರೈತ ಸಂಪರ್ಕ ಕೇಂದ್ರಗಳು: ಆರ್.ಐ.ಡಿ.ಎಫ್ ಯೋಜನೆಯಡಿ ಅನುಮೋದನೆಯಾಗಿರುವ ರೈತ ಸಂಪರ್ಕ ಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕೆ ಅನುದಾನವನ್ನು ಬಳಸಲಾಗುವುದು.

ಜಿಲ್ಲಾ ಪಂಚಾಯತ್ ಯೋಜನೆಗಳು:

13.ಸಿಬ್ಬಂದಿ (2435-00-101-0-27): ಜಿಲ್ಲಾ ಪಂಚಾಯತ್ ಅಡಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ವೇತನ ಮತ್ತು ವೇತನೇತರ ವೆಚ್ಚಗಳನ್ನು ಭರಿಸಲಾಗುವುದು.

14. ಕೃಷಿ ಕಚೇರಿ ಕಟ್ಟಡಗಳು (2435-00-101-0-33): ಜಿಲ್ಲೆಗಳಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡಗಳ ನಿರ್ಮಾಣ, ರೈತ ಸಂಪರ್ಕ ಕೇಂದ್ರ ಕಟ್ಟಡಗಳ ಆವರಣದಲ್ಲಿ ಗೋದಾಮುಗಳ ನಿರ್ಮಾಣ ಹಾಗೂ ಇಲಾಖಾ ಕಟ್ಟಡಗಳು, ವಸತಿ ಗೃಹಗಳ ನವೀಕರಣ /ದುರಸ್ತಿ ಕಾಮಗಾರಿಗಳಿಗೆ ಬಳಸಲಾಗುವುದು.

15. ಕೃಷಿ ತರಬೇತಿ ಶಾಲೆಗಳು (2435-00-101-0-37): ಕೃಷಿ ತರಬೇತಿ ಕೇಂದ್ರಗಳಲ್ಲಿ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವೇತನ ಮತ್ತು ವೇತನೇತರ ಅಂಶಗಳಿಗೆ ಅನುದಾನವನ್ನು ನೀಡಲಾಗುತ್ತದೆ

ತಾಲ್ಲೂಕು ಪಂಚಾಯತ್ ಯೋಜನೆಗಳು:

16. ತಾಲ್ಲೂಕು ಸಿಬ್ಬಂದಿ (2435-00-101-0-61): ತಾಲ್ಲೂಕು ಪಂಚಾಯತ್ ಅಡಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಇಲಾಖೆಯ ಅಧಿಕಾರಿ/ಸಿಬ್ಬಂದಿ ವೇತನ ಮತ್ತು ವೇತನೇತರ ಅಂಶಗಳಿಗೆ ಅನುದಾನವನ್ನು ನೀಡಲಾಗುತ್ತದೆ

ಕೇಂದ್ರ ಪುರಸ್ಕೃತ ಯೋಜನೆಗಳು

17. ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ(2401-00-102-0-08): ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳಿಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಲ್ಲಿ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತದೆ.

18. ಬೀಜ ಮತ್ತು ನೆಡುವಿಕೆ ವಸ್ತುಗಳ ಯೋಜನೆ(SMSP)(2401-00-103-0-22): ಈ ಯೋಜನೆಯಡಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ರಾಜ್ಯ ಬೀಜೋತ್ಪಾದನಾ ಕೇಂದ್ರಗಳ ಬಲವರ್ಧನೆ, ಬೀಜ ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ, ಬೀಜ ಪ್ರಮಾಣನಾ ಸಂಸ್ಥೆಗಳಿಗೆ ಬೆಂಬಲ, ಬೀಜೋಪಚಾರ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ಯೋಜನೆಯನ್ನು ಸರ್ಕಾರಿ ಸ್ವಾಮ್ಯ ಸಂಸ್ಥೆಗಳು/ ರಾಜ್ಯ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯಗಳಿಂದ ಅನುಷ್ಠಾನಗೊಳಿಸಲಾಗುವುದು.

19. ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ(2401-00-108-1-15): ನೀರನ್ನು ಸಮರ್ಥ ಮತ್ತು ಸಮರ್ಪಕ ಬಳಕೆಗೆ ಪ್ರೋತ್ಸಾಹಿಸಲು ಹಾಗೂ ಮಿತ ಬಳಕೆಯಿಂದ ಅಧಿಕ ಇಳುವರಿ ಪಡೆಯಲು ಹಾಗೂ ಸೂಕ್ಷ್ಮ (ಹನಿ/ತುಂತುರು) ನೀರಾವರಿ ಪದ್ಧತಿಯ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ 2.00 ಹೆಕ್ಟೇರ್ ಪ್ರದೇಶದವರೆಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಅವರು ಹೊಂದಿರುವ ಪ್ರದೇಶಕ್ಕೆ ಶೇ.90 ರಷ್ಟು ಹಾಗೂ 2.0ಹೆಕ್ಟೇರಿಗಿಂತ ಮೇಲ್ಪಟ್ಟು 5.0ಹೆಕ್ಟೇರ್ ಪ್ರದೇಶದವರೆಗೆ ಶೇ.45ರ ಸಹಾಯಧನವನ್ನು ನೀಡಲಾಗುತ್ತಿದೆ.

20. ಕೃಷಿ ವಿಸ್ತರಣೆ ಉಪ ಅಭಿಯಾನ (2401-00-109-0-34): ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ATMA)ಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯನ್ವಯ ಅಧಿಕಾರಿ/ ರೈತರ ತರಬೇತಿ, ಪರಿಚಯ ಪ್ರವಾಸ, ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ.

21. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)-2401-00-113-0-02: ಈ ಯೋಜನೆಯ [illegible] ಕೃಷಿ ಯಂತ್ರೋಪಕರಣಗಳ ಬಳಕೆಯಿಂದ [illegible] ಯಾಂತ್ರೀಕೃತ ಶಕ್ತಿಯನ್ನು ಪ್ರತಿ ಹೆಕ್ಟೇರಿಗೆ 2.0ಕಿಲೋ ವ್ಯಾಟ್ ಗಳಷ್ಟು ಹೆಚ್ಚಿಸುವುದಾಗಿದೆ. ಇದರಡಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ರೈತರಿಗೆ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ ನಾಟಿ ಮಾಡುವ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಕೊಯ್ಲೋ

ಕೇನ್ ಹಾರ್ವೆಸ್ಟರ್, ಕಂಬೈನ್ಡ್ ಹಾರ್ವೆಸ್ಟರ್, ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾದ ಇತರ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ರೈತರಿಗೆ ಹಣಕಾಸಿನ ನೆರವು ಮತ್ತು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ, ಗ್ರಾಮ ಮಟ್ಟದ ಯಂತ್ರೋಪಕರಣಗಳ ಬ್ಯಾಂಕ್/ ಹೈಟೆಕ್ ಉಪಕರಣಗಳ ಹಬ್ ಗಾಗಿ ಹಣಕಾಸಿನ ನೆರವು ನೀಡಲಾಗುವುದು.

22. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57): ಈ ಯೋಜನೆಯಡಿ ಕೃಷಿ ಮತ್ತು ಸಂಬಂಧಿಸಿದ ವಲಯಗಳಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆಗಾಗಿ ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಜಿಲ್ಲಾ ಕೃಷಿ ಯೋಜನೆಗಳಲ್ಲಿ ಸ್ಥಳೀಯ ಆದ್ಯತೆಗಳು / ಅವಶ್ಯಕತೆಗಳು/ ಬೆಳೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲು, ಹೊಸ ತಂತ್ರಜ್ಞತೆಗಳನ್ನು ಅಳವಡಿಸಿ, ಮುಖ್ಯ ಬೆಳೆಗಳ ಉತ್ಪಾದಕತೆಯಲ್ಲಿ ಇರುವ ವ್ಯತ್ಯಯದ ಪ್ರಮಾಣವನ್ನು ಕಡಿತಗೊಳಿಸಲು, ಕೃಷಿ ಮತ್ತು ಸಂಬಂಧಿತ ವಲಯಗಳ ಎಲ್ಲಾ ಅವಶ್ಯಕತೆಗಳನ್ನು ತೆಗೆದುಕೊಂಡು ಉತ್ಪಾದನೆ/ ಉತ್ಪಾದಕತೆಯ ವಿವಿಧ ಘಟಕಗಳಲ್ಲಿ ಬದಲಾವಣೆ ತರಲು ಮತ್ತು ರೈತರಿಗೆ ಹೆಚ್ಚಿನ ಲಾಭಾಂಶ ದೊರಕಿಸಿಕೊಡಲು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಮಂಜೂರಾತಿಯ ಅನುಮೋದನೆಯಂತೆ ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆ/ ಸಂಸ್ಥೆಗಳಿಗೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುದಾನವನ್ನು ನೀಡಲಾಗುವುದು.

23. ಮಣ್ಣಿನ ಫಲವತ್ತತೆಯ ಯೋಜನೆ (2402-00-101-0-03): ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಗರಿಷ್ಟ ರೂ.2500/-(ಒಂದು ಹೇಕ್ಟೇರಿಗೆ) ಸಹಾಯಧನ ನೀಡಲಾಗುತ್ತದೆ. ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮೊದಲು ಮಾದರಿ ಗ್ರಾಮಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ, ಗ್ರಾಮ ಮಟ್ಟದ ಮಣ್ಣು ಪರೀಕ್ಷಾ ಘಟಕಗಳನ್ನು ಸ್ಥಾಪಿಸಲು ಶೇ.75ರ ಸಹಾಯಧನ (ರೂ.3.75ಲಕ್ಷ) ನೀಡಲಾಗುತ್ತದೆ.

24. ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (2408-01-103-0-01): ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ದಿಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಸಂಸ್ಥೆಯಾಗಿರುತ್ತದೆ.

ಕೃಷಿ ನಿರ್ದೇಶಕರು

ಜಲಾನಯನ ಅಭಿವೃದ್ಧಿ
ಅನುಬಂಧ-2

1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0 **Pradhan Mantri Krishi Sinchayi Yojana- Watershed Development Component-2.0 (PMKSY-WDC 2.0)**

ಈ ಯೋಜನೆಯು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು 2021-22ನೇ ಸಾಲಿನಿಂದ ರಾಜ್ಯದ 30 ಜಿಲ್ಲೆಗಳ ಆಯ್ದ 57 ತಾಲ್ಲೂಕುಗಳ 2.75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಮೋದನೆ ನೀಡಿರುತ್ತದೆ. ಈ ಯೋಜನೆಯನ್ನು ಸಹ ದಿಬ್ಬದಿಂದ ಕಣಿವೆ ಮಾದರಿಯಲ್ಲಿ ಅನುಷ್ಠಾನ ಮಾಡಲು ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕಾರ್ಯಕ್ರಮದ ಅನುಷ್ಠಾನವನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ಸಮರ್ಥ ನೀರು ಕೊಯ್ಲು, ಮಣ್ಣಿನ ತೇವಾಂಶ ಸಂರಕ್ಷಣೆ, ಪರ್ಯಾಯ ಬೆಳೆ ವ್ಯವಸ್ಥೆಗಳು, ಕೃಷಿ ಅರಣ್ಯ, ಖುಷ್ಕಿ ತೋಟಗಾರಿಕೆ, ಪಶುಸಂಗೋಪನೆಯ ಮೂಲಕ ಹವಾಮಾನ/ವೈಪರೀತ್ಯ ಮತ್ತು ಬರಗಾಲದ ಅಪಾಯಗಳನ್ನು ಎದುರಿಸುವುದು ಮತ್ತು ರೈತರ ಆದಾಯವನ್ನು ಭದ್ರಪಡಿಸುವುದು; ಯೋಜನಾ ಪ್ರದೇಶಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಥನೀಯ ಬಳಕೆಯ ಮೂಲಕ ಬೆಳೆಗಳು, ಜಾನುವಾರು, ಮೀನುಗಾರಿಕೆ, ಹಾಗೂ ಉತ್ಪಾದನಾ ವ್ಯವಸ್ಥೆಗಳ ಮೂಲಕ ಉತ್ಪಾದಕತೆಯನ್ನು ಸುಧಾರಿಸುವುದು; ಆಸ್ತಿ ರಹಿತ ರೈತರನ್ನು ಗುರುತಿಸುವುದು ಮತ್ತು ಪರ್ಯಾಯ ಜೀವನೋಪಾಯದ ಅವಕಾಶಗಳನ್ನು ಉತ್ತೇಜಿಸುವುದು; ಸುಲಭವಾದ ಕೈಗೆಟುಕುವ ತಂತ್ರಜ್ಞಾನಗಳ ಉತ್ತೇಜನ ಮಾಡುವುದು; ಆದಾಯವನ್ನು ಉತ್ಪಾದಿಸುವ ಅವಕಾಶಗಳಿಗೆ ಹೆಚ್ಚಿನ ಉತ್ತೇಜನ ನೀಡುವುದು ಹಾಗೂ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದು/ಬಲವರ್ಧಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

2. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ - ಪರ್ ಡ್ರಾಪ್ ಮೋರ್ ಕ್ರಾಪ್-ಇತರೆ ಉಪಚಾರಗಳು (Pradhan Mantri Krishi Sinchayi Yojana- PDMC-OI)**

ಈ ಯೋಜನೆಯಡಿ ವೈಯಕ್ತಿಕ ನೀರಿನ ಮೂಲಗಳ/ನೀರು ಸಂಗ್ರಹಣಾ ವಿನ್ಯಾಸಗಳ ರಚನೆ, ಸಣ್ಣ ನೀರು ಸಂಗ್ರಹಣಾ ವಿನ್ಯಾಸಗಳ ಮರುಸ್ಥಾಪನೆ/ನವೀಕರಣ, ಅಂತರ್ಜಲ ಶೋಷಿತವಲ್ಲದ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ನಿರ್ಮಾಣ, ಪೂರ್ವ ಎರಕಹೊಯ್ದ ನೀರು ವಿತರಣಾ ವ್ಯವಸ್ಥೆ, ನೀರು ಎತ್ತುವ ಸಾಧನಗಳನ್ನು ಒದಗಿಸುವುದರ ಮೂಲಕ ಸೂಕ್ಷ್ಮ ನೀರಾವರಿ ಘಟಕಗಳೊಂದಿಗೆ ಜೋಡಿಸುವುದು.

3. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲವನ್ನು ತಡೆಯುವಿಕೆ ಯೋಜನೆ **(Watershed Development to Prevent Drought):**

ರಾಜ್ಯದಲ್ಲಿ ಜಲಾನಯನ ಉಪಚಾರಕ್ಕೆ ಬಾಕಿ ಲಭ್ಯವಿರುವ ಮಳೆಯಾಶ್ರಿತ ಪ್ರದೇಶದಲ್ಲಿ 2019-20ನೇ ಸಾಲಿನಿಂದ 2023-24ನೇ ಸಾಲಿನವರೆಗೆ, ಆಯ್ದ 100 ಬರಪೀಡಿತ ಮತ್ತು ಅತೀ ಹೆಚ್ಚು ಅಂತರ್ಜಲ ಶೋಷಿತ ತಾಲ್ಲೂಕುಗಳಲ್ಲಿ, ಪ್ರತಿ ತಾಲ್ಲೂಕಿನಲ್ಲಿ 3,000 ರಿಂದ 5,000 ಹೆಕ್ಟೇರ್ ಪ್ರದೇಶವನ್ನು ಭೂ ಸಂಪನ್ಮೂಲ ಹಾಗೂ ಜಲಸಂಪನ್ಮೂಲ ಸಮೀಕ್ಷೆಯ ಮಾಹಿತಿಗಳನ್ನಾಧರಿಸಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಜಲಾನಯನ ಉಪಚಾರದ ವಿಧಾನದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಾರ್ಯಕ್ರಮದೊಡನೆ ಹಾಗೂ ಇತರೆ ಇಲಾಖೆಗಳ ಯೋಜನೆಗಳೊಂದಿಗೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

4. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ - ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ (RKVY-RAFTAAR ಮೂಲಕ) ಯೋಜನೆ :

ಈ ಯೋಜನೆಯನ್ನು ವಿಶೇಷವಾಗಿ ರಾಜ್ಯದ ಮಳೆಯಾಶ್ರಿತ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.

ಈ ಕಾರ್ಯಕ್ರಮದಡಿ ರೈತರಿಗೆ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಪ್ರೋತ್ಸಾಹಿಸುವುದು, ಅದರಲ್ಲೂ ಬಹು-ಬೆಳೆಪದ್ಧತಿ, ಮಿಶ್ರ-ಬೆಳೆ, ಅಂತರ-ಬೆಳೆ, ಬೆಳೆ-ಪರಿವರ್ತನೆ, ತೋಟಗಾರಿಕೆ, ಕೃಷಿ ಅರಣ್ಯ, ಪಶುಸಂಗೋಪನೆ ಘಟಕಗಳನ್ನೊಳಗೊಂಡ ರೈತರ ಆದಾಯವನ್ನು ಹೆಚ್ಚಿಸುವುದಲ್ಲದೆ,

ಫಲಾನುಭವಿಗಳಿಗೆ ಮೌಲ್ಯವರ್ಧನೆ ಹಾಗೂ ಸಂಪನ್ಮೂಲ ಸಂರಕ್ಷಣೆಯಡಿ ವಿವಿಧ ಚಟುವಟಿಕೆಗಳಾದ ಜೇನು ಕೃಷಿ, ಸೈಲೇಜ್ ಘಟಕ, ಎರೆಹುಳು ತಯಾರಿಕಾ ಘಟಕಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

5. ವಿಶ್ವಬ್ಯಾಂಕ್ ಅನುದಾನಿತ ಹೊಸ REWARD ಯೋಜನೆ:

ವಿಶ್ವಬ್ಯಾಂಕ್ ನೆರವಿನ ಸುಜಲ-III (ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II) ಯೋಜನೆಯನ್ನು 2013-14 ದ 2019-20 ನೇ ಸಾಲಿನವರೆಗೆ ಅನುಷ್ಠಾನಗೊಳಿಸಿದ್ದು, ರಾಜ್ಯದ 12 ಜಿಲ್ಲೆಗಳ 2534 ಕಿರುಜಲಾನಯನಗಳಲ್ಲಿ 14.07 ಲಕ್ಷ ಹೆ. ಮಳೆಯಾಶ್ರಿತ ಪ್ರದೇಶದಲ್ಲಿ ವಿವಿಧ ವೈಜ್ಞಾನಿಕ ಸಂಸ್ಥೆಗಳ ಮೂಲಕ ಯೋಜನಾ ಪ್ರದೇಶದ ಜಲಾನಯನಗಳಲ್ಲಿ ಭೂ-ಸಂಪನ್ಮೂಲ ಸಮೀಕ್ಷೆ (Land Resource Inventory-LRI) ಕೈಗೊಂಡು ಮಣ್ಣಿನ ಭೌತಿಕ ಹಾಗೂ ರಸಾಯನಿಕ ಗುಣಧರ್ಮಗಳ ದತ್ತಾಂಶ ಸಂಗ್ರಹಿಸಲಾಗಿರುತ್ತದೆ. ಈ ತಾಂತ್ರಿಕ ಮಾಹಿತಿ ಬಳಸಿಕೊಂಡು ಪೈಲಟ್ ಮಾದರಿಯಲ್ಲಿ 11 ಮಾದರಿ ಜಲಾನಯನಗಳ ಯೋಜನಾ ವರದಿ ತಯಾರಿಸಿ ಸಂಪೂರ್ಣ ಜಲಾನಯನ ಉಪಚಾರ ವಿಧಾನದಲ್ಲಿ ಜಲಾನಯನ ಕಾಮಗಾರಿಗಳನ್ನು ಕೈಗೊಂಡು ಉಪಚರಿಸಲಾಗಿದೆ.

ಸುಜಲ-III ಯೋಜನೆ ಮಾದರಿಯಲ್ಲಿ ವಿಶ್ವಬ್ಯಾಂಕ್ ಅನುದಾನದೊಂದಿಗೆ ಹೊಸ REWARD ಯೋಜನೆಯನ್ನು ರೂಪಿಸಲಾಗಿದ್ದು, ರಾಜ್ಯದ 21 ಜಿಲ್ಲೆಗಳಲ್ಲಿ ಸುಮಾರು 19.9 ಲಕ್ಷ ಹೆ. ಮಳೆಯಾಶ್ರಿತ ಪ್ರದೇಶದಲ್ಲಿ ಸುಜಲ-III ಪಾಲುದಾರ ಸಂಸ್ಥೆಗಳ ಮೂಲಕ ಭೂ-ಸಂಪನ್ಮೂಲ ಸಮೀಕ್ಷೆ ಕೈಗೊಂಡು ದತ್ತಾಂಶ ಸಂಗ್ರಹಿಸಲು ಮತ್ತು ಅಂದಾಜು 1.00 ಲಕ್ಷ ಹೆ. ಪ್ರದೇಶದಲ್ಲಿ (20 ಉಪ ಜಲಾನಯನಗಳು) ಜಲಾನಯನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಸಂಪೂರ್ಣ ಜಲಾನಯನಗಳನ್ನು ಉಪಚರಿಸಲು ಯೋಜಿಸಲಾಗಿರುತ್ತದೆ.

ಭೂ ಸಂಪನ್ಮೂಲ ಮಾಹಿತಿಯನ್ನು ಬಳಸಿಕೊಂಡು ಜಲಾನಯನ ಪ್ರದೇಶಗಳಲ್ಲಿ ಸೂಕ್ತವಾದ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ನಿಖರವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದ್ಯತೆ ನೀಡಲಾಗುತ್ತಿದೆ.

6. ನಬಾರ್ಡ್ ಆರ್.ಐ.ಡಿ.ಎಫ್ (ಟ್ರಾಂಚಿ-27) ನೆರವಿನ ಜಲಾನಯನ ಅಭಿವೃದ್ಧಿ ಯೋಜನೆಗಳು.

ನಬಾರ್ಡ್–RIDF Tranche -27 ಯೋಜನೆಯು 2021-22 ರಿಂದ 2023-24 ನೇ ಸಾಲಿನ ವರೆಗೆ 3 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ರೂ.2500.00 ಲಕ್ಷ (ನಬಾರ್ಡ್ ಸಾಲ ರೂ. 2375.00 ಲಕ್ಷ ಮತ್ತು ರಾಜ್ಯ ಸರ್ಕಾರ ಪಾಲು ರೂ.125.00 ಲಕ್ಷ) ಗಳ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

ಈ ಯೋಜನೆ ಮೂಲಕ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಉಪಜಲಾನಯನ ಪ್ರದೇಶಗಳಲ್ಲಿ ಮೇಲ್ ಸ್ತರ ಉಪಚಾರಗಳು ರಬಲ್ ತಡೆ & ಬೋಲ್ಡರ್ ತಡೆ ಮತ್ತು ನಾಲಾ ಪ್ರದೇಶ ಉಪಚಾರಕ್ಕಾಗಿ ತಡೆಅಣೆಗಳು, ನಾಲಾಬದುಗಳು, ಗೋಕಟ್ಟೆ ಹಾಗೂ ವಿವಿಧ ನೀರು ಸಂಗ್ರಹಣಾ ವಿನ್ಯಾಸಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

7. ಅಟಲ್ ಭೂಜಲ್ ಯೋಜನೆ:

ಅಟಲ್ ಭೂಜಲ್ ಯೋಜನೆಯು ಜಲ್ ಶಕ್ತಿ ಮಂತ್ರಾಲಯ, ಭಾರತ ಸರ್ಕಾರದ ಕೇಂದ್ರ ವಲಯ ಯೋಜನೆಯಾಗಿದ್ದು, ಗುರುತಿಸಲಾದ ನೀರಿನ ಶೋಷಿತ ಪ್ರದೇಶಗಳಲ್ಲಿ ಅಂತರ್ಜಲ ನೀರಿನ ಬೇಡಿಕೆ ಮತ್ತು ಸರಬರಾಜು ನಿರ್ವಹಣೆಗೆ ಸಮುದಾಯ ಸಹಭಾಗಿತ್ವದಲ್ಲಿ ಒತ್ತು ನೀಡಲು ರೂಪಿಸಿರುವ ಕಾರ್ಯಕ್ರಮವಾಗಿದೆ. ರಾಜ್ಯದಲ್ಲಿ ಆಯ್ದ 14 ಜಿಲ್ಲೆಗಳ 41 ತಾಲ್ಲೂಕುಗಳಲ್ಲಿ 1199 ಶೋಷಿತ ಗ್ರಾಮ ಪಂಚಾಯತಿಗಳಲ್ಲಿ ಕೇಂದ್ರ ಮತ್ತು ರಾಜ್ಯ ಯೋಜನೆಗಳ ಒಗ್ಗೂಡಿಸುವಿಕೆಯ ಮೂಲಕ ಅಂತರ್ಜಲ ನಿರ್ವಹಣೆಯನ್ನು ಉತ್ತೇಜಿಸುವುದು ಯೋಜನೆಯ ಒಂದು ಪ್ರಮುಖ ಉದ್ದೇಶವಾಗಿರುತ್ತದೆ.

ಅಂತೆಯೇ, ಅಂತರ್ಜಲ ನಿರ್ವಹಣೆಗೆ ಪೂರಕವಾಗಿರುವ ಭೂಜಲ ಪೂರಣ ಫಲಿತಾಂಶವನ್ನು ಪಡೆಯಲು ಯೋಜನೆಯಡಿ ಗುರುತಿಸಿರುವ ಅರ್ಹ Supply Intervention ಸಂಬಂಧಿಸಿದ ಮಳೆನೀರು ಕೊಯ್ಲು, ನೀರು ಇಂಗುವಿಕೆ ಮತ್ತು ಜಲಮರುಪೂರಣ ಕಾಮಗಾರಿಗಳಿಗೆ ಸಂಬಂಧಿಸಿದ ಬಹುತೇಕ ನೀರು ಕೊಯ್ಲು ಮತ್ತು ಸಂರಕ್ಷಣೆ ರಚನೆಗಳ ಕಾಮಗಾರಿ ಕಾರ್ಯಕ್ರಮಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಈ ಮೇಲೆ ತಿಳಿಸಿರುವಂತೆ ಆಯ್ದ 1199 ಶೋಷಿತ ಗ್ರಾಮ ಪಂಚಾಯತಿಗಳಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

8. ರೈತ ಉತ್ಪಾದಕರ ಸಂಸ್ಥೆಗಳು (FPOs)

ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಬಹುದು. ಉತ್ಪಾದಕರ ಸಂಸ್ಥೆಯಾಗಿ ರೈತ ಉತ್ಪಾದಕರ ಸಂಸ್ಥೆಯು ಸ್ಥಳೀಯ ರೈತ ಸಮುದಾಯದ ಸಂಘಟನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಹಾಗೂ ಔದ್ಯಮಿಕ ಸಂಭಾವ್ಯ ಶಕ್ತಿಯನ್ನು ಸಡಿಲಿಸುವಂತೆ ಮಾಡಬಹುದಾಗಿದೆ. ಈ ಸಂಸ್ಥೆಗಳಿಂದ ಉತ್ಪಾದಕರ ಬೇಡಿಕೆಗೆ

ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ಉತ್ಪಾದಕರ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

ಇಲಾಖೆಯು ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನವನ್ನು ಈ ಕೆಳಕಂಡ ಯೋಜನೆಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ.

1) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
2) ಕೇಂದ್ರ ಪುರಸ್ಕೃತ ಯೋಜನೆ-10000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನೆ
3) ಅಮೃತ ರೈತ ಉತ್ಪಾದಕರ ಸ್ಥಾಪನೆ ಮತ್ತು ಪ್ರೋತ್ಸಾಹ ಯೋಜನೆ.

9. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (Rashtriya Krishi Vikas Yojane)

a) ತಡೆಅಣೆ ನಿರ್ಮಾಣ (Construction of Check dam):

ತಡೆ ಅಣೆಯು ಮಳೆ ನೀರು ಕೊಚ್ಚಣೆಯಿಂದ ಹಳ್ಳಗಳಲ್ಲಿ ಹರಿದು ಹೋಗುವ ನೀರನ್ನು ತಡೆಗಟ್ಟಲು ಮತ್ತು ರಚಿಸಲಾಗುವ ಮಳೆ ನೀರು ಕೊಯ್ಲು ರಚನೆಯಾಗಿರುತ್ತದೆ. ಹರಿದು ಹೋಗುವ ಮಳೆ ನೀರನ್ನು ತಡೆಗಟ್ಟುವುದರಿಂದ ಭೂಮಿಯಲ್ಲಿ ನೀರನ್ನು ಇಂಗಿಸಲು ಹೆಚ್ಚು ಸಮಯಾವಕಾಶ ನೀಡುವ ಮೂಲಕ ಅಂತರ್ಜಲ ವೃದ್ಧಿಗೆ ಅನುಕೂಲವಾಗುವುದು.

b) ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮ (Reclamation of Problematic Soil):

ಸಮಸ್ಯಾತ್ಮಕ ಮಣ್ಣಿನ ಪ್ರದೇಶಗಳಲ್ಲಿ ಅಂತರ ಬಸಿ ಕಾಲುವೆ ನಿರ್ಮಾಣ ಮೂಲಕ ಸವಳು ಜವಳು ಮಣ್ಣಿನ ಸುಧಾರಣೆ ಮತ್ತು ಮಣ್ಣು ಸುಧಾರಣಾ ಪರಿಕರಗಳು ಮತ್ತು ಹಸಿರು ಗೊಬ್ಬರಗಳ ಬಳಕೆ ಮೂಲಕ ಆಮ್ಲೀಯ ಮಣ್ಣುಗಳ ಸುಧಾರಣಾ ಕ್ರಮಗಳನ್ನು ಕೈಗೊಂಡು, ರೈತರಲ್ಲಿ ಮಣ್ಣುಗಳ ಸಮಸ್ಯೆ ಕುರಿತು ಅರಿವು ಮೂಡಿಸಿ, ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಲು ಉತ್ತೇಜಿಸುವುದು.

ಅನುಬಂಧ-3

(LAQ-646)

ಬೀದರ್ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ 2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಪ್ರಗತಿ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಯ ಹೆಸರು	ಘಟಕ	ವಾರ್ಷಿಕ ಗುರಿ		ಬಿಡುಗಡೆಯಾದ ಅನುದಾನ	ಪ್ರಗತಿ	
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0	ಹೆಕ್ಟೇರ್	7900	1737.91	515.21	1876	412.75
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರ ಉಪಚಾರಗಳು	ಸಂಖ್ಯೆ	926	224.00	100.00	19	93.97
3	ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ	ಹೆಕ್ಟೇರ್	2500	300.00	83.80	1200	82.79
4	ಅಮೃತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ	ಸಂಖ್ಯೆ	30	19.44	10.36	18	9.85
5	ಕೇಂದ್ರ ವಲಯ-10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ	ಸಂಖ್ಯೆ	15	6.75	6.75	15	6.75
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ತಡೆ ಅಣೆ	ಸಂಖ್ಯೆ	15	75.00	40.00	8	40.00
7	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ರೈತ ಉತ್ಪಾದಕರ ಸಂಸ್ಥೆಗಳ ರಚನೆ	ಸಂಖ್ಯೆ	75	29.75	29.75	32	10.32
ಒಟ್ಟು				2392.85	785.87		656.43

ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ

LAQ-646 ಅನುಬಂಧ -4

ಸೂಕ್ಷ್ಮ ನೀರಾವರಿ ಘಟಕಗಳ (ತುಂತುರು & ಹನಿ) ಅಳವಡಿಕೆಗಾಗಿ ಕಳೆದ ಏಳು ವರ್ಷಗಳಿಂದ ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನ, ವೆಚ್ಚ ಮತ್ತು ಫಲಾನುಭವಿಗಳ ವಿವರ

ಕ್ರ. ಸಂ.	ವರ್ಷ	ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)	ಫಲಾನುಭವಿಗಳ ಸಂಖ್ಯೆ
1	2015-16	1368.55	1357.21	5257
2	2016-17	1782.48	1778.07	7569
3	2017-18	2100.76	2094.04	6211
4	2018-19	2471.73	2429.30	9453
5	2019-20	1292.43	1199.01	5976
6	2020-21	2482.85	2458.51	10569
7	2021-22	2128.22	2053.96	10484
ಒಟ್ಟು		13627.02	13370.10	55519

ಕೃಷಿ ನಿರ್ದೇಶಕರು

LAQ-646 ಅನುಬಂಧ 5

ವಿವಿಧ ಯೋಜನೆಗಳಡಿ ಕಳೆದ ಏಳು ವರ್ಷಗಳಿಂದ ಟಾರ್ಪಲೀನ್ ವಿತರಣೆಗಾಗಿ ಬಿಡುಗಡೆ ಮಾಡಿರುವ ಅನುದಾನ, ವೆಚ್ಚ ಮತ್ತು ಫಲಾನುಭವಿಗಳ ವಿವರಗಳು

ಕ್ರ. ಸಂ.	ವರ್ಷ	ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)	ಭೌತಿಕ (ಸಂಖ್ಯೆ ಗಳಲ್ಲಿ)
1	2015-16	55.11	55.11	2750
2	2016-17	51.39	51.39	6084
3	2017-18	113.00	112.54	10594
4	2018-19	191.81	191.78	16528
5	2019-20	121.00	120.91	9018
6	2020-21	280.41	280.40	25448
7	2021-22	148.66	148.66	12327
	ಒಟ್ಟು	961.38	960.79	82749

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	647
ಮಾನ್ಯ ಸದಸ್ಯರ ಹೆಸರು	ಶ್ರೀ ಈಶ್ವರ್ ಬಿ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ	21/12/2022
ಉತ್ತರಿಸುವ ಸಚಿವರು	ಮಾನ್ಯ ಕಾರ್ಮಿಕ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಎಷ್ಟು ಜನ ಕಟ್ಟಡ ಕಾರ್ಮಿಕರು ಕಟ್ಟಡ ಕಟ್ಟುವ ಸಮಯದಲ್ಲಿ ಮೃತಪಟ್ಟಿದಾರೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಲಭ್ಯವಿರುವ ಮಾಹಿತಿ ಆಧಾರದ ಮೇಲೆ ಬೀದರ್ ಜಿಲ್ಲೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ 02 ಕಾರ್ಮಿಕರು ಮೃತ್ತಪಟ್ಟಿರುತ್ತಾರೆ.

ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ಕಾರ್ಮಿಕರ ನಿರೀಕ್ಷಕರ ವೃತ್ತ /ತಾಲ್ಲೂಕು</th><th>ಕಟ್ಟಡ ನಿರ್ಮಾಣ ಸಮಯದಲ್ಲಿ ಮೃತಪಟ್ಟಿರುವ ಕಟ್ಟಡ ಕಾರ್ಮಿಕರ ಸಂಖ್ಯೆ:</th><th>ವಿತರಿಸಿದ ಸಹಾಯಧನ</th></tr>
<tr><td>1</td><td>ಬೀದರ್ ವೃತ</td><td>1</td><td rowspan="2">ಮಂಡಳಿಯವತಿಯಿಂದ ಅವರ ಅವಲಂಭಿತರಿಗೆ ತಲಾ ರೂ. 5.00 ಲಕ್ಷ ಸಹಾಯಧನ ಬಿಡುಗಡೆ ಮಾಡಲಾಗಿದೆ.</td></tr>
<tr><td>2</td><td>ಭಾಲ್ಕಿ ವೃತ</td><td>1</td></tr>
</table>
</td></tr>
<tr><td>ಆ)</td><td>ಇಲ್ಲಿಯವರೆಗೆ ಮೃತಪಟ್ಟಂತಹ ಕಟ್ಟಡ ಕಾರ್ಮಿಕರ ಕುಟುಂಬದವರಿಗೆ ಪರಿಹಾರ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)</td><td>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಮಂಡಳಿಯವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಮೃತಪಟ್ಟರೆ ಅವರ ಅವಲಂಭಿತರಿಗೆ ಈ ಕೆಳಕಂಡ ಸಹಾಯಧನ ನೀಡಲಾಗುತ್ತಿದೆ.
1. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿ ರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-</td></tr>
</table>

		2. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆ ಅನುಗ್ರಹ ರಾಶಿ ಸಹಾಯಧನ. ರಾಜ್ಯದಾದ್ಯಂತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಮೃತ ಪಟ್ಟ ಕಾರ್ಮಿಕರ ಅವಲಂಭಿತರಿಗೆ ಮಂಡಳಿಯವತಿಯಿಂದ 742 ಪ್ರಕರಣಗಳಲ್ಲಿ ರೂ.27.60 ಕೋಟಿ ಸಹಾಯಧನ ವಿತರಿಸಲಾಗಿದೆ.
ಇ)	ಬೀದರ್ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದು, ಇಲಾಖೆ ನಿಷ್ಕ್ರಿಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದಿಂದ ಈ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು? (ಮಾಹಿತಿ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳಲ್ಲಿ ಒಟ್ಟು 14 ಹುದ್ದೆಗಳು ಮಂಜೂರಾಗಿದ್ದು, 03 ಕಾರ್ಮಿಕ ನಿರೀಕ್ಷಕರು, 01 ಬೆರಳಚ್ಚುಗಾರ, 05 ಗ್ರೂಪ್ ಡಿ ಹುದ್ದೆಗಳು ಖಾಲಿ ಇರುತ್ತವೆ. ಆರ್ಥಿಕ ಇಲಾಖೆಯ ದಿನಾಂಕ: 24.11.2021ರ ಸುತ್ತೋಲೆಯಂತೆ ಖಾಲಿ ಇರುವ 01 ಬೆರಳಚ್ಚುಗಾರರ ಹುದ್ದೆ ಮತ್ತು 05 ಗ್ರೂಪ್ ಡಿ ಹುದ್ದೆಗಳ ಪೈಕಿ 03 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲಾಗಿದೆ. ಖಾಲಿ ಇರುವ ಕಾರ್ಮಿಕ ನಿರೀಕ್ಷಕರ ಹುದ್ದೆಗಳಿಗೆ ಅಧಿಕ ಪ್ರಭಾರದಲ್ಲಿ ಕಾರ್ಮಿಕ ನಿರೀಕ್ಷಕರುಗಳನ್ನು ನಿಯೋಜಿಸಲಾಗಿರುತ್ತದೆ. ಕಾರ್ಮಿಕ ಇಲಾಖೆಯಲ್ಲಿ ಖಾಲಿ ಇರುವ ಕಾರ್ಮಿಕ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಅದರಂತೆ, ಆಯೋಗವು 26 ಕಾರ್ಮಿಕ ನಿರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗಿದೆ. ಮತ್ತೆ 26 ಕಾರ್ಮಿಕ ನಿರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅಧಿಸೂಚನೆ ಹೊರಡಿಸಿರುತ್ತದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದ ಕೂಡಲೇ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಕೈಗೊಂಡು ಬೀದರ್ ಜಿಲ್ಲೆ ಸೇರಿದಂತೆ ಖಾಲಿ ಇರುವ ಕಾರ್ಮಿಕ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಕಾಇ 675 ಎಲ್ಇಟಿ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	648
ಸದಸ್ಯರ ಹೆಸರು :	ಶ್ರೀ ರಘುಪತಿ ಭಟ್ ಕೆ (ಉಡುಪಿ)
ಉತ್ತರಿಸಬೇಕಾದ ದಿನಾಂಕ :	21.12.2022
ಉತ್ತರಿಸುವ ಸಚಿವರು :	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯು ಶೈಕ್ಷಣಿಕವಾಗಿ ಮುಂಚೂಣಿಯಲ್ಲಿದ್ದು, ಉತ್ತರ ಕರ್ನಾಟಕ ಹಾಗೂ ನೆರೆ ಜಿಲ್ಲೆಗಳಿಂದ ಉಡುಪಿ ಜಿಲ್ಲೆಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿದ್ದು, ಇದಕ್ಕೆ ಪೂರಕವಾಗಿ ಹಾಸ್ಟೆಲ್ ಸೌಲಭ್ಯದ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 18 ಮೆಟ್ರಿಕ್-ಪೂರ್ವ ಹಾಗೂ 24 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 42 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಈ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟಾರೆ 4559 ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಿಗೆ 846 ಅರ್ಜಿಗಳು ಸ್ವೀಕೃತಗೊಂಡಿದ್ದು ಈ ಪೈಕಿ 820 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ. ಅದರಂತೆ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ 3714 ಅರ್ಜಿಗಳು ಸ್ವೀಕೃತಗೊಂಡಿದ್ದು ಈ ಪೈಕಿ 2964 ವಿದ್ಯಾಥಿಗಳಿಗೆ ಪ್ರವೇಶ ನೀಡಲಾಗಿದ್ದು ಪ್ರಸ್ತುತ ಸ್ನಾತಕೋತ್ತರ ಮತ್ತು ವೃತ್ತಿಪರ ವಿದ್ಯಾರ್ಥಿನಿಲಯಗಳ ಪ್ರವೇಶ ಪ್ರಕಿಯೆ ಚಾಲ್ತಿಯಲ್ಲಿರುತ್ತದೆ.
ಆ)	ಬಂದಿದ್ದಲ್ಲಿ, ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಹಾಸ್ಟೆಲ್ ಗಳನ್ನು ತೆರೆಯುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ; ಹೆಚ್ಚುವರಿ ಹಾಸ್ಟೆಲ್ ಗಳನ್ನು ತೆರೆಯುವಲ್ಲಿ ಸರ್ಕಾರದ ಕೈಗೊಂಡಿರುವ ಕ್ರಮಗಳೇನು?	ಉಡುಪಿ ತಾಲ್ಲೂಕಿಗೆ 2021-22ನೇ ಸಾಲಿನಲ್ಲಿ 125 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ತಾತ್ಕಾಲಿಕವಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದ್ದ ವಿದ್ಯಾರ್ಥಿನಿಲಯವನ್ನು ಶಾಶ್ವತವಾಗಿ ಮಂಜೂರಾತಿ ಕೋರಿ ಸರ್ಕಾರಕ್ಕೆ ದಿನಾಂಕ:03.08.2022 ರಂದು ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಮುಂದುವರೆದು 2022-23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 100 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಂಗಳೂರು ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಿದ್ದು ಅದರಂತೆ ಈಗಾಗಲೇ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿರುತ್ತದೆ. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಇಲಾಖೆಯ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿನ ಮಂಜೂರಾತಿ ಸಂಖ್ಯಾಬಲದ ಶೇ.25ರಷ್ಟು ಸಂಖ್ಯಾಬಲ ಹೆಚ್ಚಳ ಮಾಡಲಾಗಿದ್ದು, ಈ ಪೈಕಿ ಉಡುಪಿ ಜಿಲ್ಲೆಯ 24 ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ 714 ವಿದ್ಯಾರ್ಥಿಗಳಿಗೆ ಸಂಖ್ಯಾಬಲವನ್ನು ಹೆಚ್ಚಿಸಲಾಗಿದೆ.

		ಆದಾಗ್ಯೂ, ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.

ಸಂಖ್ಯೆ:ಹಿಂವಕ 753 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	649
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್.ಕೆ
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪರಿಶಿಷ್ಟ ಪಂಗಡದ ಸಮುದಾಯದವರು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸರ್ಕಾರವು ಕೈಗೊಂಡಿರುವ ಯೋಜನೆಗಳಾವುವು; ಈ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ಕ್ರಮವೇನು;	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಪರಿಶಿಷ್ಟ ವರ್ಗದ ಜನಾಂಗದ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ವಿವರ ಹಾಗೂ 2021-22 ಮತ್ತು 2022-23ನೇ ಸಾಲಿನಲ್ಲಿ ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಕುರಿತು ಮಾಹಿತಿಯನ್ನು ಅನುಬಂಧ 01 ಮತ್ತು 02 ರಲ್ಲಿ ನೀಡಿದೆ.
ಆ)	ಪರಿಶಿಷ್ಟ ಪಂಗಡ ಸಮುದಾಯದವರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಇಲಾಖಾ ಅಧಿಕಾರಿಗಳ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನ ಆಗುತ್ತಿದೆಯೇ: ಮೂಲಭೂತ ಸೌಕರ್ಯವನ್ನು ಅನುಷ್ಠಾನಗೊಳಿಸುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಸಮಿತಿಯ ಸಭೆಯನ್ನು ನಡೆಸಿ ಪರಿಣಾಮಕಾರಿ ಅನುಷ್ಠಾನಗೊಳಿಸಲು ಸರ್ಕಾರದಿಂದ ಕ್ರಮ ವಹಿಸಲಾಗುತ್ತಿದೆಯೇ?	ಹೌದು, ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಎಸ್.ಎಲ್.ಪಿ 2011 ದಿನಾಂಕ.25.05.2011 ರಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಕಾಮಗಾರಿಗಳನ್ನು ಕೈಗೊಳ್ಳಲು ಆಯಾ ವಿಧಾನಸಭಾ ಕ್ಷೇತ್ರಗಳ ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ಹಾಗೂ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನದ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿರುತ್ತದೆ.

ಸಕಇ 495 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-1

ಶ್ರೀ ರಘುಪತಿ ಭಟ್ ಕೆ. (ಉಡುಪಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-649 ಕ್ಕೆ ಉತ್ತರ

- **ಸಾಮಾಜಿಕ ಯೋಜನೆಗಳು:**

ಪರಿಶಿಷ್ಟ ವರ್ಗದ ಜನಾಂಗದ ಅಭಿವೃದ್ಧಿಗಾಗಿ ಈ ಕೆಳಕಂಡ ಸಾಮಾಜಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅ) ಸರಳ ವಿವಾಹ:

ಈ ಯೋಜನೆಯನ್ವಯ ನೊಂದಾಯಿತ ಸಂಘ-ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ವ್ಯವಸ್ಥೆ ಮಾಡುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾಗುವ ಪರಿಶಿಷ್ಟ ಪಂಗಡದ ದಂಪತಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ. 2021-22ನೇ ಸಾಲಿನಲ್ಲಿ 57 ಫಲಾನುಭವಿಗಳಿಗೆ ರೂ.29.28 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ. 2022-23ನೇ ಸಾಲಿನಲ್ಲಿ 88 ಫಲಾನುಭವಿಗಳಿಗೆ ರೂ.45.48 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ.

ಆ) ವಿಧವಾ ವಿವಾಹ:

ಪರಿಶಿಷ್ಟ ಪಂಗಡದ ವಿಧವೆಯರು ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತದೆ. 2021-22ನೇ ಸಾಲಿನಲ್ಲಿ 03 ಫಲಾನುಭವಿಗಳಿಗೆ ರೂ.7.00 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ.

ಇ) ಒಳ ಪಂಗಡ ವಿವಾಹ:

ಪರಿಶಿಷ್ಟ ಪಂಗಡದ ಯುವಕ/ಯುವತಿಯರು ಪರಿಶಿಷ್ಟ ಪಂಗಡದ ಒಳಗೆ ಅಂತರ್ಜಾತಿ ವಿವಾಹವಾದಲ್ಲಿ ಅಂತಹವರಿಗೆ ರೂ.2.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. 2021-22ನೇ ಸಾಲಿನಲ್ಲಿ Online ನಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ, 2022-23 ನೇ ಸಾಲಿನಲ್ಲಿ ಇಲ್ಲಿಯವರೆಗೆ 03 ಫಲಾನುಭವಿಗಳಿಗೆ ರೂ.6.00 ಲಕ್ಷ ಪ್ರೋತ್ಸಾಹಧನ ನೀಡಲಾಗಿರುತ್ತದೆ.

ಈ) ದೇವದಾಸಿ ವಿವಾಹ:

ಪರಿಶಿಷ್ಟ ಪಂಗಡದ ದೇವದಾಸಿಯರು ಗಂಡು ಮಕ್ಕಳು ಇತರೆ ಜಾತಿಯ ಹುಡುಗಿಯನ್ನು ವಿವಾಹವಾದಲ್ಲಿ 3.00 ಲಕ್ಷ ಹಾಗೂ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ಜಾತಿಯ ಹುಡುಗನನ್ನು ವಿವಾಹವಾದಲ್ಲಿ ರೂ.5.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು. 2021-22ನೇ ಸಾಲಿನಲ್ಲಿ 46 ಫಲಾನುಭವಿಗಳಿಗೆ ರೂ.177.00 ಲಕ್ಷಗಳ ಪ್ರೋತ್ಸಾಹಧನ ಮಂಜೂರು ಮಾಡಲಾಗಿದೆ.

ಉ) ಅಂತರ್ಜಾತಿ ವಿವಾಹ:

ಅಸ್ಪೃಶ್ಯತಾ ನಿವಾರಣೆ ಉದ್ದೇಶದಿಂದ ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 2021-22ನೇ ಸಾಲಿನಲ್ಲಿ 812 ಪರಿಶಿಷ್ಟ ಪಂಗಡದ ಯುವಕ/ಯುವತಿಯರು ರೂ.1448.00 ಲಕ್ಷಗಳನ್ನು ಪ್ರೋತ್ಸಾಹಧನ ಮಂಜೂರು ಮಾಡಲಾಗಿದೆ. 2022-23ನೇ ಸಾಲಿನಲ್ಲಿ 151 ಪರಿಶಿಷ್ಟ ಪಂಗಡದ ಯುವಕ/ಯುವತಿಯರು ರೂ.414.75 ಲಕ್ಷಗಳನ್ನು ಪ್ರೋತ್ಸಾಹಧನ ಮಂಜೂರು ಮಾಡಲಾಗಿದೆ.

ಅನುಬಂಧ-2

ಶ್ರೀ. ರಘುಪತಿ ಭಟ್ ಕೆ. (ಉಡುಪಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-649 ಕ್ಕೆ ಉತ್ತರ

- **ಶೈಕ್ಷಣಿಕ ಯೋಜನೆಗಳು:**

ಪರಿಶಿಷ್ಟ ವರ್ಗದ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡ ಯೋಜನೆಗಳು ಮತ್ತು ಅವುಗಳ ಮೂಲಕ ಸಾಧಿಸಿದ ಪ್ರಗತಿಯ ವಿವರಗಳು ಕೆಳಕಂಡಂತಿದೆ.

1. **ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಾಲ್ಮೀಕಿ ಆಶ್ರಮ ಶಾಲೆಗಳು:**

ಇಲಾಖಾವತಿಯಿಂದ 136 ಮೆಟ್ರಿಕ್ ಪೂರ್ವ, 134 ಮೆಟ್ರಿಕ್ ನಂತರದ ಹಾಗೂ 119 ವಾಲ್ಮೀಕಿ ಆಶ್ರಮ ಶಾಲೆಗಳು ಸೇರಿ ಒಟ್ಟು 389 ಸಂಸ್ಥೆಗಳನ್ನು ನಿರ್ವಹಿಸಲಾಗುತ್ತಿದೆ. ಸದರಿ ಸಂಸ್ಥೆಗಳಲ್ಲಿ 2021-22ನೇ ಸಾಲಿನಲ್ಲಿ 27497 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದ್ದು, ಈ ಸಂಸ್ಥೆಗಳ ನಿರ್ವಹಣೆಗಾಗಿ ರೂ.104.33 ಕೋಟಿ ವೆಚ್ಚ ಭರಿಸಲಾಗಿದೆ. 2022-23ನೇ ಸಾಲಿನಲ್ಲಿ 36463 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಈ ಸಂಸ್ಥೆಗಳ ನಿರ್ವಹಣೆಗಾಗಿ ರೂ.128.55 ಕೋಟಿ ನಿಗಧಿಪಡಿಸಿಕೊಳ್ಳಲಾಗಿದೆ.

2. **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:**

1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತಿದೆ. 2021-22ನೇ ಸಾಲಿನಲ್ಲಿ ಒಟ್ಟು 317622 ವಿದ್ಯಾರ್ಥಿಗಳಿಗೆ ರೂ.39.06 ಕೋಟಿಗಳ ವೆಚ್ಚವನ್ನು ಭರಿಸಲಾಗಿದೆ. 2022-23ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಕೋರಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಇಲ್ಲಿಯವರೆಗೆ ಒಟ್ಟು 218545 ಅರ್ಜಿಗಳು ಸ್ವೀಕೃತವಾಗಿದೆ. (ದಿನಾಂಕ:08.12.2022ಕ್ಕೆ)

3. **ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:**

ಮೆಟ್ರಿಕ್ ನಂತರದ ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತಿದೆ. 2021-22ನೇ ಸಾಲಿನಲ್ಲಿ ಒಟ್ಟು 133385 ವಿದ್ಯಾರ್ಥಿಗಳಿಗೆ ರೂ.157.30 ಕೋಟಿಗಳ ವೆಚ್ಚವನ್ನು ಭರಿಸಲಾಗಿದೆ. 2022-23ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಕೋರಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಇಲ್ಲಿಯವರೆಗೆ ಒಟ್ಟು 32725 ಅರ್ಜಿಗಳು ಸ್ವೀಕೃತವಾಗಿದೆ. (ದಿನಾಂಕ:08.12.2022ಕ್ಕೆ)

4. **ಪ್ರೋತ್ಸಾಹಧನ ಯೋಜನೆ:**

- ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ ಒಟ್ಟು 29776 ವಿದ್ಯಾರ್ಥಿಗಳಿಗೆ ರೂ.41.44 ಕೋಟಿ ವೆಚ್ಚಭರಿಸಲಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 46434 ವಿದ್ಯಾರ್ಥಿಗಳ ಪೈಕಿ 4997 ವಿದ್ಯಾರ್ಥಿಗಳಿಗೆ ರೂ.750.00

ಲಕ್ಷಗಳ ವೆಚ್ಚಭರಿಸಲಾಗಿದೆ. ಉಳಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.

- ಮೆಟ್ರಿಕ್ ನಂತರದ ವಿವಿಧ ಕೋರ್ಸ್ ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ ಒಟ್ಟು 11494 ವಿದ್ಯಾರ್ಥಿಗಳಿಗೆ ರೂ.24.93 ಕೋಟಿ ವೆಚ್ಚಭರಿಸಲಾಗಿದೆ. 2022-23ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದ್ದು, ಪ್ರೋತ್ಸಾಹಧನ ಕೋರಿ ಇದುವರೆಗೆ ಒಟ್ಟು 20795 ಅರ್ಜಿಗಳು ಸ್ವೀಕೃತಿಯಾಗಿವೆ.

5. **ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಕಾರ್ಯಕ್ರಮ:**

ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆ ಮಾಡಲಾದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ಹಾಗೂ ನಿರ್ವಹಣ ವೆಚ್ಚವನ್ನು ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ ಒಟ್ಟು 2248 ನವೀಕರಣ ಹಾಗೂ ನವೀನ ವಿದ್ಯಾರ್ಥಿಗಳಿಗೆ ರೂ.5.02 ಕೋಟಿ ವೆಚ್ಚಭರಿಸಲಾಗಿದೆ. 2022-23ನೇ ಸಾಲಿನಲ್ಲಿ ಒಟ್ಟು 244 ನವೀಕರಣ ಹಾಗೂ ನವೀನ ವಿದ್ಯಾರ್ಥಿಗಳಿಗೆ ರೂ.70.71 ಲಕ್ಷ ವೆಚ್ಚಭರಿಸಲಾಗಿದೆ

6. **ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಪ್ರಭುದ್ಧ ಯೋಜನೆಯಡಿ ಧನಸಹಾಯ:**

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಗುತ್ತಿದೆ. 2021-22ನೇ ಸಾಲಿನಲ್ಲಿ 31 ವಿದ್ಯಾರ್ಥಿಗಳಿಗೆ ರೂ.4.41 ಕೋಟಿಗಳ ವೆಚ್ಚ ಮಾಡಲಾಗಿದೆ. 2022-23ನೇ ಸಾಲಿನಲ್ಲಿ 34 ವಿದ್ಯಾರ್ಥಿಗಳಿಗೆ ರೂ.474.99 ಲಕ್ಷಗಳ ವೆಚ್ಚ ಮಾಡಲಾಗಿದೆ

7. **ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ:**

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಾದ ಐ.ಐ.ಟಿ/ಐ.ಐ.ಎಂ/ಐ.ಎಂ.ಐ/ಎನ್‌ಐಟಿ ಗಳಲ್ಲಿ ಪ್ರವೇಶ ಪಡೆದಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.2.00 ಲಕ್ಷಗಳ ಧನಸಹಾಯ ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ 13 ವಿದ್ಯಾರ್ಥಿಗಳಿಗೆ ಮೊದಲನೇ ಕಂತಿನಲ್ಲಿ ರೂ.13.00 ಲಕ್ಷಗಳ ಧನಸಹಾಯ ಮಂಜೂರು ಮಾಡಲಾಗಿದೆ. 2022-23ನೇ ಸಾಲಿನಲ್ಲಿ 18 ವಿದ್ಯಾರ್ಥಿಗಳಿಗೆ ಮೊದಲನೇ ಕಂತಿನಲ್ಲಿ ರೂ.18.00 ಲಕ್ಷಗಳ ಧನಸಹಾಯ ಮಂಜೂರು ಮಾಡಲಾಗಿದೆ

8. **ವಿಶ್ವವಿದ್ಯಾಲಯ ಮಟ್ಟದಲ್ಲಿ 1 ರಿಂದ 5ನೇ Rank ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:**

ವಿಶ್ವವಿದ್ಯಾಲಯ ಮಟ್ಟದಲ್ಲಿ 1 ರಿಂದ 5ನೇ Rank ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.50,000/-ಗಳ ಪ್ರೋತ್ಸಾಹಧನ ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ 23 ವಿದ್ಯಾರ್ಥಿಗಳಿಗೆ ರೂ.11.50 ಲಕ್ಷಗಳ ವೆಚ್ಚ ಭರಿಸಲಾಗಿದೆ. 2022-23ನೇ ಸಾಲಿನಲ್ಲಿ 51 ವಿದ್ಯಾರ್ಥಿಗಳಿಗೆ ರೂ.25.50 ಲಕ್ಷಗಳ ವೆಚ್ಚ ಭರಿಸಲಾಗಿದೆ.

9. **ನೈಜ, ದುರ್ಬಲ ಬುಡಕಟ್ಟು ಸಮುದಾಯದವರ ಶೈಕ್ಷಣಿಕ ಪ್ರೋತ್ಸಾಹಧನ ಹಾಗೂ ನಿರುದ್ಯೋಗಿ ಜೀವನ ಭತ್ಯೆ ಕಾರ್ಯಕ್ರಮ:**

ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮೂಲನಿವಾಸಿ ಪರಿಶಿಷ್ಟ ಪಂಗಡದವರಾದ ಜೇನು ಕುರುಬ ಹಾಗೂ ಕೊರಗ ಸಮುದಾಯದವರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಹಾಗೂ ನಿರುದ್ಯೋಗಿ ಜೀವನ ಭತ್ಯೆಯನ್ನು

ನೀಡಲಾಗುತ್ತಿದ್ದು, 2021-22ನೇ ಸಾಲಿನಲ್ಲಿ ಶೈಕ್ಷಣಿಕ ಪ್ರೋತ್ಸಾಹಧನಕ್ಕಾಗಿ 797 ವಿದ್ಯಾರ್ಥಿಗಳಿಗೆ ರೂ.62.00 ಲಕ್ಷಗಳು ಹಾಗೂ 1110 ನಿರುದ್ಯೋಗಿ ಯುವಕ ಯುವತಿಯರಿಗೆ ರೂ.137.00 ಲಕ್ಷ ವೆಚ್ಚ ಮಾಡಲಾಗಿದೆ. 2022-23ನೇ ಸಾಲಿನಲ್ಲಿ ಶೈಕ್ಷಣಿಕ ಪ್ರೋತ್ಸಾಹಧನಕ್ಕಾಗಿ 220 ವಿದ್ಯಾರ್ಥಿಗಳಿಗೆ ರೂ.62.70 ಲಕ್ಷಗಳು ಹಾಗೂ 677 ನಿರುದ್ಯೋಗಿ ಯುವಕ ಯುವತಿಯರಿಗೆ ರೂ.137.30 ಲಕ್ಷ ವೆಚ್ಚ ಮಾಡಲಾಗಿದೆ

10. **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ಯೋಜನೆ:**

ಯುಪಿಎಸ್‌ಸಿ / ಕೆಪಿಎಸ್‌ಸಿ ಹಾಗೂ ಬ್ಯಾಂಕಿಂಗ್ ಪರೀಕ್ಷಾ ಪೂರ್ವ ತರಬೇತಿಗೆ ಪ್ರತಿಷ್ಠಿತ ಸಂಸ್ಥೆಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಲಾಗುತ್ತಿದೆ. 2021-22ನೇ ಸಾಲಿನಲ್ಲಿ 860 ಅಭ್ಯರ್ಥಿಗಳಿಗೆ ರೂ.639.00 ಲಕ್ಷ ವೆಚ್ಚ ಭರಿಸಲಾಗಿದೆ. 2022-23ನೇ ಸಾಲಿನಲ್ಲಿ 2250 ಗುರಿ ನಿಗಧಿಪಡಿಸಿಕೊಳ್ಳಲಾಗಿದ್ದು ತರಬೇತಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 650
ಮಾನ್ಯ ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ
ಉತ್ತರಿಸುವ ದಿನಾಂಕ : 21-12-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪರಿಶಿಷ್ಟ ಜಾತಿ ಸಮುದಾಯದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರು ಪರಿಶಿಷ್ಟ ಜಾತಿ ಮೀಸಲಿರಿಸಿದ ಹಾಸ್ಟೆಲ್‌ಗಳಿಗೆ ಅರ್ಜಿ ಸಲ್ಲಿಸಿದ್ದು, ಮ್ಯಾನೇಜ್ ಮೆಂಟ್ ಅಡಿಯಲ್ಲಿ ಸೀಟು ಹಂಚಿಕೆಯಾದ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನೀಡುವಲ್ಲಿನ ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಮ್ಯಾನೇಜ್ ಮೆಂಟ್ ಸೀಟು ಹಂಚಿಕೆಯಾದ ವಿದ್ಯಾರ್ಥಿನಿಯಠಿಗೆ ಪರಿಶಿಷ್ಟ ಹಾಸ್ಟೆಲ್‌ಗಳಲ್ಲಿ ಸೀಟು ಹಂಚಿಕೆ ಮಾಡಲು ಇರುವ ತೊಡಕುಗಳೇನು; (ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾಗುವ ನಿರ್ವಹಣಾ ವೆಚ್ಚದಲ್ಲಿ ವೆಚ್ಚ ಭರಿಸಲಾಗುತ್ತಿದೆ. ಆದ್ದರಿಂದ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾವಕಾಶ ಪಡೆಯಲು ವಿದ್ಯಾರ್ಥಿಯು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಹತೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಮುಂದುವರೆದು, ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಾರ್ಗಸೂಚಿಯನ್ವಯ ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ಆಯ್ಕೆಯಾಗಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ವಿದ್ಯಾರ್ಥಿವೇತನ ಪಡೆಯಲು ಅರ್ಹತೆಯನ್ನು ಹೊಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ದಾಖಲಾತಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಇ)	ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಮ್ಯಾನೇಜ್ ಮೆಂಟ್ ಸೀಟು ಹಂಚಿಕೆಯಾದ ಖಾಸಗಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರು ಹಾಸ್ಟೆಲ್ ಸೌಲಭ್ಯ ಪಡೆಯಲು ಸಲ್ಲಿಸಿದ ಅರ್ಜಿಗಳೆಷ್ಟು; ಸೀಟು ಹಂಚಿಕೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಆಡಳಿತ ಮಂಡಳಿ ಕೋಟಾದಡಿ ಆಯ್ಕೆಯಾಗಿ ವ್ಯಾಸಂಗ ಮಾಡುತ್ತಿರುವ ಒಟ್ಟು 22 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ.
ಈ)	ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಮೆಟ್ರಿಕ್ ನಂತರದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುವ ಸಂಖ್ಯೆ ಅಧಿಕವಾಗಿದ್ದು, ಇದಕ್ಕನುಗುಣವಾಗಿ ಹಾಸ್ಟೆಲ್ ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	2021-22ನೇ ಸಾಲಿನ ಆಯವ್ಯಯ ಘೋಷಣೆಯಂತೆ ಜಿಲ್ಲೆಗೆ ಒಂದು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದೆ ಹಾಗೂ ಬೇಡಿಕೆಯಂತೆ ಮಂಜೂರಾದ ಬಾಲಕಿಯರ ನಿಲಯವನ್ನು ಬಾಲಕರ ನಿಲಯವನ್ನಾಗಿ ಮಾರ್ಪಾಡು ಆದೇಶ ಹೊರಡಿಸಲು ಕ್ರಮವಹಿಸಲಾಗಿದೆ.

ಸಕಇ 743 ಎಸ್‌ಎಲ್ ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

1 ಮಾನ್ಯ ಸದಸ್ಯರ ಹೆಸರು : ಶ್ರೀರಘುಪತಿ ಭಟ್.ಕೆ(ಉಡುಪಿ)

2 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 651

3 ಉತ್ತರಿಸಬೇಕಾದ ದಿನಾಂಕ : 21-12-2022

4 ಉತ್ತರಿಸುವ ಸಚಿವರು : ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
9	ಸಹಾಯಕ ಕೃಷಿ ಅಧಿಕಾರಿ (ರೂ.40900- 78200)	152	1947	0	2099	ಕರ್ನಾಟಕ ನಾಗರೀಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರನ್ವಯ ನೇರ ನೇಮಕಾತಿ ಮೂಲಕ;	**ನೇರ ನೇಮಕಾತಿಗಾಗಿ:-** ನೇರ ನೇಮಕಾತಿಯ ಶೇ.85 ರಷ್ಟು ಹುದ್ದೆಗಳನ್ನು ಬಿ.ಎಸ್ಸಿ (ಕೃಷಿ) ವಿದ್ಯಾರ್ಹತೆ ಹೊಂದಿರುವ; ಮತ್ತು ಶೇ. 15 ರಷ್ಟು ಹುದ್ದೆಗಳನ್ನು ಕಾನೂನಿನ್ವಯ ಸ್ಥಾಪಿಸಲ್ಪಟ್ಟ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅಥವಾ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜ್ಯುಕೇಷನ್ (ಎ.ಐ.ಸಿ.ಟಿ.ಇ) ಇವರಿಂದ ಮಾನ್ಯತೆ ಪಡೆದ ಕೃಷಿ ವಿಶ್ವವಿದ್ಯಾಲಯ ಅಥವಾ ಇನ್ನಿತರೆ ವಿಶ್ವವಿದ್ಯಾಲಯದಿಂದ ಅರ್ಜಿಸಿದ ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) ಅಥವಾ ಬಿ.ಟೆಕ್ (ಆಹಾರ ತಂತ್ರಜ್ಞಾನ/ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಅಥವಾ ಬಿ.ಟೆಕ್ (ಜೈವಿಕ ತಂತ್ರಜ್ಞಾನ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಕೃಷಿ ಪದವಿ ಹೊಂದಿಲ್ಲದ ಅಧಿಕಾರಿಗಳನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಜಿಡಿ 3 ಎಎಂಎಸ್ 2016, ದಿನಾಂಕ: 01.09.2016, ಎಜಿಡಿ 135 ಎಎಂಎಸ್ 2016, ದಿನಾಂಕ: 07.09.2016 ಮತ್ತು ಎಜಿಡಿ 134 ಎಎಂಎಸ್ 2016, ದಿನಾಂಕ: 03.10.2016ರಲ್ಲಿ

ಕ್ರ. ಸಂ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ				ನೇಮಕಾತಿ ವಿಧಾನ	ಕನಿಷ್ಠ ಅರ್ಹತೆ
		ಖಾಯಂ	ತಾತ್ಕಾಲಿಕ	ನಿಯೋಜನೆ	ಒಟ್ಟು		
							ಅಧಿಸೂಚಿಸಿರುವ ಹುದ್ದೆಗಳ ಅಥವಾ/ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸುವ ಹುದ್ದೆಗಳ ಎದುರಾಗಿ ನೇಮಕಾತಿಗೆ ಪರಿಗಣಿಸತಕ್ಕದ್ದಲ್ಲ.
10	ಸಹಾಯಕ ಕೃಷಿ ಅಧಿಕಾರಿ (ರೈತ ಮಹಿಳೆ) (ರೂ.40900-78200)	0	3	0	3	ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಬಡ್ತಿ ಅಥವಾ ನಿವೃತ್ತಿ ಅಥವಾ ಮರಣ ಅಥವಾ ಇನ್ನಿತರ ಕಾರಣಗಳಿಂದ ಖಾಲಿಯಾದಲ್ಲಿ, ಈ ಹುದ್ದೆಗಳು ನಶಿಸಿ ಹೋಗುತ್ತವೆ.	
11	ಕೃಷಿ ಸಹಾಯಕರು (ರೂ.23500-47350)	0	49	0	49	ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಬಡ್ತಿ ಅಥವಾ ನಿವೃತ್ತಿ ಅಥವಾ ಮರಣ ಅಥವಾ ಇನ್ನಿತರ ಕಾರಣಗಳಿಂದ ಖಾಲಿಯಾದಲ್ಲಿ, ಈ ಹುದ್ದೆಗಳು ನಶಿಸಿ ಹೋಗುತ್ತವೆ.	
	ಒಟ್ಟು (2)	**190**	**4511**	**6**	**4707**		
				ಭಾಗ-3 (ಲಿಪಿಕ ಹುದ್ದೆಗಳ ವೃಂದ)			
1	ಆಡಳಿತಾಧಿಕಾರಿ (ರೂ.52650-97100)		32	0	32	ಸಹಾಯಕ ಆಡಳಿತ ಅಧಿಕಾರಿ ವೃಂದದಿಂದ ಮುಂಬಡ್ತಿಯ ಮೂಲಕ.	ಸಹಾಯಕ ಆಡಳಿತ ಅಧಿಕಾರಿ ವೃಂದದಲ್ಲಿ 5 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು.
2	ಸಹಾಯಕ ಆಡಳಿತ ಅಧಿಕಾರಿ (ರೂ.40900-83900)	0	44	0	44	ಅಧೀಕ್ಷಕರ ವೃಂದದಿಂದ ಮುಂಬಡ್ತಿಯ ಮೂಲಕ.	ಅಧೀಕ್ಷಕರ ವೃಂದದಲ್ಲಿ 5 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು.
3	ಅಧೀಕ್ಷಕರು (ರೂ.37900-70850)	33	329	0	362	12:1 ರ ಅನುಪಾತದಂತೆ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ವೃಂದಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವುದು, ಪ್ರತಿ 13ನೇ ಸ್ಥಾನವು	1) ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು.

15

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IV A	ಬೆಂಗಳೂರು, ಶುಕ್ರವಾರ, ೦೨, ಡಿಸೆಂಬರ್, ೨೦೨೨(ಮಾರ್ಗಶಿರ, ೧೧, ಶಕವರ್ಷ, ೧೯೪೪) BENGALURU, FRIDAY, 02, DECEMBER, 2022(MARGASHIRA , 11, SHAKAVARSHA, 1944)	ನಂ. ೫೯೧ No. 591

GOVERNMENT OF KARNATAKA

No: AGRI- ANE/32/2021

Karnataka Government Secretariat,
M.S. Building,
Bengaluru, dated: 02-12-2022.

NOTIFICATION

Whereas the draft of the Karnataka Agriculture Services (Cadre and Recruitment) (Amendment) Rules, 2022, was published as required by sub-section (1) of section 3 read with section 8 of the Karnataka State Civil Service Act, 1978 (Karnataka Act 14 of 1990) in Notification No: AGRI-32/ANE/2021, dated: 28-10-2022 in Part IV-A vide No.542 of Karnataka Extraordinary Gazette dated: 28-10-2022 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to public on 28-10-2022.

And whereas the objections and suggestions received have been considered by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government hereby makes the following rules, namely;

RULES

1. Title and commencement.- (1) These rules may be called the Karnataka Agriculture Services (Cadre and Recruitment) (Amendment) Rules, 2022.

(2) They shall come into force from the date of their final publication in the Official Gazette.

2. Amendment of Schedule.- In the Karnataka Agriculture Services (Recruitment) Rules, 2021 in the schedule,-

(1) before the entries relating to the category of post of "Commissioner for Agriculture", at serial no. 1 the following shall be inserted, namely:-

Part-1

(2) in Part-2 (TECHNICAL CADRE).-

(a) after the category of post of "Director of Agriculture", at serial no. 1, and entries relating there to following shall be inserted, namely:

1A	Director of Agriculture (Secondary Agriculture) (Rs.97,100-1,41,300)	0	1	0	1	By Promotion by selection from the cadre of Additional Director of Agriculture.	Must have put in a service of not less than three years in the cadre of Additional Director of Agriculture.

(b) in the category of post of "Joint Director of Agriculture" at serial no. 3, entries relating to number of posts in column 3, for the figures "0,46,6,52" the figures **"0,44,14,58",** shall be substituted.

(c) in the category of post of "Deputy Director of Agriculture", at serial no. 4, entries relating to number of posts in column 3, for the figures "5,81,0,86" the figures **"5,83,0,88",** shall be substituted.

(d) for the category of post of "Assistant Director of Agriculture", at serial no. 5 and entries relating there to the following shall be substituted, namely:-

5	Assistant Director of Agriculture (Rs.52,650-97,100/-)	19	398	0	417	(1) Twenty percent by direct Recruitment in accordance with the Karnataka Civil Services (Direct Recruitment) (General) Rules, 2021; and (2) Eighty percent by promotion from the cadre of Agricultural Officer	**For Direct Recruitment:** Must be holder of Master Degree in Agriculture from an University established by Law and accredited by the Indian Council for Agricultural Research (ICAR). **For Promotion:** (1) Must have put in a service of not less than 5 years in the cadre of agricultural officer; and (2) Must be holder of B.Sc in Agriculture or B.Sc (Hons.) Agriculture or B.Tech (Food Science and Technology)/ B.Tech(Food Technology) or B.Sc (Agriculture Marketing and Co-operation)/ B.Sc (Hons.) Agri Marketing and Co-operation / B.Sc (Hons.) Agri Business Management or B.Sc (Agri bio-technology)/ B.Tech (Bio-technology) or B.Sc (Agricultural Engineering)/

							B.Tech (Agricultural Engineering); Provided that, those possessing a qualification other than a Bachelors degree (B.Sc)/ B.Sc (Hons.) Agriculture shall not be considered against and/or promoted to any of the post notified by the Government of Karnataka vide Notifications AGD 3 AMS 2016, dated:01.09.2016, AGD 135 AMS 2016, dated:07.09.2016 and AGD 134 AMS 2016 dated:03.10.2016 or notified by Government from time to time.

(c) in the category of post of "Agricultural Officer" at serial no. 7, in column 5,-

(i) under the heading "For Direct Recruitment", for the words " filled by holders of Bachelor Degree in Agriculture and remaining fifteen percent of post shall be filled by holders of B.Tech (Agricultural Engineering) or B.Tech (Food technology/Food Science and Technology) or B.Tech (Biotechnology)" the words "filled by holders of B.Sc in Agriculture or B.Sc (Hons.)Agriculture and remaining fifteen percent of post shall be filled by holders of B.Tech (Food Science and Technology)/B.Tech(Food Technology) or B.Sc (Agriculture Marketing and Co-operation)/ B.Sc (Hons.) Agri Marketing and Co-operation / B.Sc (Hons.) Agri Business Management or B.Sc (Agri bio-technology)/ B.Tech (Bio-technology) or B.Sc (Agricultural Engineering)/B.Tech (Agricultural Engineering) " shall be substituted.

(ii) under the heading "For Promotion", in the proviso for the words "other than a Bachelor Degree in Agriculture {B.Tech (Agricultural engineering) or B.Tech (Food technology/Food Science and Technology) or B.Tech (Biotechnology)}" the words "other than a B.Sc in Agriculture or B.Sc (Hons.)Agriculture or B.Tech (Food Science and Technology)/B.Tech(Food Technology) or B.Sc (Agriculture Marketing and Co-operation)/ B.Sc (Hons.) Agri Marketing and Co-operation / B.Sc (Hons.) Agri Business Management or B.Sc (Agri bio-technology)/ B.Tech (Bio-technology) or B.Sc (Agricultural Engineering)/B.Tech (Agricultural Engineering)" shall be substituted.

(f) in the category of post of "Assistant Agricultural Officer" at serial no. 9, in column 5, under the heading "For Direct Recruitment" for the words "filled by holders of Bachelor's Degree in Agriculture and remaining fifteen percent of post shall be filled by holders of B.Tech (Agricultural Engineering) or B.Tech (Food Technology/Food Science and Technology) or B.Tech (Biotechnology)" the words "filled by holders of B.Sc in Agriculture or B.Sc (Hons.)Agriculture and remaining fifteen percent of post shall be filled by holders of B.Tech (Food Science and Technology)/B.Tech(Food Technology) or B.Sc (Agriculture Marketing and Co-operation)/ B.Sc (Hons.) Agri Marketing and Co-operation / B.Sc (Hons.) Agri Business Management or B.Sc (Agri Bio-technology)/ B.Tech (Bio-technology) or B.Sc (Agricultural Engineering)/B.Tech (Agricultural Engineering)" shall be substituted.

(g) in Part-3 (MINISTERIAL STAFF CADRE) - in the category of post of 'Administrative Officer' at serial no. 1, in column 5, the following shall be inserted at the end namely,-

"Provided that, if an officer who has put in a service of not less than five years is not available, then an officer who has put in a service of not less than three years may be considered for promotion".

(h) in Part-3 (MINISTERIAL STAFF CADRE) - in the category of post of 'Assistant Administrative Officer' at serial no. 2, in column 5, the following shall be inserted at the end namely,-

"Provided that, if an official who has put in a service of not less than five years is not available, then an official who has put in a service of not less than three years may be considered for promotion".

By order and in the name of the
Governor of Karnataka

(SADANAND N. PAVASKAR)
Deputy Secretary to Government-1,
Agriculture Department.

ಕರ್ನಾಟಕ ಸರ್ಕಾರ

ಸಂಖ್ಯೆ: Agri-32/ANE/2021

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 02-12-2022.

ಅಧಿಸೂಚನೆ

"ಕರ್ನಾಟಕ ಕೃಷಿ ಸೇವೆಗಳು (ವೃಂದ ಹಾಗೂ ನೇಮಕಾತಿ) (ತಿದ್ದುಪಡಿ) ನಿಯಮಗಳು, 2022" ಇದನ್ನು ರಚಿಸುವುದಕ್ಕೆ ದಿನಾಂಕ: 28-10-2022ರ ಅಧಿಸೂಚನೆ ಸಂಖ್ಯೆ: AGRI-ANE/32/2021ರಲ್ಲಿ ಪ್ರಕಟಿಸಿರುವ ಈ ಮುಂದಿನ ತಿದ್ದುಪಡಿ ನಿಯಮಗಳ ಕರಡನ್ನು ವಿಶೇಷ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 28-10-2022ರ ಕರ್ನಾಟಕ ರಾಜ್ಯಪತ್ರದ ಭಾಗ-IV ಎ ರ ಸಂಖ್ಯೆ: 542ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ 14ನೇ ಕರ್ನಾಟಕ ಅಧಿನಿಯಮ) 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ ;

ಸದರಿ ರಾಜ್ಯಪತ್ರವನ್ನು ದಿನಾಂಕ: 28-10-2022ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ;

ಮತ್ತು, ಸದರಿ ಕರಡಿನ ಬಗ್ಗೆ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿದ್ದು, ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978, (1990ರ 14ನೇ ಕರ್ನಾಟಕ ಅಧಿನಿಯಮ) 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಎಂದರೆ :-

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ.- (1) ಈ ನಿಯಮಗಳನ್ನು "ಕರ್ನಾಟಕ ಕೃಷಿ ಸೇವೆಗಳು (ವೃಂದ ಹಾಗೂ ನೇಮಕಾತಿ) (ತಿದ್ದುಪಡಿ) ನಿಯಮಗಳು, 2022" ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅನುಸೂಚಿಯ ತಿದ್ದುಪಡಿ,-** "ಕರ್ನಾಟಕ ಕೃಷಿ ಸೇವೆಗಳು (ವೃಂದ ಹಾಗೂ ನೇಮಕಾತಿ) ನಿಯಮಗಳು, 2021" ರ ಅನುಸೂಚಿಯಲ್ಲಿ,-
(1) "ಕೃಷಿ ಆಯುಕ್ತರು" ಹುದ್ದೆಯ ಪ್ರವರ್ಗಕ್ಕೆ ಸಂಬಂಧಿಸಿದ ನಮೂದುಗಳ ಮೊದಲು, ಕ್ರಮ ಸಂಖ್ಯೆ. 1ರ ಕೆಳಗೆ, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ :

ಭಾಗ-1

(2) ಭಾಗ -2 ರಲ್ಲಿ (ತಾಂತ್ರಿಕ ವೃಂದ) :-
(ಎ) "ಕೃಷಿ ನಿರ್ದೇಶಕರು" ಹುದ್ದೆಯ ಪ್ರವರ್ಗದ ನಂತರ, ಕ್ರಮ ಸಂಖ್ಯೆ. 1, ಮತ್ತು ಕೆಳಗಿನವುಗಳಿಗೆ ಸಂಬಂಧಿಸಿದ ನಮೂದುಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ:

1ಎ	ಕೃಷಿ ನಿರ್ದೇಶಕರು (ಸೆಕೆಂಡರಿ ಕೃಷಿ) (ರೂ.97,100-1,41,300)	0	1	0	1	ಅಪರ ಕೃಷಿ ನಿರ್ದೇಶಕರು ವೃಂದದಿಂದ ಆಯ್ಕೆ ಮೂಲಕ ಮುಂಬಡ್ತಿ	ಅಪರ ಕೃಷಿ ನಿರ್ದೇಶಕರು ವೃಂದದಲ್ಲಿ 3 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕದ್ದು

(ಬಿ) "ಜಂಟಿ ಕೃಷಿ ನಿರ್ದೇಶಕರು" ಹುದ್ದೆಯ ಪ್ರವರ್ಗದಲ್ಲಿ ಕ್ರಮ ಸಂಖ್ಯೆ. 3, ಅಂಕಣ 3 ರಲ್ಲಿನ ಹುದ್ದೆಗಳ ಸಂಖ್ಯೆಗೆ ಸಂಬಂಧಿಸಿದ ನಮೂದುಗಳು, "0,46,6,52" ಅಂಕಿಗಳಿಗೆ ಬದಲಾಗಿ "0,44,14,58" ಅಂಕಿಗಳೆಂದು ಬದಲಿಸಿಕೊಳ್ಳತಕ್ಕದ್ದು.

(ಸಿ) "ಉಪ ಕೃಷಿ ನಿರ್ದೇಶಕರು" ಹುದ್ದೆಯ ಪ್ರವರ್ಗದಲ್ಲಿ, ಕ್ರಮ ಸಂಖ್ಯೆ. 4, ಅಂಕಣ 3 ರಲ್ಲಿನ ಹುದ್ದೆಗಳ ಸಂಖ್ಯೆಗೆ ಸಂಬಂಧಿಸಿದ ನಮೂದುಗಳು, "5,81,0,86" ಅಂಕಿಗಳಿಗೆ ಬದಲಾಗಿ **"5,83,0,88"** ಅಂಕಿಗಳೆಂದು ಬದಲಿಸಿಕೊಳ್ಳತಕ್ಕದ್ದು.
(ಡಿ) "ಸಹಾಯಕ ಕೃಷಿ ನಿರ್ದೇಶಕ" ಹುದ್ದೆಯ ಪ್ರವರ್ಗಕ್ಕೆ, ಕ್ರಮ ಸಂಖ್ಯೆ. 5 ಮತ್ತು ಕೆಳಗಿನವುಗಳಿಗೆ ಸಂಬಂಧಿಸಿದ ನಮೂದುಗಳನ್ನು ಬದಲಿಸತಕ್ಕದ್ದು, ಅವುಗಳೆಂದರೆ:-

5	ಸಹಾಯಕ ಕೃಷಿ ನಿರ್ದೇಶಕರು (ರೂ.52,650-97,100/-)	19	398	0	417	1) ಶೇ.20ರಷ್ಟು ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆಯ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರನ್ವಯ ನೇರ ನೇಮಕಾತಿ ಮೂಲಕ; ಮತ್ತು 2) ಶೇ.80 ರಷ್ಟು ಹುದ್ದೆಗಳನ್ನು ಕೃಷಿ ಅಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ.	**ನೇರ ನೇಮಕಾತಿಗಾಗಿ:** ಕಾನೂನಿನ್ವಯ ಸ್ಥಾಪಿಸಲ್ಪಟ್ಟ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಇವರಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಅರ್ಜಿಸಿದ ಕೃಷಿ ಸ್ನಾತಕೋತ್ತರ ಪದವಿ ಅಥವಾ ಸರ್ಕಾರದಿಂದ ಕಾಲ ಕಾಲಕ್ಕೆ ಅಧಿಸೂಚಿಸಲಾಗುವ ವಿದ್ಯಾರ್ಹತೆ ಹೊಂದಿರತಕ್ಕದ್ದು; **ಮುಂಬಡ್ತಿಗಾಗಿ:-** 1) ಕೃಷಿ ಅಧಿಕಾರಿ ವೃಂದದಲ್ಲಿ 5 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು; ಮತ್ತು 2) ಬಿ.ಎಸ್ಸಿ, (ಕೃಷಿ)/ ಬಿ.ಎಸ್ಸಿ (ಆನರ್ಸ್) ಕೃಷಿ ಅಥವಾ ಬಿ. ಟೆಕ್ (ಆಹಾರ ವಿಜ್ಞಾನ & ತಂತ್ರಜ್ಞಾನ)/ ಬಿ. ಟೆಕ್. (ಆಹಾರ ತಂತ್ರಜ್ಞಾನ) ಅಥವಾ ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ಬಿ.ಎಸ್ಸಿ (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ/ಬಿ.ಎಸ್ಸಿ (ಆನರ್ಸ್) ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಬಿ.ಎಸ್ಸಿ, (ಕೃಷಿ ಜೈವಿಕ ತಂತ್ರಜ್ಞಾನ)/ ಬಿ. ಟೆಕ್ (ಕೃಷಿ ಜೈವಿಕ ತಂತ್ರಜ್ಞಾನ)/ ಅಥವಾ ಬಿ.ಎಸ್ಸಿ (ಅಗ್ರಿಕಲ್ಚರಲ್ ಇಂಜಿನಿಯರಿಂಗ್)/ ಬಿ.ಟೆಕ್ (ಅಗ್ರಿಕಲ್ಚರಲ್ಇಂಜಿನಿಯರಿಂಗ್); ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಪರಂತು, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಜಿಡಿ 3 ಎಎಂಎಸ್ 2016, ದಿನಾಂಕ: 01.09.2016, ಎಜಿಡಿ 135 ಎಎಂಎಸ್ 2016, ದಿನಾಂಕ: 07.09.2016 ಮತ್ತು

							ಎಜಿಡಿ 134 ಎಎಂಎಸ್ 2016, ದಿನಾಂಕ:03.10.2016 ರಲ್ಲಿ ಅಧಿಸೂಚಿಸಿರುವ ಹುದ್ದೆಗಳ ಮತ್ತು ಅಥವಾ/ ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸುವ ಹುದ್ದೆಗಳ ಎದುರಾಗಿ ಮುಂಬಡ್ತಿಗೆ ಬಿ.ಎಸ್ಸಿ (ಕೃಷಿ) / ಬಿ.ಎಸ್ಸಿ (ಆನರ್ಸ್) ಕೃಷಿ ಸ್ನಾತಕ ಪದವಿ ವಿದ್ಯಾರ್ಹತೆ ಹೊಂದಿರುವವರನ್ನು ಹೊರತುಪಡಿಸಿ, ಇತರೆ ವಿದ್ಯಾರ್ಹತೆಯನ್ನು ಪರಿಗಣಿಸತಕ್ಕದ್ದಲ್ಲ.

(ಇ) "ಕೃಷಿ ಅಧಿಕಾರಿ" ಹುದ್ದೆಯ ಪ್ರವರ್ಗದಲ್ಲಿ ಕ್ರಮ ಸಂಖ್ಯೆ. 7, ಅಂಕಣ 5 ರಲ್ಲಿ,

(i) "ನೇರ ನೇಮಕಾತಿಗಾಗಿ" ಶೀರ್ಷಿಕೆಯಡಿಯಲ್ಲಿ, "ಬಿ.ಎಸ್ಸಿ (ಕೃಷಿ) ಅಥವಾ ಸರ್ಕಾರದಿಂದ ಕಾಲ ಕಾಲಕ್ಕೆ ಅಧಿಸೂಚಿಸಲಾಗುವ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು; ಮತ್ತು ಶೇ. 15 ರಷ್ಟು ಹುದ್ದೆಗಳನ್ನು ಬಿ.ಟೆಕ್ (ಕೃಷಿ ಇಂಜಿನಿಯರಿಂಗ್ ಅಥವಾ ಬಿ.ಟೆಕ್ (ಆಹಾರ ತಂತ್ರಜ್ಞಾನ/ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ)/ಬಿ.ಟೆಕ್ (ಜೈವಿಕ ತಂತ್ರಜ್ಞಾನ) ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು" ಎಂಬ ಪದಗಳ ಬದಲಾಗಿ "ಬಿ.ಎಸ್ಸಿ, (ಕೃಷಿ) ಅಥವಾ ಬಿ.ಎಸ್ಸಿ (ಆನರ್ಸ್) ಕೃಷಿ ಮತ್ತು ಶೇ. 15 ರಷ್ಟು ಹುದ್ದೆಗಳನ್ನು ಬಿ. ಟೆಕ್ (ಆಹಾರ ವಿಜ್ಞಾನ & ತಂತ್ರಜ್ಞಾನ)/ ಬಿ. ಟೆಕ್. (ಆಹಾರ ತಂತ್ರಜ್ಞಾನ) ಅಥವಾ ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ಬಿ.ಎಸ್ಸಿ (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ/ಬಿ.ಎಸ್ಸಿ (ಆನರ್ಸ್) ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಬಿ.ಎಸ್ಸಿ (ಕೃಷಿ ಜೈವಿಕ ತಂತ್ರಜ್ಞಾನ)/ಬಿ.ಟೆಕ್ (ಜೈವಿಕ ತಂತ್ರಜ್ಞಾನ)/ ಅಥವಾ ಬಿ.ಎಸ್ಸಿ (ಅಗ್ರಿಕಲ್ಚರಲ್ ಇಂಜಿನಿಯರಿಂಗ್)/ ಬಿ.ಟೆಕ್ (ಅಗ್ರಿಕಲ್ಚರಲ್ ಇಂಜಿನಿಯರಿಂಗ್); ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳುವುದು" ಎಂದು ಬದಲಾಯಿಸಿಕೊಳ್ಳತಕ್ಕದ್ದು.

(ii) "ಮುಂಬಡ್ತಿಗಾಗಿ" ಶೀರ್ಷಿಕೆಯಡಿಯಲ್ಲಿ, "{ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) ಅಥವಾ ಬಿ.ಟೆಕ್ (ಆಹಾರ ತಂತ್ರಜ್ಞಾನ/ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಅಥವಾ ಬಿ. ಟೆಕ್ (ಜೈವಿಕ ತಂತ್ರಜ್ಞಾನ)} ಕೃಷಿ ಪದವಿ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು" ಎಂಬ ಪದಗಳ ಬದಲಾಗಿ "ಬಿ.ಎಸ್ಸಿ, (ಕೃಷಿ) ಅಥವಾ ಬಿ.ಎಸ್ಸಿ (ಆನರ್ಸ್) ಕೃಷಿ, ಬಿ. ಟೆಕ್ (ಆಹಾರ ವಿಜ್ಞಾನ & ತಂತ್ರಜ್ಞಾನ)/ ಬಿ. ಟೆಕ್. (ಆಹಾರ ತಂತ್ರಜ್ಞಾನ) ಅಥವಾ ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ಬಿ.ಎಸ್ಸಿ (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ/ಬಿ.ಎಸ್ಸಿ (ಆನರ್ಸ್) ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಬಿ.ಎಸ್ಸಿ, (ಕೃಷಿ ಜೈವಿಕ ತಂತ್ರಜ್ಞಾನ)/ಬಿ. ಟೆಕ್ (ಜೈವಿಕ ತಂತ್ರಜ್ಞಾನ)/ ಅಥವಾ ಬಿ.ಎಸ್ಸಿ (ಅಗ್ರಿಕಲ್ಚರಲ್ ಇಂಜಿನಿಯರಿಂಗ್)/ ಬಿ.ಟೆಕ್ (ಅಗ್ರಿಕಲ್ಚರಲ್ ಇಂಜಿನಿಯರಿಂಗ್); ಎಂಬ ಪದಗಳನ್ನು ಬದಲಾಯಿಸಿಕೊಳ್ಳತಕ್ಕದ್ದು.

(ಎಫ್) "ಸಹಾಯಕ ಕೃಷಿ ಅಧಿಕಾರಿ" ಹುದ್ದೆಯ ಪ್ರವರ್ಗದಲ್ಲಿ ಕ್ರಮ ಸಂಖ್ಯೆ. 9, ಅಂಕಣ 5 ರಲ್ಲಿ, "ನೇರ ನೇಮಕಾತಿಗಾಗಿ" ಶೀರ್ಷಿಕೆಯಡಿಯಲ್ಲಿ, "ಬಿ.ಎಸ್ಸಿ (ಕೃಷಿ) ಅಥವಾ ಸರ್ಕಾರದಿಂದ ಕಾಲ ಕಾಲಕ್ಕೆ ಅಧಿಸೂಚಿಸಲಾಗುವ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು; ಮತ್ತು ಶೇ. 15 ರಷ್ಟು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಹುದ್ದೆಗಳನ್ನು ಬಿ.ಟೆಕ್ (ಜೈವಿಕ ತಂತ್ರಜ್ಞಾನ), ಬಿ.ಟೆಕ್ (ಕೃಷಿ ಇಂಜಿನಿಯರಿಂಗ್) ಅಥವಾ ಬಿ.ಟೆಕ್ (ಆಹಾರ ತಂತ್ರಜ್ಞಾನ/ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ), ಬಿ. ಟೆಕ್ (ಜೈವಿಕ ತಂತ್ರಜ್ಞಾನ) ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು" ಎಂಬ ಪದಗಳ ಬದಲಾಗಿ "ಬಿ.ಎಸ್ಸಿ, (ಕೃಷಿ) ಅಥವಾ ಬಿ.ಎಸ್ಸಿ (ಆನರ್ಸ್) ಕೃಷಿ ಮತ್ತು ಶೇ. 15 ರಷ್ಟು ಹುದ್ದೆಗಳನ್ನು ಬಿ. ಟೆಕ್ (ಆಹಾರ ವಿಜ್ಞಾನ & ತಂತ್ರಜ್ಞಾನ)/ ಬಿ. ಟೆಕ್. (ಆಹಾರ ತಂತ್ರಜ್ಞಾನ) ಅಥವಾ ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ಬಿ.ಎಸ್ಸಿ (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ/ಬಿ.ಎಸ್ಸಿ (ಆನರ್ಸ್) ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಬಿ.ಎಸ್ಸಿ, (ಕೃಷಿ ಜೈವಿಕ ತಂತ್ರಜ್ಞಾನ)/ಬಿ. ಟೆಕ್ (ಜೈವಿಕ ತಂತ್ರಜ್ಞಾನ)/ ಅಥವಾ ಬಿ.ಎಸ್ಸಿ (ಅಗ್ರಿಕಲ್ಚರಲ್ ಇಂಜಿನಿಯರಿಂಗ್)/ ಬಿ.ಟೆಕ್ (ಅಗ್ರಿಕಲ್ಚರಲ್ ಇಂಜಿನಿಯರಿಂಗ್); ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳುವುದು" ಎಂದು ಬದಲಾಯಿಸಿಕೊಳ್ಳತಕ್ಕದ್ದು.

(ಜಿ) ಭಾಗ-3 (ಲಿಪಿಕ ಹುದ್ದೆಗಳ ವೃಂದ)- "ಆಡಳಿತಾಧಿಕಾರಿ" ಹುದ್ದೆಯ ವರ್ಗದಲ್ಲಿ ಕ್ರಮ ಸಂಖ್ಯೆ. 1, ಅಂಕಣ 5 ರ ಕೊನೆಯಲ್ಲಿ ಈ ಕೆಳಗಿನಂತೆ ಸೇರಿಸಿಕೊಳ್ಳತಕ್ಕದ್ದು,-

> "ಪರಂತು, ಕನಿಷ್ಠ 05 ವರ್ಷಗಳ ಸೇವೆಯನ್ನು ಪೂರೈಸಿರುವ ಅಧಿಕಾರಿಯು ಲಭ್ಯವಿಲ್ಲದೇ ಇದ್ದಲ್ಲಿ, ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರುವ ಅಧಿಕಾರಿಯವರನ್ನು ಮುಂಬಡ್ತಿಗಾಗಿ ಪರಿಗಣಿಸಬಹುದಾಗಿದೆ".

(ಹೆಚ್) ಭಾಗ-3 (ಲಿಪಿಕ ಹುದ್ದೆಗಳ ವೃಂದ)- "ಸಹಾಯಕ ಆಡಳಿತಾಧಿಕಾರಿ" ಹುದ್ದೆಯ ಪ್ರವರ್ಗದಲ್ಲಿ ಕ್ರಮ ಸಂಖ್ಯೆ.2, ಅಂಕಣ 5 ರ ಕೊನೆಯಲ್ಲಿ ಈ ಕೆಳಗಿನಂತೆ ಸೇರಿಸಿಕೊಳ್ಳತಕ್ಕದ್ದು,-

> "ಪರಂತು, ಕನಿಷ್ಠ 05 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯು ಲಭ್ಯವಿಲ್ಲದೇ ಇದ್ದಲ್ಲಿ, ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರುವ ಸಿಬ್ಬಂದಿಯವರನ್ನು ಮುಂಬಡ್ತಿಗಾಗಿ ಪರಿಗಣಿಸಬಹುದಾಗಿದೆ".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸದಾನಂದ ಎನ್. ಪಾವಸ್ಕರ್)
ಸರ್ಕಾರದ ಉಪ ಕಾರ್ಯದರ್ಶಿ-1,
ಕೃಷಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು – ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658
ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ ಸಿ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 21.12.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಚಾಮರಾಜನಗರ ವಿಭಾಗದ ವ್ಯಾಪ್ತಿಯಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಚಾಮರಾಜನಗರ ವಿಭಾಗದ ವ್ಯಾಪ್ತಿಯಲ್ಲಿ 468 ಅನುಸೂಚಿಗಳಿಗೆ 509 ಬಸ್ಸುಗಳೊಂದಿಗೆ 41 ಹೆಚ್ಚುವರಿ ವಾಹನಗಳು ಲಭ್ಯವಿದ್ದು ಬಸ್ಸುಗಳ ಕೊರತೆ ಇರುವುದಿಲ್ಲ
ಆ	ಬಂದಿದ್ದಲ್ಲಿ, ಸದರಿ ಬಸ್ಸುಗಳ ಕೊರತೆಯನ್ನು ಸರಿದೂಗಿಸಲು ಹೊಸ ಬಸ್ಸುಗಳನ್ನು ಯಾವಾಗ ಪೂರೈಸಲಾಗುವುದು;	
ಇ	ಕಳೆದ 3 ವರ್ಷಗಳಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲಾಗಿದೆ; (ವರ್ಷವಾರು, ಗ್ರಾಮವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಚಾಮರಾಜನಗರ ವಿಭಾಗಕ್ಕೆ ಮಂಜೂರು ಮಾಡಿರುವ ಹೊಸ ಬಸ್ಸುಗಳ ಘಟಕವಾರು ವಿವರ ಈ ಕೆಳಗಿನಂತಿದೆ: (see table below) * ಬಸ್ಸುಗಳನ್ನು ಘಟಕಗಳಿಗೆ ಮಂಜೂರು ಮಾಡಲಾಗುತ್ತದೆ. ಗ್ರಾಮವಾರು ಮಂಜೂರು ಮಾಡುವುದಿಲ್ಲ. ** ಕೋವಿಡ್-19ರಿಂದಾಗಿ ನಿಗಮವು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, 2021-22ನೇ ಸಾಲಿನಲ್ಲಿ ಯಾವುದೇ ಹೊಸ ಬಸ್‌ಗಳನ್ನು ಖರೀದಿಸಿರುವುದಿಲ್ಲ.
ಈ	ಮೆಜೆಸ್ಟಿಕ್ ಸಿಟಿಯಿಂದ ಚಾಮರಾಜನಗರಕ್ಕೆ ನೇರವಾಗಿ ಬಸ್ಸುಗಳು ಇಲ್ಲದಿರುವ ಕಾರಣ	ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಿಂದ ಚಾಮರಾಜನಗರಕ್ಕೆ 2 ಏಕ ಸುತ್ತುವಳಿಗಳ ನೇರ

ಘಟಕ*	2019-20	2020-21	2021-22 **
ಚಾಮರಾಜ ನಗರ	14	3	0
ಗುಂಡ್ಲುಪೇಟೆ	13	3	0
ಕೊಳ್ಳೇಗಾಲ	17	2	0
ನಂಜನಗೂಡು	14	1	0
ಒಟ್ಟು	**58**	**9**	**0**

	ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿ ದಿನ ನಿಯಮಿತವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಮುಂದುವರೆದು, ಬೆಂಗಳೂರು ನಗರದಲ್ಲಿ
ಉ	ಬಸ್ಸುಗಳನ್ನು ಪೂರೈಸಲು ಸರ್ಕಾರ ವಿಫಲವಾಗಿದ್ದಲ್ಲಿ ಹೊಸ ಬಸ್ಸುಗಳ ಪೂರೈಕೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು	ವಾಹನ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ ಮೈಸೂರು ರಸ್ತೆ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದ್ದು, ಸದರಿ ಬಸ್ ನಿಲ್ದಾಣದಿಂದ ಚಾಮರಾಜನಗರಕ್ಕೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 33 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿ ದಿನ ನಿಯಮಿತವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ಮೈಸೂರು ರಸ್ತೆ ಬಸ್ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರ ಅನುಕೂಲಕ್ಕಾಗಿ 118 ಏಕ ಸುತ್ತುವಳಿಗಳ ಸಂಪರ್ಕ ಸಾರಿಗೆ ಸೌಲಭ್ಯವನ್ನು ಪ್ರತಿ ದಿನದ 24 ಗಂಟೆಗಳ ಅವಧಿಯಲ್ಲಿ ಕಲ್ಪಿಸಲಾಗಿದ್ದು, ಸದರಿ ಸಾರಿಗೆ ಸೌಲಭ್ಯವನ್ನು ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿದ್ದಾರೆ.

ಸಂಖ್ಯೆ: ಟಿಡಿ 279 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	659
ಸದಸ್ಯರ ಹೆಸರು :	ಶ್ರೀ ಪುಟ್ಟರಂಗಶೆಟ್ಟಿ.ಸಿ (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ :	21.12.2022
ಉತ್ತರಿಸುವ ಸಚಿವರು :	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಮತಕ್ಷೇತ್ರಕ್ಕೆ ಇಲಾಖೆಯ ವಿವಿಧ ಯೋಜನೆಗಳಡಿ ಕಳೆದ 03 ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. ಅವುಗಳು ಯಾವ ಹಂತದಲ್ಲಿವೆ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಚಾಮರಾಜನಗರ ಮತಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಾಡಿದ ಅನುದಾನದ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ.
ಆ)	ಅನುದಾನ ಪಡೆಯಲು ಇರುವ ಅರ್ಹತೆ ಮಾನದಂಡಗಳೇನು; ಆದೇಶದ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆ/ ಕಾರ್ಯಕ್ರಮಗಳಲ್ಲಿ ಅನುದಾನ ಪಡೆಯಲು ಇರಬೇಕಾದ ಅರ್ಹತೆಯ ಮಾನದಂಡಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಿದೆ.
ಇ)	2022-23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು; ಈ ಯೋಜನೆಗಳಿಗೆ ನಿಗದಿಪಡಿಸಿದ ಗುರಿ ಎಷ್ಟು;	2022-23ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಅನುಷ್ಠಾನ ಗೊಳಿಸುತ್ತಿರುವ ವಿವಿಧ ಯೋಜನೆ/ಕಾರ್ಯಕ್ರಮಗಳ ಮಾಹಿತಿಯನ್ನು ಅನುಬಂಧ-3 ರಲ್ಲಿ ಹಾಗೂ ಈ ಯೋಜನೆಗಳಿಗೆ ನಿಗಧಿ ಪಡಿಸಿರುವ ಗುರಿಗಳ ಮಾಹಿತಿಯನ್ನುಅನುಬಂಧ-4 ರಲ್ಲಿ ನೀಡಿದೆ.
ಈ)	ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಯ ಕಾರ್ಯಕ್ರಮಗಳಾವುವು?	

ಸಂಖ್ಯೆ:ಹಿಂವಕ 752 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:659ಗೆ ಅನುಬಂಧ-1
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿ
ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನದ ಮಾಹಿತಿ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಕಾರ್ಯಕ್ರಮದ ಹೆಸರು	2019-20		2020-21		2021-22	
		ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
	ರಾಜ್ಯವಲಯ						
1	ಅಲೆಮಾರಿ / ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳು 2225-03-102-0-12	2.80	2.78	2.59	2.59	1.08	1.08
2	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	125.00	125.00	28.00	28.00	305.75	305.75
3	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ (ಕೇಂ.ಪು.ಯೋ) 2225-03-277-2-51	15.34	14.65	0.00	0.00	0.00	0.00
4	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇಂ.ಪು.ಯೋ) 2225-03-277-2-52	98.57	98.52	14.35	14.24	49.56	49.56
5	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	130.64	127.66	30.40	25.84	4.00	4.00
6	ಆಹಾರ ಮತ್ತು ವಸತಿ ಸಹಾಯ - ವಿದ್ಯಾಸಿರಿ 2225-03-283-0-03	17.25	17.24	0.00	0.00	0.00	0.00
7	ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳು 2225-03-277-3-11	8.71	8.28	6.30	6.27	2.99	2.90
8	ತರಬೇತಿ, ಅರಿವು ಮತ್ತು ಪ್ರೋತ್ಸಾಹ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	8.42	8.40	0.00	0.00	0.00	0.00
9	ಹಾಸ್ಟೇಲ್ ಗಳ ಕಟ್ಟಡಗಳ ನಿರ್ಮಾಣ 4225-03-277-2-06	6.15	6.15	0.00	0.00	0.00	0.00
	ಒಟ್ಟು (ಅ)	412.88	408.68	81.64	76.94	363.38	363.29
	ಜಿಲ್ಲಾ ವಲಯ						
1	ಕಾರ್ಯ ನಿರ್ವಾಹಕ ಸಿಬ್ಬಂದಿ 2225-00-103-0-39	51.62	33.93	69.78	62.33	48.44	48.44
2	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	4.23	4.23	10.28	9.00	9.40	9.40
3	ಹಿಂದುಳಿದ ವರ್ಗ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	230.32	225.54	249.55	222.34	256.46	256.00
4	ಅನಾಥಾಲಯಗಳಿಗೆ ಸಹಾಯಧನ 2225-00-103-0-73	18.26	13.45	18.26	2.38	18.26	0.00
5	ಇತರೆ ಹಿಂದುಳಿದ ವರ್ಗಗಳಿಗೆ ಇತರ ರಿಯಾಯ್ತಿಗಳು 2225-00-103-0-28	124.00	114.00	124.00	124.00	124.00	124.00
6	ವಕೀಲರಿಗೆ ಪ್ರೋತ್ಸಾಹಧನ - 2225-00-103-0-58	10.23	9.60	10.23	9.60	10.23	9.58
7	ದೇವರಾಜ ಅರಸುರವರ ಹುಟ್ಟು ಹಬ್ಬದ ದಿನಾಚರಣೆ ಮತ್ತು 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರಗೋಷ್ಠಿ 2225-00-103-0-56	1.00	1.00	1.00	1.00	1.00	1.00
8	ಕಟ್ಟಡಗಳ ನಿರ್ವಹಣೆ - 2225-00-103-0-40	14.00	14.00	14.00	14.00	14.00	11.00
9	ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ - 2225-00-103-0-72	10.25	10.25	0.00	0.00	0.00	0.00
10	ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ 2225-00-103-0-79	5.68	2.63	0.00	0.00	0.00	0.00
11	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ - 2225-00-103-0-66	48.26	35.35	0.00	0.00	0.00	0.00
	ಒಟ್ಟು (ಆ)	517.85	463.98	497.10	444.65	481.79	459.42
	ಒಟ್ಟಾರೆ (ಅ) + (ಆ)	930.73	872.66	578.74	521.59	845.17	822.71

ನಿರ್ದೇಶಕರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ: 659ಕ್ಕೆ ಅನುಬಂಧ-2

ಕಾರ್ಯಕ್ರಮಗಳ ವಿವರ

I. ವಿದ್ಯಾರ್ಥಿನಿಲಯಗಳ ನಿರ್ವಹಣೆ :

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

- ಹಿಂದುಳಿದ ವರ್ಗಗಳಿಗೆ ಸೇರಿದ 5 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರವೇಶ.
- 997 ಬಾಲಕರ ವಿದ್ಯಾರ್ಥಿನಿಲಯಗಳು – 53412 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.
- 284 ಬಾಲಕಿಯರ ವಿದ್ಯಾರ್ಥಿನಿಲಯಗಳು – 15606 ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶ.
- ಒಟ್ಟು 1281 ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು - 69018 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.

ನೀಡಲಾಗುತ್ತಿರುವ ಸೌಲಭ್ಯಗಳು:

- ಪ್ರತಿ ವಿದ್ಯಾರ್ಥಿಗೆ– ಮಾಹೆಯಾನ ರೂ.1650/– ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರ ನೀಡಿಕೆ.
- ರೂ.1000 ವೆಚ್ಚದಲ್ಲಿ ವರ್ಷಕ್ಕೆ 2 ಜೊತೆ ಸಮವಸ್ತ್ರ ಪೂರೈಕೆ.
- ಪ್ರತಿ ಮಾಹೆ ರೂ.136/– (ಬಾಲಕಿ) ರೂ.114/–(ಬಾಲಕ) ರ ದರದಲ್ಲಿ ಶುಚಿ ಸಂಭ್ರಮ ಕಿಟ್ ವಿತರಣೆ.
- ಬಾಲಕರಿಗೆ ಎರಡು ತಿಂಗಳಿಗೊಮ್ಮೆ ರೂ.60/-ರಂತೆ ಕ್ಷೌರದ ವೆಚ್ಚ ನೀಡಿಕೆ. (5 ಬಾರಿ ಮಾತ್ರ)
- ರೂ.400/–ರ ವೆಚ್ಚದಲ್ಲಿ ವರ್ಷಕ್ಕೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ ನೀಡಿಕೆ.
- 3 ವರ್ಷಕ್ಕೊಮ್ಮೆ ರೂ.878/– ರ ದರದಲ್ಲಿ ಜಮಖಾನ ಹೊದಿಕೆ ಸರಬರಾಜು
- ಅಲ್ಪಕಾಲಿಕ ಭೋದಕರಿಗೆ ಗೌರವಧನ – ಪ್ರತಿ ಭೋದಕರಿಗೆ ಮಾಹೆಯಾನ ರೂ.2000/– ರಂತೆ ಮೂರು ಭೋದಕರಿಗೆ (6 ತಿಂಗಳ ಅವಧಿಗೆ)
- ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆ ಖರೀದಿ (ವಾಸ್ತವಿಕ ದರ)
- ಕ್ರೀಡಾ ಸಾಮಗ್ರಿಗಳು ಪ್ರತಿ ವರ್ಷಕ್ಕೊಮ್ಮೆ, ಪ್ರತಿ ನಿಲಯಕ್ಕೆ, ಒಂದು ಸೆಟ್ ವಾಸ್ತವ ದರದಲ್ಲಿ

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಇರಬೇಕಾದ ಅರ್ಹತೆಗಳು:

- ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 230 ಬಿಎಂಎಸ್ 2022 ದಿನಾಂಕ: 21-06-2022ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-156ರಲ್ಲಿ ಘೋಷಿಸಿರುವಂತೆ ನಿಲಯವಾರು ಅರ್ಜಿಗಳನ್ನು ಸ್ವೀಕರಿಸುವ ಬದಲು ತಾಲ್ಲೂಕುವಾರು ಅರ್ಜಿಗಳನ್ನು ಆಹ್ವಾನಿಸಿ ವಿದ್ಯಾರ್ಥಿ ನಿಲಯಗಳಲ್ಲಿ ಸಿ.ಇ.ಟಿ ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸಲು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.
- ವಿದ್ಯಾರ್ಥಿಗಳು ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ 5ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.

- ಸರ್ಕಾರದ ಆದೇಶ ಸಂಖ್ಯೆ: ಹಿಂವಕ 397 ಬಿಎಂಎಸ್ 2013 ದಿನಾಂಕ: 05–09–2013ರ ಪ್ರಕಾರ, ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿಯ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ.44,500/–ಕ್ಕೆ ನಿಗಧಿಪಡಿಸಿದೆ.
- ನವೀಕರಣ ವಿದ್ಯಾರ್ಥಿಗಳ ಪ್ರವೇಶಾತಿಯ ಬಳಿಕ ಉಳಿಕೆ ಸ್ಥಾನಗಳಿಗೆ ಆನ್‌ಲೈನ ಮೂಲಕ ತಾಲ್ಲೂಕುವಾರು ಅರ್ಜಿಗಳನ್ನು ಆಹ್ವಾನಿಸಿ ಮೇರಿಟ್ ಆಧಾರದ ಮೇಲೆ ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿದ ಹೊಸ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು.
- ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಕಇ 79 ಬಿಎಂಎಸ್ 95, ದಿನಾಂಕ: 30–08–1995ರಲ್ಲಿ ನಿಗಧಿಪಡಿಸಿರುವಂತೆ ಈ ಕೆಳಕಂಡಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗಧಿಪಡಿಸಲಾಗಿದೆ.

ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ನಿಗದಿಪಡಿಸಿದ ಪ್ರವರ್ಗವಾರು ಮೀಸಲಾತಿ

1	ಪ್ರವರ್ಗ – 1	ಶೇಕಡ 10
2	ಪ್ರವರ್ಗ – 2ಎ	ಶೇಕಡ 35
3	ಪ್ರವರ್ಗ – 2ಬಿ	ಶೇಕಡ 09
4	ಪ್ರವರ್ಗ – 3ಎ	ಶೇಕಡ 09
5	ಪ್ರವರ್ಗ – 3ಬಿ	ಶೇಕಡ 12
6	ಪರಿಶಿಷ್ಟ ಜಾತಿ	ಶೇಕಡ 21
7	ಪರಿಶಿಷ್ಟ ಪಂಗಡ	ಶೇಕಡ 04
	ಒಟ್ಟು	ಶೇಕಡ 100

- ಮೇಲ್ಕಂಡಂತೆ ನಿಗಧಿಪಡಿಸಿರುವ ಪ್ರವರ್ಗವಾರು ಮೀಸಲಾತಿಯಲ್ಲಿ ಆಯಾ ಪ್ರವರ್ಗವಾರು ರಡಿಯಲ್ಲಿ ಅತ್ಯಂತ ದುರ್ಬಲ ವರ್ಗದವರಾದ ಮಾಜಿ ಸೈನಿಕರ ಮಕ್ಕಳು, ವಿಧವೆಯರ ಮಕ್ಕಳು, ದೇವದಾಸಿಯರ ಮಕ್ಕಳು, ತಂದೆ ಹಾಗೂ ತಾಯಿ ಇಲ್ಲದ ಅನಾಥ ಮಕ್ಕಳು, ಪ್ರಮಾಣೀಕೃತ ಬಾಲ ಕಾರ್ಮಿಕರು, ಯೋಜನಾ ನಿರ್ವಸಿತ ಪೋಷಕರ ಮಕ್ಕಳು, ದೌರ್ಜನ್ಯದಲ್ಲಿ ಮೃತಪಟ್ಟ/ಶಾಶ್ವತ ಅಂಗವಿಕಲ ಪೋಷಕರ ಮಕ್ಕಳು, ಅಪಘಾತದಲ್ಲಿ ಮೃತಪಟ್ಟ/ಶಾಶ್ವತ ಅಂಗವಿಕಲರಾಗಿರುವ ಪೋಷಕರ ಮಕ್ಕಳು, ಆದಿವಾಸಿ ಪಂಗಡದ (ಜೇನು ಕುರುಬ ಹಾಗೂ ಕೊರಗ ಸಮಾಜ) ಮಕ್ಕಳು ಆತ್ಮಹತ್ಮೆ ಮಾಡಿಕೊಂಡ ರೈತರ ಕುಟುಂಬ ಮಕ್ಕಳು, ಬಾಲಕಿಯರ/ಬಾಲಕರ ಬಾಲಮಂದಿರಗಳಲ್ಲಿ ದಾಖಲಾದ ಏಕ ಪೋಷಕರ ಮಕ್ಕಳಿಗೆ ಶೇ.25%ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ.

2. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:

- ಸರ್ಕಾರಿ/ಸರ್ಕಾರಿ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 522 ಬಾಲಕರು ಹಾಗೂ 635 ಬಾಲಕಿಯರು ಒಟ್ಟು 1157 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ರಾಜ್ಯಾದ್ಯಂತ ಪ್ರಾರಂಭಿಸಿ ನಿರ್ವಹಿಸಲಾಗುತ್ತಿದ್ದು, ಇವುಗಳಲ್ಲಿ ಕ್ರಮವಾಗಿ 72504 ಬಾಲಕರು ಹಾಗೂ 86314 ಬಾಲಕಿಯರು ಹೀಗೆ ಒಟ್ಟು 158818 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

- 522 ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿ 72504 ವಿದ್ಯಾರ್ಥಿಗಳಿಗೆ ಪ್ರವೇಶ
- 635 ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 86314 ವಿದ್ಯಾರ್ಥಿಗಳಿಗೆ ಪ್ರವೇಶ
- ಒಟ್ಟು 1157 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ 158818 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ

ಪ್ರತಿ ವಿದ್ಯಾರ್ಥಿಗೆ ನೀಡಲಾಗುವ ಸೌಲಭ್ಯಗಳು:

- ಮಾಹೆಯಾನ ರೂ.1750/-ರ ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರದ ವೆಚ್ಚ ನೀಡಿಕೆ.
- ಉಚಿತ ವಸತಿ ಸೌಕರ್ಯ
- ಪ್ರತಿ ನಿಲಯಕ್ಕೆ 2 ದಿನ ಪ್ರತಿಕೆಗಳು (ಒಂದು ಆಂಗ್ಲ ಭಾಷೆ ಹಾಗೂ ಒಂದು ಕನ್ನಡ ಭಾಷೆ) ವಾಸ್ತವಿಕ ವೆಚ್ಚದಲ್ಲಿ
- ಮಂಜೂರಾತಿ ಸಂಖ್ಯೆ 50 ಇರುವ ನಿಲಯಕ್ಕೆ ವರ್ಷಕ್ಕೆ ರೂ.600 ಹಾಗೂ ಮಂಜೂರಾತಿ ಸಂಖ್ಯೆ: 50ಕ್ಕಿಂತ ಹೆಚ್ಚು ಇರುವ ನಿಲಯಕ್ಕೆ ರೂ.1000/-ರಂತೆ ಪಾತ್ರೆಗಳಿಗೆ ಕಲಾಯಿ ವೆಚ್ಚ ಭರಿಸುವುದು.
- ವೈದ್ಯಕೀಯ ಸೌಲಭ್ಯ – ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ ಬರುವ ಎಲ್ಲಾ ವಸ್ತುಗಳು (ವಾಸ್ತವ ದರದಂತೆ)
- ಪ್ರತಿ ಮಾಹೆ ರೂ.136/– (ಬಾಲಕಿ) ರೂ.114/–(ಬಾಲಕ) ರ ದರದಲ್ಲಿ ಶುಚಿ ಸಂಭ್ರಮ ಕಿಟ್ ವಿತರಣೆ.
- 3 ವರ್ಷಕ್ಕೊಮ್ಮೆ ರೂ.878/– ರ ದರದಲ್ಲಿ ಜಮಖಾನ ಹೊದಿಕೆ ಸರಬರಾಜು
- ಪ್ರತಿ ನಿಲಯಕ್ಕೆ 2 ದಿನ ಪತ್ರಿಕೆಗಳ ಪೂರೈಕೆಗಾಗಿ (ಒಂದು ಆಂಗ್ಲ ಭಾಷೆ ಹಾಗೂ ಒಂದು ಕನ್ನಡ ಭಾಷೆ) ದಿನಪತ್ರಿಕೆಗಳು ವಾಸ್ತವಿಕ ವೆಚ್ಚದಲ್ಲಿ.
- ಸ್ನಾತಕೋತ್ತರ / ವೃತ್ತಿಪರ ವಿದ್ಯಾರ್ಥಿನಿಲಯಗಳ ಗ್ರಂಥಾಲಯಕ್ಕಾಗಿ ಪ್ರಥಮ ಬಾರಿಗೆ ರೂ.1.25 ಲಕ್ಷ, ನಂತರದ ಪ್ರತಿ ವರ್ಷಕ್ಕೆ ರೂ.30,000/–
- ಇತರೆ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.1.00 ಲಕ್ಷ, ನಂತರದ ಪ್ರತಿ ವರ್ಷಕ್ಕೆ ರೂ.20,000/–
- ಕ್ರೀಡಾ ಸಾಮಾಗ್ರಿಗಳು ಪ್ರತಿ ವರ್ಷಕ್ಕೊಮ್ಮೆ ಪ್ರತಿ ನಿಲಯಕ್ಕೆ ಒಂದು ಸೆಟ್ ವಾಸ್ತವ ದರದಲ್ಲಿ

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಇರಬೇಕಾದ ಅರ್ಹತೆಗಳು:

- ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 230 ಬಿಎಂಎಸ್ 2022 ದಿನಾಂಕ: 21-06-2022ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-156ರಲ್ಲಿ ಘೋಷಿಸಿರುವಂತೆ ನಿಲಯವಾರು ಅರ್ಜಿಗಳನ್ನು ಸ್ವೀಕರಿಸುವ ಬದಲು ತಾಲ್ಲೂಕು ವಾರು ಅರ್ಜಿಗಳನ್ನು ಆಹ್ವಾನಿಸಿ ವಿದ್ಯಾರ್ಥಿ ನಿಲಯಗಳಲ್ಲಿ ಸಿ.ಇ.ಟಿ ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸಲು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.
    - ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

- ವಿದ್ಯಾರ್ಥಿನಿಲಯಗಳು ಇರುವ ಸ್ಥಳಗಳ ಕಾಲೇಜುಗಳಿಂದ 5 ಕಿ.ಮೀ.ಗಿಂತ ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ

- ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿಯ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ.1.00 ಲಕ್ಷಕ್ಕೆ ನಿಗಧಿಪಡಿಸಿದೆ.

- ಅರ್ಹತೆ ಮತ್ತು ಆದಾಯದ ಮಾನದಂಡದ ಮೇಲೆ ಆಯ್ಕೆ ಮಾಡಲಾಗುವುದು.

- ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಕಇ 79 ಬಿಎಂಎಸ್ 95, ದಿನಾಂಕ: 30–08–1995 ರಲ್ಲಿ ನಿಗಧಿಪಡಿಸಿರುವಂತೆ ಈ ಕೆಳಕಂಡಂತೆ ಪ್ರವರ್ಗವಾರು ಮೀಸಲಾತಿಯನ್ನು ನಿಗಧಿಪಡಿಸಲಾಗಿದೆ

- ಸರ್ಕಾರದಿಂದ ಅಂಗೀಕೃತವಾದ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಅಂದರೆ, ಪಿ.ಯು.ಸಿ. ಐ.ಟಿ.ಐ., ಡಿಪ್ಲೋಮೋ, ಟಿ.ಸಿ.ಹೆಚ್., ಬಿ.ಎ.ಡಿ., ಪದವಿ., ಸ್ನಾತಕೋತ್ತರ ಪದವಿ., ಎಂ.ಬಿ.ಬಿ.ಎಸ್., ಬಿ.ಇ., ಬಿ.ಬಿ.ಎಸ್.ಸಿ., ಎಂ.ಟೆಕ್., ಡ್ರಾಯಿಂಗ್ ಕೋರ್ಸು ಇತ್ಯಾದಿ ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಅರ್ಹರು.

- ಹಿಂದುಳಿದ ವರ್ಗಗಳಾದ ಪ್ರವರ್ಗ 2ಎ, 2ಬಿ, 3ಎ, 3ಬಿಯ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.1.00 ಲಕ್ಷ ಹಾಗೂ ಪ್ರವರ್ಗ–1, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಕುಟುಂಬ ವಾರ್ಷಿಕ ಆದಾಯ ರೂ.2.50 ಲಕ್ಷದ ಮಿತಿಯೊಳಗಿದ್ದಲ್ಲಿ ಪ್ರವೇಶಕ್ಕೆ ಅರ್ಹರು

- ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು. ನವೀಕರಣದ ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಿದ್ದಲ್ಲಿ ವಸತಿ ನಿಲಯಕ್ಕೆ ಪವೇಶ ಪಡೆಯಲು ಅರ್ಹರು

- ನವೀಕರಣ ವಿದ್ಯಾರ್ಥಿಗಳ ಪ್ರವೇಶಾತಿಯ ಬಳಿಕ ಉಳಿಕೆ ಸ್ಥಾನಗಳಿಗೆ ಮೇರಿಟ್ ಆಧಾರದ ಮೇಲೆ ಕೌನ್ಸಿಲಿಂಗ ಮುಖಾಂತರ ಆಯ್ಕೆ ಮಾಡಿದ ಹೊಸ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು.

ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ನಿಗದಿಪಡಿಸಿದ ಪ್ರವರ್ಗವಾರು ಮೀಸಲಾತಿ

1	ಪ್ರವರ್ಗ – 1	ಶೇಕಡ 10
2	ಪ್ರವರ್ಗ – 2ಎ	ಶೇಕಡ 35
3	ಪ್ರವರ್ಗ – 2ಬಿ	ಶೇಕಡ 09
4	ಪ್ರವರ್ಗ – 3ಎ	ಶೇಕಡ 09
5	ಪ್ರವರ್ಗ – 3ಬಿ	ಶೇಕಡ 12
6	ಪರಿಶಿಷ್ಟ ಜಾತಿ	ಶೇಕಡ 21
7	ಪರಿಶಿಷ್ಟ ಪಂಗಡ	ಶೇಕಡ 04
	ಒಟ್ಟು	ಶೇಕಡ 100

- ಮೇಲ್ಕಂಡಂತೆ ನಿಗಧಿಪಡಿಸಿರುವ ಪ್ರವರ್ಗವಾರು ಮೀಸಲಾತಿಯಲ್ಲಿ ಆಯಾ ಪ್ರವರ್ಗವಾರು ರಡಿಯಲ್ಲಿ ಅತ್ಯಂತ ದುರ್ಬಲ ವರ್ಗದವರಾದ ಮಾಜಿ ಸೈನಿಕರ ಮಕ್ಕಳು, ವಿಧವೆಯರ ಮಕ್ಕಳು, ದೇವದಾಸಿಯರ

ಮಕ್ಕಳು, ತಂದೆ ಹಾಗೂ ತಾಯಿ ಇಲ್ಲದ ಅನಾಥ ಮಕ್ಕಳು, ಪ್ರಮಾಣೀಕೃತ ಬಾಲ ಕಾರ್ಮಿಕರು, ಯೋಜನಾ ನಿರ್ವಸಿತ ಪೋಷಕರ ಮಕ್ಕಳು, ದೌರ್ಜನ್ಯದಲ್ಲಿ ಮೃತಪಟ್ಟ/ಶಾಶ್ವತ ಅಂಗವಿಕಲ ಪೋಷಕರ ಮಕ್ಕಳು, ಅಪಘಾತದಲ್ಲಿ ಮೃತಪಟ್ಟ/ಶಾಶ್ವತ ಅಂಗವಿಕಲರಾಗಿರುವ ಪೋಷಕರ ಮಕ್ಕಳು, ಆದಿವಾಸಿ ಪಂಗಡದ (ಜೇನು ಕುರುಬ ಹಾಗೂ ಕೊರಗ ಸಮಾಜ) ಮಕ್ಕಳು ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬ ಮಕ್ಕಳು, ಬಾಲಕಿಯರ/ಬಾಲಕರ ಬಾಲಮಂದಿರಗಳಲ್ಲಿ ದಾಖಲಾದ ಏಕ ಪೋಷಕರ ಮಕ್ಕಳಿಗೆ ಶೇ.25%ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ.

3. ಸರ್ಕಾರಿ ಆಶ್ರಮ ಶಾಲೆಗಳ ನಿರ್ವಹಣೆ:

- ಪ್ರವರ್ಗ– 1ರ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ 18 ಆಶ್ರಮಶಾಲೆಗಳನ್ನು ನಿರ್ವಹಿಸಲಾಗುತ್ತಿದೆ.
- 1ರಿಂದ 4ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಮಕ್ಕಳಿಗೆ ಶಿಕ್ಷಣದ ಜೊತೆಗೆ ಊಟ ಮತ್ತು ವಸತಿ ಸೌಲಭ್ಯ

ನೀಡಲಾಗುತ್ತಿರುವ ಸೌಲಭ್ಯ: ಪ್ರತಿ ವಿದ್ಯಾರ್ಥಿಗೆ

- ಮಾಹೆಯಾನ ರೂ. 1350/– ರ ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರ ನೀಡಿಕೆ
- ವರ್ಷಕ್ಕೆ ರೂ.1000/– ರ ದರದಲ್ಲಿ 2 ಜೊತೆ ಸಮವಸ್ತ್ರ ಪೂರೈಕೆ
- ವಿದ್ಯಾರ್ಥಿಗಳಿಗೆ ಜಮಖಾನ ಹೊದಿಕೆ ಸರಬರಾಜು.
- ಪ್ರತಿ ಬಾಲಕ ವಿದ್ಯಾರ್ಥಿಗೆ ವಾರ್ಷಿಕ ರೂ.30/–ರಂತೆ ಕ್ಷೌರದ ವೆಚ್ಚ.
- ಶೇಕಡ 75 ರಷ್ಟನ್ನು ಪ್ರವರ್ಗ–1 ಹಾಗೂ ಶೇಕಡ 25 ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.
- ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿ ಸೇರಿದ ವಿದ್ಯಾರ್ಥಿಗಳಿಗೆ ರೂ.44,500/– ಗಳ ವಾರ್ಷಿಕ ಆದಾಯ ಮಿತಿ

4. ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:

- 227 ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1150/– ರಂತೆ 10 ತಿಂಗಳ ಅವಧಿಗೆ ಭೋಜನಾ ವೆಚ್ಚವನ್ನು ನೀಡಲಾಗುತ್ತಿದೆ.

ನಿಬಂಧನೆಗಳು:

- ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ.1.00ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.44,500/– ಗಳ ಆದಾಯಮಿತಿ
- 5 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ

5. ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:

- 24 ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1250/– ರಂತೆ 10 ತಿಂಗಳ ಅವಧಿಗೆ ಭೋಜನಾ ವೆಚ್ಚವನ್ನು ನೀಡಲಾಗುತ್ತಿದೆ.

* ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ.2.50ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಆದಾಯಮಿತಿ ನಿಗದಿಪಡಿಸಿದೆ.
* ಪದವಿ ಪೂರ್ವ ಕೋರ್ಸಿನಿಂದ ಸ್ನಾತಕೋತ್ತರ ಪದವಿಗಳವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ

6. ಖಾಸಗಿ ಅನುದಾನಿತ ಅನಾಥಾಲಯಗಳು:

* ಸ್ವಯಂ ಸೇವಾ ಸಂಸ್ಥೆಗಳು ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಅನಾಥಾಲಯಗಳ ನಿರ್ವಹಣೆ
* 7686 ಸಂಖ್ಯಾಬಲದ 54 ಖಾಸಗಿ ಅನಾಥಾಲಯಗಳ ನಿರ್ವಹಣೆ
* ಮಾಹೆಯಾನ ರೂ.950/–ರ ದರದಲ್ಲಿ ವರ್ಷದ 12 ತಿಂಗಳುಗಳಿಗೆ ಆಹಾರದ ಬಾಬ್ತು ಸಹಾಯಧನ ಮಂಜೂರು.

ನಿಬಂಧನೆಗಳು:

* ಅನಾಥ ವಿದ್ಯಾರ್ಥಿಗಳಿಗೆ ಆದಾಯಮಿತಿ ಇರುವುದಿಲ್ಲ.
* ನಿರ್ಗತಿಕ ವಿದ್ಯಾರ್ಥಿಗಳು ವಾರ್ಷಿಕ ಆದಾಯಮಿತಿ– ಪ್ರವರ್ಗ–1ಕ್ಕೆ ರೂ.1.00 ಲಕ್ಷ ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ರೂ.44,500/– ನಿಗದಿ.
* 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ನಿರ್ಗತಿಕ ಹಾಗೂ ಅನಾಥ ಮಕ್ಕಳು ಸೌಲಭ್ಯಕ್ಕೆ ಅರ್ಹರು.

ವಿದ್ಯಾರ್ಥಿವೇತನ ಕಾರ್ಯಕ್ರಮ

ಮೆಟ್ರಿಕ್–ಪೂರ್ವ ವಿದ್ಯಾರ್ಥಿವೇತನ:

ದರಗಳ ವಿವರ:

ತರಗತಿ	ಬಾಲಕ/ ಬಾಲಕಿ	Adhoc Grant	ಒಟ್ಟು
1 ರಿಂದ 5	250/–	500/–	750/–
6 ರಿಂದ 8	400/–	500/–	900/–
9 ರಿಂದ 10	500/–	500/–	1000/–

ಅರ್ಹತೆಗಳು:

* ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು.
* ವಾರ್ಷಿಕ ಆದಾಯ ಮಿತಿ:

  ಪ್ರವರ್ಗ–1 – ರೂ.1.00 ಲಕ್ಷ,

  ಪ್ರವರ್ಗ–2ಎ, 3ಎ, ಮತ್ತು 3ಬಿ – ರೂ.44,500/–

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:

ಮೆಟ್ರಿಕ್-ನಂತರದ ವಿದ್ಯಾರ್ಥಿವೇತನದ ದರಗಳು

ಕ್ರ.ಸಂ.	ಗುಂಪು	ಮಂಜೂರು ಮಾಡಲಾಗುವ ವಿದ್ಯಾರ್ಥಿವೇತನದ ದರ (ವಾರ್ಷಿಕ)
1	ಗುಂಪು-ಎ	3500/-
2	ಗುಂಪು-ಬಿ	3350/-
3	ಗುಂಪು-ಸಿ	2100/-
4	ಗುಂಪು-ಡಿ	1600/-

ಅರ್ಹತೆಗಳು:

- ವಾರ್ಷಿಕ ಆದಾಯಮಿತಿ

  ಪ್ರವರ್ಗ-1 -ರೂ.2.50 ಲಕ್ಷ,

  ಪ್ರವರ್ಗ-2ಎ, 3ಎ, ಮತ್ತು 3ಬಿ - ರೂ.1.00 ಲಕ್ಷ

ವಿದ್ಯಾಸಿರಿ- ಊಟ ಮತ್ತು ವಸತಿ ಸಹಾಯ ಯೋಜನೆ:

ಅರ್ಹತೆಗಳು:

- ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ, ಪ್ರವೇಶ ದೊರೆಯದ ಹಾಗೂ ಮೆಟ್ರಿಕ್-ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಂಜೂರಾತಿ.
- ಆಯ್ಕೆಯಾದ ವಿದ್ಯಾರ್ಥಿಗಳಿಗೆ, ಪ್ರತಿ ತಿಂಗಳಿಗೆ ರೂ.1500/-ರಂತೆ, ಶೈಕ್ಷಣಿಕ ಅವಧಿಯ 10 ತಿಂಗಳಿಗೆ ಒಟ್ಟು ರೂ.15,000/- ಸಹಾಯಧನ ಮಂಜೂರು

- ಆದಾಯಮಿತಿ:

ಪ್ರವರ್ಗ-1 -ರೂ.2.50 ಲಕ್ಷ

ಪ್ರವರ್ಗ-2ಎ, 3ಎ ಮತ್ತು 3ಬಿ - ರೂ.1.00 ಲಕ್ಷ

ಶುಲ್ಕ ವಿನಾಯಿತಿ

- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ನೆರವಾಗುವ ದೃಷ್ಟಿಯಿಂದ ಸರ್ಕಾರವು, ನಿಗದಿಪಡಿಸುವ ಶುಲ್ಕದ ದರಗಳನ್ನು ಪಾವತಿಸಲಾಗುವುದು.

- ಆದಾಯ ಮಿತಿ :

  ಪ್ರವರ್ಗ-1 -ರೂ.2.50 ಲಕ್ಷ,

  ಪ್ರವರ್ಗ-2ಎ, 3ಎ, ಮತ್ತು 3ಬಿ - ರೂ.1.00 ಲಕ್ಷ

- ಶುಲ್ಕ ವಿನಾಯಿತಿಗೆ ಅರ್ಹ ಇರುವ ಶುಲ್ಕಗಳು:

  ಅ) ಬೋಧನಾ ಶುಲ್ಕ
  ಆ) ಪ್ರಯೋಗಾಲಯ ಶುಲ್ಕ

ಇ) ಪರೀಕ್ಷಾ ಶುಲ್ಕ
ಈ) ಕ್ರೀಡಾ ಶುಲ್ಕ
ಉ) ಗ್ರಂಥಾಲಯ ಶುಲ್ಕ

ಪಿಎಚ್.ಡಿ ಪೂರ್ಣಾವಧಿ ಫೆಲೋಶಿಪ್

- ಪೂರ್ಣಾವಧಿ ಪಿಎಚ್.ಡಿ. ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮಾಸಿಕ ರೂ.10,000/- ದಂತೆ ವ್ಯಾಸಂಗ ವೇತನ/ಫೆಲೋಶಿಪ್ ಅನ್ನು ನೀಡಿ, ಉನ್ನತ ಶಿಕ್ಷಣ/ಸಂಶೋಧನೆಯಲ್ಲಿ ತೊಡಗಿಕೊಳ್ಳಲು ನೆರವು ನೀಡಲಾಗುತ್ತಿದೆ.

- ಆದಾಯ ಮಿತಿ:

ಪ್ರವರ್ಗ-1- ರೂ.4.50 ಲಕ್ಷ

ಇತರೆ ವರ್ಗಗಳಿಗೆ ರೂ.3.50 ಲಕ್ಷ.

ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರ

- ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕಗಳಿಸಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡುವ ದೃಷ್ಟಿಯಿಂದ "ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಆದಾಯ ಮಿತಿ

ಪ್ರವರ್ಗ-1 -ರೂ.2.50 ಲಕ್ಷ,

ಪ್ರವರ್ಗ-2ಎ, 3ಎ, ಮತ್ತು 3ಬಿ - ರೂ.1.00 ಲಕ್ಷ

ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ

- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಹೆಚ್.ಡಿ/ಸಂಶೋಧನೆ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಗರಿಷ್ಠ ರೂ.10.00 ಲಕ್ಷಗಳ ಧನಸಹಾಯ ನೀಡಲಾಗುವುದು.
- ಆದಾಯ ಮಿತಿ : ವಿದ್ಯಾರ್ಥಿ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷ

ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ:

- ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಪ್ರೋತ್ಸಾಹಧನ ಮಂಜೂರು.
- ಎಸ್.ಎಸ್.ಎಲ್.ಸಿ - ರೂ.1000/-, ಪಿ.ಯು.ಸಿ. ಡಿಪ್ಲೋಮ - ರೂ.1500/-ಪದವಿ - ರೂ.2000/- ಹಾಗೂ ಸ್ನಾತಕೋತ್ತರ ಪದವಿಗಳು -ರೂ.3000/-

ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

- ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಾದ ಐ.ಐ.ಟಿ., ಐ.ಐ.ಎಂ. ಮತ್ತು ಐ.ಐ.ಎಸ್ಸಿ ಮುಂತಾದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಯ ಪ್ರೋತ್ಸಾಹ ಧನ ರೂ.2.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

ತರಬೇತಿ ಕಾರ್ಯಕ್ರಮಗಳು

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ:

- ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಐ.ಎ.ಎಸ್, ಕೆ.ಎ.ಎಸ್ ಮತ್ತು ಬ್ಯಾಂಕಿಂಗ್ ಪ್ರೋಬೇಷನರಿ ಆಫೀಸರ್ಸ್ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಗಳಲ್ಲಿ ಯಾವುದಾದರೂ ಒಂದಕ್ಕೆ ಉಚಿತ ಪರೀಕ್ಷಾ ಪೂರ್ವ ತರಬೇತಿಯನ್ನು ಪ್ರತಿಷ್ಠಿತ ಖಾಸಗಿ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ.
- ಆದಾಯದ ಮಿತಿ:

  ಪ್ರವರ್ಗ–1 : ರೂ.4.50 ಲಕ್ಷ

  ಪ್ರವರ್ಗ–2ಎ, 3ಎ ಮತ್ತು 3ಬಿ : ರೂ.3.50 ಲಕ್ಷ

ಹಿಂದುಳಿದ ವರ್ಗಗಳ ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ

- ಅವಧಿ:
  - ಡಿ.ಜಿ.ಎನ್.ಎಂ – 3 1/2 ವರ್ಷಗಳು
  - ಬಿ.ಎಸ್ಸಿ, ನರ್ಸಿಂಗ್ – 4 ವರ್ಷಗಳು
  - ಪ್ಯಾರಾ ಮೆಡಿಕಲ್ (ಎಸ್.ಎಸ್.ಎಲ್.ಸಿ.) – 3 ವರ್ಷಗಳು
  - ಪ್ಯಾರಾ ಮೆಡಿಕಲ್ (ಪಿ.ಯು.ಸಿ.) – 2 ವರ್ಷಗಳು

ಆದಾಯ ಮಿತಿ:

ಪ್ರವರ್ಗ–I –ರೂ.2.50 ಲಕ್ಷ

ಪ್ರವರ್ಗ 2ಎ, 3ಎ ಮತ್ತು 3ಬಿ – ರೂ.1.00 ಲಕ್ಷಗಳು.

ವಿಶ್ವವಿದ್ಯಾಲಯಗಳಲ್ಲಿ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ

- ಕರ್ನಾಟಕ ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಉದ್ಯೋಗ ಮಾರ್ಗದರ್ಶನ ನೀಡಲು ಪ್ರತಿ ವಿಶ್ವವಿದ್ಯಾಲಯಗಳಿಗೆ ರೂ.5.00 ಲಕ್ಷಗಳ ಧನಸಹಾಯವನ್ನು ಒದಗಿಸುವುದು.

ಭಾರತೀಯ ಸೇನೆಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ

- ಭಾರತೀಯ ಸೇನೆಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ.

- ಅಂತಿಮ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್., ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಲು ಮತ್ತು ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದಲ್ಲಿ ವರ್ಷದಲ್ಲಿ 3 ದಿನಗಳ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ.

ಕಾನೂನು ಪದವೀಧರರಿಗೆ ತರಬೇತಿ

- ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಕೀಲಿ ವೃತ್ತಿಯಲ್ಲಿ ಜಿಲ್ಲಾಮಟ್ಟದಲ್ಲಿ ತರಬೇತಿ ನೀಡಲಾಗುತ್ತಿದೆ.
- ಮಾಸಿಕ ರೂ.4000/– ಗಳ ಶಿಷ್ಯವೇತನ ನೀಡಿಕೆ.
- ಆದಾಯಮಿತಿ:
- ಪ್ರವರ್ಗ–1 –ರೂ.3.50 ಲಕ್ಷ

  ಇತರೆ ವರ್ಗಗಳಿಗೆ – ರೂ.2.50 ಲಕ್ಷ.

ಹೊಲಿಗೆ ತರಬೇತಿ ಕೇಂದ್ರಗಳು

- ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಹೊಲಿಗೆ ವೃತ್ತಿಯಲ್ಲಿ ತರಬೇತಿ ಹೊಂದಿ ಸ್ವಯಂ ಉದ್ಯೋಗದೊಡನೆ ತಮ್ಮ ಜೀವನೋಪಾಯವನ್ನು ನಡೆಸಲು ಸಾಧ್ಯವಾಗುವಂತೆ ಈ ಯೋಜನೆಯನ್ನು ಜಿಲ್ಲಾವಲಯ ಕಾರ್ಯಕ್ರಮದಡಿ ಅನುಷ್ಠಾನ ಗೊಳಿಸಲಾಗುತ್ತಿದೆ.
- ಆದಾಯಮಿತಿ: ಪ್ರವರ್ಗ–1 -- ರೂ.2.50 ಲಕ್ಷ
- ಇತರೆ ವರ್ಗಗಳಿಗೆ ರೂ.1.00 ಲಕ್ಷ.

ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳು

ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದರ ಮೂಲಕ ಶೈಕ್ಷಣಿಕ ಪ್ರೋತ್ಸಾಹ ನೀಡಲು ಈ ಕೆಳಕಾಣಿಸಿದ ದರಗಳಲ್ಲಿ ಪ್ರೋತ್ಸಾಹ ಧನ ಮಂಜೂರು ಮಾಡಲಾಗುತ್ತಿದೆ.

ಕ್ರ. ಸಂ.	ತರಗತಿ	ಮಾಹೆಯಾನ ಪ್ರೋತ್ಸಾಹ ಧನ ದರಗಳು		
		ಬಾಲಕರು	ಬಾಲಕಿಯರು	ಅವಧಿ
1	1 ರಿಂದ 10ನೇ ತರಗತಿ	ರೂ.200/–	ರೂ200/–	10 ತಿಂಗಳು

ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ

ಅಲೆಮಾರಿ/ಅರೆ ಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ಶಿಕ್ಷಣವನ್ನು ಮುಂದುವರೆಸಲು ಹಾಗೂ ಈ ಹಂತದ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವ ಉದ್ದೇಶದಿಂದ ಈ ಕೆಳಕಾಣಿಸಿದ ದರಗಳಲ್ಲಿ ಅರ್ಹತಾ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುವುದು.

ಕ್ರ.ಸಂ.	ವಿವರ	ಮಾಸಿಕ ವಿದ್ಯಾರ್ಥಿ ವೇತನದ ದರ	ಅವಧಿ
1	ಪಿ.ಯು.ಸಿ. ಮತ್ತು ಡಿಪ್ಲೊಮೊ	ರೂ.300/-	10 ತಿಂಗಳು
2	ಪದವಿ ಮತ್ತು ಸ್ನಾತಕೋತ್ತರ ಪದವಿ	ರೂ.400/-	10 ತಿಂಗಳು
3	ಸಿಇಟಿ ಮೂಲಕ ಸರ್ಕಾರಿ ಕೋಟಾದಲ್ಲಿ ಬಿಇ, ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ತತ್ಸಮಾನವಾದ ಇನ್ನಿತರ ತಾಂತ್ರಿಕ/ವೃತ್ತಿಪರ ಕೋರ್ಸ್‌ಗಳಿಗೆ	ರೂ.500/-	10 ತಿಂಗಳು

ಆಶ್ರಮ ಶಾಲೆಗಳ ಪ್ರಾರಂಭ ಹಾಗೂ ನಿರ್ವಹಣೆ

- ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಕುಟುಂಬಕ್ಕೆ ಸೇರಿದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ನೆರವು ಹಾಗೂ ಉತ್ತೇಜನ ನೀಡುವ ದೃಷ್ಟಿಯಿಂದ 125 ಸಂಖ್ಯಾಬಲದ 4 ಆಶ್ರಮ ಶಾಲೆಗಳನ್ನು ಕೊಪ್ಪಳ, ಕಲಬುರಗಿ, ಚಿಕ್ಕಮಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ನಿರ್ವಹಿಸಲಾಗುತ್ತಿದೆ.

ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಸೌಲಭ್ಯ

- ಸರ್ಕಾರದ ಆದೇಶ ಸಂಖ್ಯೆ: ಹಿಂವಕ 424 ಬಿಎಂಎಸ್ 2013, ದಿನಾಂಕ:17.07.2013ರಲ್ಲಿ ಗುರುತಿಸಿರುವ ಪ್ರತಿಷ್ಠಿತ ಶಾಲೆಗಳಲ್ಲಿ ನಿಬಂಧನೆಗಳಿಗೊಳಪಟ್ಟು, ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತಿದೆ ಹಾಗೂ ನವೀಕರಣ ವಿದ್ಯಾರ್ಥಿಗಳಿಗೆ ಅವರ ಶಾಲಾ ವಿದ್ಯಾಭ್ಯಾಸ ಮುಗಿಯುವವರೆಗೆ ಶಾಲಾ ಹಾಗೂ ವಸತಿ ಶುಲ್ಕವನ್ನು ಇಲಾಖೆಯಿಂದ ಭರಿಸಲಾಗುತ್ತಿದೆ.

ಅರಿವು ಮೂಡಿಸುವ ಕಾರ್ಯಕ್ರಮ

- ಗೊಲ್ಲ ಜನಾಂಗದವರು ಹೆಚ್ಚಾಗಿ ವಾಸಿಸುವ ಕಾಲೋನಿಗಳಲ್ಲಿ ಕಂದಾಚಾರಗಳಿಂದ ಇರುವ ಪದ್ಧತಿಯನ್ನು ಕೊನೆಗಾಣಿಸಲು ಹಾಗೂ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮೂಲಭೂತ ಸೌಕರ್ಯಗಳು

- ಅಲೆಮಾರಿ/ಅರೆ ಅಲೆಮಾರಿ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಹಾಗೂ ಹೊಸದಾಗಿ ನಿರ್ಮಾಣ ಮಾಡಿದ ಬಡಾವಣೆಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣವನ್ನು ಮಾಡಿ ನಾಗರೀಕ ಸೌಲಭ್ಯವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

ವಸತಿ ಯೋಜನೆ

- ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಸತಿ ರಹಿತರಿಗೆ ಅತಿ ಅಗತ್ಯ ಮೂಲಭೂತ ಸೌಕರ್ಯವಾದ ವಸತಿ ಸೌಲಭ್ಯವನ್ನು ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.
- ಘಟಕ ವೆಚ್ಚ– 1.20 ಲಕ್ಷ

ಹಿಂದುಳಿದ ವರ್ಗಗಳ ಸಮುದಾಯಗಳಿಗೆ, ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಸಹಾಯಧನ:

- ಹಿಂದುಳಿದ ವರ್ಗಗಳ ಜಾತಿ/ಜನಾಂಗಗಳ ಸಮುದಾಯದ ಚಟುವಟಿಕೆಗಳನ್ನು ಹಾಗೂ ವಿದ್ಯಾರ್ಥಿ ನಿಲಯಗಳನ್ನು ನಡೆಸಲು ವಿವಿಧ ಹಿಂದುಳಿದ ವರ್ಗಗಳ ಜಾತಿಗಳಿಗೆ ಸೇರಿದ ಸಂಘ ಸಂಸ್ಥೆಗಳಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನವನ್ನು ಮಂಜೂರು ಮಾಡುವ ಉದ್ದೇಶವನ್ನು ಹೊಂದಿರುತ್ತದೆ.
- ಈ ಕೆಳಗಿನ ಪ್ರದೇಶಗಳಲ್ಲಿ ನಿರ್ಮಿಸುವ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳಿಗೆ ಅನುದಾನದ ಗರಿಷ್ಠ ಮಿತಿಯನ್ನು ಕೆಳಕಂಡಂತೆ ನಿಗದಿಪಡಿಸಿದೆ.

ಕ್ರ.ಸಂ	ಸ್ಥಳ	ಗರಿಷ್ಠ ಸಹಾಯಧನ
1	ಗ್ರಾಮ ಪಂಚಾಯಿತಿ /ಪಟ್ಟಣ ಪಂಚಾಯಿತಿ	ರೂ.10.00 ಲಕ್ಷ
2	ತಾಲ್ಲೂಕು ಕೇಂದ್ರ ಸ್ಥಾನ,	ರೂ.25.00 ಲಕ್ಷ
3	ಜಿಲ್ಲಾ ಕೇಂದ್ರಸ್ಥಾನ	ರೂ.50.00 ಲಕ್ಷ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ) ಇವರ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ: 659ಕ್ಕೆ ಅನುಬಂಧ-3

<u>ಕಾರ್ಯಕ್ರಮಗಳ ವಿವರ</u>

	ಶೈಕ್ಷಣಿಕ ಕಾರ್ಯಕ್ರಮಗಳು
I	**ವಿದ್ಯಾರ್ಥಿನಿಲಯಗಳ ನಿರ್ವಹಣೆ**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
2	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
3	ಸರ್ಕಾರಿ ಆಶ್ರಮಶಾಲೆಗಳು
4	ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು
5	ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
6	ಖಾಸಗಿ ಅನುದಾನಿತ ಅನಾಥಾಲಯಗಳು
7	ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ
II	**ವಿದ್ಯಾರ್ಥಿವೇತನ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
2	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
3	ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ
4	ಶುಲ್ಕ ಮರು ಪಾವತಿ
5	ಪೂರ್ಣಾವಧಿ ಪಿ.ಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಫೆಲೋಷಿಫ್
6	ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ
7	ದೇವರಾಜ ಅರಸು ಪ್ರತಿಭಾ ಪುರಸ್ಕಾರ
8	ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ
9	ಐ.ಐ.ಟಿ, ಐ.ಐ.ಎಂ, ಐ.ಐ.ಎಸ್ಸಿ ಇತ್ಯಾದಿಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಒಂದು ಬಾರಿ ರೂ.2.00 ಲಕ್ಷ ಪ್ರೋತ್ಸಾಹಧನ
III	**ತರಬೇತಿ ಕಾರ್ಯಕ್ರಮಗಳು**
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ನರ್ಸಿಂಗ್ ತರಬೇತಿ
3	ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ
4	ಕಾನೂನು ಪದವೀಧರರಿಗೆ ಶಿಷ್ಯವೇತನ
5	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ
6	ಸೇನೆಗಳಿಗೆ ಆಯ್ಕೆಯಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ
7	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ
IV	ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
2	ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ

3	ಆಶ್ರಮ ಶಾಲೆಗಳ ನಿರ್ವಹಣೆ
4	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
5	ಅರಿವು ಮೂಡಿಸುವ ಕಾರ್ಯಕ್ರಮ
6	ಮೂಲಭೂತ ಸೌಕರ್ಯಗಳು
7	ವಸತಿ ಸೌಲಭ್ಯ
8	ನಿವೇಶನ ಹಂಚಿಕೆಗಾಗಿ ಜಮೀನು ಖರೀದಿ
V	ವಿವಿಧ ಸಮುದಾಯಗಳ ಅಭಿವೃದ್ಧಿ
1	ಹಿಂದುಳಿದ ವರ್ಗಗಳ ಸಮುದಾಯಗಳು ನಿರ್ಮಿಸುವ ಸಮುದಾಯ ಭವನಗಳಿಗೆ ಸಹಾಯಾನುಧಾನ
2	ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ನಡೆಸುವ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಒಂದು ಬಾರಿಯ ಅನುದಾನ
3	ದೇವರಾಜ ಅರಸು ಭವನ ನಿರ್ಮಾಣ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 659ಕ್ಕೆ ಅನುಬಂಧ-4

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2022-23ನೇ ಸಾಲಿನಲ್ಲಿ ಅನುಷ್ಠಾನ ಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಗುರಿಗಳ ಮಾಹಿತಿ

ಕ್ರ ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ		ನಿಗಧಿಪಡಿಸಿದ ಗುರಿ
	ರಾಜ್ಯವಲಯ ಕಾರ್ಯಕ್ರಮಗಳು		
1	ನಿರ್ದೇಶನ ಮತ್ತು ಆಡಳಿತ 2225-03-001-0-01	ಅಧಿಕಾರಿ/ಸಿಬ್ಬಂದಿ	132
2	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	ವಿದ್ಯಾರ್ಥಿಗಳು	0
3	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ-ತಾಲ್ಲೂಕು ಕಛೇರಿ 2225-03-277-3-11	ಕಛೇರಿ	176
4	ಹಿಂದುಳಿದ ವರ್ಗದವರಿಗೆ ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ (ಕ.ವ.ಶಿ.ಸಂ.ಸಂಘ) 2225-03-277-2-62	ವಿದ್ಯಾರ್ಥಿಗಳು	41730
5	ದೇವರಾಜ ಅರಸು ಸಂಶೋಧನಾ ಸಂಸ್ಥೆ ಹಾಗೂ ಇತರೆ ಕಾರ್ಯಕ್ರಮಗಳು 2225-03-277-2-08	ಅಧಿಕಾರಿ/ಸಿಬ್ಬಂದಿ	14
6	ಆಹಾರ ಮತ್ತು ವಸತಿ ಸಹಾಯ - ವಿದ್ಯಾಸಿರಿ 2225-03-283-0-03	ವಿದ್ಯಾರ್ಥಿಗಳು	100000
7	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ 2225-03-277-2-51	ವಿದ್ಯಾರ್ಥಿಗಳು	246399
8	ಕೇ.ಪು.ಯೋ - ಕೇಂದ್ರದ ಪಾಲು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನ 2225-03-277-2-52	ವಿದ್ಯಾರ್ಥಿಗಳು	141403
9	ತರಬೇತಿ, ಅರಿವು ಮತ್ತು ಪ್ರೋತ್ಸಾಹ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	ಅಭ್ಯರ್ಥಿಗಳು	1939
10	ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳು 2225-03-102-0-12	ವಿದ್ಯಾರ್ಥಿಗಳು	488
11	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಕಟ್ಟಡ ನಿರ್ಮಾಣ 4225-03-277-2-06	ಕಟ್ಟಡಗಳು	50
12	ವಸತಿ ಶಾಲೆಗಳ ನಿರ್ಮಾಣ-ನವೋದಯ ಮಾದರಿ 4225-03-277-2-04	ಕಟ್ಟಡಗಳು	2
13	ನಬಾರ್ಡ್ ಕಾಮಗಾರಿಗಳು (2019-20) 4225-03-277-2-11	ಕಟ್ಟಡಗಳು	1
14	ದೇವರಾಜ ಅರಸು ಭವನ ನಿರ್ಮಾಣ (ತಾಲ್ಲೂಕು ಕಛೇರಿ) 4225-03-283-0-01	ಕಟ್ಟಡಗಳು	4
15	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	ಕಟ್ಟಡಗಳು	100
16	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2225-03-102-1-06		1
17	ಕೇ.ಪು.ಯೋ-ರಾಜ್ಯದ ಪಾಲು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 2225-03-277-2-83	ವಿದ್ಯಾರ್ಥಿಗಳು	311085
18	ಕೇ.ಪು.ಯೋ-ಕೇಂದ್ರದ ಪಾಲು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯದ ನಿರ್ಮಾಣ 4225-03-277-7-01	ವಿದ್ಯಾರ್ಥಿಗಳು	5
19	ಕೇ.ಪು.ಯೋ-ರಾಜ್ಯದ ಪಾಲು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯದ ನಿರ್ಮಾಣ 4225-03-277-7-02	ಕಟ್ಟಡಗಳು	1
20	ಖಾಲಿ ಹುದ್ದೆಗಳಿಗಾಗಿ ಅನುದಾನ 2225-03-001-0-07		0
	(ಅ) ಒಟ್ಟು		843530

ಕ್ರ ಸಂ	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ		ನಿಗಧಿಪಡಿಸಿದ ಗುರಿ
	ಜಿಲ್ಲಾವಲಯ ಕಾರ್ಯಕ್ರಮಗಳು		
1	ಕಾರ್ಯನಿರ್ವಾಹಕ ಸಿಬ್ಬಂದಿ 2225-00-103-0-39	ಅಧಿಕಾರಿ/ಸಿಬ್ಬಂದಿ	273
2	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	ಕಛೇರಿ	176
3	ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	ವಿದ್ಯಾರ್ಥಿಗಳು	227836
4	ಆಶ್ರಮ ಶಾಲೆಗಳು 2225-00-103-0-41	ವಿದ್ಯಾರ್ಥಿಗಳು	1050
5	ಅನಾಥಾಲಯಗಳಿಗೆ ಸಹಾಯಾನುದಾನ 2225-00-103-0-73	ವಿದ್ಯಾರ್ಥಿಗಳು	7686
6	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	ಅಭ್ಯರ್ಥಿಗಳು	980
7	ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ 2225-00-103-0-28	ವಿದ್ಯಾರ್ಥಿಗಳು	407059
8	ವಕೀಲರಿಗೆ ಪ್ರೋತ್ಸಾಹ ಧನ 2225-00-103-0-58	ಅಭ್ಯರ್ಥಿಗಳು	1200
9	ದೇವರಾಜ ಅರಸುರವರ ಹುಟ್ಟು ಹಬ್ಬದ ದಿನಾಚರಣೆ ಮತ್ತು 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರಗೋಷ್ಠಿ 2225-00-103-0-56	ಕಾರ್ಯಕ್ರಮ	31
10	ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ವಹಣೆ 2225-00-103-0-40	ಕಟ್ಟಡಗಳು	400
	(ಆ) ಒಟ್ಟು		646691
	(ಅ + ಆ) ಒಟ್ಟಾರೆ		1490221

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	660
ಸದಸ್ಯರ ಹೆಸರು	:	ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ.
ಉತ್ತರಿಸುವ ದಿನಾಂಕ	:	21.12.2022
ಉತ್ತರಿಸುವ ಸಚಿವರು	:	ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಿಂದ ಮಂಜೂರು ಮಾಡಿರುವ ಅನುದಾನವೆಷ್ಟು; (ವಿಧಾನ ಸಭಾ ಕ್ಷೇತ್ರವಾರು, ವರ್ಷವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಿಂದ ಮಂಜೂರು ಮಾಡಿರುವ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.
ಆ)	ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನವಾಗುತ್ತಿರುವ ವಿವಿಧ ಯೋಜನೆಗಳಾವುವು; (ಯೋಜನಾವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನವಾಗುತ್ತಿರುವ ವಿವಿಧ ಯೋಜನೆಗಳ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ
ಇ)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಈ ಜನವಸತಿ ಕಾಲೋನಿಗಳ ಅಭಿವೃದ್ಧಿಗೆ ಹಾಗೂ ಪರಿಶಿಷ್ಟ ಪಂಗಡಗಳ ವೈಯಕ್ತಿಕ ಫಲಾನುಭವಿಗಳಿಗೆ ಒದಗಿಸಿದ ಯೋಜನೆ ಮತ್ತು ಅನುದಾನವೆಷ್ಟು; (ವಿವರ ಒದಗಿಸುವುದು)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿಗೆ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ. ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಭಾರತ ಸಂವಿಧಾನ ಅನುಚ್ಛೇಧ 275(1) ರಡಿ ಹಾಗೂ ವಿಶೇಷ ಕೇಂದ್ರಿಯ ನೆರವಿನಡಿ ಸ್ವಯಂ ಉದ್ಯೋಗ (ಕುರಿ- ಮೇಕೆ ಘಟಕ) ಕಾರ್ಯಕ್ರಮದಡಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

(ರೂಲಕ್ಷಗಳಲ್ಲಿ)

ಕ್ರ. ಸಂ.	**ಕಾರ್ಯಕ್ರಮ**	**ವರ್ಷ**	**ಮಂಜೂರು ಮಾಡಿದ ಅನುದಾನ**	**ಬಿಡುಗಡೆ ಮಾಡಿದ ಅನುದಾನ**
1.	ಸರಕುವಾಹನ ಮತ್ತು ಹಸು-ಕರು & ಮೇಕೆ ಘಟಕ	2018-19	13.36	13.36
2	ಸ್ವಯಂ ಉದ್ಯೋಗ- ಕುರಿ-ಮೇಕೆ ಘಟಕ	2020-21	4.68	4.68
3	ನೈಜ ದುರ್ಬಲ ಬುಡಕಟ್ಟು ಹಾಗೂ ಕೊರಗ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮದಡಿ ವೈಯಕ್ತಿಕ ನೀರಾವರಿ		0.91	0.91

ಈ	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರ ಸಮಗ್ರ ಅಭಿವೃದ್ಧಿಗೆ ಅನುದಾನ ಲಭ್ಯತೆಗನುಗುಣವಾಗಿ ಹಂತಹಂತವಾಗಿ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಸಕಇ 505 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ-1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಸುಕುಮಾರ್ ಶೆಟ್ಟಿ ಬಿ.ಎಂ. ಇವರ ಪ್ರಶ್ನೆ ಸಂಖ್ಯೆ-660ಕ್ಕೆ ಉತ್ತರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರ	2019-20		2020-21		2021-22	
		ಮಂಜೂರು ಮಾಡಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರು ಮಾಡಿದ ಅನುದಾನ	ಬಿಡುಗಡೆ ಮಾಡಿದ ಅನುದಾನ	ಮಂಜೂರು ಮಾಡಿದ ಅನುದಾನ	ಬಿಡುಗಡೆ ಮಾಡಿದ ಅನುದಾನ
1	ಕುಂದಾಪುರ	50.00	15.00	100.00	100.00	170.00	85.00
2	ಕಾಪು	110.00	15.00	0.00	0.00	100.00	0.00
3	ಕಾರ್ಕಳ	100.00	30.00	0.00	0.00	500.00	0.00
4	ಉಡುಪಿ	0.00	0.00	200.00	60.00	0.00	0.00
5	ಬೈಂದೂರು	0.00	0.00	0.00	0.00	0.00	0.00
	ಒಟ್ಟು	260.00	60.00	300.00	160.00	770.00	85.00

ಅನುಬಂಧ-2

ಪರಿಶಿಷ್ಟ ಪಂಗಡದ ಜನಾಂಗದವರ ಅಭಿವೃದ್ಧಿಗಾಗಿ ರೂಪಿಸಿ ಜಾರಿಗೊಳಿಸಲಾಗಿರುವ ಯೋಜನೆಗಳ ವಿವರಗಳು

- **ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳ ವಿವರ:**
  1. ಶೈಕ್ಷಣಿಕ ಅಭಿವೃದ್ಧಿ
  2. ಮೂಲಭೂತ ಸೌಕರ್ಯ ಒದಗಿಸುವುದು
  3. ಆರ್ಥಿಕ ಅಭಿವೃದ್ಧಿ
  4. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ
  5. ಸಾಮಾಜಿಕ ಸಬಲೀಕರಣ

1. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು:

ಅ) ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳ ನಿರ್ವಹಣೆ:

ಪ.ಪಂಗಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡಲು ವಾಲ್ಮೀಕಿ ಆಶ್ರಮ ಶಾಲೆ/ವಸತಿ ಶಾಲೆ/ವಿದ್ಯಾರ್ಥಿನಿಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಸಂಸ್ಥೆಗಳ ವಿವರ	ಪ.ಪಂಗಡ
1.	ವಾಲ್ಮೀಕಿ ಆಶ್ರಮ ಶಾಲೆ (1 ರಿಂದ 5ನೇ ತರಗತಿ)	119
2.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	136
3.	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ	134
4.	ಅನುದಾನಿತ ವಿದ್ಯಾರ್ಥಿನಿಲಯ	30
	ಒಟ್ಟು:	419

❖ 39818 ಪ.ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿದೆ.

ನಿಲಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ

(ರೂ.ಲಕ್ಷಗಳಲ್ಲಿ)

ವಿವರ	ವಾಲ್ಮೀಕಿ ಆಶ್ರಮ ಶಾಲೆ	ಮೆ.ಪೂರ್ವ ವಿ.ನಿಲಯ	ಮೆ.ನಂತರ ವಿ.ನಿಲಯ	ವಸತಿ ಶಾಲೆ/ಕಾಲೇಜು
ಭೋಜನ ವೆಚ್ಚ (ಮಾಸಿಕ)	1,450/-	1,650/-	1,750/-	1,750/-

ಇತರೆ ಸೌಲಭ್ಯಗಳು

ಸಮವಸ್ತ್ರ (2ಜೊತೆ).ಪಠ್ಯ/ನೋಟ್ ಪುಸ್ತಕ. ಶುಚಿ ಸಂಭ್ರಮ ಕಿಟ್.ಶೂ. ಕ್ಷೌರ ವೆಚ್ಚ. ದಿನಪತ್ರಿಕೆ/Magazine, ವೈದ್ಯಕೀಯ ವೆಚ್ಚ, ಸ್ವಚ್ಛತೆ ವೆಚ್ಚ, ಮಂಚ, ಹಾಸಿಗೆ, ಹೊದಿಕೆ, ದಿಂಬು, ಜಮಖಾನ, ಕ್ರೀಡಾ ಸಾಮಗ್ರಿಗಳು ಹಾಗೂ ಇತರೆ ಮೂಲಭೂತ ಸೌಲಭ್ಯಗಳು.

ವಿದ್ಯಾರ್ಥಿನಿಲಯ ಕಟ್ಟಡಗಳ ವಿವರ

ಕ್ರ.ಸಂ	ವಿವರ	ಪ.ಪಂಗಡ
1.	ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ	389
2.	ಸ್ವಂತ ಕಟ್ಟಡಗಳ ಸಂಖ್ಯೆ	292
3.	ಬಾಡಿಗೆ ಕಟ್ಟಡಗಳ ಸಂಖ್ಯೆ	97
4.	ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ	73
5.	ನಿವೇಶನ ಲಭ್ಯತೆ	22
6.	ನಿವೇಶನ ರಹಿತ ವಿ.ನಿ ಸಂಖ್ಯೆ	02

ಆ) ವಿದ್ಯಾರ್ಥಿವೇತನ:

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಡೇ ಸ್ಕಾಲರ್)

ವಿದ್ಯಾರ್ಥಿನಿಲಯಗಳಲ್ಲಿ ಇಲ್ಲದೇ ಇರುವ ಪರಿಶಿಷ್ಟ ಪಂಗಡದ 1 ರಿಂದ 8ನೇ ತರಗತಿಯವರೆಗಿನ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಲು ಹಾಗೂ ವಿದ್ಯಾಭ್ಯಾಸದ ನಡುವೆ ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸಲು ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.

ತರಗತಿ	ಬಾಲಕರು	ಬಾಲಕಿಯರು
1 ರಿಂದ 5	1000/-	1100/-
6 ರಿಂದ 7	1150/-	1250/-
8ನೇ ತರಗತಿ	1250/-	1350/-

ಮೆಟ್ರಿಕ್ ಪೂರ್ವ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ – ಕೇಂದ್ರ ಪುರಸ್ಕೃತ ಯೋಜನೆ

ತರಗತಿ	ಬಾಲಕರು	ಬಾಲಕಿಯರು
9 ರಿಂದ 10	3000/-	3000/-

- ಸರ್ಕಾರಿ ಶಾಲೆಗಳಲ್ಲಿ ಮತ್ತು ಮಾನ್ಯತೆ ಪಡೆದ ಅನುದಾನಿತ/ಖಾಸಗಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ.
- ರಾಜ್ಯ ಸರ್ಕಾರ 1 ರಿಂದ 8ನೇ ತರಗತಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ರೂ.6.00 ಲಕ್ಷಗಳಿಗೆ ನಿಗಧಿಪಡಿಸಲಾಗಿದೆ.
- ಕೇಂದ್ರ ಸರ್ಕಾರ 9 ರಿಂದ 10ನೇ ತರಗತಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ರೂ.2.50 ಲಕ್ಷಗಳಿಗೆ ನಿಗಧಿಪಡಿಸಲಾಗಿದೆ.
- ಎಸ್.ಎಸ್.ಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಪರಿಶೀಲಿಸಿ, ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ಜಮೆ ಮಾಡಲಾಗುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ವಾರ್ಷಿಕ)

ಗುಂಪು	ಕೋರ್ಸ್‌ಗಳು	ಮಾಹೆಯಾನ	ನಿಲಯಾರ್ಥಿಗಳು			ಡೇಸ್ಕಾಲರ್ಸ್	
			ಕೇಂದ್ರ	ರಾಜ್ಯ	ಒಟ್ಟು	ಮಾಹೆಯಾನ	ವಾರ್ಷಿಕ
I.	MBBS/BE/ALL PG courses/M.Phil/Phd etc	1200	14400/-	6,600/-	21,000/-	550	5500/-
II.	LLB/Paramedical Nursing Course/B.Pharm/Nursing Etc	820	9840/-	11,160/-	21,000/-	530	5300/-
III.	BA/B.Sc.B.Com and all Degree courses	570	6840/-	14,160/-	21,000/-	300	3000/-
IV.	PUC/ITI/DIPLOMA etc	380	4560/-	16,440/-	21,000/-	230	2300/-

- ಈ ವಿದ್ಯಾರ್ಥಿವೇತನದಲ್ಲಿ ಬೋಧನಾ ಶುಲ್ಕ ಮತ್ತು ಇತರೆ ಕಡ್ಡಾಯ ಶುಲ್ಕಗಳ ಪಾವತಿ, ಡೇ ಸ್ಕಾಲರ್ ವಿದ್ಯಾರ್ಥಿಗಳ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳ ಭೋಜನಾ ವೆಚ್ಚ ಸೇರಿರುತ್ತದೆ.
- ಕೇಂದ್ರ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ರೂ.2.50 ಲಕ್ಷಗಳಿಗೆ ನಿಗದಿಪಡಿಸಲಾಗಿದೆ.
- ರೂ.2.50 ಲಕ್ಷ ಆದಾಯ ಮಿತಿಯಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಯನ್ನು ಇಲಾಖೆಯಿಂದ ಭರಿಸಲಾಗುತ್ತಿದೆ.
- ರೂ.2.50 ಲಕ್ಷದಿಂದ ರೂ.10.00 ಲಕ್ಷವರೆಗಿನ ಪೋಷಕರ ವಾರ್ಷಿಕ ಆದಾಯ ಮಿತಿಯೊಳಗಿನ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಶೇಕಡ 50% ರಷ್ಟು ಶುಲ್ಕ ವಿನಾಯಿತಿ ಮಾಡಲಾಗುತ್ತಿದೆ.
- ವಿದ್ಯಾರ್ಥಿವೇತನ ಪಡೆಯಲು State Scholarship Portal (SSP)ನಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವುದು.

ಇ) ಪ್ರೋತ್ಸಾಹಧನ ಯೋಜನೆ: ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆ:

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಕೋರ್ಸಿನ ವಿವರ		ಪ್ರೋತ್ಸಾಹಧನ(ರೂ.ಗಳಲ್ಲಿ)
ಎಸ್.ಎಸ್.ಎಲ್.ಸಿ	ಶೇ 60 ರಿಂದ ಶೇ 75	7500/-
	ಶೇ 75 ಕ್ಕಿಂತ ಮೇಲ್ಪಟ್ಟು	15,000/
ಪಿ.ಯು.ಸಿ/ ಡಿಪ್ಲೊಮ		20,000/-
ಪದವಿ		25,000/-
ಸ್ನಾತಕೋತ್ತರ ಪದವಿ		30,000/-
ವೃತ್ತಿಪರ ಪದವಿ (ವೈದ್ಯಕೀಯ/ತಾಂತ್ರಿಕ/ಕೃಷಿ/ಪಶುವೈದ್ಯಕೀಯ)		35,000/-
ವಿಶ್ವವಿದ್ಯಾಲಯ ಮಟ್ಟದಲ್ಲಿ PG Courses ವಿವಿಧ ವಿಷಯಗಳಲ್ಲಿ ಗಳಲ್ಲಿ 1 ರಿಂದ 5 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ		50,000/-

- ಆದಾಯದ ಮಿತಿ ಇರುವುದಿಲ್ಲ.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು

ಈ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ:

ಸ್ವಾತಾಂತ್ರ್ಯ ಹೋರಟದ ಭಾಗವಾದ ಹಲಗಲಿ ಬೇಡರ ಬಂಡಾಯದಲ್ಲಿ ಹುತಾತ್ಮರಾದ ಜಡಗ ಮತ್ತು ಬಾಲ ಇವರ ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಎಸ್.ಟಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ನಗದು ಪ್ರಶಸ್ತಿ ನೀಡಲಾಗುತ್ತಿದೆ.

ಉ) ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ:

ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆ ಮಾಡಲಾದ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪ.ಪಂಗಡ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿ ಮೂಲಕ ಆಯ್ಕೆಗೊಂಡು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗುತ್ತಿದೆ.

- ತಾಲ್ಲೂಕು ಮಟ್ಟ: ರೂ.50,000/-; ಜಿಲ್ಲಾ ಮಟ್ಟ: ರೂ.75,000/-; ಬೆಂಗಳೂರು(ನ): ರೂ.1.00ಲಕ್ಷ
- ಪ್ರತಿ ವರ್ಷ 750 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಗುರಿ ನಿಗದಿಪಡಿಸಿಕೊಳ್ಳಲಾಗಿದೆ.
- ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.2.00 ಲಕ್ಷ.

ಊ)"ಪ್ರಬುದ್ಧ"-ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಧನಸಹಾಯ:

ಈ ಯೋಜನೆಯಡಿ ಸರ್ಕಾರದಿಂದ ಅನುಮೋದಿಸಿರುವ ವಿದೇಶದಲ್ಲಿರುವ ವಿಶ್ವವಿದ್ಯಾಲಯಗಳು/ ಶಿಕ್ಷಣ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿ.ಹೆಚ್.ಡಿ ಪದವಿಗಳಲ್ಲಿನ ವಿಷಯಗಳನ್ನು ವ್ಯಾಸಾಂಗ ಮಾಡಲು ಆಯ್ಕೆಯಾದವರಿಗೆ ಆರ್ಥಿಕ ಸಹಾಯವನ್ನು ಒದಗಿಸಲಾಗವುದು.

- **ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಹೆಚ್‌ಡಿ ವ್ಯಾಸಂಗ ಮಾಡುವ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ. ಕೋರ್ಸ್ ಶುಲ್ಕ. ನಿರ್ವಹಣಾ ಭತ್ಯೆ. ಒಂದು ಭಾರಿಯ ಪ್ರಮಾಣ ವೆಚ್ಚ. ಪುಸ್ತಕಗಳ ವೆಚ್ಚ. ವೀಸಾ ವೆಚ್ಚ ಇತ್ಯಾಧಿಗಳನ್ನು ಇಲಾಖೆಯಿಂದ ಭರಿಸಲಾಗುತ್ತಿದೆ.**
- **ವಾರ್ಷಿಕ ರೂ.8.00 ಲಕ್ಷ ಆದಾಯ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಪೂರ್ಣ ವೆಚ್ಚ ಭರಿಸಲಾಗುತ್ತಿದೆ.**
- **ವಾರ್ಷಿಕ ರೂ.8.00 ಲಕ್ಷದಿಂದ ರೂ.15.00 ಲಕ್ಷಗಳ ಆದಾಯ ಮಿತಿಯೊಳಗಿರುವ ವಿದ್ಯಾರ್ಥಿಗಳ 50% ವೆಚ್ಚವನ್ನು ಸರ್ಕಾರ ಭರಿಸುತ್ತಿದೆ.**
- **ವಾರ್ಷಿಕ ರೂ.15.00 ಲಕ್ಷದಿಂದ ರೂ.25.00 ಲಕ್ಷಗಳ ಆದಾಯ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಶೇ.33% ವೆಚ್ಚವನ್ನು ಸರ್ಕಾರ ಭರಿಸುತ್ತದೆ.**
- **ವಾರ್ಷಿಕ ಸರಾಸರಿ ರೂ.2.50 ಕೋಟಿ ವೆಚ್ಚ ಮಾಡಲಾಗುತ್ತಿದೆ.**

ಋ) ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ:

- ಐ.ಐ.ಟಿ/ಐ.ಐ.ಎಂ/ಐ.ಎಂ.ಐ/ಎನ್.ಐ.ಟಿ/ಇತ್ಯಾದಿ ರಾಷ್ಟ್ರಮಟ್ಟದ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ರೂ.2.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.
- ಸಿ.ಎ/ಐ.ಸಿ.ಡಬ್ಲ್ಯೂಎ/ಕಂಪನಿ ಸೆಕ್ರೆಟರಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ.50,000/- ಮತ್ತು ರೂ.1.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.
- ಆದಾಯದ ಮಿತಿ ಇರುವುದಿಲ್ಲ.

ಎ) ವಿದ್ಯಾವಂತ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿ ಜೀವನ ಭತ್ಯೆ:-

ಪರಿಶಿಷ್ಟ ಪಂಗಡದವರಾದ ಜೇನು ಕುರುಬ ಹಾಗೂ ಕೊರಗ ಸಮುದಾಯದ ವಿದ್ಯಾವಂತ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿ ಜೀವನ ಭತ್ಯೆಯನ್ನು, ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮೂಲನಿವಾಸಿಗಳಾದ ಪರಿಶಿಷ್ಟ ಪಂಗಡಗಳಾದ ಜೇನುಕುರುಬ ಹಾಗೂ ಕೊರಗ ಸಮುದಾಯದ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿಗಳಿಗೆ ಜೀವನ ಭತ್ಯೆಗಳನ್ನು ನೀಡಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ವಿದ್ಯಾರ್ಹತೆ	ಶೈಕ್ಷಣಿಕ ಪ್ರೋತ್ಸಾಹ ಧನ ವಾರ್ಷಿಕ ರೂ.ಗಳಲ್ಲಿ	ಮಾಸಿಕ ನಿರುದ್ಯೋಗಿ ಜೀವನ ಭತ್ಯೆ
1	ಎಸ್.ಎಸ್.ಎಲ್.ಸಿ	10,000/-	2,000/-
2	ಪಿ.ಯು.ಸಿ ಮತ್ತು ತತ್ಸಮಾನ ಕೋರ್ಸುಗಳಿಗೆ ಪ್ರತಿ ವರ್ಷಕ್ಕೆ	12,000/-	2,500/-
3	ಎಲ್ಲಾ ಪದವಿ ಕೋರ್ಸುಗಳ ಪ್ರತಿ ವರ್ಷಕ್ಕೆ	15,000/-	3,500/-
4	ಎಲ್ಲಾ ಸ್ನಾತಕೋತರ ಕೋರ್ಸ್‌ಗಳ ಪ್ರತಿ ವರ್ಷಕ್ಕೆ	18,000/-	4,500/-

ಐ) ಕೇಂದ್ರಿಯ ಅನುದಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು:- (ಕೇಂದ್ರ ಸರ್ಕಾರದ ಯೋಜನೆ)

ಕೇಂದ್ರ ಸರ್ಕಾರದ ಅನುದಾನದಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 1) ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು, 2) ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು, 3) 10 ಹಾಸಿಗೆಗಳ ಅಸ್ಪತ್ರೆ/ಡಿಸ್ಪೆನ್ಸ್‌ರಿ, 4) ಸಂಚಾರಿ ಆರೋಗ್ಯ ಘಟಕ, 5) ವಿವಿಧ ವೃತ್ತಿಗಳಲ್ಲಿ ತರಬೇತಿ. ಸ್ವಯಂ ಸೇವಾ ಸಂಸ್ಥೆಗಳು ಮೇಲ್ಕಾಣಿಸಿದ ಯಾವುದೇ ಯೋಜನೆ ಹಮ್ಮಿಕೊಳ್ಳಬಯಸಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿಕಳುಹಿಸಲಾಗುವುದು. ಕೇಂದ್ರ ಸರ್ಕಾರವು ಹಣ ಲಭ್ಯತೆಗನುಗುಣವಾಗಿ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗುವುದು.

ಐ) ಪರಿಶಿಷ್ಟ ಪಂಗಡದ ಆದಿವಾಸಿ ಪಂಗಡಕ್ಕೆ ಸೇರಿದ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ:-

ಪರಿಶಿಷ್ಟ ಪಂಗಡದ ಆದಿವಾಸಿ ಪಂಗಡಕ್ಕೆ ಸೇರಿದ ಜೇನುಕುರುಬ ಮತ್ತು ಕೊರಗ ಜನಾಂಗಕ್ಕೆ ಸೇರಿದ 7ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.2,500/- ಮತ್ತು 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.5,000/- ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

2. <u>ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮಗಳು:</u>

ಅ) ಪ.ಪಂಗಡದವರ ಕಾಲೋನಿಗಳಲ್ಲಿ:-

ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪಂಗಡದ ಕಾಲೋನಿ/ ಹಾಡಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿ.ಸಿ ರಸ್ತೆ. ಚರಂಡಿ. ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಆ) ಮೂಲನಿವಾಸಿ ಜನಾಂಗದ ಅಭಿವೃದ್ಧಿ ಯೋಜನೆ:- (ಕೇಂದ್ರ ಸರ್ಕಾರದ ಯೋಜನೆ)

ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಕೊರಗ ಮತ್ತು ಜೇನುಕುರುಬ ಜನಾಂಗವನ್ನು ಮೂಲನಿವಾಸಿ ಜನಾಂಗದವರೆಂದು ಗುರುತಿಸಲಾಗಿದೆ. ರಾಜ್ಯದಲ್ಲಿ ಕೊರಗ ಜನಾಂಗದವರ ಒಟ್ಟು ಸಂಖ್ಯೆ:14794 ಇದ್ದು, 3436 ಕುಟುಂಬಗಳು ಇರುತ್ತವೆ. ಅದೇ ರೀತಿ ಜೇನುಕುರುಬರ ಜನಸಂಖ್ಯೆ 36076 ಇದ್ದು, 8767 ಕುಟುಂಬಗಳು ಇರುತ್ತವೆ. ಈ ಮೂಲನಿವಾಸಿ ಜನಾಂಗದವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡುವ ಅನುದಾನದಲ್ಲಿ 1) ಜಮೀನು ಖರೀದಿ, ಜಮೀನು ಅಭಿವೃದ್ಧಿ ಹಾಗೂ ನೀರಾವರಿ ಸೌಲಭ್ಯ ಒದಗಿಸುವುದು. 2) ವಸತಿ ರಹಿತರಿಗೆ ನಿವೇಶನ ಖರೀದಿ, ವಾಸದ ಮನೆಗಳ ನಿರ್ಮಾಣ. 3) ಆರ್ಥಿಕ ಉನ್ನತಿ ಕಾರ್ಯಕ್ರಮಗಳು. 4) ವಾಸ ಸ್ಥಳಗಳಿಗೆ ಮೂಲಭೂತ ಸೌಲಭ್ಯಗಳಾದ ಸಂಪರ್ಕ ರಸ್ತೆ, ಚರಂಡಿ, ಕುಡಿಯುವ ನೀರು ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಇ) ಮೂಲನಿವಾಸಿ ಜನಾಂಗದವರಿಗೆ ವಸತಿ ಸೌಕರ್ಯ ಯೋಜನೆ:-

ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮೂಲನಿವಾಸಿ ಜನಾಂಗದವರಾದ ಕೊರಗ ಮತ್ತು ಜೇನುಕುರುಬ ಜನಾಂಗದವರಲ್ಲಿ ಮನೆ ಇಲ್ಲದವರಿಗೆ ಪ್ರತಿ ಮನೆಗೆ ರೂ.3.50 ಲಕ್ಷಗಳಲ್ಲಿ ಮನೆ ನಿರ್ಮಿಸಿ ಕೊಡುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಈ) ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ

2006 ಮತ್ತು ನಿಯಮಗಳು 2008 – ಅನುಷ್ಠಾನಗೊಳಿಸುವ ಬಗ್ಗೆ:-

ತಲಾತಲಾಂತರದಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡಲು ಈ ಕಾಯ್ದೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯ ಪ್ರಕಾರ ನಿಗಧಿಪಡಿಸಿದ ನಿಯಮಗಳ ಪ್ರಕಾರ ಅರ್ಹರಾದವರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಅರ್ಹ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆ.

3. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

ಅ)ವಾಲ್ಮೀಕಿ/ಸಮುದಾಯ ಭವನಗಳನ್ನು ಈ ಕೆಳಗಿನ ಘಟಕ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

- ಗ್ರಾಮ ಮಟ್ಟ (ರೂ.20.00 ಲಕ್ಷ)
- ಹೋಬಳಿ ಮಟ್ಟ (ರೂ.75.00 ಲಕ್ಷ)
- ತಾಲ್ಲೂಕು ಮಟ್ಟ (ರೂ.200.00 ಲಕ್ಷ)
- ಜಿಲ್ಲಾ ಮಟ್ಟ (ರೂ.400.00 ಲಕ್ಷ)
- ರಾಜ್ಯ ಮಟ್ಟ (ರೂ.500.00 ಲಕ್ಷ)

ಆ)ಪರಿಶಿಷ್ಟ ಪಂಗಡದ ಸಂಘ-ಸಂಸ್ಥೆಗಳು/ಧಾರ್ಮಿಕ ಸಂಸ್ಥೆಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶಾಲಾ/ ಕಾಲೇಜು/ ವಿದ್ಯಾರ್ಥಿನಿಲಯ/ ಸಮುದಾಯ ಭವನಗಳನ್ನು ನಿರ್ಮಿಸಲು ಧನಸಹಾಯ ನೀಡಲಾಗುತ್ತಿದೆ.

- ಧನಸಹಾಯ ಪಡೆಯುವ ಸಂಸ್ಥೆಯು ಕರ್ನಾಟಕ ಸಹಕಾರ ಸಂಘಗಳ ನೊಂದಣಿ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯ್ದೆಯನ್ವಯ ನೊಂದಾಯಿತ ಸಂಸ್ಥೆಯಾಗಿರಬೇಕು. ಸಂಸ್ಥೆ ನೊಂದಣಿಯಾಗಿ 3 ವರ್ಷಗಳಾಗಿರಬೇಕು.
- ಟ್ರಸ್ಟ್ ಸದಸ್ಯರು ಒಂದೇ ಕುಟುಂಬದವರಾಗಿರಬಾರದು.
- ಸಹಾಯಧನ ಬಯಸುವ ಸಂಸ್ಥೆ/ಟ್ರಸ್ಟ್‌ಗಳು ಉದ್ದೇಶಿಸಿರುವ ಕಟ್ಟಡ ನಿರ್ಮಾಣಕ್ಕೆ ಸಂಸ್ಥೆ ಹೆಸರಿನಲ್ಲಿ ಜಮೀನು/ನಿವೇಶನ ಹೊಂದಿರಬೇಕು ಅಥವಾ ಸರ್ಕಾರಿ/ಸರ್ಕಾರಿಯೇತರ ಸಂಸ್ಥೆಗಳಿಂದ ಕನಿಷ್ಠ 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಗುತ್ತಿಗೆ (ಲೀಸ್) ಪಡೆದಿರಬೇಕು.
- ಸಂಘ/ಸಂಸ್ಥೆಯು ಈ ಕಾರ್ಯಕ್ರಮದಡಿ ಒಂದು ಭಾರಿ ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ.

➢ ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ – ರೂ.10.00 ಲಕ್ಷ

- ತಾಲ್ಲೂಕು ಕೇಂದ್ರ ಸ್ಥಾನ - ರೂ.25.00 ಲಕ್ಷ
- ಜಿಲ್ಲಾ ಕೇಂದ್ರ ಸ್ಥಾನ - ರೂ.50.00 ಲಕ್ಷ

ಇ) ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಬಡ್ಡಿ ಸಹಾಯಧನ ಕಾರ್ಯಕ್ರಮ

- ಪರಿಶಿಷ್ಟ ಪಂಗಡದ ಉದ್ದಿಮೆದಾರರು ಎಂ.ಎಸ್.ಎಂ.ಇ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ/ ಜಿಲ್ಲಾ ಸಹಕಾರಿ ಬ್ಯಾಂಕ್/ಅಪೆಕ್ಸ್ ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ 4% ಬಡ್ಡಿ ಸಹಾಯಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

- ಗರಿಷ್ಟ ಸಾಲದ ಮೊತ್ತ:ರೂ.20.00 ಲಕ್ಷದಿಂದ ರೂ.5.00 ಕೋಟಿಗಳವರೆಗೆ
- ಸಾಲದ ಮರುಪಾವತಿ ಅವಧಿ: ಗರಿಷ್ಟ 8 ವರ್ಷ
- ಗರಿಷ್ಟ ಸಾಲದ ಮೊತ್ತ:ರೂ.5.00 ಕೋಟಿ ಮೇಲಿನ ಮೊತ್ತಕ್ಕೆ
- ಸಾಲದ ಮರುಪಾವತಿ ಅವಧಿ: ಗರಿಷ್ಟ 10 ವರ್ಷ

- 2021-22ನೇ ಸಾಲಿನಿಂದ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳಾದ ಮಳಿಗೆ/ಡೀಲರ್ ಶಿಪ್/ ಫ್ರಾಂಚೈಸಿ ಮತ್ತು ಹೋಟೆಲ್ ಉದ್ಯಮಗಳನ್ನು ಪ್ರಾರಂಭಿಸಲು ಸಹ 4% ಬಡ್ಡಿ ಸಹಾಯಧನ ಯೋಜನೆಯನ್ನು ವಿಸ್ತರಿಸಿದ್ದು, ಈ ಯೋಜನೆಯಡಿ ಗರಿಷ್ಟ ರೂ.1.00 ಕೋಟಿವರೆಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಗರಿಷ್ಠ ಅವಧಿ 5 ವರ್ಷ.

ಈ) ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಮಂಜೂರಾತಿಗೆ ಸಮಾನಾಂತರ ಖಾತ್ರಿ (Collateral Security) ಒದಗಿಸುವುದು.

ಕೆ,ಎಸ್.ಎಫ್.ಸಿ ಯಿಂದ ಪ.ಪಂಗಡದವರಿಗೆ ಮಂಜೂರು ಮಾಡಲು ಸಾಲಕ್ಕೆ ಗರಿಷ್ಠ ರೂ.2.00 ಕೋಟಿಗಳವರೆಗೆ (Collateral Security) ಸಮಾನಾಂತರ ಖಾತ್ರಿಯನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ. ಈ ಸೌಲಭ್ಯವನ್ನು ಕೆ,ಎಸ್.ಎಫ್.ಸಿ Collateral Security ನಿಯಮಗಳಂತೆ ಸರ್ಕಾರದಿಂದ ಒದಗಿಸಲಾಗುತ್ತಿದೆ. ಉಳಿದ ಮೊತ್ತಕ್ಕೆ ಫಲಾನುಭವಿಗಳು ಸಮಾನಾಂತರ ಖಾತ್ರಿಯನ್ನು ಒದಗಿಸಬೇಕಾಗುತ್ತದೆ.

- ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯುವವರಿಗೆ ಭಾರತ ಸರ್ಕಾರದ ನಿಯಮಗಳಂತೆ Collateral Security ಒದಗಿಸಲು ವಿನಾಯಿತಿ ನೀಡಲಾಗಿದೆ.

ಉ) ವಿಶೇಷ ಕೇಂದ್ರಿಯ ನೆರವಿನಡಿ 275(1) ರಡಿ ಗಿರಿಜನ ಉಪಯೋಜನೆ ಕಾರ್ಯಕ್ರಮ:- (ಕೇಂದ್ರ ಸರ್ಕಾರದ ಯೋಜನೆ)

ವಿಶೇಷ ಕೇಂದ್ರಿಯ ನೆರವಿನಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದಿಂದ ಪರಿಶಿಷ್ಟ ಪಂಗಡದವರಿಗೆ ಆರ್ಥಿಕ ಸ್ವಾವಲಂಭನೆಗೊಳಿಸುವ ಸಲುವಾಗಿ ಸ್ವಯಂ ಉದ್ಯೋಗ, ಕೃಷಿ ಚಟುವಟಿಕೆ, ಹೈನುಗಾರಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಊ) ಪೌಷ್ಠಿಕ ಆಹಾರ ಯೋಜನೆ:-

ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು, ಉತ್ತರ ಕನ್ನಡ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸಿಸುವ ಮೂಲನಿವಾಸಿ ಪಂಗಡವಾದ ಕೊರಗ ಮತ್ತು ಜೇನುಕುರುಬ ಹಾಗೂ ಇತರೆ ಪರಿಶಿಷ್ಟ ಪಂಗಡದವರಾದ ಕಾಡುಕುರುಬ, ಸೋಲಿಗ, ಯರವ, ಮಲೆಕುಡಿಯ, ಕುಡಿಯ, ಸಿದ್ಧಿ, ಗೌಡಲು ಮತ್ತು ಹಸಲರು ಜನಾಂಗದವರು ಅರಣ್ಯ ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುತ್ತಿದ್ದು, ಅವರಿಗೆ ಮಳೆಗಾಲದಲ್ಲಿ ಜೀವನ ನಿರ್ವಹಣೆಗೆ ತೊಂದರೆಯಾಗಿ, ಅಪೌಷ್ಠಿಕತೆಯಿಂದ ಬಳಲುವುದನ್ನು ತಪ್ಪಿಸಲು 45 ದಿನಗಳಗೊಮ್ಮೆ ವಾರ್ಷಿಕ ಆರು ಬಾರಿ ಪ್ರತಿ ಕುಟುಂಬಕ್ಕೆ 1)ಅಕ್ಕಿ/ರಾಗಿ/ಗೋಧಿ 8 ಕೆ.ಜಿ., 2) ತೊಗರಿಬೇಳೆ 3 ಕೆ.ಜಿ., 3) ಕಡಲೆಬೀಜ 1 ಕೆ.ಜಿ., 4) ಹೆಸರುಕಾಳು/ಹುರಳಿಕಾಳು/ಹಲಸಂದೆ ಕಾಳು 2 ಕೆ.ಜಿ., 4) ಎಣ್ಣೆ 2 ಲೀಟರ್., 5) ಸಕ್ಕರೆ/ಬೆಲ್ಲ 2 ಕೆ.ಜಿ., 6) ಮೊಟ್ಟೆ ತಿಂಗಳಿಗೆ 30 ನ್ನು ಹಾಗೂ 7) 1/2 ಕೆ.ಜಿ ನಂದಿನಿ ತುಪ್ಪ ಕೊಡಲಾಗುವುದು. ಈ ಆಹಾರ ಪದಾರ್ಥಗಳನ್ನು ಪಡಿತರ ಆಹಾರ ಧಾನ್ಯದ ಜೊತೆಗೆ ಹೆಚ್ಚುವರಿಯಾಗಿ ಉಚಿತವಾಗಿ ನೀಡಲಾಗುತ್ತಿದೆ.

4)ತರಬೇತಿ ಕಾರ್ಯಕ್ರಮಗಳು.

ಅ)ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ:

ಯು.ಪಿ.ಎಸ್.ಸಿ/ಕೆ.ಪಿ.ಎಸ್.ಸಿ/ ಬ್ಯಾಂಕಿಂಗ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಪ.ಪಂ ಅಭ್ಯರ್ಥಿಗಳಿಗೆ ನವದೆಹಲಿ, ಹೈದರಾಬಾದ್ ಹಾಗೂ ಕರ್ನಾಟಕದ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ 3 ರಿಂದ 9 ತಿಂಗಳವರೆಗೆ ತರಬೇತಿ ನೀಡಲಾಗುತ್ತಿದೆ.

- ವಾರ್ಷಿಕ ಆದಾಯದ ಮಿತಿ ರೂ.5.00 ಲಕ್ಷ.
- ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ತರಬೇತಿ ಸಂಸ್ಥೆಯನ್ನು ಅಭ್ಯರ್ತಿಗಳೇ ಕೌನ್ಸಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಬಹುದಾಗಿದೆ.
- ತರಬೇತಿ ಶುಲ್ಕ ರೂ.50,000/-ದಿಂದ ರೂ.1.60 ಲಕ್ಷದವರಿಗೆ ಸಂಸ್ಥೆಗೆ ಪಾವತಿಸಲಾಗುತ್ತಿದೆ.
- ಮಾಸಿಕ ಶಿಷ್ಯವೇತನ ರೂ.6,000/- ದಿಂದ ರೂ.10,000/- ದವರಿಗೆ ಪಾವತಿಸಲಾಗುತ್ತಿದೆ.
- ತರಬೇತಿ ಸಂಸ್ಥೆಗಳಿಗೆ ಕಾಲ ಕಾಲಕ್ಕೆ ನಿಗದಿಪಡಿಸಲಾಗದ ತರಬೇತಿ ಶುಲ್ಕವನ್ನು ನೀಡಲಾಗುತ್ತಿದೆ.

ಆ)ಕಾನೂನು ಪದವೀಧರರಿಗೆ ಶಿಷ್ಯವೇತನ:

ಪರಿಶಿಷ್ಟ ಘಮಗಡದ ಕಾನೂನು ಪದವೀಧರರು ಹಿರಿಯ ವಕೀಲರಿಂದ ಪ್ರಾಯೋಗಿಕ ತರಬೇತಿ ಪಡೆದು ಸ್ವತಂತ್ರವಾಗಿ ವಕೀಲ ವೃತ್ತಿ ನಡೆಸಲು ಅನುಕೂಲವಾಗುವಂತೆ ಶಿಷ್ಯ ವೇತನವನ್ನು ನೀಡಲಾಗುತ್ತದೆ.

- ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷ.
- ತರಬೇತಿ ಅವಧಿ – 2 ವರ್ಷ
- ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ.10,000/- ಶಿಷ್ಯವೇತನ ನೀಡಲಾಗುತ್ತಿದೆ.

- ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ.
- ತರಬೇತಿಯ ಅವಧಿಯಲ್ಲಿ ಮಾಸಿಕ ವರದಿ ಮತ್ತು ಹಾಜರಾತಿ ಸಲ್ಲಿಸಬೇಕಾಗಿದ್ದು, ಅದರನ್ವಯ ಶಿಷ್ಯವೇತನವನ್ನು ಪಾವತಿಸಲಾಗುತ್ತದೆ.

5) ಸಾಮಾಜಿಕ ಸಬಲೀಕರಣ ಕಾರ್ಯಕ್ರಮಗಳು

ಅ) ಸರಳ ವಿವಾಹ:

ಈ ಯೋಜನೆಯನ್ವಯ ನೊಂದಾಯಿತ ಸಂಘ-ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ವ್ಯವಸ್ಥೆ ಮಾಡುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಿವಾಹವಾಗುವ ಪರಿಶಿಷ್ಟ ಪಂಗಡದ ದಂಪತಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

- ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಿವಾಹವಾಗಿರಬೇಕು, ವಿವಾಹವಾದ 1 ವರ್ಷದೊಳಗೆ ಅರ್ಜಿಸಲ್ಲಿಸಬೇಕು.
- ಇಂತಹ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಕನಿಷ್ಟ 10 ಜೋಡಿಗಳು ವಿವಾಹವಾಗಿರತಕ್ಕದ್ದು.
- ಸರಳವಾಗಿ ವಿವಾಹದ ದಂಪತಿಗಳಿಗೆ ರೂ.50,000/- ಸಾವಿರ ಪ್ರೋತ್ಸಾಹಧನ ನೀಡಲಾಗುವುದು.
- ಇಂತಹ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗೆ ಮೀರಿರಬಾರದು.
- ಸರಳ ವಿವಾಹವಾಗುವ ದಂಪತಿಗಳಲ್ಲಿ ಯುವಕನ ವಯಸ್ಸು 21 ರಿಂದ 45 ವರ್ಷ, ಯುವತಿಯ ವಯಸ್ಸು 18 ರಿಂದ 42 ವರ್ಷ.
- ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಏರ್ಪಡಿಸುವ ಆಯೋಜಕರುಗಳಿಗೆ ಪ್ರೋತ್ಸಾಹಧನ ಹಾಗೂ ವಿವಾಹದ ಖರ್ಚು-ವೆಚ್ಚಗಳಿಗಾಗಿ ಪ್ರತಿ ಜೋಡಿಗೆ ರೂ.2,000/- ಗಳನ್ನು ನೀಡಲಾಗುವುದು.
- ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

ಆ) ವಿಧವಾ ವಿವಾಹ:

ಪರಿಶಿಷ್ಟ ಪಂಗಡದ ವಿಧವೆಯರು ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

- ವಿಧವೆ ವಯೋಮಿತಿ 18 ರಿಂದ ಗರಿಷ್ಠ 42 ವರ್ಷ
- ವಿವಾಹವಾಗುವ ವರನ ವಯೋಮಿತಿ 21 ರಿಂದ 45 ವರ್ಷ
- ಮರು ವಿವಾಹದ ಬಗ್ಗೆ ನೊಂದಾಯಿಸತಕ್ಕದ್ದು.
- ವಿವಾಹವಾದ 1 ವರ್ಷದೊಳಗೆ ಅರ್ಜಿ ಸಲ್ಲಿಸಬೇಕು.
- ಅಂತರ್‌ಜಾತಿ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.

ಇ) ಒಳ ಪಂಗಡ ವಿವಾಹ:

ಪರಿಶಿಷ್ಟ ಪಂಗಡದ ಯುವಕ/ಯುವತಿಯರು ಪರಿಶಿಷ್ಟ ಪಂಗಡದ ಒಳಗೆ ಅಂತರ್ಜಾತಿ ವಿವಾಹವಾದಲ್ಲಿ ಅಂತಹವರಿಗೆ ರೂ.2.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

- ವಯೋಮಿತಿ-ಯುವಕ 21 ರಿಂದ 45 ವರ್ಷ ಹಾಗೂ ಯುವತಿ 18 ರಿಂದ 42 ವರ್ಷ.
- ದಂಪತಿಗಳ ವಾರ್ಷಿಕ ಆದಾಯ ರೂ.2.00 ಲಕ್ಷ ಮೀರಿರಬಾರದು.
- ಅಂತರ್‌ಜಾತಿ ವಿವಾಹ/ವಿಧವಾ ಮರು ವಿವಾಹ ಪ್ರೋತ್ಸಾಹಧನ ಪಡೆದವರು ಇದಕ್ಕೆ ಅರ್ಹರಲ್ಲ.
- ಮದುವೆಯಾದ ನಂತರ 1 ವರ್ಷದ ಒಳಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಈ ಸೌಲಭ್ಯವನ್ನು ಒಮ್ಮೆ ಮಾತ್ರ ಪಡೆಯಬಹುದು.

ಈ) ದೇವದಾಸಿ ವಿವಾಹ:

- ಪರಿಶಿಷ್ಟ ಪಂಗಡದ ದೇವದಾಸಿಯರು ಗಂಡು ಮಕ್ಕಳು ಇತರೆ ಜಾತಿಯ ಹುಡುಗಿಯನ್ನು ವಿವಾಹವಾದಲ್ಲಿ 3.00 ಲಕ್ಷ ಹಾಗೂ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ಜಾತಿಯ ಹುಡುಗನನ್ನು ವಿವಾಹವಾದಲ್ಲಿ ರೂ.5.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು.
- ವಿವಾಹವಾದ 18 ತಿಂಗಳೊಳಗೆ ವಿವಾಹವಾದ ಬಗ್ಗೆ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿ ಅರ್ಜಿ ಸಲ್ಲಿಸಿರಬೇಕು.
- ಯುವತಿಯ ವಯಸ್ಸು 18 ರಿಂದ 42 ವರ್ಷ.
- ಯುವಕನ ವಯಸ್ಸು 21 ರಿಂದ 45 ವರ್ಷ.
- ಆದಾಯ ಮಿತಿ ರೂ.5.00 ಲಕ್ಷಗಳು.
- ಗುರ್ತಿಸಲ್ಪಟ್ಟ ದೇವದಾಸಿಯವರ ಮಕ್ಕಳನ್ನು ಗುರ್ತಿಸಲ್ಪಟ್ಟ ಇನ್ನೊಬ್ಬ ದೇವದಾಸಿಯವರ ಮಕ್ಕಳನ್ನು ಮದುವೆ ಮಾಡಿಕೊಂಡರೆ ಪ್ರೋತ್ಸಾಹಧನ ಪಡೆಯಲು ಅರ್ಹರಿರುವುದಿಲ್ಲ.

ಉ) ಅಂತರ್ಜಾತಿ ವಿವಾಹ:

ಅಸ್ಪೃಶ್ಯತಾ ನಿವಾರಣೆ ಉದ್ದೇಶದಿಂದ ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

- ಪರಿಶಿಷ್ಟ ಪಂಗಡದ ಯುವಕರು ಇತರೆ ಪಂಗಡದ ಯುವತಿಯರನ್ನು ವಿವಾಹದಲ್ಲಿ ಅಂತಹ ದಂಪತಿಗಳಿಗೆ ರೂ.2.50 ಲಕ್ಷಗಳ ಪ್ರೋತ್ಸಾಹಧನ
- ಪರಿಶಿಷ್ಟ ಪಂಗಡದ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ.
- ಅಂತರ್‌ಜಾತಿ ವಿವಾಹವನ್ನು ನೊಂದಾಯಿಸತಕ್ಕದ್ದು.
- ಮದುವೆಯಾದ ನಂತರ 18 ತಿಂಗಳೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಯುವತಿಯ ವಯಸ್ಸು 18 ರಿಂದ 42 ವರ್ಷ
- ಯುವಕನ ವಯಸ್ಸು 21 ರಿಂದ 45 ವರ್ಷ
- ವಾರ್ಷಿಕ ಆದಾಯ ಮಿತಿ ರೂ.5.00 ಲಕ್ಷಗಳು.

*****

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 661

ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)

ಉತ್ತರಿಸುವ ದಿನಾಂಕ : 21-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರೈತರಿಗೆ ಕೃಷಿ ಇಲಾಖೆಯಿಂದ ನೀಡುತ್ತಿರುವ ಯೋಜನೆಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; (ವರ್ಷವಾರು, ತಾಲ್ಲೂಕುವಾರು, ಯೋಜನಾವಾರು ವಿವರ ಒದಗಿಸುವುದು	ರೈತರಿಗೆ ಕೃಷಿ ಇಲಾಖೆಯಿಂದ ನೀಡುತ್ತಿರುವ ಪ್ರಸಕ್ತ ಸಾಲಿನ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಗೆ ವರ್ಷವಾರು, ತಾಲ್ಲೂಕುವಾರು, ಯೋಜನಾವಾರು ಬಿಡುಗಡೆಗೊಳಿಸಲಾದ ಅನುದಾನದ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. ರೈತರಿಗೆ ಪ್ರಸ್ತುತ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನ ಮಾಡುತ್ತಿರುವ ಅಭಿವೃದ್ಧಿ ಯೋಜನೆಗಳ ವಿವರಗಳು ಕೆಳಕಂಡಂತಿವೆ; 1. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0. 2. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಇತರೆ ಉಪಚಾರಗಳು. 3. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲವನ್ನು ತಡೆಯುವಿಕೆ. 4. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ - ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ (RKVY-RAFTAAR ಮೂಲಕ) ಯೋಜನೆ. 5. ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ. 6. ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ. 7. 10000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ. 8. ವಿಶ್ವಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆ. 9. ನಬಾರ್ಡ್ ಆರ್.ಐ.ಡಿ.ಎಫ್ ನೆರವಿನ ಜಲಾನಯನ ಅಭಿವೃದ್ಧಿ ಯೋಜನೆಗಳು (ಟ್ರಾಂಚಿ-27) 10. ಅಟಲ್ ಭೂಜಲ್ ಯೋಜನೆ. 11. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ: ಅ) ತಡೆಅಣೆ ನಿರ್ಮಾಣ ಆ) ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಇ) ರೈತ ಉತ್ಪಾದಕರ ಸಂಸ್ಥೆಗಳ ರಚನೆ

<table>
<tr><td></td><td></td><td>ಕಳೆದ 3 ವರ್ಷಗಳಲ್ಲಿ ಉಡುಪಿ ಜಿಲ್ಲೆಗೆ ವಿವಿಧ ಜಲಾನಯನ ಯೋಜನೆಗಳಡಿಯಲ್ಲಿ ವರ್ಷವಾರು, ತಾಲ್ಲೂಕುವಾರು, ಯೋಜನಾವಾರು ಬಿಡುಗಡೆಯಾದ ಅನುದಾನದ ವಿವರ ಅನುಬಂಧ-3 ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೃಷಿ ಯಂತ್ರೋಪಕರಣ ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ಫಲಾನುಭವಿ ವಿವರಗದೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)</td><td>ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೃಷಿ ಯಂತ್ರೋಪಕರಣ ಸಹಾಯಧನ ಪಡೆದ ಫಲಾನುಭವಿಗಳ ಸಂಪೂರ್ಣ ಮಾಹಿತಿಯನ್ನು ಸಿ.ಡಿ.ರೂಪದಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ರೈತರು ಕೃಷಿಯನ್ನೇ ಜೀವನೋಪಾಯವಾಗಿಸಿಕೊಂಡಿದ್ದು, ಇವರಿಗೆ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ಕೊಡುವ ಉದ್ದೇಶಕ್ಕಾಗಿ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು ಹೆಚ್ಚಿನ ಗುರಿ ನಿಗದಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೈಂದೂರು ಮತ್ತು ವಂಡ್ಸೆ ಹೋಬಳಿಗಳು ಬರುತ್ತವೆ. ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರೈತರ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಕೃಷಿ ಇಲಾಖೆಯಿಂದ ಕುಂದಾಪುರ ತಾಲೂಕಿಗೆ ನಿಗದಿಯಾಗುವ ಅನುದಾನದಲ್ಲಿ ಶೇ.65 ರಿಂದ 70 ರಷ್ಟು ಅನುದಾನವನ್ನು ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಗುರಿ ನಿಗದಿಪಡಿಸಿ, ಕೃಷಿ ಉಪಕರಣ ಹಾಗೂ ಇಲಾಖೆಯ ಇತರೆ ಎಲ್ಲಾ ಸವಲತ್ತುಗಳನ್ನು ಒದಗಿಸಿ, ಇಲಾಖಾ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಬೈಂದೂರು ವಿಧಾನಸಭಾ ಕೇತ್ರಕ್ಕೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)
<table>
<tr><th>ಕ್ರ.ಸಂ.</th><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಒದಗಿಸಿದ ಸಹಾಯಧನ</th></tr>
<tr><td>1.</td><td>2019-20</td><td>359</td><td>72.87</td></tr>
<tr><td>2.</td><td>2020-21</td><td>346</td><td>75.72</td></tr>
<tr><td>3.</td><td>2021-22</td><td>577</td><td>136.14</td></tr>
</table>
2. ವಿವಿಧ ಕೃಷಿ ಯಂತ್ರೋಪಕರಣಗಳಾದ ಟ್ರ್ಯಾಕ್ಟರ್, ಟಿಲ್ಲರ್, ಪಂಪ್ಸೆಟ್, ಸ್ಪ್ರೇಯರ್, ಭತ್ತನಾಟಿಯಂತ್ರ, ಕಲ್ಟಿವೇಟರ್, ರೋಟೋವೇಟರ್, ಬ್ರಷ್ಕಟ್ಟರ್, ಥ್ರೆಷರ್, ಲೋಡ್ ಕಾರ್ಟ್, ಚಾಫ್ ಕಟ್ಟರ್, ಮೋಟೋಕಾರ್ಟ್, ಹೋಲ್ ಡಿಗ್ಗರ್ ಇತ್ಯಾದಿ ವಿತರಿಸಲಾಗಿದೆ. ಹಿಂದಿನ ಸಾಲಿನ ಅಂಕಿ-ಅಂಶಗಳನ್ನು ಅವಲೋಕಿಸಿದಾಗ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಕೃಷಿ ಯಂತ್ರೋಪಕರಣಗಳ ವಿತರಣೆಗೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುತ್ತಿದೆ.</td></tr>
</table>

		3. ಇದರೊಂದಿಗೆ ಈ ಎರಡು ಹೋಬಳಿಗಳಲ್ಲಿ ಹೋಬಳಿ ಮಟ್ಟದ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರಗಳ ಮುಖಾಂತರ ಕೃಷಿಗೆ ಅವಶ್ಯವಿರುವ ಕೃಷಿ ಯಂತ್ರೋಪಕರಣಗಳನ್ನು ಕಡಿಮೆ ಬಾಡಿಗೆ ದರದಲ್ಲಿ ರೈತರಿಗೆ ಒದಗಿಸಲು ಕ್ರಮ ವಹಿಸಲಾಗುತ್ತಿದೆ. 4. ಬೈಂದೂರು ವಿಧಾನಸಭಾ ಕ್ಷೇತ್ರದ ರೈತರ ಬೇಡಿಕೆ ಹಾಗೂ ಅನುದಾನ ಲಭ್ಯತೆಗನುಗುಣವಾಗಿ ಕುಂದಾಪುರ ತಾಲ್ಲೂಕಿಗೆ ನಿಗದಿಯಾಗುವ ಅನುದಾನದಲ್ಲಿ ಹೆಚ್ಚಿನ ಅನುದಾನವನ್ನು ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿ ಕೃಷಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮವಹಿಸಲಾಗಿದೆ.

ಸಂಖ್ಯೆ: AGRI-AML/267/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1(LAQ 661)

ರೈತರಿಗೆ ಕೃಷಿ ಇಲಾಖೆ ವತಿಯಿಂದ 2022-23ನೇ ಸಾಲಿನಲ್ಲಿ ನೀಡುತ್ತಿರುವ ಯೋಜನೆಗಳು

*****

1. **ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15):**

ಅ) ಬೀಜಗಳ ಪೂರೈಕೆ: ಈ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುವುದು.

ಆ) ಸಸ್ಯ ಸಂರಕ್ಷಣೆ: ಶೇ.50ರ ರಿಯಾಯಿತಿ ದರದಲ್ಲಿ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆಯ ಜೊತೆಗೆ ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿ ನೀಡಲಾಗುವುದು.

ಇ) ಮಣ್ಣಿನ ಸತ್ವ ಹೆಚ್ಚಿಸುವಿಕೆ: ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ರಿಯಾಯಿತಿ ದರದಲ್ಲಿ ಸಾವಯವ ಗೊಬ್ಬರಗಳು ಇತ್ಯಾದಿಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುವುದು.

ಈ) ಸಾವಯವ ಇಂಗಾಲ ಅಭಿಯಾನ : ರಾಜ್ಯದ ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದು, ದ್ವಿದಳಧಾನ್ಯಗಳ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಿಯಾಯಿತಿ ದರದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳ ವಿತರಣೆ ಮಾಡಲಾಗುವುದು ಹಾಗೂ ಹಸಿರೆಲೆ ಗೊಬ್ಬರ ಬೀಜ ಮತ್ತು ಸಾವಯವ ಗೊಬ್ಬರಗಳ ಬಳಕೆಯಿಂದ ಸಾವಯವ ಇಂಗಾಲ ಹೆಚ್ಚಿಸುವ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುವುದು.

ಉ) ಕೃಷಿ ಯಾಂತ್ರೀಕರಣ: ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆಯಿಂದ ಕೊಯ್ಲಿನವರೆಗೆ ಅವಶ್ಯವಿರುವ ವಿವಿಧ ಕೃಷಿ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ಒಂದು ಲಕ್ಷ ರೂ.ವರೆಗೆ ನೀಡಲಾಗುತ್ತದೆ. ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ.

ಊ)ಕೃಷಿ ಸಂಸ್ಕರಣೆ: ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣಗಳು ಮತ್ತು ಟಾರ್ಪಾಲಿನ್ ಗಳನ್ನು ಖರೀದಿಸಲು ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುವುದು.

ಋ) ಕೃಷಿ ಯಂತ್ರಧಾರೆ: ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ತೆರೆಯಲಾಗುವುದು.

ಎ) **ರೈತ ಶಕ್ತಿ:** ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250.0ರಂತೆ ಗರಿಷ್ಠ 5 ಎಕರೆಗಳಿಗೆ ಡಿ.ಬಿ.ಟಿ ಮೂಲಕ ಡೀಸೆಲ್ ಗೆ ಸಹಾಯಧನವನ್ನು ನೀಡಲಾಗುವುದು.

2. **ರೈತ ಸಿರಿ:** ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು.

3. **ರೈತರ ಪ್ರೋತ್ಸಾಹ ಮತ್ತು ಬೆಂಬಲ ಯೋಜನೆಗಳು(2401-00-102-0-28)**
ಅ) ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ: ರೈತರಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಮನೋಭಾವ ಉಂಟು ಮಾಡಲು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಬೆಳೆ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಲಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಅಮೂಲ್ಯ ಅನ್ವೇಷಣೆ ಹಾಗೂ ಸೃಜನಾತ್ಮಕ ಕಾರ್ಯಗಳನ್ನು ಕೈಗೊಂಡ ರೈತರನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ರಾಜ್ಯ ಮಟ್ಟದ ವಿಜೇತರನ್ನು ಸನ್ಮಾನಿಸುವ ಸಂಬಂಧ ತಗಲುವ ಎಲ್ಲಾ ವೆಚ್ಚಗಳನ್ನು ಭರಿಸಲಾಗುತ್ತದೆ.

ಆ) ಬೆಳೆ ಸಾಲಕ್ಕೆ ಸಹಾಯಧನ: ರಾಜ್ಯದ ರೈತರಿಗೆ ನೀಡಿದ ಬೆಳೆ ಸಾಲ/ ಅಲ್ಪಾವಧಿ ಸಾಲಕ್ಕೆ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿ ನೀಡಲು (ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಠ 1.00 ಲಕ್ಷ ಮಿತಿಯೊಳಗೆ) ಬಳಸಿಕೊಳ್ಳಲಾಗುವುದು.

4. **ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21):**
ಅ) ಕೃಷಿ ಅಭಿಯಾನ, ಮೇಳಗಳು ಮತ್ತು ವಸ್ತು ಪ್ರದರ್ಶನ: ಕೃಷಿ ಅಭಿಯಾನದಡಿ ಹೋಬಳಿ ಮಟ್ಟದಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿಯನ್ನು ಏಕ ಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಪ್ರಚಾರ, ಕೃಷಿ ಜಾತ್ರೆ, ವಸ್ತು ಪ್ರದರ್ಶನಗಳ ಆಯೋಜನೆ ಮಾಡಲಾಗುವುದು.

ಆ) ತರಬೇತಿ ಕಾರ್ಯಕ್ರಮಗಳು: ಈ ಯೋಜನೆಯಡಿ ಕೃಷಿ ವಿಸ್ತರಣಾ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ವಿಶೇಷ ತರಬೇತಿಗಳನ್ನು ಹಾಗೂ ಅಧ್ಯಯನ ಪ್ರವಾಸಗಳನ್ನು ಆಯೋಜಿಸಲಾಗುವುದು.

5. **ಹೊಸ ಬೆಳೆ ವಿಮಾ ಯೋಜನೆ** (2401-00-110-0-07): ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು ಹಾಗೂ ಬೆಳೆ ಸಮೀಕ್ಷೆ ಕಾರ್ಯಕ್ಕೆ ಮತ್ತು ಬೆಳೆ ವಿಮೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯ ವೆಚ್ಚ ಭರಿಸಲಾಗುವುದು.

6. **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (2401-00-800-1-05):** ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ

ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ: 14-08-2019 ರಿಂದ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ.4000/- ಗಳನ್ನು ಎರಡು ಕಂತುಗಳಲ್ಲಿ ಆರ್ಥಿಕ ನೆರವನ್ನುಸದರಿ ಯೋಜನೆಯಡಿ ನೀಡಲಾಗುತ್ತದೆ.

7. **ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ(2401-00-102-0-08):** ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬತ್ತ, ದ್ವಿದಳಧಾನ್ಯ, ನೂಟ್ರಿ ಸಿರಿಧಾನ್ಯ, ಎಣ್ಣೆಕಾಳು ಉತ್ಪಾದನೆಗೆ ಬಿತ್ತನೆ ಬೀಜ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳಿಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಲ್ಲಿ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹಧನ ನೀಡಲಾಗುತ್ತದೆ.

8. **ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ(2401-00-108-1-15):** ರಾಜ್ಯದಲ್ಲಿ ಲಭ್ಯವಿರುವ ನೀರನ್ನು ಸಮರ್ಥ ಮತ್ತು ಸಮರ್ಪಕ ಬಳಕೆಗೆ ಪ್ರೋತ್ಸಾಹಿಸಲು ಹಾಗೂ ಮಿತ ಬಳಕೆಯಿಂದ ಅಧಿಕ ಇಳುವರಿ ಪಡೆಯಲು ಹಾಗೂ ಸೂಕ್ಷ್ಮ (ಹನಿ/ತುಂತುರು) ನೀರಾವರಿ ಪದ್ಧತಿಯ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ 2.0 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಹಾಗೂ 2.0ಹೆಕ್ಟೇರಿಗಿಂತ ಮೇಲ್ಪಟ್ಟು 5.0ಹೆಕ್ಟೇರ್ ಪ್ರದೇಶದವರೆಗೆ ಶೇ.45ರ ಸಹಾಯಧನವನ್ನು ನೀಡಲಾಗುತ್ತದೆ.

9. **ಕೃಷಿ ವಿಸ್ತರಣೆ ಉಪ ಅಭಿಯಾನ (2401-00-109-0-34):** ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ಯೋಜನೆಯ ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ATMA)ಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅಧಿಕಾರ / ರೈತರ ತರಬೇತಿ, ಪರಿಚಯ ಪ್ರವಾಸ , ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ.

10. **ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)(2401-00-113-0-02):** ಈ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ರೈತರಿಗೆ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ ನಾಟಿ ಮಾಡುವ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಶುಗರ್ ಕೇನ್ ಹಾರ್ವೆಸ್ಟರ್, ಕಂಬೈನ್ಡ್ ಹಾರ್ವೆಸ್ಟರ್, ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗಿರುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ರೈತರಿಗೆ ಹಣಕಾಸಿನ ನೆರವು ಮತ್ತು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಗ್ರಾಮ ಮಟ್ಟದ ಯಂತ್ರೋಪಕರಣಗಳ ಬ್ಯಾಂಕ್/ ಹೈಟೆಕ್ ಉಪಕರಣಗಳ ಹಬ್ ಗಾಗಿ ಹಣಕಾಸಿನ ನೆರವು ನೀಡಲಾಗುವುದು.

11.ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57): ಈ ಯೋಜನೆಯಡಿ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆಗಾಗಿ ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಜಿಲ್ಲಾ ಕೃಷಿ ಯೋಜನೆಗಳಲ್ಲಿ ಸ್ಥಳೀಯ ಆದ್ಯತೆಗಳು/ ಅವಶ್ಯಕತೆಗಳು/ ಬೆಳೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲು, ಹೊಸ ತಾಂತ್ರಿಕತೆಗಳನ್ನು ಅಳವಡಿಸಿ, ಮುಖ್ಯ ಬೆಳೆಗಳ ಉತ್ಪಾದಕತೆಯಲ್ಲಿ ಇರುವ ವ್ಯತ್ಯಯದ ಪ್ರಮಾಣವನ್ನು ಕಡಿತಗೊಳಿಸಲು, ಕೃಷಿ ಮತ್ತು ಸಂಬಂಧಿತ ವಲಯಗಳ ಎಲ್ಲಾ ಅವಶ್ಯಕತೆಗಳನ್ನು ತೆಗೆದುಕೊಂಡು ಉತ್ಪಾದನೆ/ ಉತ್ಪಾದಕತೆಯ ವಿವಿಧ ಘಟಕಗಳಲ್ಲಿ ಬದಲಾವಣೆ ತರಲು ಮತ್ತು ರೈತರಿಗೆ ಹೆಚ್ಚಿನ ಲಾಭಾಂಶ ದೊರಕಿಸಿಕೊಡಲು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಸಂಬಂಧ, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆ/ ಸಂಸ್ಥೆಗಳಿಂದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ.

12.ಮಣ್ಣಿನ ಫಲವತ್ತತೆಯ ಯೋಜನೆ (2402-00-101-0-03): ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.2500/- ಸಹಾಯಧನ ನೀಡಲಾಗುತ್ತದೆ. ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮೊದಲು ಮಾದರಿ ಗ್ರಾಮಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ.

13.ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (2408-01-103-0-01): ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಾಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಸಂಸ್ಥೆಯಾಗಿರುತ್ತದೆ.

14.ಸಂಚಾರಿ ಸಸ್ಯ ಚಿಕಿತ್ಸಾಲಯ(ಕೃಷಿ ಸಂಜೀವಿನಿ): ಪ್ರಮುಖವಾಗಿ ಕೃಷಿ ಬೆಳೆಗಳಲ್ಲಿ ಉತ್ಪಾದನಾ ತೊಡಕುಗಳಾದ ಕೀಟ, ರೋಗ, ಕಳೆ ಮತ್ತು ಮಣ್ಣು ನಿರ್ವಹಣೆಗೆ ತಾಂತ್ರಿಕ ಸಲಹೆಗಳನ್ನು ನೀಡಲು ಹಾಗೂ ನಿಯಮಿತವಾಗಿ ಮೇಲ್ವಿಚಾರಣೆ ಮಾಡುವ ಉದ್ದೇಶದಿಂದ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿರುತ್ತದೆ. ಕೃಷಿ ಸಂಜೀವಿನಿ ಸ್ಥಾಪನೆಯಿಂದ ಪೀಡೆ ಸರ್ವೇಕ್ಷಣಾ ಮತ್ತು ಸಲಹಾ ಘಟಕಗಳು ಹೆಚ್ಚಿನ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗುತ್ತದೆ.

15. **ಸೆಕೆಂಡರಿ ಕೃಷಿ ನಿರ್ದೇಶನಾಲಯ (2401-00-001-1-14):** ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಹೆಚ್ಚಿನ ಆದಾಯ ತರಲು ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಪೂರಕವಾಗಿ, ಕೃಷಿ ಉತ್ಪನ್ನಗಳಿಂದ ಉಪ ಉತ್ಪನ್ನಗಳ ತಯಾರಿಕೆ ಮತ್ತು ಮಾರುಕಟ್ಟೆ ಸಂಪರ್ಕಕ್ಕೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಲು ಸುಸ್ಥಿರ ಹಾಗೂ ಕ್ರೋಢೀಕೃತ ವ್ಯವಸ್ಥೆಗಾಗಿ ರಾಜ್ಯ ಸೆಕೆಂಡರಿ ಕೃಷಿ ನಿರ್ದೇಶನಾಲಯವನ್ನು ಅಧಿಸೂಚಿಸಲಾಗಿದ್ದು, ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಸಂಯೋಜಿಸಿ ಅನುಷ್ಠಾನಗೊಳಿಸಲಾಗುವುದು.

16.ಸಮಗ್ರ ಕೃಷಿ ಪದ್ಧತಿ: ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ "ಮೂಲಕ ರೈತನ ಆದಾಯ ಹೆಚ್ಚಳ

ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವುದು ಮುಖ್ಯ ಧ್ಯೇಯದೊಂದಿಗೆ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಒಂದು ಹೆಕ್ಟೇರ್ ಪ್ರದೇಶ ಮಾದರಿಯಲ್ಲಿ ನೀರು ಸಂರಕ್ಷಣೆಗೆ ವಿವಿಧ ಅಳತೆಗಳ ಚಿಕ್ಕ ಹೊಂಡಗಳ ನಿರ್ಮಾಣ, ಸಾರಜನಕ ಸ್ಥಿರೀಕರಣಕ್ಕೆ ಪೂರಕವಾದ ಸಸ್ಯಬೇಲಿ /ಇತರೆ ಬೇಲಿ/ ಮಿಶ್ರ ಸಂರಕ್ಷಣೆಗೆ, ರಕ್ಷಣಾತ್ಮಕ ತಡೆಗಳು/ಬದುಗಳು/ಟ್ರೆಂಚ್ ನಿರ್ಮಾಣಕ್ಕಾಗಿ, ಸ್ಥಳೀಯ ಬೇಡಿಕೆಗನುಗುಣವಾಗಿ ಎರೆಹುಳು ಗೊಬ್ಬರ, ಅಜೋಲ್ಲಾ, ಮರ ಆಧಾರಿತ ಕೃಷಿ, ಕೈತೋಟ, ಸಣ್ಣ ಪ್ರಮಾಣದ ಕುರಿ/ ಮೇಕೆ/ ಕೋಳಿ ಹಾಗೂ ಮೇವಿನ ಬೆಳೆಗಳು ಸ್ಥಳೀಯ ಚಟುವಟಿಕೆಗಳು ಇತ್ಯಾದಿಗಳಿಗೆ ಸಹಾಯಧನವನ್ನು ನೀಡಲಾಗುವುದು.

17. **ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ (2202-80-107-0-06):** ಎಸ್.ಎಸ್.ಎಲ್.ಸಿ/ 10ನೇ ತರಗತಿಯನ್ನು ಪೂರೈಸಿರುವ ಹಾಗೂ ರಾಜ್ಯದ ಯಾವುದೇ ಭಾಗದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ/ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಭೂ ರಹಿತ ಕೃಷಿ ಕಾರ್ಮಿಕರು/ ರೈತರ ಮಕ್ಕಳಿಗೆ ಹಾಗೂ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುವ ರೈತ/ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದು.

ಕೃಷಿ ನಿರ್ದೇಶಕರು

ಅನುಬಂಧ-2

2019-20ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ತಾಲ್ಲೂಕುವಾರು, ಯೋಜನಾವಾರು ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು (ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆ	ಉಡುಪಿ	ಕುಂದಾಪುರ	ಕಾರ್ಕಳ	ಒಟ್ಟು
I	**ರಾಜ್ಯ ವಲಯ ಯೋಜನೆಗಳು**				
1	ಕೃಷಿ ಆಯುಕ್ತಾಲಯ ಒಟ್ಟು (2401-00-001-1-01)	21.54	8.83	5.013	35.38
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75)	4.64	5.20	2.579	12.42
3	ಕೃಷಿ ಭಾಗ್ಯ (2401-00-102-0-27)	10.57	15.64	21.554	47.76
4	ಇತರೆ ಕೃಷಿ ಯೋಜನೆಗಳು (2401-00-102-0-28)	15.58	21.88	10.330	47.79
5	ಬೀಜ ಕ್ಷೇತ್ರಗಳು (2401-00-103-0-01)	0.00	4.20	0.000	4.20
6	ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15)	143.88	142.64	63.751	350.27
7	ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು (2401-00-104-0-10)	0.00	0.00	0.000	0.00
8	ಸಾವಯವ ಕೃಷಿ (2401-00-104-0-12)	25.60	20.39	18.490	64.48
9	ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21)	24.52	15.73	13.714	53.97
10	ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ(2401-00-109-0-80)	0.00	0.00	0.00	0.00
12	ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ (2402-00-101-0-01)	0.00	0.00	0.00	0.00
13	ಕೃಷಿ ಮೂಲಭೂತ ಸೌಕರ್ಯ (4401-00-001-1-01)	0.00	0.00	0.00	0.00
14	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (2401-00-110-0-07)	47.01	35.70	20.81	103.51
	ರಾಜ್ಯ ವಲಯ ಯೋಜನೆಗಳ ಒಟ್ಟು	**293.35**	**270.20**	**156.24**	**719.78**
II	**ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು**	**20.76**	**17.70**	**16.31**	**54.77**
III	**ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು**				
1	ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08)	64.22	91.78	28.33	184.33
2	NMSA- ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15)	47.72	72.56	27.93	148.21
3	NMSA- ಇತರೆ ಘಟಕಗಳು (2401-00-108-1-16)	17.75	22.73	3.88	44.35
4	ಕೃಷಿ ಯಾಂತ್ರೀಕರಣ ಉಪ ಅಭಿಯಾನ (2401-00-800-1-53)	50.75	53.85	28.18	132.77
5	ಕೃಷಿ ವಿಸ್ತರಣೆ ಉಪ ಅಭಿಯಾನ (SAME) (2401-00-800-1-53)	34.98	21.12	16.81	72.91
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57)	11.03	1.95	1.30	14.28
	ಕೇಂದ್ರ ಪುರಸ್ಕೃತ ಯೋಜನೆಗಳು-ಒಟ್ಟು	**226.44**	**263.99**	**106.42**	**596.85**
	ಎಲ್ಲಾ ಒಟ್ಟು	**540.54**	**551.88**	**278.97**	**1371.40**

ಅನುಬಂಧ-2

2020-21ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ತಾಲ್ಲೂಕುವಾರು, ಯೋಜನಾವಾರು ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು (ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆ	ಉಡುಪಿ	ಕುಂದಾಪುರ	ಕಾರ್ಕಳ	ಒಟ್ಟು
i	**ರಾಜ್ಯ ವಲಯ ಯೋಜನೆಗಳು**				
1	ಕೃಷಿ ಆಯುಕ್ತಾಲಯ ಒಟ್ಟು (2401-00-001-1-01)	16.06	4.63	3.75	24.44
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75	0.00	0.00	0.00	0.00
3	ಕೃಷಿ ಭಾಗ್ಯ (2401-00-102-0-27)	0.00	0.00	0.00	0.00
4	ಇತರೆ ಕೃಷಿ ಯೋಜನೆಗಳು (2401-00-102-0-28)	0.50	0.85	0.30	1.65
5	ಬೀಜ ಕ್ಷೇತ್ರಗಳು (2401-00-103-0-01)	0.00	5.57	0.00	5.57
6	ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15)	84.00	69.97	47.73	201.70
7	ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು (2401-00-104-0-10)	0.00	0.00	0.00	0.00
8	ಸಾವಯವ ಕೃಷಿ (2401-00-104-0-12)	0.00	0.00	0.00	0.00
9	ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21)	24.89	15.42	12.80	53.107
10	ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ(2401-00-109-0-80)	0.00	0.00	0.00	0.00
12	ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ (2402-00-101-0-01)	0.00	0.00	0.00	0.00
13	ಕೃಷಿ ಮೂಲಭೂತ ಸೌಕರ್ಯ (4401-00-001-1-01)	0.00	0.00	0.00	0.00
	ರಾಜ್ಯ ವಲಯ ಯೋಜನೆಗಳ ಒಟ್ಟು	**125.45**	**96.45**	**64.57**	**286.47**
II	**ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು**	**7.17**	**3.70**	**11.68**	**22.55**
III	**ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು**				
1	ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08)	55.28	41.47	15.16	111.908
2	NMSA- ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15)	67.43	78.33	40.46	186.222
3	ಮಳೆ ಆಶ್ರಿತ ಪ್ರದೇಶದ ಅಭಿವೃದ್ಧಿ 2401-00-108-1-16	0.00	0.00	0.00	0.00
4	ಕೃಷಿ ವಿಸ್ತರಣೆ ಉಪ ಅಭಿಯಾನ (2401-00-109-0-34)	27.17	18.51	19.00	64.68
5	ಕೃಷಿ ಯಾಂತ್ರೀಕರಣ ಉಪ ಅಭಿಯಾನ (2401-00-113-0-02)	64.03	66.25	50.20	180.49
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57)	17.31	5.78	5.94	29.02
7	ಮಣ್ಣಿನ ಫಲವತ್ತತೆಯ ಯೋಜನೆ-2402-00-101-0-03	11.77	9.47	7.39	28.63
	ಕೇಂದ್ರ ಪುರಸ್ಕೃತ ಯೋಜನೆಗಳು-ಒಟ್ಟು	**242.99**	**219.81**	**138.15**	**600.95**
	ಎಲ್ಲಾ ಒಟ್ಟು	375.61	319.95	214.41	909.97

ಅನುಬಂಧ-2

2021-22ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ತಾಲ್ಲೂಕುವಾರು, ಯೋಜನಾವಾರು

ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು (ರೂ.ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆ	ಉಡುಪಿ	ಕುಂದಾಪುರ	ಕಾರ್ಕಳ	ಒಟ್ಟು
I	**ರಾಜ್ಯ ವಲಯ ಯೋಜನೆಗಳು**				
1	ಕೃಷಿ ಆಯುಕ್ತಾಲಯ (2401-00-001-1-01)	11.22	2.53	2.98	16.73
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75	3.70	6.47	0.17	10.33
3	ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು (2401-00-102-0-28)	0.525	0.825	0.30	1.65
4	ಬೀಜ ಕ್ಷೇತ್ರಗಳು (2401-00-103-0-01)	0.00	2.71	0.00	2.71
5	ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15)	71.71	56.43	31.38	159.52
6	ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು (2401-00-104-0-10)	0.00	0.00	0.00	0.00
7	ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮಗಳು (2401-00-104-0-12)	10.00	0.00	0.00	10.00
8	ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21)	28.42	17.67	17.31	63.40
9	ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ(2401-00-109-0-80)	0.00	0.00	0.00	0.00
10	ಹೊಸ ಬೆಳೆ ವಿಮಾ ಯೋಜನೆ 2401-00-110-0-07	9.72	6.61	4.51	20.84
11	ಕೃಷಿ ಮೂಲಭೂತ ಸೌಕರ್ಯ (4401-00-001-1-01)				
	ರಾಜ್ಯ ವಲಯ ಯೋಜನೆಗಳ ಒಟ್ಟು	**135.30**	**93.24**	**56.64**	**285.18**
II	**ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು**	**7.20**	**5.20**	**10.15**	**22.55**
III	**ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು**				
1	ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08)	45.15	22.80	11.40	79.35
2	NMSA- ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15)	115.81	134.43	138.76	389.00
3	ಕೃಷಿ ವಿಸ್ತರಣೆ ಉಪ ಅಭಿಯಾನ) (2401-00-109-0-34)	19.14	13.06	11.61	43.81
4	ಕೃಷಿ ಯಾಂತ್ರೀಕರಣ ಉಪ ಅಭಿಯಾನ (2401-00-113-0-02)	99.72	113.58	74.31	287.61
5	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57)	13.99	12.73	10.32	37.04
6	ಮಣ್ಣಿನ ಫಲವತ್ತತೆಯ ಯೋಜನೆ-2402-00-101-0-03	0.00	0.00	0.00	0.00
	ಕೇಂದ್ರ ಪುರಸ್ಕೃತ ಯೋಜನೆಗಳು-ಒಟ್ಟು	**293.81**	**293.81**	246.40	**834.01**
	ಎಲ್ಲಾ ಒಟ್ಟು	**436.31**	**436.31**	**313.18**	**1185.80**

(8)

ಅನುಬಂಧ-2

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಉಡುಪಿ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು, ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು

ವರ್ಷ	ತಾಲ್ಲೂಕು	ಬಿಡುಗಡೆಗೊಳಿಸಲಾದ ಅನುದಾನ (ರೂ. ಲಕ್ಷಗಳಲ್ಲಿ)
2019-20	ಕಾರ್ಕಳ	526.16
	ಕುಂದಾಪುರ	1013.10
	ಉಡುಪಿ	784.38
	ಒಟ್ಟು	**2323.64**
2020-21	ಬ್ರಹ್ಮಾವರ	4.00
	ಬೈಂದೂರು	2.80
	ಹೆಬ್ರಿ	0.68
	ಕಾಪು	1.82
	ಕಾರ್ಕಳ	578.66
	ಕುಂದಾಪುರ	1177.28
	ಉಡುಪಿ	873.06
	ಒಟ್ಟು	**2638.30**
2021-22	ಬ್ರಹ್ಮಾವರ	390.98
	ಬೈಂದೂರು	367.56
	ಹೆಬ್ರಿ	150.96
	ಕಾಪು	252.02
	ಕಾರ್ಕಳ	986.00
	ಕುಂದಾಪುರ	1940.48
	ಉಡುಪಿ	1075.58
	ಒಟ್ಟು	**5163.58**

ಕೃಷಿ ನಿರ್ದೇಶಕರು

ಅನುಬಂಧ-3

ಕಳೆದ 3 ವರ್ಷಗಳಲ್ಲಿ ಉಡುಪಿ ಜಿಲ್ಲೆಗೆ ವಿವಿಧ ಜಲಾನಯನ ಯೋಜನೆಗಳಡಿಯಲ್ಲಿ ವರ್ಷವಾರು, ತಾಲ್ಲೂಕುವಾರು, ಯೋಜನಾವಾರು ಬಿಡುಗಡೆಯಾದ ಅನುದಾನದ ವಿವರ

(LAQ-661) (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ಯೋಜನೆ	ಬಿಡುಗಡೆಯಾದ ಅನುದಾನ		
				2019-20	2020-21	2021-22
1	ಉಡುಪಿ	ಉಡುಪಿ	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ	4.17	0.00	0.00
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ 2.0	0.00	0.00	76.95
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	107.72	78.27	30.73
			ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ	35.86	43.54	28.82
			ಅಮೃತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ	0.00	0.00	3.03
			ಕೇಂದ್ರ ವಲಯ-10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ	0.00	0.00	14.00
			ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ತಡೆ ಅಣೆ	9.50	48.77	15.33
			ತಾಲ್ಲೂಕು ಒಟ್ಟು	**157.25**	**170.58**	**168.86**
2	ಉಡುಪಿ	ಕುಂದಾಪುರ	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ	78.38	36.77	0.00
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ 2.0	0.00	0.00	71.35
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	98.10	54.71	42.53
			ಕೇಂದ್ರ ವಲಯ-10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ	0.00	0.00	7.00
			ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ತಡೆ ಅಣೆ	10.00	49.09	20.09
			ತಾಲ್ಲೂಕು ಒಟ್ಟು	**186.48**	**140.57**	**140.96**
3	ಉಡುಪಿ	ಕಾರ್ಕಳ	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ	27.55	0.00	0.00
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ 2.0	0.00	0.00	66.70
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	90.14	68.52	30.27
			ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ	28.00	37.58	32.06
			ಕೇಂದ್ರ ವಲಯ-10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ	0.00	0.00	7.00
			ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ತಡೆ ಅಣೆ	5.50	42.63	24.50
			ತಾಲ್ಲೂಕು ಒಟ್ಟು	**151.19**	**148.74**	**160.52**

ನಿರ್ದೇಶಕರು

ಜಲಾನಯನ ಅಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	662
ಸದಸ್ಯರ ಹೆಸರು :	ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ (ಬೈಂದೂರು)
ಉತ್ತರಿಸಬೇಕಾದ ದಿನಾಂಕ :	21.12.2022
ಉತ್ತರಿಸುವ ಸಚಿವರು :	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಇರುವ ಹಿಂದುಳಿದ ವರ್ಗಗಳ ವಸತಿ ನಿಲಯಗಳೆಷ್ಟು; ಮಂಜೂರಾದ ಸೀಟುಗಳೆಷ್ಟು; (ವಸತಿ ನಿಲಯವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಒಟ್ಟು 42 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟಾರೆ 4559 ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.
ಆ)	ಉಡುಪಿ ಜಿಲ್ಲೆಯ ವಸತಿ ನಿಲಯಗಳಿಗೆ ಸಲ್ಲಿಕೆಯಾದ ಅರ್ಜಿಗಳು ಎಷ್ಟು; ಅವಕಾಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಅವಕಾಶ ವಂಚಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆಯ ವಿದ್ಯಾರ್ಥಿನಿಲಯಗಳಿಗೆ ಸ್ವೀಕೃತವಾದ ಅರ್ಜಿಗಳು, ಪ್ರವೇಶ ಪಡೆದಿರುವ ಹಾಗೂ ಅವಕಾಶ ವಂಚಿತ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.
ಇ)	ಉಡುಪಿ ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ಕೆಲವು ಹಾಸ್ಟೆಲ್‌ಗಳಿಗೆ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಹಾಸ್ಟೆಲ್ ಸೀಟು ಸಿಗದೇ ವಿದ್ಯಾರ್ಥಿಗಳು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಉಡುಪಿ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ಹಾಗೂ ಕೋಟೇಶ್ವರ ಭಾಗದಲ್ಲಿನ ಕಾಲೇಜುಗಳಿಗೆ ಪಿಯುಸಿ ಪದವಿ ಶಿಕ್ಷಣ ಪಡೆಯಲು ಉಡುಪಿ ಜಿಲ್ಲೆ ಹಾಗೂ ಇತರೆ ಹೊರಭಾಗದ ಜಿಲ್ಲೆಗಳ ಗ್ರಾಮೀಣ ಭಾಗದ ಹೆಚ್ಚು ಬಡ ವಿದ್ಯಾರ್ಥಿಗಳು ಕಾಲೇಜುಗಳಿಗೆ ದಾಖಲಾಗುತ್ತಿರುವ ಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳ ವಸತಿ ನಿಲಯಗಳಲ್ಲಿ ಸೀಟುಗಳು ಲಭ್ಯವಾಗದೇ ಇರುವುದುರಿಂದ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಸ್ಟೆಲ್ ಸೀಟು ಹೆಚ್ಚಿಸುವ ಹಾಗೂ ಹೊಸ ಹಾಸ್ಟೆಲ್ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಉಡುಪಿ ಜಿಲ್ಲೆಯ ವಿದ್ಯಾರ್ಥಿನಿಲಯಗಳನ್ನೊಳಗೊಂಡಂತೆ ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿ ನಿಗಧಿಪಡಿಸಿದ ಮಂಜೂರಾತಿ ಸಂಖ್ಯೆಗನುಗುಣವಾಗಿ ಪ್ರವೇಶ ನಿಯಮಗಳನುಸಾರ ಪ್ರವರ್ಗವಾರು ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಇಲಾಖಾ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸುವ ದೃಷ್ಟಿಯಿಂದ ಮಂಜೂರಾತಿ ಸಂಖ್ಯಾಬಲದ ಶೇ.25ರಷ್ಟು ಸಂಖ್ಯಾಬಲ ಹೆಚ್ಚಳ ಮಾಡಲಾಗಿದ್ದು, ಈ ಪೈಕಿ ಉಡುಪಿ ತಾಲ್ಲೂಕಿನ 12 ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ 356 ವಿದ್ಯಾರ್ಥಿಗಳಿಗೆ ಹಾಗೂ ಕುಂದಾಪುರ ತಾಲ್ಲೂಕಿನ ಕೋಟೇಶ್ವರ ವಿದ್ಯಾರ್ಥಿನಿಲಯವನ್ನು ಒಳಗೊಂಡಂತೆ 8 ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ 238 ವಿದ್ಯಾರ್ಥಿಗಳಿಗೆ ಸಂಖ್ಯಾಬಲವನ್ನು ಹೆಚ್ಚಿಸಲಾಗಿರುತ್ತದೆ.

.....2

		ಅಲ್ಲದೇ, ಉಡುಪಿಯಲ್ಲಿ 2021-22ನೇ ಸಾಲಿನಲ್ಲಿ 125 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ತಾತ್ಕಾಲಿಕವಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದ್ದ, ವಿದ್ಯಾರ್ಥಿನಿಲಯವನ್ನು ಶಾಶ್ವತವಾಗಿ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಮುಂದುವರೆದು 2022-23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 100 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಂಗಳೂರು ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಿದ್ದು, ಅದರಂತೆ ಈಗಾಗಲೇ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿರುತ್ತದೆ.

ಸಂಖ್ಯೆ:ಹಿಂವಕ 751 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುಕುಮಾರ್ ಶೆಟ್ಟಿ, ಬಿ.ಎಂ (ಬೈಂದೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 662ಕ್ಕೆ ಅನುಬಂಧ

ಉಡುಪಿ ಜಿಲ್ಲೆಯ ವಿದ್ಯಾರ್ಥಿನಿಲಯಗಳಿಗೆ ಸ್ವೀಕೃತವಾದ ಅರ್ಜಿಗಳು, ಪ್ರವೇಶ ಪಡೆದಿರುವ ಹಾಗೂ ಅವಕಾಶ ವಂಚಿತ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯವಾರು ವಿವರ

ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು

ಕ್ರ.ಸಂ	HIC Number	ವಿದ್ಯಾರ್ಥಿನಿಲಯದ ಹೆಸರು	ಬಾಲಕ/ ಬಾಲಕಿ	ಸಂಖ್ಯಾಬಲ	ವಿದ್ಯಾರ್ಥಿ ನಿಲಯಕ್ಕೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ	ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಅವಕಾಶ ವಂಚಿತ ವಿದ್ಯಾರ್ಥಿಗಳ ಸಂಖ್ಯೆ
		ಉಡುಪಿ ತಾಲೂಕು					
1	BCWD1165	ಮೆಟ್ರಿಕ್ ಪೂರ್ವ ಬಾಲಕರ ನಿಲಯ, ನಿಟ್ಟೂರು	ಬಾಲಕ	60	58	58	0
2	BCWD1167	ಮೆಟ್ರಿಕ್ ಪೂರ್ವ ಬಾಲಕರ ನಿಲಯ, ಕುದಿ	ಬಾಲಕ	65	59	59	0
3	BCWD1166	ಮೆಟ್ರಿಕ್ ಪೂರ್ವ ಬಾಲಕರ ನಿಲಯ, ಬೆಳ್ಳಂಪಳ್ಳಿ	ಬಾಲಕ	45	36	36	0
4	BCWD1168	ಮೆಟ್ರಿಕ್ ಪೂರ್ವ ಬಾಲಕರ ನಿಲಯ, ಪೆರ್ಡೂರು	ಬಾಲಕ	60	55	55	0
5	BCWD2469	ಮೆಟ್ರಿಕ್ ಪೂರ್ವ ಬಾಲಕರ ನಿಲಯ, ಗೋಳಿಯಂಗಡಿ	ಬಾಲಕ	100	40	40	0
6	BCWD1170	ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ, ಪಟ್ಲ	ಬಾಲಕಿ	60	54	54	0
7	BCWD1169	ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ, ಬ್ರಹ್ಮಾವರ	ಬಾಲಕಿ	60	60	60	0
		ಒಟ್ಟು		**450**	**362**	**362**	**0**
		ಕುಂದಾಪುರ ತಾಲೂಕು					
1	BCWD1160	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕುಂದಾಪುರ	ಬಾಲಕ	50	48	48	0
2	BCWD1158	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬಸ್ರೂರು	ಬಾಲಕ	60	48	48	0
3	BCWD1161	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ನಾವುಂದ	ಬಾಲಕ	50	48	48	0
4	BCWD1159	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬೈಂದೂರು	ಬಾಲಕ	55	54	54	0
5	BCWD1164	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕುಂದಾಪುರ ಟೌನ್	ಬಾಲಕಿ	50	50	50	0
6	BCWD1162	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಅಮಾಸೆಬೈಲು	ಬಾಲಕಿ	50	46	46	0
7	BCWD1163	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕೆದೂರು	ಬಾಲಕಿ	45	50	45	5
		ಒಟ್ಟು		**360**	**344**	**339**	**5**
		ಕಾರ್ಕಳ ತಾಲೂಕು					
1	BCWD1155	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಾರ್ಕಳ	ಬಾಲಕ	40	35	35	0
2	BCWD1156	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುನಿಯಾಲು	ಬಾಲಕ	40	27	27	0

3	BCWD1154	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೈಲೂರು	ಬಾಲಕ	50	26	26	0
4	BCWD1157	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕಾರ್ಕಳ	ಬಾಲಕಿ	50	31	31	0
ಒಟ್ಟು				**180**	**119**	**119**	**0**
ಒಟ್ಟು(ಜಿಲ್ಲಾವಾರು)				990	825	820	5

ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು

ಕ್ರ.ಸಂ	HIC Number	ವಿದ್ಯಾರ್ಥಿನಿಲಯದ ಹೆಸರು	ಬಾಲಕ/ ಬಾಲಕಿ	ಸಂಖ್ಯಾಬಲ	ವಿದ್ಯಾರ್ಥಿ ನಿಲಯಕ್ಕೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ	ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಬಾಕಿ ಇರುವ ಅರ್ಜಿಗಳ ಸಂಖ್ಯೆ
ಉಡುಪಿ ತಾಲೂಕು							
1	BCWD2465	ಮೆಟ್ರಿಕ್ ನಂತರದ ಬಾಲಕರ ನಿಲಯ, ಕಾಪು	ಬಾಲಕ	125	63	63	0
2	BCWD2464	ಮೆಟ್ರಿಕ್ ನಂತರದ ಬಾಲಕರ ನಿಲಯ, ಹಿರಿಯಡ್ಕ	ಬಾಲಕ	125	88	88	0
3	BCWD2468	ಮೆಟ್ರಿಕ್ ನಂತರದ ಬಾಲಕರ ನಿಲಯ, ಮಾದರಿ ಮಣಿಪಾಲ	ಬಾಲಕ	169	186	169	17
4	BCWD2466	ಮೆಟ್ರಿಕ್ ನಂತರದ ಬಾಲಕರ ನಿಲಯ, 76-ಬಡಗಬೆಟ್ಟು	ಬಾಲಕ	175	137	137	0
5	BCWD2467	ಮೆಟ್ರಿಕ್ ನಂತರದ ಬಾಲಕರ ನಿಲಯ, ಬಲಾಯಿಪಾದ	ಬಾಲಕ	125	146	125	21
6	BCWD2472	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ಬನ್ನಂಜೆ	ಬಾಲಕಿ	181	389	181	208
7	BCWD2473	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ಆದಿಉಡುಪಿ	ಬಾಲಕಿ	125	125	125	0
8	BCWD2471	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ಮಣಿಪಾಲ	ಬಾಲಕಿ	125	183	125	58
9	BCWD2475	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ವೃತ್ತಿಪರ ಮಣಿಪಾಲ	ಬಾಲಕಿ	181	145	145	0
10	BCWD2476	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ಕಿನ್ನಿಮೂಲ್ಕಿ	ಬಾಲಕಿ	150	150	150	0
11	BCWD2470	ಮೆಟ್ರಿಕ್ ನಂತರದ ಬಾಲಕಿಯರ ನಿಲಯ, ಬಾರ್ಕೂರು	ಬಾಲಕಿ	125	148	125	23
12	BCWD2474	ಶ್ರೀಮತಿ ಇಂದಿರಾಗಾಂಧಿ ಮೆಟ್ರಿಕ್ ನಂತರದ ನರ್ಸಿಂಗ್ ಮಣಿಪಾಲ	ಬಾಲಕಿ	175	221	175	46
ಒಟ್ಟು				**1781**	**1981**	**1608**	**373**
ಕುಂದಾಪುರ ತಾಲೂಕು							
1	BCWD2457	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕುಂದಾಪುರ ಮೂಲ	ಬಾಲಕ	150	227	150	77
2	BCWD2458	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕುಂದಾಪುರ ವಿಭಜಿತ	ಬಾಲಕ	125	138	125	13
3	BCWD2460	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕುಂದಾಪುರ ಮೂಲ	ಬಾಲಕಿ	175	215	175	40

4	BCWD2461	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕುಂದಾಪುರ ವಿಭಜಿತ	ಬಾಲಕಿ	175	155	155	0
5	BCWD2459	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕೋಟೇಶ್ವರ	ಬಾಲಕಿ	169	160	160	0
6	BCWD2462	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಶಂಕರನಾರಾಯಣ	ಬಾಲಕಿ	144	115	115	0
7	BCWD2463	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಬೈಂದೂರು	ಬಾಲಕಿ	125	107	107	0
8	BCWD2573	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಹಂಗ್ಳೂರು	ಬಾಲಕಿ	125	95	95	0
ಒಟ್ಟು				**1188**	**1212**	**1082**	**130**
ಕಾರ್ಕಳ ತಾಲೂಕು							
1	BCWD2454	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕಾರ್ಕಳ	ಬಾಲಕ	163	150	150	0
2	BCWD2453	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಹೆಬ್ರಿ	ಬಾಲಕ	125	42	42	0
3	BCWD2456	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕಾರ್ಕಳ	ಬಾಲಕಿ	187	118	118	0
4	BCWD2455	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹೆಬ್ರಿ	ಬಾಲಕಿ	125	38	38	0
ಒಟ್ಟು				**600**	**348**	**348**	**0**
ಒಟ್ಟು(ಜಿಲ್ಲಾವಾರು)				**3569**	**3541**	**3038**	**503**

(ಪ್ರಸ್ತುತ ಸ್ನಾತಕೋತ್ತರ ಮತ್ತು ವೈದ್ಯಕೀಯ ಕೋರ್ಸುಗಳ ವಿದ್ಯಾರ್ಥಿನಿಲಯಗಳ ಪ್ರವೇಶ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	663
ಸದಸ್ಯರ ಹೆಸರು	:	ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ.(ಬೈಂದೂರು)
ಉತ್ತರಿಸುವ ದಿನಾಂಕ	:	21.12.2022
